2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ || ಬೆಂಗಳೂರು, ಗುರುವಾರ, ಮಾರ್ಚ್ ೮, ೨೦೧೨ (ಫಾಲ್ಗುಣ ೧೮, ಶಕ ವರ್ಷ ೧೯೩೩) || ಸಂಚಿಕೆ ೧೦

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 08-03-2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
105	10-02-2012	ಸಂಖ್ಯೆ : ಸಿಐ 69 ಎಸ್‌ಪಿಕ್ಯೂ 2012, ಬೆಂಗಳೂರು, ದಿನಾಂಕ : 9ನೇ ಫೆಬ್ರವರಿ, 2012
106	13-02-2012	ಸಂಖ್ಯೆ : ಸಿಐ 473 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 13ನೇ ಫೆಬ್ರವರಿ, 2012
107	13-02-2012	ಸಂಖ್ಯೆ : ಸಿಐ 345 ಎಸ್‌ಪಿಕ್ಯೂ 2010 (ಪಿ), ಬೆಂಗಳೂರು, ದಿನಾಂಕ : 13ನೇ ಫೆಬ್ರವರಿ, 2012
108	13-02-2012	No. SAMVYASHAE 20 SHASANA 2011, Bangalore, Dated: 13.2.2012
109	13-02-2012	No. Y/01/12, Bangalore, dated 1st February, 2012
110	13-02-2012	No. HFW 416 MPS 2011, Bangalore, Dated: 13th February, 2012
111	14-02-2012	ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 14-02-2012
112	14-02-2012	ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 14-02-2012
113	14-02-2012	ಸಂಖ್ಯೆ: ಸಿಆಸುಇ 04 ಇಕಾಅ 2012, ಬೆಂಗಳೂರು, ದಿನಾಂಕ: 14ನೇ ಫೆಬ್ರವರಿ, 2012
114	15-02-2012	ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 15-02-2012
115	15-02-2012	ಸಂಖ್ಯೆ: ಎಫ್‌ಡಿ 4 ಎಸ್‌ಆರ್‌ಎ 2010, ಬೆಂಗಳೂರು, ದಿನಾಂಕ: 15.02.2012
116	16-02-2012	ಸಂಖ್ಯೆ: ಎಫ್‌ಡಿ 04 ಎಸ್‌ಆರ್‌ಎ 2010, ಬೆಂಗಳೂರು, ದಿನಾಂಕ: 16-02-2012
117	14-02-2012	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 14.2.2012
120	17-02-2012	ಸಂಖ್ಯೆ: ಕವಿಸಸ/ಆ-1/26/ವಾ.ಚಾ.ನೇ.ನೇ./2012, ಬೆಂಗಳೂರು, ದಿನಾಂಕ: 17.02.2012
121	17-02-2012	ಸಂಖ್ಯೆ : ಕವಿಸಸ/ಆ-1/27/ಸ್ವಾ.ವಾ.ಮೇ.ನೇ.ನೇ./2012, ಬೆಂಗಳೂರು, ದಿನಾಂಕ: 17.02.2012
122	17-02-2012	ಸಂಖ್ಯೆ: ಕವಿಪ/ಶಾರಶಾ/1687/ಸನಿ/12, ಬೆಂಗಳೂರು, ದಿನಾಂಕ: 17ನೇ ಫೆಬ್ರವರಿ, 2012
123	18-02-2012	ಸಂಖ್ಯೆ: ಲೋಇ:24:ಇಎಪಿ:2012, ಬೆಂಗಳೂರು, ದಿನಾಂಕ: 18.2.2012
124	18-02-2012	ಸಂಖ್ಯೆ: ಲೋಇ:4:ಇಎಪಿ:2012, ಬೆಂಗಳೂರು, ದಿನಾಂಕ: 18.2.2012
125	21-02-2012	No. HFW 448 HSH 2011, Bangalore, Dated: 21st February, 2012
126	21-02-2012	No. HFW 448 HSH 2011 (i), Bangalore, Dated: 21st February, 2012
127	21-02-2012	No. HFW 448 HSH 2011 (ii), Bangalore, Dated: 21st February, 2012
128	22-02-2012	Election Notification Dated: 22nd February, 2012
129	22-02-2012	ಸಂಖ್ಯೆ : ಸಿಐ 429 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 22ನೇ ಫೆಬ್ರವರಿ, 2012
130	22-02-2012	ಸಂಖ್ಯೆ : ಸಿಐ 429 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 22ನೇ ಫೆಬ್ರವರಿ, 2012
131	22-02-2012	ಸಂಖ್ಯೆ : ಸಿಐ 429 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ : 22ನೇ ಫೆಬ್ರವರಿ, 2012
132	18-02-2012	ಸಂಖ್ಯೆ: ಪ್ರಾಆಕ/ಚುನಾವಣೆ/ವಿವ/39/2011-12, ಬೆಂಗಳೂರು, ದಿನಾಂಕ: 18.2.2012
134	22-02-2012	NO. JKSB/COE/REG/2/2012, BANGALORE, DATED: 22-02-2012
135	23-02-2012	ಸಂಖ್ಯೆ: ಲೋಇ:29:ಇಎಪಿ:2012, ಬೆಂಗಳೂರು, ದಿನಾಂಕ: 23.2.2012
137	25-02-2012	No. UDD 05 MLR 2012, Bangalore, Dated: 25th February 2012

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.gazette.kar.nic.in

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.gazette.kar.nic.in

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	21-00	831-00
2.	ಭಾಗ – 2	5-00	182-00
3.	ಭಾಗ – 3	10-00	411-00
4.	ಭಾಗ – 4	3-00	109-00
5.	ಭಾಗ – 4ಎ	11-00	435-00
6.	ಭಾಗ – 5	22-00	879-00
7.	ಭಾಗ – 6 (ಬೆಂಗಳೂರು)........................	9-00	363-00
8.	ಭಾಗ – 6ಎ (ಮೈಸೂರು)........................	25-00	964-00
9.	ಭಾಗ – 6ಬಿ (ಧಾರವಾಡ)	45-00	1763-00
10.	ಭಾಗ – 6ಸಿ (ಗುಲ್ಬರ್ಗ)	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .... (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ-4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗದಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59

ಮುದ್ರಕರು :-ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮಾರ್ಚ್ ೮, ೨೦೧೨ (ಫಾಲ್ಗುಣ ೧೮, ಶಕ ವರ್ಷ ೧೯೩೩)	ಸಂಚಿಕೆ ೧೦

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಸಂಖ್ಯೆ: ವಾಕೈ 144 ಕೈಸೇವಿ 2008. ಬೆಂಗಳೂರು, ದಿನಾಂಕ: 11.01.2012

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ವಾಕೈ/144/ಕೈಸೇವಿ/2008 ದಿನಾಂಕ 14.12.2011 ರ ಆದೇಶ ಭಾಗದ ಕಂಡಿಕೆ 2 ರಲ್ಲಿ ನಮೂದಾಗಿರುವ "ಉಪ ನಿರ್ದೇಶಕರು, (ಖಾಗ್ರಾ), ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಇವರನ್ನು ಮಂಡನಾಧಿಕಾರಿಯನ್ನಾಗಿ ಮುಂದುವರೆಸಿ ನೇಮಿಸಿದೆ" ಎಂಬುದರ ಬದಲಾಗಿ "ಉಪ ನಿರ್ದೇಶಕರು (ಖಾಗ್ರಾ), ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಇವರನ್ನು ಮಂಡನಾಧಿಕಾರಿಯನ್ನಾಗಿ ಮುಂದುವರೆಸಿ ನೇಮಿಸಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಲ್.ಎಸ್ ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 377 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. (ಸೇವೆಗಳು)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ಕಲ್ಲಕಟ್ಟ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ–5–ಸ.ಇಂ.11/ಉ.ಜಿ..ಕುಂ.ತಾ/ಕಲ್ಲಕಟ್ಟ/ಇಪ್ರೊಕ್ಯೂರ್‌ಮೆಂಟ್/ ಟೆಂಡರ್ ಅನುಮೋದನೆ/2011/101, ದಿನಾಂಕ 07.01.2012.

ಪ್ರಸ್ತಾವನೆ :

ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ಕಲ್ಲಕಟ್ಟ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 80.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಉಡುಪಿ ಜಿಲ್ಲಾ ಟೆಂಡರ್ ಬುಲೆಟಿನ್	8–11–2011
ವಿಜಯ ಕರ್ನಾಟಕ ದಿನ ಪತ್ರಿಕೆ	27–11–2011
ಇಂಡಿಯನ್ ಎಕ್ಸ್‌ಪ್ರೆಸ್	27–11–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 04-01-2012 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

I-F-1-A (O)

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 79,45,355/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 79,55,929/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು	95,34,368/-	19.999 ಹೆಚ್ಚು	19.839 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.839 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 14.65% ಹೆಚ್ಚಿನ ದರಗಳಿಗೆ ಅಂದರೆ ರೂ. 91,21,473/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 07 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ : 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು, ಇನ್ನಾ ಗ್ರಾಮದ ಕಲ್ಲಕಟ್ಟ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 79,55,929/-ಗಳ ಮೇಲೆ ಶೇ. 14.65 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 91,21,473/- ಗಳಿಗೆ (ರೂ ತೊಂಬತ್ತೊಂದು ಲಕ್ಷ ಇಪ್ಪತ್ತೊಂದು ಸಾವಿರದ ನಾಲ್ಕು ನೂರ ಎಪ್ಪತ್ತಮೂರು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-1-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಪಿ.ಆರ್. 379

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಚಾರ್ಮಾಡಿ ಗ್ರಾಮದ ಅರಣೆಪಾದ ಎಂಬಲ್ಲಿ ಕಿಂಡಿ ಅಣೆಕಟ್ಟು (ಬ್ರಿಡ್ಜ್ ಕಂ ಬ್ಯಾರೇಜ್) ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5ಸ.ಇಂ.-11/ದ.ಕ.ಜಿ/ಬೆ.ತಾ/ಅರಣೆಪಾದ/ಇಪ್ರೊಕ್ಯೂರ್‌ಮೆಂಟ್/ ಟೆಂಡರ್ ಅನುಮೋದನೆ/2011/104, ದಿನಾಂಕ 07.01.2012.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಚಾರ್ಮಾಡಿ ಗ್ರಾಮದ ಅರಣೆಪಾದ ಎಂಬಲ್ಲಿ ಕಿಂಡಿ ಅಣೆಕಟ್ಟು (ಬ್ರಿಡ್ಜ್ ಕಂ ಬ್ಯಾರೇಜ್) ನಿರ್ಮಾಣ ಕಾಮಗಾರಿಯ ರೂ. 80.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	8-11-2011
ಟೈಮ್ಸ್ ಆಫ್ ಇಂಡಿಯಾ ದಿನ ಪತ್ರಿಕೆ	27-11-2011
ಉದಯವಾಣಿ	27-11-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 04-01-2012 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 77,73,426/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 77,99,114/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು	93,28,118/-	20.00 ಹೆಚ್ಚು	19.605 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.605 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 14.60% ಹೆಚ್ಚಿನ ದರಗಳಿಗೆ ಅಂದರೆ ರೂ. 89,37,785/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 10 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ : 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಚಾರ್ಮಾಡಿ ಗ್ರಾಮದ ಅರಣಪಾದ ಎಂಬಲ್ಲಿ ಕಿಂಡಿ ಅಣೆಕಟ್ಟು ((ಬ್ರಿಡ್ಜ್ ಕಂ ಬ್ಯಾರೇಜ್) ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 77,99,114/-ಗಳ ಮೇಲೆ ಶೇ. 14.60 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 89,37,785/-ಗಳಿಗೆ (ರೂ ಎಂಬತ್ತೊಂಬತ್ತು ಲಕ್ಷ ಮೂವತ್ತೇಳು ಸಾವಿರದ ಏಳು ನೂರ ಎಂಬತ್ತೈದು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಪಿ.ಆರ್. 380

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ದೇಗಲಮಡಿ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2010 ದಿನಾಂಕ: 27.11.2010.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)/ವ/ಬಿಜೆಪಿ/ಪಿಬಿ-5/2011-12/6295 ದಿನಾಂಕ: 12.12.2011

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ದೇಗಲಮಡಿ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	29-09-2011
ಜಿಲ್ಲಾ ಟೆಂಡರ್ ಬುಲೆಟಿನ್	01-10-2011
ಪ್ರಜಾವಾಣಿ ದಿನಪತ್ರಿಕೆ	01-10-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 02.12.2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,58,67,136/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,76,91,149/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ದೇವೇಂದ್ರಪ್ಪ ಗೌಡ. ಎಂ ಬಿರಾದಾರ ಒಂದನೇ ದರ್ಜೆ ಗುತ್ತಿಗೆದಾರರು	4,24,22,821/-	18.28 ಹೆಚ್ಚು	12.554 ಹೆಚ್ಚು

ಮೇಲ್ಕಂಡಂತೆ ಶ್ರೀ ದೇವೇಂದ್ರಪ್ಪ ಗೌಡ ಎಂ. ಬಿರಾದಾರ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 12.554 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ 02.01.2012ರ ಪತ್ರದಲ್ಲಿ ಕಾಮಗಾರಿಯನ್ನು ಕೈಗೊಳ್ಳುವಾಗ ಎದುರಿಸಬೇಕಾದ ಸಮಸ್ಯೆಗಳ ಕುರಿತು ವಿವರಿಸುತ್ತಾ ಪ್ರಸ್ತುತ ಕಚ್ಚಾ ಸಾಮಗ್ರಿಗಳ ದರಗಳಲ್ಲಿ, ಸಾಗಣೆ ದರಗಳಲ್ಲಿ, ಕೂಲಿ ಕಾರ್ಮಿಕರ ಭತ್ಯೆಯಲ್ಲಿ ಉಂಟಾಗಿರುವ ಹೆಚ್ಚಳವನ್ನು ಪರಿಗಣಿಸಿ ಅವರು ನಮೂದಿಸಿದ ದರಗಳಿಗೆ ಟೆಂಡರನ್ನು ಅನುಮೋದಿಸಲು ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 3,76,91,149/- ಗಳ ಮೇಲ ಶೆ. 12.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,24,02,543/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 01 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ : 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ದೇಗಲಮಡಿ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 3,76,91,149/-ಗಳ ಮೇಲೆ ಶೇ. 12.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 4,24,02,543/- ಗಳಿಗೆ (ರೂ. ನಾಲ್ಕು ಕೋಟಿ ಇಪ್ಪತ್ತನಾಲ್ಕು ಲಕ್ಷ ಎರಡು ಸಾವಿರದ ಐನೂರ ನಲವತ್ಮೂರು ಮಾತ್ರ) ಗಳಿಗೆ ಶ್ರೀ. ದೇವೇಂದ್ರಪ್ಪ ಗೌಡ. ಎಂ. ಬಿರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 381 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬೆಳ್ಳೆ ಗ್ರಾಮದ ಕಟ್ಟಿಂಗೇರಿ ದಿಂಡೋಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.11/ಉ.ಜಿ/ಉ.ತಾ/ಕಟ್ಟಿಂಗೇರಿ/ಇಪ್ರೊಕ್ಯೂರ್‌ಮೆಂಟ್/ ಟೆಂಡರ್ ಅನುಮೋದನೆ/2011/103, ದಿನಾಂಕ 07.01.2012.

ಪ್ರಸ್ತಾವನೆ :

ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು. ಬೆಳ್ಳೆ ಗ್ರಾಮದ ಕಟ್ಟಿಂಗೇರಿ ದಿಂಡೋಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 1115.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	09-11-2011
ಉಡುಪಿ ಜಿಲ್ಲಾ ಟೆಂಡರ್ ಬುಲೆಟಿನ್	08-11-2011
ಉದಯವಾಣಿ ದಿನಪತ್ರಿಕೆ	30-11-2011
ಇಂಡಿಯನ್ ಎಕ್ಸ್‌ಪ್ರೆಸ್	30-11-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 04.01.2012 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 114,51,210/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 114,68,858/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು	131,65,017/-	14.966 ಹೆಚ್ಚು	14.789 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.789 ರಷ್ಟು ಹೆಚ್ಚಾಗಿರುತ್ತದೆ, ಸದರಿ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 14.60% ಹೆಚ್ಚಿನ ದರಗಳಿಗೆ ಅಂದರೆ ರೂ. 1,31,43,311/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 09 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ : 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಬೆಳ್ಳೆ ಗ್ರಾಮದ ಕಟ್ಟಂಗೇರಿ ದಿಂಡೋಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 114,68,858/-ಗಳ ಮೇಲೆ ಶೇ. 14.60ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 131,43,311/-ಗಳಿಗೆ (ರೂ. ಒಂದು ಕೋಟಿ ಮೂವತ್ತೊಂದು ಲಕ್ಷ ನಲವತ್ತಾ ಮೂರು ಸಾವಿರದ ಮೂರು ನೂರ ಹನ್ನೊಂದು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 382 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಕೋಡಿಬೆಂಗ್ರೆ ಹೊಳೆಗೆ ಬದಿ ಕಟ್ಟುವ ಕಾಮಗಾರಿ ಮತ್ತು ಕೋಡಿಬೆಂಗ್ರೆ ನದಿಗೆ ಫೆರಿಬೋಟ್ ನಿಲ್ಲಿಸುವ ಸ್ಥಳದಲ್ಲಿ ಪ್ರವಾಹ ಸಂರಕ್ಷಣಾ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.11/ಉ.ಜಿ/ಉ.ತಾ/ಕೋಡಿಬೆಂಗ್ರೆ/ಪ್ರನಿಕಾ/ಟೆಂಡರ್ ಅನುಮೋದನೆ / 2011/100, ದಿನಾಂಕ 07.01.2012.

ಪ್ರಸ್ತಾವನೆ :

ಪ್ರವಾಹ ನಿಯಂತ್ರಣ ಕಾರ್ಯಕ್ರಮದಡಿ ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಕೋಡಿಬೆಂಗ್ರೆ ಹೊಳೆಗೆ ಬದಿ ಕಟ್ಟುವ ಕಾಮಗಾರಿಯ ರೂ. 25.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ ಮತ್ತು ಕೋಡಿಬೆಂಗ್ರೆ ನದಿಗೆ ಫೆರಿಬೋಟ್ ನಿಲ್ಲಿಸುವ ಸ್ಥಳದಲ್ಲಿ ಪ್ರವಾಹ ಸಂರಕ್ಷಣಾ ಕಾಮಗಾರಿಯ ರೂ. 15.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳ ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಉಡುಪಿ ಜಿಲ್ಲಾ ಟೆಂಡರ್ ಬುಲೆಟಿನ್	05-12-2011
ಸಂಯುಕ್ತ ಕರ್ನಾಟಕ ದಿನ ಪತ್ರಿಕೆ	11-12-2011
[illegible] ಭಾರತಿ	11-12-2011

ದಿನಾಂಕ 22.12.2011ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 39,62,482/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 50,14,492/--

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು	62,99,696/-	58.9836 ಹೆಚ್ಚು	25.6298 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 25.6298 ರಷ್ಟು ಹೆಚ್ಚಾಗಿರುತ್ತವೆ. ಸದರಿ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 14.75% ಹೆಚ್ಚಿನ ದರಗಳಿಗೆ ಅಂದರೆ ರೂ. 57,54,130/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 01 ಪ್ರನಿಕಾ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಕೋಡಿಬೆಂಗ್ರೆ ಹೊಳೆಗೆ ಬದಿ ಕಟ್ಟುವ ಕಾಮಗಾರಿ ಮತ್ತು ಕೋಡಿಬೆಂಗ್ರೆ ನದಿಗೆ ಫೆರಿಬೋಟ್ ನಿಲ್ಲಿಸುವ ಸ್ಥಳದಲ್ಲಿ ಪ್ರವಾಹ ಸಂರಕ್ಷಣಾ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 50,14,492/- ಗಳ ಮೇಲೆ ಶೇ. 14.75 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 57,54,130/-ಗಳಿಗೆ (ರೂ. ಐವತ್ತೇಳು ಲಕ್ಷ ಐವತ್ತಾ ನಾಲ್ಕು ಸಾವಿರದ ಒಂದು ನೂರ ಮೂವತ್ತು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 383 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿಸಿಬಿ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 06 ನಯೋಕಾ 2009 ದಿನಾಂಕ:06-10-2010.
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)/ವ/ಬಿಜೆಪಿ/ಪಿಬಿ-5/2011-12/11 ದಿನಾಂಕ: 03.01.2012

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿಸಿಬಿ ನಿರ್ಮಾಣ ಕಾಮಗಾರಿ ಅಂದಾಜಿಗೆ ಉಲ್ಲೇಖ (1) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	29-09-2011
ಜಿಲ್ಲಾ ಟೆಂಡರ್ ಬುಲೆಟಿನ್	01-10-2011
ಸಂಯುಕ್ತ ಕರ್ನಾಟಕ ದಿನಪತ್ರಿಕೆ	01-10-2011

ವಿಜಯ ಕರ್ನಾಟಕ ದಿನಪತ್ರಿಕೆ	02.10.2011
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	01.10.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಸ್ಪಂದಿಸಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 07.12.2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ.1,83,23,489/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ.2,35,12,452/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಶ್ರೀ. ವಿಠೋಬಾ ಡಿ. ಗೌಂಡಿ ಒಂದನೇ ದರ್ಜೆ ಗುತ್ತಿಗೆದಾರರು	2,55,46,806/-	39.42 ಹೆಚ್ಚು	8.652 ಹೆಚ್ಚು

ಮೇಲ್ಕಂಡಂತೆ ಶ್ರೀ. ವಿಠೋಬಾ ಡಿ. ಗೌಂಡಿ ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 8.652 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ 12.01.2012ರ ಪತ್ರದಲ್ಲಿ ಕಾಮಗಾರಿಯನ್ನು ಕೈಗೊಳ್ಳುವಾಗ ಎದುರಿಸಬೇಕಾದ ಸಮಸ್ಯೆಗಳ ಕುರಿತು ವಿವರಿಸುತ್ತಾ ಪ್ರಸ್ತುತ ಕಚ್ಚಾ ಸಾಮಗ್ರಿಗಳ ದರಗಳಲ್ಲಿ, ಸಾಗಣೆ ದರಗಳಲ್ಲಿ, ಕೂಲಿ ಕಾರ್ಮಿಕರ ಭತ್ಯೆಯಲ್ಲಿ ಉಂಟಾಗಿರುವ ಹೆಚ್ಚಳವನ್ನು ಪರಿಗಣಿಸಿ ಅವರು ನಮೂದಿಸಿದ ದರಗಳಿಗೆ ಟೆಂಡರನ್ನು ಅನುಮೋದಿಸಲು ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,35,12,452/- ಗಳಿಗೆ ಮೇಲೆ ಶೇ. 8.50ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,55,11,010/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 06 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ : 16ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಕೊಟಗಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬಿಸಿಬಿ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,35,12,452/-ಗಳ ಮೇಲೆ ಶೇ. 8.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,55,11,010/- ಗಳಿಗೆ (ರೂ. ಎರಡು ಕೋಟಿ ಐವತ್ತೈದು ಲಕ್ಷ ಹನ್ನೊಂದು ಸಾವಿರದ ಹತ್ತು ಮಾತ್ರ) ಗಳಿಗೆ ಶ್ರೀ. ವಿಠೋಬಾ ಡಿ. ಗೌಂಡಿ ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 384 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ನಡೂರು ಗ್ರಾಮದ ಕಂಬಳಗದ್ದೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.11/ಉ.ಜಿ/ಉ.ತಾ/ಕಂಬಳಗದ್ದೆ/ಇಪ್ರೊಕ್ಯೂರ್‌ಮೆಂಟ್/ ಟೆಂಡರ್ ಅನುಮೋದನೆ / 2011/102, ದಿನಾಂಕ 07.01.2012.

ಪ್ರಸ್ತಾವನೆ :

ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ನಡೂರು ಗ್ರಾಮದ ಕಂಬಳಗದ್ದೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ. 60.00ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಉಡುಪಿ ಜಿಲ್ಲಾ ಟೆಂಡರ್ ಬುಲೆಟಿನ್	08-11-2011
ವಿಜಯ ಕರ್ನಾಟಕ ದಿನ ಪತ್ರಿಕೆ	27-11-2011
ಇಂಡಿಯನ್ ಎಕ್ಸ್‌ಪ್ರೆಸ್	27-11-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಒಬ್ಬರು ಮಾತ್ರ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 04.01.2012ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 59,21,662/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 59,35,154/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು	71,06,010/-	20.00 ಹೆಚ್ಚು	19.727 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.727 ರಷ್ಟು ಹೆಚ್ಚಾಗಿರುತ್ತದೆ, ಸದರಿ ಟೆಂಡರನ್ನು ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ. 14.60% ಹೆಚ್ಚಿನ ದರಗಳಿಗೆ ಅಂದರೆ ರೂ. 68,01,686/- ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 08 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 17ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ನಡೂರು ಗ್ರಾಮದ ಕಂಬಳಗದ್ದೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 59,35,154/- ಗಳ ಮೇಲೆ ಶೇ. 14.60 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 68,01,686/-ಗಳಿಗೆ (ರೂ.ಅರವತ್ತೆಂಟು ಲಕ್ಷ ಒಂದು ಸಾವಿರದ ಆರು ನೂರ ಎಂಬತ್ತಾರು ರೂಪಾಯಿಗಳು ಮಾತ್ರ) ಕಾಮಗಾರಿಯನ್ನು ಶ್ರೀ ರಾಜೇಶ್ ಕಾರಂತ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 385 ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಮರಿಕುಂಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಮುಸದ/ಲೆಶಾಖೆ/ಲೆಸ-1/3/ಭೂಸ್ವಾಧೀನ/11-12/2598, ದಿನಾಂಕ 17/11/2011.

ಪ್ರಸ್ತಾವನೆ :

ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಮರಿಕುಂಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮರಿಕುಂಟೆ ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಹೆಚ್ಚುವರಿ ಪರಿಹಾರ ಮೊತ್ತ ಪಾವತಿಸಲು ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ದಿನಾಂಕ 17/11/11ರ ಪತ್ರದಲ್ಲಿ ಕೋರಿದ್ದಾರೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 15/11/1984ರಂದು ಹೊರಡಿಸಲಾಗಿದೆ.
- ಭೂಸ್ವಾಧೀನ ಕಾಯ್ದೆ ಕಲಂ 11(ಎ)ರಂತೆ ಭೂಸ್ವಾಧೀನಾಧಿಕಾರಿಗಳು ಪರಿಹಾರದ ಐತೀರ್ಮ ಘೋಷಿಸಿದ ದಿನಾಂಕ 27/06/1986.
- ಜಮೀನಿನ ಕಬ್ಜೆಯನ್ನು ದಿನಾಂಕ 27/07/1979ರಂದು ಪಡೆಯಲಾಗಿದೆ.

ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ದಾವಣಗೆರೆ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಮುಖ್ಯ ಪ್ರಕರಣ ಸಂಖ್ಯೆ:86/87ರಲ್ಲಿ ದಿನಾಂಕ 23/07/1998ರಂದು ನೀಡಿದ ಸಾಮಾನ್ಯ ತೀರ್ಪಿನಲ್ಲಿ ಪ್ರತಿ ಎಕರೆ ಜಮೀನಿಗೆ ರೂ. 10,000/-ಗಳ ಭೂಮೌಲ್ಯವನ್ನು ನಿಗದಿಪಡಿಸಿದೆ.

ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಪತ್ರ ಸಂಖ್ಯೆ:ಲಾ 315 ಎಲ್ಎಸ್ಎ 98, ದಿನಾಂಕ 22/04/99ರಂದು ಅಭಿಪ್ರಾಯ ನೀಡಿದೆ.

ಪಾವತಿಸಬೇಕಾದ ಪರಿಹಾರದ ವಿವರ ಕೆಳಕಂಡಂತಿದೆ:

ಕ್ರ.ಸಂ.	ಎಲ್.ಎ.ಸಿ. ಸಂಖ್ಯೆ	ಮರಿಕುಂಟೆ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	79/87	92	18-25	512924
2	86/87	75/ಪಿ	5-01	138391
3	148/92	86/5	4-04	112910
4	73/87	78	14-00	385555
5	78/87	76	8-16	228526
6	87/87	86/4	1-15	37856
7	80/87	67	0-23	15824
	ಒಟ್ಟು			1431986

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 176 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ: 12ನೇ ಜನವರಿ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಮರಿಕುಂಟೆ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮರಿಕುಂಟೆ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸ.ನಂ.ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ರೂ. 14,31,986-00ಗಳನ್ನು (ಹದಿನಾಲ್ಕು ಲಕ್ಷದ ಮೂವತ್ತೊಂದು ಸಾವಿರದ ಒಂಬೈನೂರ ಎಂಭತ್ತಾರು ರೂ.ಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು ಆಯವ್ಯಯದ ಲೆಕ್ಕಶೀರ್ಷಿಕೆ "4702-00-101-5-01-139 (ಯೋಜನೆ)" ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20/10/10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 386

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಇಂಧನ ಸಚಿವಾಲಯ

ವಿಷಯ : ಮೆ॥ ವಾಸುಕಿ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಚಿಲ್ಲೂರು ಗ್ರಾಮದಲ್ಲಿ 10 ಮೆ.ವ್ಯಾ. ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪನೆಗೆ ನಿರಾಕ್ಷೇಪಣೆ ನೀಡುವ ಕುರಿತು.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಎಫ್-145/ವಿಪಿಪಿಎಲ್/2011-12/4554 ದಿನಾಂಕ: 07.12.2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ವಾಸುಕಿ ಪವರ್ ಪ್ರೈವೇಟ್ ಲಿಮಿಟೆಡ್ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಚಿಲ್ಲೂರು ಗ್ರಾಮದಲ್ಲಿ 10.00 ಮೆ.ವ್ಯಾ. ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 423 ಎನ್‌ಸಿಇ 2011, ಬೆಂಗಳೂರು, ದಿನಾಂಕ: 13-01-2012

ಮೆ॥ ವಾಸುಕಿ ಪವರ್ ಪ್ರೈವೇಟ್ ಲಿಮಿಟೆಡ್ ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಚಿಲ್ಲೂರು ಗ್ರಾಮದಲ್ಲಿ 10.00 ಮೆ.ವ್ಯಾ. ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸಲು ಈ ಕೆಳಗಿನ ಷರತ್ತಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. ಅಭಿವೃದ್ಧಿದಾರರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ವಿದ್ಯುತ್ ರವಾನೆ ವ್ಯವಸ್ಥೆ ಸಂಬಂಧ (Evaluation of Power) ಪ್ರತ್ಯೇಕವಾಗಿ ಅನುಮೋದನೆ ಪಡೆಯತಕ್ಕದ್ದು.
2. ಅಭಿವೃದ್ಧಿದಾರರು ಬೆಸ್ಕಾಂ ಹಾಗೂ ಹೆಸ್ಕಾಂನೊಂದಿಗೆ ತಲಾ 5.00 ಮೆ.ವ್ಯಾ. ವಿದ್ಯುತ್ತಿಗೆ ಸಂಬಂಧಿಸಿದಂತೆ (ಒಟ್ಟು 10.00 ಮೆ.ವ್ಯಾ.) ವಿದ್ಯುತ್ ಖರೀದಿ ಒಪ್ಪಂದವನ್ನು (ಪಿಪಿಎ) ಮಾಡಿಕೊಳ್ಳತಕ್ಕದ್ದು.
3. ಈ ಸ್ಥಾವರಕ್ಕೆ ಸಂಬಂಧಿಸಿದಂತೆ ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತಿತರ ಇಲಾಖೆಗಳಿಂದ ಪಡೆದುಕೊಳ್ಳತಕ್ಕದ್ದು.
4. ಈ ಸ್ಥಾವರ ಅನುಷ್ಠಾನಗೊಳಿಸುವ ಮುನ್ನ ಅಭಿವೃದ್ಧಿದಾರರು ವಿಸ್ತøತ ಯೋಜನಾ ವರದಿಯನ್ನು (ಡಿ.ಪಿ.ಆರ್.) ತಯಾರಿಸಿ ಕ್ರೆಡಲ್ ಸಂಸ್ಥೆಯಿಂದ ಅನುಮೋದನೆ ಪಡೆಯತಕ್ಕದ್ದು.

ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 387

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 399 ಎನ್‌ಸಿಇ 2011, ಬೆಂಗಳೂರು, ದಿನಾಂಕ: 07.01.2012

ಮೆ॥ ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ರವರಿಗೆ ಸರ್ಕಾರಿ ಆದೇಶ ಸಂಖ್ಯೆ: ಇಎನ್ 302 ಎನ್‌ಸಿಇ 2006 ದಿನಾಂಕ: 16.10.2006ರ ಆದೇಶದನ್ವಯ ಕೋಲಾರ, ತುಮಕೂರು, ದಾವಣಗೆರೆ, ಬೆಂಗಳೂರು ಗ್ರಾಮೀಣ, ಹಾಸನ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 477.36 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆಮಾಡಿದ್ದು, ಸದರಿ ಆದೇಶ ಭಾಗದ ಕ್ರಮ ಸಂಖ್ಯೆ 4ರಲ್ಲಿ ನಮೂದಿಸಲಾಗಿರುವ

"ಅಯ್ಯನ ಹಳ್ಳಿ, ಬೀಶನಹಳ್ಳಿ, ಹೊಸಹಳ್ಳಿ, ಮಾರಿಕಟ್ಟೆ, ನಿಂಬಳಗೇರೆ, ದಾವಣಗೆರೆ ಜಿಲ್ಲೆ"

ಎಂಬುದನ್ನು

"ಅಯ್ಯನಹಳ್ಳಿ, ಬೀಶನಹಳ್ಳಿ, ಹೊಸಹಳ್ಳಿ, ಮಾರಿಕಟ್ಟೆ, ದಾವಣಗೆರೆ ಜಿಲ್ಲೆ ಮತ್ತು ನಿಂಬಳಗೇರೆ, ಬಳ್ಳಾರಿ ಜಿಲ್ಲೆ"

ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 388

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಆರ್‌ಡಿ 385 ಎಲ್‌ಜಿಬಿ 2011, ಬೆಂಗಳೂರು, ದಿನಾಂಕ: 06.01.2012

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 385 ಎಲ್‌ಜಿಬಿ 2011ರ ಆದೇಶದ ಭಾಗದಲ್ಲಿರುವ ಮಿಥಿಕ್ ಸೊಸೈಟಿ ಇಂಡಾಲಜಿ ಎಂದಿರುವುದನ್ನು ದಿ **ಮಿಥಿಕ್ ಸೊಸೈಟಿ** ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ. ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ).

ಪಿ.ಆರ್. 390

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಲೋಕಾಯುಕ್ತದಲ್ಲಿ ಗುತ್ತಿಗೆ ಆಧಾರದ ಮೇಲೆ ಅಪರ ನಿಬಂಧಕ (ವಿಚಾರಣೆಗಳು) ರಾಗಿ ನೇಮಕವಾಗಿರುವ ಶ್ರೀ ಸುಧಾರಕರ್, ಎ. ಪಂಡಿತ್ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ವೇತನವನ್ನು ಪುನರ್‌ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:
1. ಅಧಿಸೂಚನೆ ಸಂಖ್ಯೆ: ಸಿಆಸುಇ 56 ಸೇಲೋಯು 2008 ದಿ: 6.8.2008.
2. ಅಧಿಸೂಚನೆ ಸಂಖ್ಯೆ: ಸಿಆಸುಇ 172 ಸೇಲೋಯು 2010 ದಿ: 3.9.2010.
3. ಅಧಿಸೂಚನೆ ಸಂಖ್ಯೆ: ಸಿಆಸುಇ 116 ಸೇಲೋಯು 2011, ದಿ: 26.08.2011.
4. ಆದೇಶ ಸಂ: ಸಿಆಸುಇ 56(4) ಸೇಲೋಯು 2008 (ಭಾ), ದಿ: 27.5.2009.
5. ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸರ್ಕಾರಿ ಆದೇಶ ಸಂ: ಎಲ್‌ಎಡಬ್ಲ್ಯೂ 147 ಎಲ್‌ಎಸಿ 2009 ದಿ: 30.9.2010 ಮತ್ತು ದಿ: 13.10.2010.
6. ಕರ್ನಾಟಕ ಲೋಕಾಯುಕ್ತದ ನಿಬಂಧಕರ ದಿ: 20.10.2011ರ ಪತ್ರ ಸಂ: ಕಲೋ/ಸಿಬ್ಬಂದಿ(1)/111/2006-07.

ಪ್ರಸ್ತಾವನೆ :

ಶ್ರೀ ಸುಧಾಕರ್, ಎ. ಪಂಡಿತ್, ನಿವೃತ್ತ ಜಿಲ್ಲಾ ನ್ಯಾಯಧೀಶರು ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿದ್ದ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಮೇಲೆ (1) ರಲ್ಲಿ ಓದಲಾದ ದಿನಾಂಕ 6.8.2008 ರ ಅಧಿಸೂಚನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಎರಡು

ವರ್ಷಗಳ ಅವಧಿಗೆ ನೇಮಕಾತಿ ಮಾಡಿದ್ದು, ದಿನಾಂಕ 8.8.2008 ರಿಂದ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರ ಗುತ್ತಿಗೆ ಆಧಾರದ ನೇಮಕಾತಿಯನ್ನು ದಿನಾಂಕ: 18.8.2010ರಿಂದ ಜಾರಿಗೆ ಬರುವಂತೆ ಮೇಲೆ (2) ರಲ್ಲಿ ಓದಲಾದ ದಿನಾಂಕ 3.9.2010ರ ಅಧಿಸೂಚನೆಯ ಮೂಲಕ ಮತ್ತೊಂದು ವರ್ಷದ ಅವಧಿಗೆ ಮುಂದುವರಿಸಲಾಗಿತ್ತು. ತದನಂತರ, ದಿನಾಂಕ 26.8.2011 ರ ಅಧಿಸೂಚನೆಯಲ್ಲಿ (ಮೇಲೆ (3) ರಲ್ಲಿ ಓದಲಾಗಿದೆ) ದಿನಾಂಕ 18.8.2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಇವರ ಹಾಲಿ ಗುತ್ತಿಗೆ ಆಧಾರದ ನೇಮಕಾತಿಯನ್ನು ಮುಂದುವರಿಸಲಾಗಿದೆ.

ಮೇಲೆ (4) ರಲ್ಲಿ ಓದಲಾಗಿರುವ ದಿ: 27.5.2009ರ ಆದೇಶದಲ್ಲಿ ಶ್ರೀ ಸುಧಾಕರ್ ಎ. ಪಂಡಿತ್‌ರವರು ಪಡೆಯುತ್ತಿರುವ. ನಿವೃತ್ತಿ ವೇತನದೊಂದಿಗೆ ₹ 5,463/- ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ತಿಳಿಸಲಾಗಿತ್ತು.

ಕಾನೂನು. ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ಹೊರಡಿಸಿರುವ ಮೇಲೆ (5) ರಲ್ಲಿ ಓದಲಾದ ದಿನಾಂಕ 30.9.2010 ಮತ್ತು 13.10.2010 ರ ಆದೇಶಗಳಲ್ಲಿ ನಿವೃತ್ತ ನ್ಯಾಯಾಂಗ ಅಧಿಕಾರಿಗಳ ನಿವೃತ್ತಿ ವೇತನವನ್ನು ಪೂರ್ವಾನ್ವಯವಾಗಿ ಪರಿಷ್ಕರಿಸಿರುವುದರಿಂದ, ತಮ್ಮ ಗುತ್ತಿಗೆ ಆಧಾರದ ನೇಮಕಾತಿಯ ವೇತನವನ್ನು ದಿನಾಂಕ 18.8. 2008ರಿಂದ ಪೂರ್ವಾನ್ವಯವಾಗಿ ಪುನರ್‌ನಿಗದಿಪಡಿಸುವಂತೆ ಶ್ರೀ ಸುಧಾಕರ್ ಎ. ಪಂಡಿತ್‌ರವರು ಸಲ್ಲಿಸಿರುವ ಕೋರಿಕೆಯನ್ನು ಪರಿಗಣಿಸಲು ಮೇಲೆ (6) ರಲ್ಲಿ ಓದಲಾದ ದಿನಾಂಕ 20.10.2011 ರ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತದ ನಿಬಂಧಕರು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 116 ಸೇಲೋಯು 2011, ಬೆಂಗಳೂರು, ದಿನಾಂಕ: 12.01.2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಸುಧಾಕರ್ ಎ. ಪಂಡಿತ್, ಅಪರ ನಿಬಂಧಕರು (ವಿಚಾರಣೆಗಳು), ಕರ್ನಾಟಕ ಲೋಕಾಯುಕ್ತ ಇವರ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 313 (ಬಿ) ಪ್ರಕಾರ ₹ 23,040/- ದಿನಾಂಕ 18.8.2008ರಿಂದ ಪೂರ್ವಾನ್ವಯವಾಗಿ ಪುನರ್‌ನಿಗದಿಪಡಿಸಲಾಗಿದೆ. ಈ ಮರುನೇಮಕಾತಿ ವೇತನದೊಂದಿಗೆ ಶ್ರೀಯುತರು ನಿವೃತ್ತಿ ಸಮಯದಲ್ಲಿ ಪಡೆಯುತ್ತಿದ್ದ ಮೂಲ ವೇತನವಾದ (ಪರಿಷ್ಕೃತ) ₹ 63,070/- ಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ. ಆದರೆ, ನಿವೃತ್ತಿ ವೇತನದ ಮೇಲಿನ ತುಟ್ಟಿಭತ್ಯೆಯನ್ನು ಪಡೆಯುವಂತಿಲ್ಲ. ನಿವೃತ್ತಿ ನಂತರದ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 1265 ಸೇ-3/2011, ದಿ: 7.12.2011 ಮತ್ತು ಆಇ 1344ಸೇ-3/11 ದಿನಾಂಕ 31.12.2011ಗಳಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ. ನಾಗೇಶ್ ಪಾಟಕ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು-2)

ಪಿ.ಆರ್. 391

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಲ್. ರಾಧಾಕೃಷ್ಣ, ಕೆಎಎಸ್ (ಆಯ್ಕೆ ಶ್ರೇಣಿ) ಇವರು ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಸಕಾಲದಲ್ಲಿ ಸಲ್ಲಿಸದಿರುವ ಕಾರಣ ಇವರ ವಿರುದ್ಧ ಶಿಸ್ತು ಕ್ರಮ-ಅಂತಿಮ ಆದೇಶ

ಓದಲಾಗಿದೆ:
1. ದಿನಾಂಕ: 06-07-11 ರ ಕಾರಣ ಕೇಳುವ ನೋಟೀಸು ಸಂಖ್ಯೆ: ಸಿಆಸುಇ 097 ಕೆಎಎಲ್ 07
2. ಶ್ರೀ ಎಲ್ ರಾಧಕೃಷ್ಣ, ಕೆಎಎಸ್ (ಆಯ್ಕೆ ಶ್ರೇಣಿ) ಇವರ ಉತ್ತರ ದಿನಾಂಕ: 30-09-11

ಪ್ರಸ್ತಾವನೆ :

ಶ್ರೀ ಎಲ್ ರಾಧಾಕೃಷ್ಣ, ಕೆಎಎಸ್ (ಆಯ್ದ ಶ್ರೇಣಿ), ಜಂಟೀ ಆಯುಕ್ತರು, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 23 ರಡಿ ಸಲ್ಲಿಸಿದ್ದ 1997-98 ನೇ ಸಾಲಿನ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಪರಾಮರ್ಶಿಸಲು ಕೆಲವೊಂದು ಅಂಶಗಳಿಗೆ ಹೆಚ್ಚುವರಿ ಮಾಹಿತಿ ಒದಗಿಸುವಂತೆ, ದಿನಾಂಕ: 19-11-98 ರ ಪತ್ರ ಸಂಖ್ಯೆ: ಸಿಆಸಿ 025 ಸೇಆಅ 93 ಅನ್ನು ಬರೆಯಲಾಗಿತ್ತು. ನಂತರ, ದಿನಾಂಕ: 10-08-2000, 28-11-2001 ರಂದು ನೆನಪೋಲೆಗಳನ್ನು ಬರೆದಿದ್ದು, 1999-2000 ಮತ್ತು 2000-01 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ನಂತರ, ದಿನಾಂಕ: 20-09-03 ರಂದು ನೆನಪೋಲೆ ಬರೆಯುತ್ತಾ, 1999-2000 ರಿಂದ 2002-03 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ, ಶ್ರೀ ರಾಧಕೃಷ್ಣ ರವರು ದಿನಾಂಕ: 23-12-04 ರಂದು 2003-04 ನೇ ಸಾಲಿನ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಮಾತ್ರ ಸಲ್ಲಿಸುತ್ತಾ, ಹೆಚ್ಚುವರಿ ಅಂಶಗಳಿಗೆ ಮಾಹಿತಿ ಸಲ್ಲಿಸಿರುವುದಿಲ್ಲ.

2. ನಂತರ ಈ ಹಿಂದೆ ಕೋರಲಾದ ಹೆಚ್ಚುವರಿ ಅಂಶಗಳಿಗೆ ಮಾಹಿತಿ ನೀಡುವಂತೆಯೂ ಮತ್ತು 1999-2000 ರಿಂದ 2003-04 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಸಲ್ಲಿಸುವಂತೆ ದಿನಾಂಕ: 01-04-05 ರಂದು ಮತ್ತೊಂದು ಪತ್ರ ಬರೆದಿದ್ದು, ಈ ಪತ್ರಕ್ಕೂ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ, ಈಗ ಸಲ್ಲಿಸಲು ಬಾಕಿ ಇರುವ ಮಾಹಿತಿಗಳ ಜೊತೆಗೆ 2004-05 ಮತ್ತು 2005-06 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಒಂದು ವಾರದ ಒಳಗಾಗಿ ಸಲ್ಲಿಸುವಂತೆಯೂ, ಇದಕ್ಕೆ ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ದಿನಾಂಕ: 11-05-06 ರಂದು ಪತ್ರ ಬರೆಯಲಾಗಿದೆ. ನಂತರ, ಈ ಎಲ್ಲಾ ಪತ್ರಗಳನ್ನು ಉಲ್ಲೇಖಿಸುತ್ತಾ, ಸಲ್ಲಿಸಲು ಬಾಕಿ ಇರುವ ಮಾಹಿತಿ ಮತ್ತು 2004-05 ರಿಂದ 2006-07 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ವಾರದ ಒಳಗಾಗಿ ಸಲ್ಲಿಸುವಂತೆ ಬರೆಯಲಾದ ದಿನಾಂಕ: 25-06-07 ರ ಪತ್ರಕ್ಕೆ ಅಧಿಕಾರಿಯು 2004-05 ರಿಂದ 2006-07 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಮಾತ್ರ ಸಲ್ಲಿಸುತ್ತಾ, ಇತರೇ ಮಾಹಿತಿಗಳನ್ನು ಸಲ್ಲಿಸಿರುವುದಿಲ್ಲ.

3. ಈ ಅಧಿಕಾರಿಯು ಸಲ್ಲಿಸಿದ 2004-05 ರಿಂದ 2006-07 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳು ಕ್ರೋಢೀಕೃತಗೊಂಡಿದ್ದು, ಅಪೂರ್ಣವಾಗಿದ್ದ ಕಾರಣ ಮತ್ತು 1997-98 ನೇ ಸಾಲಿನ ನಂತರದ ಅವಧಿಯ ಸ್ಥಿರ ಮತ್ತು ಚರಾಸ್ತಿ ವಿವರಗಳು ಪರಾಮರ್ಶಿಸಲು ಬಾಕಿ ಇರುವ ಕಾರಣ, ಎಲ್ಲ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಪರಾಮರ್ಶಿಸುವಲ್ಲಿ ಅನಗತ್ಯ ವಿಳಂಬವಾಗುತ್ತಿರುವುದರಿಂದ, ಸಕಾಲದಲ್ಲಿ ವಿವರಗಳನ್ನು ಸಲ್ಲಿಸದಿರುವುದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳ ಉಲ್ಲಂಘನೆಯಾಗಿದ್ದು, ಇದಕ್ಕೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನೆ ವಿಧಿಸಬಹುದಾಗಿದ್ದು ಮತ್ತು ಈ ವಿಷಯವು ವಿಧಾನ ಮಂಡಲದಲ್ಲಿ ಚರ್ಚೆಯಾಗಿರುವುದನ್ನು ಉಲ್ಲೇಖಿಸುತ್ತಾ, ಸಲ್ಲಿಸಲು ಬಾಕಿ ಇರುವ [illegible] ಮಾಹಿತಿ/ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಹತ್ತು ದಿನಗಳ ಒಳಗಾಗಿ ಸಲ್ಲಿಸುವಂತೆ ದಿನಾಂಕ: 21-11-08 ರಂದು ಅಧಿಕಾರಿಗೆ ಅರೆ ಸರ್ಕಾರಿ ಪತ್ರ [illegible]ಲಾಯಿತು. ಈ ಪತ್ರಕ್ಕೂ ಯಾವುದೇ ಪ್ರತಿಕ್ರಿಯೆ ಸದರಿಯವರಿಂದ ಬಾರದ ಕಾರಣ, ದಿನಾಂಕ: 16-04-09, 23-08-10 ಮತ್ತು 01-10-10 ರಂದು ನೆನಪೋಲೆ ಬರೆಯಲಾಯಿತು. ಇದಕ್ಕೂ ಅಧಿಕಾರಿಯಿಂದ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ, ಸರ್ಕಾರಿ ಪತ್ರಗಳಲ್ಲಿನ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸದೇ ತಾತ್ಸಾರ ಧೋರಣೆ ತಳೆದಿರುವ ಅಧಿಕಾರಿಯ ವರ್ತನೆಯ ಬಗ್ಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳಡಿ ಶಿಸ್ತು ಕ್ರಮ ಏಕೆ ಕೈಗೊಳ್ಳಬಾರದು ಎಂಬುದಕ್ಕೆ ಹದಿನೈದು ದಿನಗಳ ಒಳಗಾಗಿ ವಿವರಣೆ ಸಲ್ಲಿಸುವಂತೆ ದಿನಾಂಕ: 05-03-11 ರಂದು ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಯಿತು. ಆಪಾದಿತ ಅಧಿಕಾರಿ ಶ್ರೀ ರಾಧಾಕೃಷ್ಣ ರವರು ಈ ನೋಟೀಸಿಗೂ ವಿವರಣೆ ಸಲ್ಲಿಸಿರುವುದಿಲ್ಲ.

4. ದಿನಾಂಕ: 29-05-2000 ರ ಸುತ್ತೋಲೆ ಸಂಖ್ಯೆ: ಸಿಆಸುಇ 37 ಸೇಆಇ 2000 ರ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯು ಆಯಾ ವರ್ಷದಲ್ಲಿ ಸಂಪಾದಿಸಿರುವ ಸ್ಥಿರಾಸ್ತಿ ಮಾಹಿತಿ ಸಹಿತ ಅವರ ಸೇವಾವಧಿಯಲ್ಲಿ ಗಳಿಸಿರುವ ಪ್ರತಿಯೊಂದು ಸ್ಥಿರಾಸ್ತಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದೆಂದು ತಿಳಿಸಿದ್ದರೂ, ಶ್ರೀ ರಾಧಾಕೃಷ್ಣ, ಕೆಎಎಸ್ ರವರು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಈ ಸೂಚನೆಯನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿರುವುದು ಮತ್ತು ಸರ್ಕಾರಿ ಪತ್ರಗಳಲ್ಲಿನ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸದೇ ತಾತ್ಸಾರ ಧೋರಣೆ ತಳೆದಿರುವ ವರ್ತನೆಯಿಂದಾಗಿ ಅನಗತ್ಯ ಪತ್ರ ವ್ಯವಹಾರ ನಡೆಯಲು ಕಾರಣಕರ್ತರಾಗಿ, ಸರ್ಕಾರದ ಆರ್ಥಿಕ, ಸಮಯ ಮತ್ತು ಮಾನವ ಸಂಪನ್ಮೂಲವು ಅನಗತ್ಯವಾಗಿ ವ್ಯಯವಾಗಲು ಕಾರಣಕರ್ತರಾಗುವ ಮೂಲಕ ಇವರ ನಡತೆಯು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3 ಕ್ಕೆ ವಿರುದ್ಧದ ಹಾಗೂ ಒಬ್ಬ ಸರ್ಕಾರಿ ನೌಕರನಿಗೆ ತರವಲ್ಲದ ನಡತೆಯಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಇವರ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸಿ, ದುರ್ನಡತೆಯ ಆರೋಪಕ್ಕೆ ವಿವರಣೆಯೊಂದಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 12 ರಡಿ ನೋಟೀಸನ್ನು ಜಾರಿಗೊಳಿಸಲಾಗಿದೆ.

5. ಆರೋಪಿತ ಅಧಿಕಾರಿ ಶ್ರೀ ಎಲ್. ರಾಧಾಕೃಷ್ಣ, ಕೆಎಎಸ್ (ಆಯ್ಕೆ ಶ್ರೇಣಿ) ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಕಾರ್ಯದ ಒತ್ತಡದಿಂದಾಗಿ ಸಕಾಲದಲ್ಲಿ ವಿವರಗಳನ್ನು ಸಲ್ಲಿಸಿರುವುದಿಲ್ಲವೆಂದೂ, ಹೆಚ್ಚುವರಿ ಮಾಹಿತಿ ಕೋರಿ ಬರೆದ ಸರ್ಕಾರಿ ಪತ್ರಗಳು ನನ್ನ ಕೈ ಸೇರಿರುವುದಿಲ್ಲವೆಂದೂ, ಸುಮಾರು ವರ್ಷಗಳು ಕಳೆದಿರುವುದರಿಂದ ಹಲವಾರು ಮಾಹಿತಿಗಳು ಲಭ್ಯವಿರುವುದಿಲ್ಲವೆಂದೂ ತಿಳಿಸುತ್ತಾ, ಈಗಾಗಲೇ ಸಲ್ಲಿಸಿರುವ ಸ್ಥಿರ ಮತ್ತು ಚರಾಸ್ತಿ ವಿವರಗಳ ಬದಲಿಗೆ ಈಗ ಸಲ್ಲಿಸುತ್ತಿರುವ 1997-98 ರಿಂದ 2010-11 ನೇ ಸಾಲುಗಳ ಸ್ಥಿರ ಮತ್ತು ಚರಾಸ್ತಿ ವಿವರಗಳನ್ನು ಪರಿಗಣಿಸುವಂತೆ ಮತ್ತು ಇನ್ನು ಮುಂದೆ ಯಾವುದೇ ಕಾರಣಕ್ಕೂ ಇಂತಹ ಲೋಪಕ್ಕೆ ಆಸ್ಪದ ನೀಡುವುದಿಲ್ಲವೆಂದು ತಿಳಿಸಿ ಶಿಸ್ತು ಕ್ರಮವನ್ನು ಕೈಬಿಡುವಂತೆ ಮನವಿ ಮಾಡಿರುತ್ತಾರೆ.

6. ಸರ್ಕಾರವು, ದುರ್ನಡತೆಯ ವಿವರಗಳನ್ನು ಮತ್ತು ಆರೋಪಿತ ಅಧಿಕಾರಿಯು ಸಲ್ಲಿಸಿರುವ ಉತ್ತರವನ್ನು ಕೂಲಂಕಷವಾಗಿ ಪರಿಶೀಲಿಸಿ, ಕಛೇರಿ ಕೆಲಸದ ಒತ್ತಡದಿಂದಾಗಿ ಸ್ಥಿರಾಸ್ತಿ ಮತ್ತು ಚರಾಸ್ತಿ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಸಕಾಲದಲ್ಲಿ ಸಲ್ಲಿಸಲು ಸಾಧ್ಯವಾಗಿರುವುದಿಲ್ಲವೆಂಬ ಆರೋಪಿತ ಅಧಿಕಾರಿಯ ನಿಲುವನ್ನು ಹಾಗೂ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲವೆಂದೂ, ಸ್ಥಿರಾಸ್ತಿ ಮತ್ತು ಚರಾಸ್ತಿ ವಿವರಗಳನ್ನು ಸರ್ಕಾರಕ್ಕೆ ಪ್ರತಿ ವರ್ಷವೂ ಸಕಾಲದಲ್ಲಿ ಸಲ್ಲಿಸುವುದು ಆರೋಪಿತ ಅಧಿಕಾರಿಯ ಜವಾಬ್ದಾರಿಯಾಗಿದ್ದು, ಮಾಡಿರುವ ಲೋಪಕ್ಕಾಗಿ ನೀಡಿರುವ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಡುತ್ತಾ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 097 ಕೆಇವಿ 07, ಬೆಂಗಳೂರು, ದಿನಾಂಕ: 13.01.2012

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 12ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅದೇ ನಿಯಮದ ನಿಯಮ 8(iii) ರ ಪ್ರಕಾರ, ಸರ್ಕಾರವು, ಶ್ರೀ ಎಲ್. ರಾಧಾಕೃಷ್ಣ, ಕೆಎಎಸ್ (ಆಯ್ಕೆ ಶ್ರೇಣಿ), ಜಂಟಿ ಆಯುಕ್ತರು, ದಾಸರಹಳ್ಳಿ, ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಇಲ್ಲದಂತೆ (without cumulative effect) ತಡೆಹಿಡಿಯುವ ದಂಡನೆ ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಡಗಾವ ಬಸವರಾಜ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವೆಗಳು-2)

ಪಿ.ಆರ್. 392

ಯುವಜನ ಸೇವಾ ಸಚಿವಾಲಯ

ವಿಷಯ : ಕೊಡಗು ಜಿಲ್ಲೆಯ ಕೂಡಿಗೆ ಕ್ರೀಡಾ ಶಾಲೆಗೆ ಮುಖ್ಯೋಪಾಧ್ಯಾಯರ ಹುದ್ದೆಯನ್ನು ಸೃಜಿಸುವ ಬಗ್ಗೆ -- ಆದೇಶ.

ಓದಲಾಗಿದೆ :
1. ದಿನಾಂಕ: 29-06-1982ರ ಇಡಿ 74 ಇಪಿಇ 82 ನೇ ಸಂಖ್ಯೆಯ ಸರ್ಕಾರದ ಆದೇಶ.
2. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಕುರಿತಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ದಿನಾಂಕ: 13-12-2010 ರಂದು ಜರುಗಿದ ಇಲಾಖೆಯ ವೃಂದ ಪರಿಶೀಲನಾ ಸಮಿತಿ ಸಭೆಯ ನಡವಳಿಗಳು.
3. ದಿನಾಂಕ: 11-07-2011ರ ಡಿವೈಎಸ್ಎಸ್/ಸಿ1/23/2011-12ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕ ರವರ ಪತ್ರ.
4. ದಿನಾಂಕ: 05-11-2011ರ ಡಿವೈಎಸ್ಎಸ್/ಸಿ1/23/2011-12ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕ ರವರ ಪತ್ರ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 29-06-1982ರ ಸರ್ಕಾರಿ ಆದೇಶದಲ್ಲಿ ಕೊಡಗು ಜಿಲ್ಲೆಯ ಕೂಡಿಗೆಯಲ್ಲಿ ಒಂದು ಪೂರ್ಣ ಪ್ರಮಾಣದ ಕ್ರೀಡಾ ಶಾಲೆಯನ್ನು ತೆರೆಯಲು, ಇತರೆ ಹುದ್ದೆಗಳೊಂದಿಗೆ ಒಂದು ಮುಖ್ಯೋಪಾಧ್ಯಾಯರ ಹುದ್ದೆ ಮತ್ತು ಒಂದು ಸಹ ಶಿಕ್ಷಕ ಹುದ್ದೆಯು ಮಂಜೂರಾಗಿದ್ದು, ಈ ಹುದ್ದೆಗಳಿಗೆ ತಗಲುವ ವೆಚ್ಚಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಭರಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ: 13-12-2010 ರಂದು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಕುರಿತಂತೆ ಸರ್ಕಾರದ ಅಪರ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಪರಿಶೀಲನಾ ಸಮಿತಿ ಸಭೆಯ ನಡವಳಿಯಲ್ಲಿ ಪ್ರಸ್ತುತ ಕೊಡಗು ಜಿಲ್ಲೆಯ ಕೂಡಿಗೆ ಹಾಗೂ ಬೆಂಗಳೂರಿನ ವಿದ್ಯಾನಗರದಲ್ಲಿ ಕ್ರೀಡಾಶಾಲೆಗಳಿದ್ದು, ಎರಡು ಮುಖ್ಯೋಪಾಧ್ಯಾಯರ ಹುದ್ದೆ ಅಗತ್ಯವಿರುವ ಕಾರಣ, ಮತ್ತೊಂದು ಹುದ್ದೆಯನ್ನು ಸೃಜಿಸಿ ಅಳವಡಿಸಬೇಕೆಂದೂ ಮತ್ತು ಇದಕ್ಕೆ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕೆಂದು ನಿರ್ಣಯಿಸಲಾಗಿದೆ.

ಹಾಲಿ ಜಾರಿಯಲ್ಲಿರುವ ಕರ್ನಾಟಕ ಸಾಮಾನ್ಯ ಸೇವೆಗಳು (ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ) (ನೇಮಕಾತಿ) ನಿಯಮಗಳು-2011ರಲ್ಲಿ ಮುಖ್ಯೋಪಾಧ್ಯಾಯರ 01-ತಾತ್ಕಾಲಿಕ ಹುದ್ದೆಯನ್ನು ವೇತನ ಶ್ರೇಣಿ ರೂ. 11400-21600ರಲ್ಲಿ ತೋರಿಸಲಾಗಿದೆ.

ಕೂಡಿಗೆ ಕ್ರೀಡಾ ಶಾಲೆಯಲ್ಲಿ ಒಟ್ಟು 135 ಕ್ರೀಡಾಪಟುಗಳು ವಾಸವಾಗಿದ್ದು, ಇವರುಗಳ ಯೋಗಕ್ಷೇಮ, ಶಾಲೆಯ ಆಡಳಿತ ವ್ಯವಹಾರ, ಶೈಕ್ಷಣಿಕ ಮತ್ತು ಕ್ರೀಡಾ ಪ್ರಗತಿಯ ಸಂಪೂರ್ಣ ಜವಬ್ದಾರಿಯನ್ನು ಮುಖ್ಯೋಪಾಧ್ಯಾಯರು ವಹಿಸಬೇಕಾಗಿರುವುದರಿಂದ ಹಾಗೂ ಶೈಕ್ಷಣಿಕ ವರ್ಷವು ಪ್ರಾರಂಭವಾಗಿರುವುದರಿಂದ ಇದೊಂದು ವಿಶೇಷ ಮತ್ತು ತುರ್ತು ಪ್ರಕರಣವೆಂದು ಪರಿಗಣಿಸಿ, ಕೂಡಿಗೆ ಕ್ರೀಡಾಶಾಲೆಗೆ ಒಂದು ಮುಖ್ಯೋಪಾಧ್ಯಾಯರ ಹುದ್ದೆಯನ್ನು ವೇತನ ಶ್ರೇಣಿ ರೂ. 11,400-21600 ರಲ್ಲಿ ಸೃಜಿಸಿ ಕೂಡಲೇ ಆದೇಶಿಸುವಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ: 11-07-2011 ರ ಪತ್ರದಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ.

ಈ ಹಿಂದೆ, ಕೂಡಿಗೆ ಕ್ರೀಡಾ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಮುಖ್ಯೋಪಾಧ್ಯಾಯರಾದ ಶ್ರೀ ಹೆಚ್.ಹೆಚ್. ಸುಂದರ್ ರವರು, ನಿಯೋಜನೆ ಅವಧಿ ಮುಗಿದ ಕಾರಣ 1992ರಲ್ಲಿ ಮಾತೃ ಇಲಾಖೆಗೆ ಹಿಂದಿರುಗಿರುತ್ತಾರೆ ಮತ್ತು ಕ್ರೀಡಾ ಶಾಲೆಯ ಹೊಣೆಗಾರಿಕೆಯನ್ನು ಹಿರಿಯ ಅಧ್ಯಾಪಕಿಯಾದ ಶ್ರೀಮತಿ ಪಿ. ಕುಂತಿ ಕುಮಾರಿ ಇವರಿಗೆ ವಹಿಸಿಕೊಟ್ಟಿದ್ದು, ಮುಖ್ಯೋಪಾಧ್ಯಾಯರ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಸದರಿಯವರು ನಿರ್ವಹಿಸುತ್ತಾ ಬಂದಿರುತ್ತಾರೆ. ನಂತರದಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಯನ್ನು ಭರ್ತಿ ಮಾಡುವುದು, ಅದಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಭರಿಸುವ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಿನಾಂಕ: 05-04-2011 ರಂದು ಪ್ರಕಟಗೊಂಡ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಒಂದು ಮುಖ್ಯೋಪಾಧ್ಯಾಯರ ಹುದ್ದೆ ಮಾತ್ರ ಇದೆ ಹಾಗೂ 2010-11ನೇ ಸಾಲಿನ ಅಪೆಂಡಿಕ್ಸ್-ಬಿ ಯಲ್ಲಿಯೂ ಸಹಾ ಕ್ರೀಡಾ ಶಾಲೆಯ ಒಂದೇ ಮುಖ್ಯೋಪಾಧ್ಯಾಯರ ಹುದ್ದೆ ಇರುವುದಾಗಿ ನಮೂದಿಸಲಾಗಿದೆ.

ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು, ಮೇಲೆ ಓದಲಾದ (4)ರ ಪತ್ರದ ಮೂಲಕ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿ, ದಿನಾಂಕ: 29-06-1982ರ ಸರ್ಕಾರಿ ಆದೇಶ ಸಂಖ್ಯೆ ಇಡಿ 74 ಇಪಿಇ 82 ರಲ್ಲಿ ಸೃಜಿಸಲಾಗಿರುವ ಕೂಡಿಗೆ ಕ್ರೀಡಾ ಶಾಲೆಯ ಮುಖ್ಯೋಪಾಧ್ಯಾಯ ಹುದ್ದೆಯು ರದ್ದಾಗಿರುವ ಬಗ್ಗೆ ಯಾವುದೇ ಆದೇಶಗಳು, ದಾಖಲೆಗಳು ಲಭ್ಯವಿರದ ಕಾರಣ ಈ ಹುದ್ದೆಯನ್ನು ಮುಂದುವರೆಸಿ, ಈ ಹುದ್ದೆಗೆ ಸಂಬಂಧಿಸಿದ ವೆಚ್ಚವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದಲೇ ಭರಿಸಲು ಮತ್ತು ಇಲಾಖೆಯ ಪ್ರಸಕ್ತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅಳವಡಿಸಿ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 64 ಯುಇಸೇ 09 ಬೆಂಗಳೂರು, ದಿನಾಂಕ: 19-01-2012

ಪ್ರಸ್ತಾವನೆಯಲ್ಲಿನ ವಿವರಣೆಗಳ ಹಿನ್ನೆಲೆಯಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಗೊಳಪಡುವ ಕೊಡಗು ಜಿಲ್ಲೆಯ ಕೂಡಿಗೆ ಕ್ರೀಡಾ ಶಾಲೆಯಲ್ಲಿ ವೇತನ ಶ್ರೇಣಿ ರೂ. 11400-21600 ರಲ್ಲಿ ಮುಖ್ಯೋಪಾಧ್ಯಾಯರ ಒಂದು ಹುದ್ದೆಯನ್ನು ಹೊಸದಾಗಿ ಸೃಜಿಸಲು ಈ ಮೂಲಕ ಆದೇಶಿಸಲಾಗಿದೆ.

ಈ ಆದೇಶವನ್ನು, ದಿನಾಂಕ: 05-01-2012ರ ಆ.ಇ. 1119 ವೆಚ್ಚ-7/2011ನೇ ಸಂಖ್ಯೆಯ ಅನಧಿಕೃತ ಟಿಪ್ಪಣಿಯ ಮೂಲಕ ಆರ್ಥಿಕ ಇಲಾಖೆ (ವೆಚ್ಚ-7 ಮತ್ತು 8) ನೀಡಿರುವ ಸಹಮತದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ. ಶ್ರೀನಿವಾಸ್

ಸರ್ಕಾರದ ಅಧೀನ ಕಾರ್ಯದರ್ಶಿ

ಯುವಜನ ಸೇವಾ ಇಲಾಖೆ

ಪಿ.ಆರ್. 399

ಶಿಕ್ಷಣ ಸಚಿವಾಲಯ

ವಿಷಯ : ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ (ಗ್ರೂಪ್ ಡಿ) ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.

ಓದಲಾಗಿದೆ :
1. ತಾಂತ್ರಿಕ ಶಿಕ್ಷಣ ನಿರ್ದೇಶಕರ ಅಧಿಸೂಚನೆ ಸಂಖ್ಯೆ: ಡಿಟಿಇ 15 ಇಎಸ್‌ಟಿ (3)/07 ದಿನಾಂಕ: 19-02-2008.
2. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 15 ಇಎಸ್‌ಟಿ (3)/07 ದಿನಾಂಕ: 12-11-2009 (ಪುಟ 3)
3. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ ಡಿಟಿಇ 15 ಇಎಸ್‌ಟಿ (3)/07/2937 ದಿನಾಂಕ: 17-11-2009. (ಪುಟ 14)
4. ಸರ್ಕಾರಿ ಪತ್ರ ಸಂಖ್ಯೆ: ಇಡಿ 295 ಟಿಪಿಇ 2009 ದಿನಾಂಕ: 16-02-2010.
5. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ ಡಿಟಿಇ 15 ಇಎಸ್‌ಟಿ (3)/07/26 ದಿನಾಂಕ: 06-4-2010. (ಪುಟ 276)
6. ಸರ್ಕಾರದ ಪತ್ರ ಸಂಖ್ಯೆ: ಇಡಿ 295 ಟಿಪಿಇ 2009 ದಿನಾಂಕ: 15-03-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು, ತಮ್ಮ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಖಾಲಿ ಇರುವ 241 ಸಹಾಯಕ (ಗ್ರೂಪ್-ಡಿ) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಈ ಅಧಿಸೂಚನೆಗೆ ನೇಮಕಾತಿ ಕೋರಿ ಸುಮಾರು 23000 ಅರ್ಜಿಗಳು ಸ್ವೀಕೃತವಾಗಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ವಿದ್ಯಾರ್ಹತೆ / ಸೇವಾನುಭವ ಇತ್ಯಾದಿಗಳನ್ನು ಆಯಾ ಟ್ರೇಡ್‌ಗಳ ತಜ್ಞರ ಸಮಿತಿಯಿಂದ ಪರಿಶೀಲಿಸಲಾಗಿ ಅರ್ಜಿ ಸಲ್ಲಿಸಿರುವವರ ಪೈಕಿ 4672 ಅರ್ಜಿಗಳು ಪುರಸ್ಕೃತಗೊಂಡು ಉಳಿದ 18074 ಅರ್ಜಿಗಳು ತಿರಸ್ಕೃತಗೊಂಡಿರುವುದಾಗಿ ತಿಳಿಸಿರುತ್ತಾರೆ. ತಾಂತ್ರಿಕ ಶಿಕ್ಷಣ ಇಲಾಖೆಯ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳು 2006ರಲ್ಲಿ ಸಹಾಯಕ ಹುದ್ದೆಗಳಲ್ಲಿ ಈ ಕೆಳಕಂಡಂತಹ ನೇಮಕಾತಿ ನಿಯಮಗಳನ್ನು ರೂಪಿಸಲಾಗಿರುತ್ತದೆ.

1. Must have passed S.S.L.C. and
2. Must have put in a service of not less than one year in appropriate trade of Engineering/Technology.
3. In case of candidate applying for Automobile subjects must have posses Current Heavy duty Driving Licence.

26)	Chapter-XXIX Page-438 Miscellaneous chapter.	That the officials of MML have knowingly committed irregularities and illegalities. Therefore, necessary action should be initiated against the officers, who should be identified and dealt in accordance with law after conducting proper investigation.

M.V. Shivasubramani
Under Secretary to Government (Mines)
Commerce & Industries Department

PR. 408

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಕಂಇ34 ಮುಸರ 2009 ಬೆಂಗಳೂರು, ದಿನಾಂಕ: 25-02-2009.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಗಾಂಧಿನಗರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ	ಸದಸ್ಯರು

3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು. ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 87 ಮುಸರ 2011, ಬೆಂಗಳೂರು, ದಿನಾಂಕ 05-01-2012

ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಮಲ್ಲು ನಂ. 24, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಕೆ.ಪಿ. ಅಗ್ರಹಾರ ಗೌರೇಶ್ವರಿನಗರ, ಬೆಂಗಳೂರು-23	ಸಾಮಾನ್ಯ
2	ಶ್ರೀಮತಿ ಸುಜಯ ನಾಗೇಂದ್ರ ನಂ. 26, ಆಂಜನೇಯ ದೇವಸ್ಥಾನದ 1ನೇ ಬೀದಿ ಶೇಷಾದ್ರಿಪುರಂ, ಬೆಂಗಳೂರು-10	ಮಹಿಳೆ
3	ಶ್ರೀ ನಾರಾಯಣಪ್ಪ, ನಂ. 208/ಎ, ವಿವೇಕಾನಂದ ಬ್ಲಾಕ್ ದತ್ತಾತ್ರೇಯ ದೇವಸ್ಥಾನದ ರಸ್ತೆ, ಪೈಪ್‌ಲೈನ್, ಮಲ್ಲೇಶ್ವರಂ, ಬೆಂಗಳೂರು-03	ಪರಿಶಿಷ್ಟ ಜಾತಿ
4	ಶ್ರೀ ವೈ. ಬಸವರಾಜ ನಂ. 23/1, ಮಾಗಡಿ ರಸ್ತೆ ಕೆ.ಪಿ. ಅಗ್ರಹಾರ ಬೆಂಗಳೂರು-23	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 410 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ನಗರ ಜಿಲ್ಲೆಯ ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಕಂಇ 32 ಮುಸರ 2009, ದಿನಾಂಕ: 25-02-2009.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 68 ಮುಸರ 2011, ಬೆಂಗಳೂರು, ದಿನಾಂಕ 05-01-2012

ಬೆಂಗಳೂರು ನಗರ ಜಿಲ್ಲೆಯ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಕೃಷ್ಣಪ್ಪ ನಂ. 43, 12/ಎ, 14ನೇ ಮುಖ್ಯರಸ್ತೆ 1ನೇ ಅಡ್ಡರಸ್ತೆ, ಸುಬ್ರಹ್ಮಣ್ಯನಗರ, ಬೆಂಗಳೂರು-21	ಸಾಮಾನ್ಯ
2	ಶ್ರೀಮತಿ ಶ್ರೀಲತಾ ಪೂರ್ಣಚಂದ್ರ ನಂ. 109, 11ನೇ ಮುಖ್ಯರಸ್ತೆ 15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03	ಮಹಿಳೆ
3	ಶ್ರೀಮತಿ ಮರಿಯಮ್ಮ ನಂ. 12, 17ನೇ ಮುಖ್ಯ.ರಸ್ತೆ, 12ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03	ಪರಿಶಿಷ್ಟ ಜಾತಿ
4	ಶ್ರೀ ನಾಗರಾಜ ನಂ. 1534, ರತ್ನಸಿರಿ ಅಪಾರ್ಟ್‌ಮೆಂಟ್ 9ನೇ ಮುಖ್ಯರಸ್ತೆ, ಎ ಬ್ಲಾಕ್, ಸುಬ್ರಹ್ಮಣ್ಯನಗರ ರಾಜಾಜಿನಗರ, ಬೆಂಗಳೂರು-10	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 411 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಕಂಇ 75 ಮುಸರ 2008, ದಿನಾಂಕ: 25-02-2009.

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಜಿಲ್ಲೆ	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊಳೆನರಸೀಪುರ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 23 ಮುಸರ 2011, ಬೆಂಗಳೂರು, ದಿನಾಂಕ 05-01-2012

ಹಾಸನ ಜಿಲ್ಲೆ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು/ವಿಳಾಸ	ಪ್ರವರ್ಗ
1	ಶ್ರೀ ಜಿ.ಕೆ. ಜಯರಾಂ ಬಿನ್ ಕೃಷ್ಣಪ್ಪ ಗಂಗೂರು, ದೊಡ್ಡ ಬ್ಯಾಗತವಳ್ಳಿ ಅಂಚೆ, ಕಸಬಾ ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ	ಸಾಮಾನ್ಯ

2	ಶ್ರೀಮತಿ ನೇತ್ರಾವತಿ ಬಿನ್ ನಾರಾಯಣನಾಯಕ ದೊಡ್ಡಹಳ್ಳಿ ಹಳ್ಳಿ ಮೈಸೂರು ಅಂಚೆ ಮತ್ತು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ	ಮಹಿಳೆ
3	ಶ್ರೀ ಶೇಖರ್ ಬಿನ್ ತಿಮ್ಮಯ್ಯ ಕಲ್ಲುಬ್ಯಾಡರಹಳ್ಳಿ, ಎಲೆಚಾಗಹಳ್ಳಿ, ಕಸಬಾ ಹೋಬಳಿ ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ	ಪರಿಶಿಷ್ಟ ಜಾತಿ
4	ಶ್ರೀ ಸೋಮನಾಯಕ ಸಿಂಗಾಪುರ ಗ್ರಾಮ, ಜಕ್ಕವಳ್ಳಿ, ಅಂಚೆ, ಕಸಬಾ ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 412 ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ. 21ರಲ್ಲಿ 4.24 ಎಕರೆ ಜಮೀನನ್ನು ವೈ.ಎ.ಎನ್ ಚ್ಯಾರಿಟೆಬಲ್ ಟ್ರಸ್ಟ್ ಇವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಅಧ್ಯಕ್ಷರು, ವೈ.ಎ.ಎನ್ ಚಾರಿಟೆಬಲ್ ಟ್ರಸ್ಟ್‌ರವರ ಮನವಿ ದಿ: 20-10-2009.
2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (ಎನ್‌ಎ) ಸಿಆರ್ 130/09-10, ದಿ: 30-10-2009.

ಪ್ರಸ್ತಾವನೆ :

ಅಧ್ಯಕ್ಷರು, ವೈ.ಎ.ಎನ್ ಚ್ಯಾರಿಟೆಬಲ್ ಟ್ರಸ್ಟ್ ಇವರು ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಸದರಿ ಸಂಸ್ಥೆಯು ಉನ್ನತ ಮಟ್ಟದ ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ತೆರೆಯಲು ಉದ್ದೇಶಿಸಿದ್ದು ಹಾಗೂ ಐ.ಸಿ.ಎಸ್.ಸಿ. ಅಥವಾ ಸಿ.ಬಿ.ಎಸ್.ಸಿ. ಪಠ್ಯ ಕ್ರಮವನ್ನು ನಡೆಸಲು ಉದ್ದೇಶಿಸಿದ್ದು, ಸದರಿ ಉದ್ದೇಶಕ್ಕಾಗಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ.21ರಲ್ಲಿನ 10 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

2. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ದಿ: 30-10-2009ರ ಪತ್ರದಲ್ಲಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ.21ರಲ್ಲಿನ 10 ಎಕರೆ ಜಮೀನನ್ನು ವೈ.ಎ.ಎನ್. ಚ್ಯಾರಿಟೆಬಲ್ ಟ್ರಸ್ಟ್ ಇವರಿಗೆ ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3) ಜಿಲ್ಲಾಧಿಕಾರಿಗಳ ವರದಿಯನ್ವಯ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದ ಸ.ನಂ.21ರಲ್ಲಿನ 10 ಎಕರೆ ಜಮೀನನ್ನು ಹರಾಜು ಮಾಡಲಾಗಿದ್ದು. ನಂತರ ಹರಾಜನ್ನು ರದ್ದುಗೊಳಿಸಲಾಗಿದೆ. ಈ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಿಂದ 1.5 ಕಿ.ಮೀ. ದೂರದಲ್ಲಿರುತ್ತದೆ. ಯಲಹಂಕ ರೈಲ್ವೆ ನಿಲ್ದಾಣಕ್ಕೆ ಸುಮಾರು 8 ಕಿ.ಮೀ. ದೂರದಲ್ಲಿರುತ್ತದೆ. ಅಲ್ಲದೆ, ಈ ಜಮೀನಿನ ಮಾರ್ಗಸೂಚಿ ಬೆಲೆಯು ಎಕರೆಯೊಂದಕ್ಕೆ ರೂ. 25 ಲಕ್ಷಗಳಾಗಿದ್ದು, ಮಾರುಕಟ್ಟೆ ದರವು ರೂ. 1 ಕೋಟಿಗಳಿರುವುದಾಗಿ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

4. ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 636 ಎಲ್‌ಜಿಬಿ 2011, ಬೆಂಗಳೂರು, ದಿನಾಂಕ 12-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮ 10(2)ನ್ನು ಸಡಿಲಿಸಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ, ಗ್ರಾಮದ ಸ.ನಂ. 21ರಲ್ಲಿನ4.24 ಎಕರೆ/ಗುಂ ಜಮೀನನ್ನು ವೈ.ಎ.ಎನ್. ಚ್ಯಾರಿಟೆಬಲ್ ಟ್ರಸ್ಟ್ ಬೆಂಗಳೂರು ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಪ್ರಸಕ್ತ ಮಾರ್ಗಸೂಚಿ ಬೆಲೆಯ ಶೇ. 50ರಷ್ಟನ್ನು ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಕೆ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 413 ಕಂದಾಯ ಇಲಾಖೆ (ಭೂ.ಮಂ-1)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ಉಂಟಾದ ಗ್ರಾಮಗಳಲ್ಲಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್ 2010, ದಿನಾಂಕ: 15-04-2010.
2) ಸರ್ಕಾರದ ಆದೇಶ ಸಂ. ಕಂಇ 174 ಟಿಎನ್‌ಆರ್ 2010 (ಭಾಗ), ದಿನಾಂಕ: 18-01-2011.
3) ಜಿಲ್ಲಾಧಿಕಾರಿಗಳ ಬೇಡಿಕೆ ಪತ್ರಗಳು.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಆಸರೆ ಮನೆಗಳ ನಿರ್ಮಾಣಕ್ಕೆ ನೀರು ಸರಬರಾಜಿಗೆ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಕೆಲವೊಂದು ಷರತ್ತಿಗಳಿಗೆ ಒಳಪಟ್ಟು, ಉಪಯೋಗಿಸಿಕೊಳ್ಳಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ನೀರು ಸರಬರಾಜಿಗೆ ಡೀಸಲ್ ಜನರೇಟರ್ ಬಾಡಿಗೆ ಆಧಾರದ ಮೇಲೆ ಪಡೆಯುವ ಅವಧಿಯನ್ನು ದಿನಾಂಕ: 31-03-2011 ರವರೆಗೆ ವಿಸ್ತರಿಸಲಾಗಿದೆ.

ಸದರಿ ಅವಧಿಯು ದಿನಾಂಕ: 31-03-2011ಕ್ಕೆ ಮುಕ್ತಾಯಗೊಂಡಿದ್ದು, ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣ ಕಾರ್ಯ ಇನ್ನೂ ಪ್ರಗತಿಯಲ್ಲಿದ್ದು, ಈ ಅವಧಿಯನ್ನು ದಿನಾಂಕ: 31-12-2011ರ ವರೆಗೆ ವಿಸ್ತರಿಸುವಂತೆ ಮೇಲೆ ಓದಲಾದ (3)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 354 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ 11-01-2012

ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು, ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಜಿಲ್ಲೆಗಳಲ್ಲಿ ಮಾತ್ರ ಅನ್ವಯವಾಗುವಂತೆ, ಈಗಾಗಲೇ ಆರ್.ಡಿ. 174 ಟಿಎನ್‌ಆರ್ 2010, ದಿನಾಂಕ: 15-04-2010ರ ಆದೇಶದಲ್ಲಿ ವಿಧಿಸಿರುವ ಷರತ್ತುಗಳ ಮೇರೆಗೆ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಉಪಯೋಗಿಸಿಕೊಳ್ಳಲು ಅವಧಿಯನ್ನು ದಿನಾಂಕ: 31-12-2011 ರವರೆಗೆ ವಿಸ್ತರಿಸಿ, ಸರ್ಕಾರ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ವಿ.ನಿ.& ಸೇವೆಗಳು-2)

ಪಿ.ಆರ್. 414

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆರ್‌ಡಿ 147 ಎಎಸ್‌ಡಿ 2007, ಬೆಂಗಳೂರು, ದಿನಾಂಕ 02-01-2012

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 147ಎಎಸ್‌ಡಿ 2007, ದಿನಾಂಕ: 27-06-2011. ರ ಆದೇಶ ಭಾಗದಲ್ಲಿ (ಪುಟ-2) ಶ್ರೀ ಮೊಹಮ್ಮದ್ ಇಸ್ಮಾಯಿಲ್, ಉಪ ಕಾರ್ಯದರ್ಶಿ (ಅಭಿಪ್ರಾಯ-1) ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆ, ಎಂಬುದರ ಬದಲಾಗಿ ಸರ್ಕಾರದ ವಾದೇಕ್ಷಕರು ಮತ್ತು ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 415

ಇಂಧನ ಸಚಿವಾಲಯ

ವಿಷಯ : ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 0.85 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್ ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಇನ್ 337 ಎನ್‌ಸಿಇ 2006 ದಿನಾಂಕ: 16-10-2006.
2) ಸರ್ಕಾರದ ಆದೇಶ ಸಂಖ್ಯೆ: ಇನ್ 09 ಎನ್‌ಸಿಇ 2007 ದಿನಾಂಕ: 12-01-2007.
3) ಸರ್ಕಾರದ ಆದೇಶ ಸಂಖ್ಯೆ: ಇನ್ 432 ಎನ್‌ಸಿಇ 2010 ದಿನಾಂಕ: 16-12-2010.
4) ಸರ್ಕಾರದ ಆದೇಶ ಸಂಖ್ಯೆ: ಇಎನ್ 318 ಎನ್‌ಸಿಇ 2011 ದಿನಾಂಕ: 26-07-2011.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/GH-0.85 MW (GNS -29) RSR 2011/4501 ದಿನಾಂಕ: 30-11-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಆರ್ ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಮೆ: ಆರ್ ಶ್ರೀ ರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಅನುಮತಿಸಿರುವ ಒಟ್ಟು ಸಾಮರ್ಥ್ಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ ಅಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ ಸಾಮರ್ಥ್ಯವನ್ನು 30.60 ಮೆ.ವ್ಯಾ.ಗೆ. 25 ಮೆ.ವ್ಯಾ. ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದ್ದು ಹಾಗೂ ಈ ಯೋಜನೆಯನ್ನು ದಿ: 31-3-2011ರೊಳಗೆ ಅನುಷ್ಠಾನಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಹೆಚ್ಚಿಸಲು ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.85 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ: ಗೋಲ್ಡನ್ ಹ್ಯಾಚರೀಸ್ ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಯೋಜನೆಯು ಖಾಸಗಿ ಜಮೀನಿನಲ್ಲಿ ಬರುತ್ತದೆ ಮತ್ತು ಈ ಯೋಜನೆಯನ್ನು ದಿನಾಂಕ: 31-12-2011ಕ್ಕೆ ಅನುಷ್ಠಾನಗೊಳಿಸಲಾಗುವುದೆಂದು ಸಹ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 445 ಎನ್‌ಸಿಇ 2011, ಬೆಂಗಳೂರು, ದಿನಾಂಕ 16-01-2012

ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 0.85 ಮೆ.ವ್ಯಾ ಸಾಮರ್ಥ್ಯದ ಯೋಜನೆಯನ್ನು ಮೆ: ಗೋಲ್ಡನ್ ಹ್ಯಾಚರೀಸ್ ಕಂಪನಿಯವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ :-

Schedule

Location and District	Description
Shirgaon village, Chikkodi Taluk Belgaum District	The identified potential comprises of two areas and mixture of hill and plains. Area A is spread N-E direction of Shirgaon. Whereas Area B is located in South of Girgaon and is spread in E-W directions. The Geographical co-ordinates of Area A & Area-B are as follows:- Area –A: Latitude : $16^0$27'32"- $16^0$30'0" N Longitude : $74^0$31'06" – $74^0$32'57" E Ridge peaks: 620 & 647m AMSL Area – B Latitude : $16^0$25'52"- $16^0$26'41" N Longitude : $74^0$30'52" – $74^0$32'41" E Ridge peaks: 720m AMSL Toposheet: 47 L/11

Land details of the Project

Village Name	Taluk & District	MW	Land Sy. No	No. of WTGs	Extent in land (Acres)	WTG Location No.
Shirgaon	Chikkodi/ Belgaum	0.85	135/1	1 No.	2 Acres	GNS 29

1. ಮೆ: ಗೋಲ್ಡನ್ ಹ್ಯಾಚರೀಸ್ ರವರು ದಿನಾಂಕ 31-1-2012 ರೊಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಸದರಿ ಯೋಜನೆಯನ್ನು ದಿನಾಂಕ 29-2-2012 ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committment letter).
3. ಮೆ: ಗೋಲ್ಡನ್ ಹ್ಯಾಚರೀಸ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್. ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ಪಿ.ಆರ್. 416

ಇಂಧನ ಸಚಿವಾಲಯ

ವಿಷಯ : ಮೆ: ರಾಯಚೂರು ಬಯೋ-ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ಇವರ ಜೈವಿಕ ಇಂಧನ ಆಧಾರಿತ ವಿದ್ಯುತ್ ಘಟಕದ ಸಾಮರ್ಥ್ಯವನ್ನು 4.5 ಮೆಗಾ ವ್ಯಾಟ್ ನಿಂದ 9.00 ಮೆ.ವ್ಯಾಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಪತ್ರ ಸಂಖ್ಯೆ: ಡಿಇ 2 ಎನ್‌ಸಿಇ 2001 ದಿನಾಂಕ: 18-08-2001.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/03ಎಫ್-52/ಆರ್‌ಬಿಇಪಿಎಲ್/2011-12/4211 ದಿನಾಂಕ: 28-10-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಮೆ: ರಾಯಚೂರು ಬಯೋ-ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ರಾಯಚೂರು ಗ್ರೋತ್ ಸೆಂಟರ್, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 4.5 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ರಾಯಚೂರು ಬಯೋ-ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ನಿರಾಕ್ಷೇಪಣೆಯನ್ನು ನೀಡಿರುವ ಮೇಲಿನ ಜೈವಿಕ ಇಂಧನ ಆಧಾರಿತ ವಿದ್ಯುತ್ ಘಟಕದ ಸಾಮರ್ಥ್ಯವನ್ನು 4.5 ಮೆಗಾ ವ್ಯಾಟ್ ನಿಂದ 9.00 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 427 ಎನ್‌ಸಿಇ 2011, ಬೆಂಗಳೂರು, ದಿನಾಂಕ 16-01-2012

ಮೆ: ರಾಯಚೂರು ಬಯೋ-ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ರಾಯಚೂರು ಗ್ರೋತ್ ಸೆಂಟರ್, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿ 4.5 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಘಟಕವನ್ನು ಸ್ಥಾಪಿಸಲು ನೀಡಿರುವ ನಿರಾಕ್ಷೇಪಣೆಯನ್ನು 9.00 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿದೆ.

ಈ ಯೋಜನೆಯನ್ನು ದಿನಾಂಕ 31-12-2013ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಪತ್ರದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

ಪಿ.ಆರ್. 417

INFRASTRUCTURE DEVELOPMENT SECRETARIAT

Sub : Diversion of Forest Land for construction of Bangalore International Airport at Devanahalli-release of funds for environmental losses-reg.

Read :
1) G.O. No. FEE 94 FGL 95, dated 17-12-2002
2) Letter No. A.5 (5)GFL. CR. 32/1993-94, dated 07/11-05-2009 of Principal Chief Conservator of Forest, Bangalore.
3) Proceedings of the Meeting held on 11-06-2010 under the Chairmanship of Principal Secretary to Government, Forest, Ecology and Environment Department (FEE 157 FLL 2009 (P).
4) Letter No. DGM (IPD-1)1143/2011-12, dated 18-08-2011 of the Deputy General Manager, KSIIDC, Bangalore.
5) G.O. No. FD, 137 BRS 2011, Dated 30-12-2011

Preamble:

In the G.O. read at Sl. No. (1) above, Government has accorded sanction for diversion of 565 Hectares (1394.20 acres) of forest land for construction of New International Airport at Devanahalli Taluk, Bangalore Rural District under section 2 of Forest (Conservation) Act, 1980 in favour of Karnataka State Industrial Investment and Development Corporation Ltd., (KSIIDC) subject to certain conditions.

In the letter read at Sl. No. (2) above, The Principal Chief Conservator of Forests has stated that the Accountant General (Karnataka) while auditing the accounts of the Deputy Conservator of Forests, Bangalore Rural Division as well as the office of Principal Chief Conservator of Forest have directed to collect the environmental loss due to diversion of 565 Hectares of forest land for construction of New International Airport at Devanahalli Taluk, Bangalore from Karnataka State Industrial Investment and Development Corporation Ltd., as per the condition No. 10 of G.O. dated 17-12-2002. This has also figured in the report of the Public Accounts Committee and in the hearing of the Committee, it has been directed to collect the environmental loss from Karnataka State Industrial Investment and Development Corporation Ltd., immediately as such, the environmental loss of Rs. 42,04,62,265 be payable as requested by the Deputy Conservator of Forests, Bangalore Rural Division, Bangalore.

In the meeting read at Sl. No. (3) above, it was decided that the environmental losses of Rs. 42.05 crores is to be borne by KSIIDC, as there is an objection by the Public Accounts Committee.

In the letter read at (4) above, the proposal of Karnataka State Industrial Investment and Development Corporation Ltd., Bangalore for release of funds for payment of compensation for the environmental loss has been examined in detail.

In the G.O. read at Sl. No. (5) above, sanction was accorded for the re-appropriation of a sum of Rs. 259.76 lakhs under the Major Head of Account 5465-Captal outlay on general financial and trading institutions during 2011-12 from the head 5465-01-190-2-05(p) 211-Investments.

Government Order No. IDD 76 DIA 2009, Bangalore, dated 11-01-2012

After careful examination of the proposal sanction is accorded for release of Rs. 4205.00 lakhs (Rupees Four thousand two hundred five lakhs only) to Karnataka State Industrial Investment and Development Corporation Ltd., Bangalore towards the payment of compensation for environmental loss on account of diversion of 565 Hectares (1394.20 Acres) of forest land for the construction of Bangalore International Airport at Devanahalli.

The expenditure of Rs. 4205.00 lakhs shall be met under the Head of Account 5465-01-190-1-05 Development of Minor Airports (Plan)-211 investment along with re-appropriated amount from 5465-01-190-2-05(Plan) alternative roads-211 investment.

The Managing Director, KSIIDC, Bangalore is authorized to draw the above amount of Rs. 4205.00 lakhs on a payees receipt duly counter signed by The Under secretary to Government. Infrastructure Development Department Bangalore for onward transfer of the same to Forest Department.

Karnataka State Industrial Investment and Development Corporation Ltd., shall keep the Infrastructure Development Department informed once the payment is made to the Forest Department.

This order is issued with the concurrence of Finance Department vide endorsement No. FD 1800 Exp-1/11, dated 30-12-2011.

By Order and in the name of the Governor of Karnataka

S. J. Sampath Kumar

Under Secretary to Government

P.R. 418 Infrastructure Development Department

INFRASTRUCTURE DEVELOPMENT SECRETARIAT

Sub: Development of Tadadi Sea Port-Release of Funds

Read: 1) G.O. No. IDD 30 DIA 2011, dated 25-03-2011

2) Letter No. DGM(IPD)TP/380/2011-12, Dated 23-05-2011 of Deputy General Manager (IPD), Karnataka State Industrial and Infrastructure Development Corporation Limited, Bangalore.

Preamble:

In G.O. read at Sl. No. (1) above, Government has accorded sanction for release of Rs. 100.00 lakhs towards the Tadadi Port related expenditure by Karnataka State Industrial and Infrastructure Development Corporation Limited (KSIIDC)

In the letter read at Sl. No. (2) above. The Deputy General manager, Karnataka State Industrial and Infrastructure Development Corporation Limited, Bangalore has submitted the details pertaining to the expenditure towards the consultancy service for the Development of Tadadi Sea Port Project and has requested to release the balance funds to Karnataka State Industrial and Infrastructure Development Corporation Limited.

Sl. No.	Particulars	Total Amount payable	Amount paid up to 31-03-2011	Balance payable
1	Technical consultants	292.63	51.20	241.43
2	Consultants for Environment Impact Study	82.73	41.36	41.36
3	Secretarial Consultant (for formation of SPV)	0.50	0.00	0.50
4	Port Expert	1.50*	0.83	0.67

*Estimated (as Port Expert has been taken as per visit & per review basis)

The proposal has been examined and hence this order

Government Order No. IDD 30 DIA 2011, Bangalore, dated 19-01-2012

After careful examination of the proposal, sanction is hereby accorded for release of Rs. 377.00 lakhs (Rupees Three hundred seventy seven lakhs) only to Karnataka State Industrial and Infrastructure Development Corporation Limited, Bangalore towards the expenditure for consultancy services.

The expenditure of Rs. 377.00 lakhs shall be met under the head of account 5465-01-190-1-18 (P) Tadadi Sea Port Project 211 investments re-appropriated out of the funds available under the head of account 5465-01-190-2-05 alternative roads-investment, 211 investments.

The Managing Director, Karnataka State Industrial and Infrastructure Development Corporation Limited, Bangalore is authorized to draw the above amount of Rs. 377.00 lakhs on a payees receipt duly counter signed by the Under Secretary to Government, Infrastructure Development Department, Bangalore.

This order is issued with the concurrence of Finance Department vide G.O. No. FD 154 BRS 2011, dated 06-01-2012 and endorsement No. FD 1907 Exp-1/2011, dated 09-01-2012.

By Order and in the name of the Governor of Karnataka

S. J. Sampath Kumar

Under Secretary to Government

P.R. 419 Infrastructure Development Department

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಬೀದರ್ ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅನುಮೋದನೆ:-

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ವಿಯಇ 134 ವಿತ್ರಮ 2007, ಬೆಂಗಳೂರು, ದಿನಾಂಕ 20-11-2008.
2) ಸರ್ಕಾರಿ ಆದೇಶ ಸಂಖ್ಯೆ: ವಿಯಇ 134 ವಿತ್ರಮ 2007, ದಿನಾಂಕ 10-12-2010
3) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 27-05-2011 ರಂದು ನಡೆದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪರಿಶೀಲನಾ ಸಭೆಯ ನಡವಳಿ
4) ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆ, ಇವರ ಅ.ಸ.ಪ.ಸಂ.ಕಂ/ಆಶಾ/ಸಿ.ಆರ್.-01/2011-12, ದಿನಾಂಕ 29-09-2011.

ಪ್ರಸ್ತಾವನೆ :

ಬೀದರ್ ಜಿಲ್ಲೆಯು ಕರ್ನಾಟಕ ರಾಜ್ಯದ ಈಶಾನ್ಯದಲ್ಲಿರುವ ಕೊನೆಯ ಜಿಲ್ಲೆಯಾಗಿದ್ದು, ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವುದು ಹಾಗೂ ಜಿಲ್ಲೆಯು 600 ಗ್ರಾಮಗಳನ್ನು ಹಾಗೂ 300 halmlets ಹಾಗೂ 5 ತಾಲ್ಲೂಕುಗಳಾದ ಬೀದರ್, ಹುಮನಾಬಾದ್ ಚಿಟಗುಪ್ಪ, ಬಸವ ಕಲ್ಯಾಣ ಬಾಲ್ಕಿ ಹಾಗೂ ಔರಾದ್ ತಾಲ್ಲೂಕುಗಳನ್ನು ಹೊಂದಿರುತ್ತದೆ ಹಾಗೂ ಹಿಂದುಳಿದ ಜಿಲ್ಲೆಯಾಗಿದ್ದು, ಮಹಾರಾಷ್ಟ್ರ ಮತ್ತು ಆಂಧ್ರ ರಾಜ್ಯದ ಗಡಿ ಅಂಚಿನಲ್ಲಿರುವ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಹಲವಾರು ಶೈಕ್ಷಣಿಕ ಸಂಸ್ಥೆಗಳು ಸ್ಥಾಪನೆಗೊಂಡಿವೆ ಕೆಲವು ಸಂಸ್ಥೆಗಳು ಸ್ಥಾಪನೆಯ ಹಂತದಲ್ಲಿವೆ. ಇತ್ತೀಚೆಗೆ ಪಶುವೈದ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತಿದ್ದು ಹಾಗೂ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆ ಮತ್ತು ತೋಟಗಾರಿಕೆ ಕಾಲೇಜನ್ನು ಹೊಂದಿದ್ದು, ಈ ಸಂಸ್ಥೆಗಳಲ್ಲಿ ಪದವಿ ಶಿಕ್ಷಣ ಹಾಗೂ ಸ್ನಾತಕೋತ್ತರ ಪದವಿಗಳನ್ನು ಪಡೆಯಲು ವಿದ್ಯಾರ್ಥಿಗಳು ಅಧ್ಯಯನವನ್ನು ಮುಂದುವರಿಸುತ್ತಾ ಬರುತ್ತಿದ್ದಾರೆ. ಅಲ್ಲದೆ ಬೀದರ್ ಕೇಂದ್ರ ಸ್ಥಾನದಲ್ಲಿ ಉನ್ನತ ಮಟ್ಟದ ವಾಯು ಸೇನೆಯ ತರಬೇತಿ ಸಂಸ್ಥೆಯು ಸಹ ಕಾರ್ಯನಿರ್ವಹಿಸುತ್ತಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಶೈಕ್ಷಣಿಕವಾಗಿ ಜಿಲ್ಲೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ ಅಂದರೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಪದವಿವರೆಗೂ ಓದುತ್ತಿರುವ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಬೆಳೆಯಲು ಹಾಗೂ ಸಾರ್ವಜನಿಕರಿಗೂ ಇತ್ತೀಚಿನ ವಿಜ್ಞಾನದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುವ ದೃಷ್ಟಿಯಿಂದ ಬೀದರ್ ಜಿಲ್ಲೆಯ ಕೇಂದ್ರ ಸ್ಥಾನದ ಬೀದರ್ ನಗರಕ್ಕೆ ಹೊಂದಿಕೊಂಡಂತೆ ಒಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸುವುದು ಅವಶ್ಯವೆಂದು ಕಂಡು ಬಂದಿರುವುದರಿಂದ ಬೀದರ್ ಜಿಲ್ಲೆಯ ಉಪ ಪ್ರಾದೇಶಿಕ ಕೇಂದ್ರದ ಅಧ್ಯಕ್ಷರು ಮತ್ತು ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳು, ಸ್ಥಳೀಯ ಸಾರ್ವಜನಿಕರು, ಲೋಕ ಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಮತ್ತು ಸ್ಥಳೀಯ ಸಂಘ ಸಂಸ್ಥೆಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಸದರಿ ಪ್ರಸ್ತಾವನೆ/ಬೇಡಿಕೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಮೇಲೆ ಓದಲಾದ (1) ಮತ್ತು (2)ರಲ್ಲಿ ರಾಜ್ಯ ಸರ್ಕಾರದ ಪಾಲಿನ ಅನುದಾನ ಕ್ರಮವಾಗಿ ರೂ. 100.00 ಲಕ್ಷಗಳು+30.00 ಲಕ್ಷಗಳನ್ನು ಅಂದರೆ ಒಟ್ಟು ರೂ. 130.00 ಲಕ್ಷಗಳನ್ನು ಕೆಲವು ಷರತ್ತಿಗೆ ಒಳಪಟ್ಟು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂ. (3)ರಲ್ಲಿ ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 27-05-2011ರಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಪ್ರಗತಿಯ ಪರಿಶೀಲನಾ ಸಭೆಯಲ್ಲಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರವು ಈಗಾಗಲೇ ಅನುಮೋದನೆ ನೀಡಿ ತನ್ನ ಪಾಲಿನ ಅನುದಾನ ರೂ. 130.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಕೇಂದ್ರ ಸರ್ಕಾರದ ಅನುಮೋದನೆ ಹಾಗೂ ಅನುದಾನ ಸದ್ಯದಲ್ಲಿ ದೊರೆಯದೆ ಇರುವುದರಿಂದ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢೀಕರಿಸಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಮುಂದೆ ಬಂದರೆ ಅಂತಹ ಕೇಂದ್ರಗಳಿಗೆ ಅನುಮತಿ ನೀಡಲು ನಿರ್ಧರಿಸಲಾಯಿತು.

ಮೇಲೆ ಓದಲಾದ ಕ್ರಮ ಸಂ. (4)ರಲ್ಲಿನ ಅರೆ ಸರ್ಕಾರಿ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಇವರು ದಿನಾಂಕ 27-05-2011ರಂದು ನಡೆದ ಸಭೆಯ ತೀರ್ಮಾನದನ್ವಯ ಬೀದರ್ ಉತ್ತರ ಹೋಬಳಿಯ ಕಬೀರವಾಡಾ ಗ್ರಾಮದ ಸರ್ವೆ ಸಂಖ್ಯೆ-3ರಲ್ಲಿ 5 ಎಕರೆ ಸರ್ಕಾರಿ ಭೂಮಿಯನ್ನು ಕಾಯ್ದಿರಿಸಿರುವುದಾಗಿ ತಿಳಿಸಿ, ವಿಜ್ಞಾನ ಕೇಂದ್ರದ ನಿರ್ಮಾಣಕ್ಕಾಗಿ ಸಂಸದರು ಮತ್ತು ಶಾಸಕರ ನಿಧಿಯಿಂದ ಕ್ರೋಢೀಕರಿಸಲು ಕ್ರಮಕೈಗೊಳ್ಳುತ್ತಿದ್ದು, ಎನ್.ಸಿ.ಎಸ್.ಎಂ. ಕೊಲ್ಕತ್ತ, ಇವರ ಮಾರ್ಗಸೂಚಿಗಳನ್ವಯ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಕೋರಿರುತ್ತಾರೆ.

ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರು ಬೀದರ್ ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸುವ ಕುರಿತು ಜಿಲ್ಲಾಧಿಕಾರಿಗಳು ನೀಡಿರುವ ಅಂಶವಾರು ವಿವರಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ನೀಡಿರುವ ಅಭಿಪ್ರಾಯದನ್ವಯ ಬೀದರ್ ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಅನುಮತಿ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಖಂಡಿಕೆಗಳಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಬೀದರ್‌ನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪನೆ ಮಾಡಲು ಅನುಮೋದನೆ ನೀಡಲು ನಿರ್ಧರಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ವಿಯಇ 134 ವಿತ್ರಮ 2007, ಬೆಂಗಳೂರು, ದಿನಾಂಕ 17-01-2012

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ NCSM ಕೊಲ್ಕತ್ತ ಇವರ ಪರಿಷ್ಕೃತ ಮಾರ್ಗಸೂಚಿಯಂತೆ ಬೀದರ್‌ನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಅನುಮೋದನೆ ನೀಡಿ ಆದೇಶಿಸಲಾಗಿದೆ.

1) ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಎನ್.ಸಿ.ಎಸ್.ಎಂ. ಕೊಲ್ಕತ್ತ ಇವರ ಮಾರ್ಗಸೂಚಿಯಂತೆ (Plan and Estimate) ಉಪ ಪ್ರಾದೇಶಿಕ ಕೇಂದ್ರವನ್ನು ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ನಿರ್ಮಿಸತಕ್ಕದ್ದು.
2) ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಕಾಮಗಾರಿ ಪೂರ್ಣಗೊಳಿಸಿದ ಮೇಲೆ ಉಪಯೋಗತಾ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಸರ್ಕಾರವು ಬಿಡುಗಡೆ ಮಾಡಿರುವ ಅನುದಾನ ರೂ. 1.30 ಕೋಟಿಗಳನ್ನು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು, ಯಾವುದೇ ಕಾರಣಕ್ಕೂ ಸದರಿ ಅನುದಾನವನ್ನು ಇತರೆ ಚಟುವಟಿಕೆಗಳಿಗೆ ಉಪಯೋಗಿಸತಕ್ಕದ್ದಲ್ಲ.

4) ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಯನ್ನು ರಾಜ್ಯ ಸರ್ಕಾರವು ಒಪ್ಪಿಗೆ ನೀಡುವ Memorandum of Association ಮತ್ತು Rules & Regulations ಅನ್ವಯ ರಚಿಸತಕ್ಕದ್ದು. ವಿಜ್ಞಾನ ಕೇಂದ್ರದ ಅಧಿಕಾರಿ/ನೌಕರರ ಸಿಬ್ಬಂದಿಯನ್ನು ಎನ್.ಸಿ.ಎಸ್.ಎಂ. ಕೊಲ್ಕತ್ತಾ ಇವರ ಪರಿಷ್ಕೃತ ಮಾರ್ಗಸೂಚಿಯಂತೆ ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ನೇಮಿಸಿಕೊಳ್ಳತಕ್ಕದ್ದು.

5) ಕೇಂದ್ರ ಸರ್ಕಾರದ ಪಾಲಿನ ಅನುದಾನವಾದ ರೂ. 1.30 ಕೋಟಿಗಳನ್ನು ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಢೀಕರಿಸಿದ ಅನುದಾನವನ್ನು ವಿಜ್ಞಾನ ಕೇಂದ್ರ ಸ್ಥಾಪನೆಗೆ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಕ್ರೋಢೀಕರಿಸಿದ ಅನುದಾನವನ್ನು ಬೇರೆ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಬಾರದು.

6) ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ರಾಜ್ಯ ಸರ್ಕಾರ ಬಿಡುಗಡೆ ಮಾಡಲಾದಂತಹ ಅನುದಾನ ಹಾಗೂ ವಿಜ್ಞಾನ ಕೇಂದ್ರ ಕ್ರೋಢೀಕರಿಸಿದ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದ್ದಲ್ಲಿ ತಪ್ಪದೇ ಒದಗಿಸತಕ್ಕದ್ದು.

7) ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೆ ನೋಡಲ್ ಅಧಿಕಾರಿಯಾಗಿ ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರನ್ನು ನೇಮಿಸಲಾಗಿದ್ದು, ವಿಜ್ಞಾನ ಕೇಂದ್ರ ಸ್ಥಾಪನೆಗೆ ತೊಂದರೆ ತೊಡಕುಂಟಾದಲ್ಲಿ ಇವರ ಮಾರ್ಗದರ್ಶನ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಸರ್ಕಾರಿ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2008, ದಿನಾಂಕ 16-05-2008ರ ಅಡಿಯಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಮದ್ಭಾವಿ ಎ. ಎಸ್.

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 420 ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

COMMERCE AND INDUSTRIES SECRETARIAT

Corrigendum

No. CI 316 SPI 2008, Bangalore, dated 11-01-2012

Sub: Approval to purchase a portion of land and acquisition of balance and through KIADB for the proposal of M/s Bhoruka Power Corporation Ltd. to establish "300 MW Coal Based Thermal Power Plant"

Read: Govt. Order No.: CI 316 SPI 2008 dated 29-12-2011

***

In the Govt. Order No. CI 316 SPI 2008, dated 29-12-2011, in the 1st line of 1st para of the order portion please read as "M/s Bhoruka Energy Ltd., (Formerly M/s Bhoruka Power Corporation Ltd.,)" in place of "M/s Bhoruka Power Corporation Ltd.,"

By Order and in the name of the Governor of Karnataka

Shivashankar Naik. L

Desk Officer (Technical Cell) (I/c)

P.R. 421 Commerce & Industries Department

ಕಾರ್ಮಿಕ ಸಚಿವಾಲಯ

ವಿಷಯ : ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗೆಗಿನ ಆದೇಶವನ್ನು ಪರಿಷ್ಕರಿಸುವ ಬಗ್ಗೆ:-

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಕಾಇ 74 ಇಟಿಎಂ 2009, ದಿನಾಂಕ 18-08-2009

2) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ ಉತಇ/ತರಬೇತಿ/ಆಡಳಿತ-3/ಸಿಆರ್-2/2007-08, ದಿನಾಂಕ 28-10-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಇಲಾಖೆಯ ತರಬೇತಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಜಂಟಿ ನಿರ್ದೇಶಕರುಗಳು ಒಂದೇ ಶ್ರೇಣಿಯ ಅಧಿಕಾರಿಗಳಾಗಿದ್ದಾಗ್ಯೂ, ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರಿಗೆ ಪ್ರತಿ ಕೈಗಾರಿಕಾ ತರಬೇತಿ ಸಂಸ್ಥೆಯ ಖರೀದಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿಭಾಗೀಯ ಕಚೇರಿ ಜಂಟಿ ನಿರ್ದೇಶಕರುಗಳಿಗಿಂತ ಹೆಚ್ಚಿನ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದ್ದು, ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರಿಗೆ ಪ್ರತಿ ಕೈಗಾರಿಕಾ ತರಬೇತಿ ಸಂಸ್ಥೆಯ ಖರೀದಿ ಪ್ರಸ್ತಾವನೆಗೆ ಒಂದು ಬಾರಿಗೆ ಗರಿಷ್ಠ 2.00 ಲಕ್ಷದಂತೆ ಆರ್ಥಿಕ ಅಧಿಕಾರ ನೀಡಿ ಮಾರ್ಪಡಿತ ಆದೇಶ ಹೊರಡಿಸುವಂತೆ

ಕೋರಿರುತ್ತಾರೆ. ಅಲ್ಲದೇ, ಜಂಟಿ ನಿರ್ದೇಶಕರು (ತರಬೇತಿ), ಸಿಬ್ಬಂದಿ, ತರಬೇತಿ ಮತ್ತು ಸಂಶೋಧನಾ ಕೇಂದ್ರ, ಮಳವಳ್ಳಿ ಇವರು ಸಂಸ್ಥೆಯ ಮುಖ್ಯಸ್ಥರಾಗಿದ್ದು, ವಿಭಾಗೀಯ ಜಂಟಿ ನಿರ್ದೇಶಕರುಗಳ ಸಮಾನ ಹುದ್ದೆಯುಳ್ಳರಾಗಿರುತ್ತಾರೆಂದೂ ಸಂಸ್ಥೆಯ ಕಾರ್ಯನಿರ್ವಹಣೆಯ ಸಂಬಂಧ ಅವರಿಗೆ ಹೆಚ್ಚಿನ ವಿತ್ತಾಧಿಕಾರ ನೀಡುವ ಅವಶ್ಯಕತೆ ಇದ್ದು, ಅವರಿಗೂ ಸಹ ಇತರೆ ವಿಭಾಗೀಯ ಜಂಟಿ ನಿರ್ದೇಶಕರುಗಳಿಗೆ ನೀಡಿದ ವಿತ್ತಾಧಿಕಾರವನ್ನು ನೀಡುವುದು ಸೂಕ್ತವೆಂದು ತಿಳಿಸಿ ಪರಿಷ್ಕೃತ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 265 ಇಟಐ 2010, ಬೆಂಗಳೂರು, ದಿನಾಂಕ 21-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಕಾಇ 74 ಇಟಿಎಂ 2009 ದಿನಾಂಕ 18-08-2009ರಲ್ಲಿನ ಕ್ರಮ ಸಂಖ್ಯೆ 4ರ 4ನೇ ಕಲಂನಲ್ಲಿ ಜಂಟಿ ನಿರ್ದೇಶಕರು ಕೇಂದ್ರ ಸ್ಥಾನ ಇವರಿಗೆ ಪ್ರತಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅಗತ್ಯವಿರುವ ಸಾಮಾಗ್ರಿ ಮತ್ತು ಸಲಕರಣೆಗಳನ್ನು ಖರೀದಿಸಲು "ಪ್ರತಿ ಬಾರಿ ರೂ. 5.00 ಲಕ್ಷಗಳೆಂದು" ನಿಗದಿಪಡಿಸಿರುವುದನ್ನು "ಪ್ರತಿ ಬಾರಿ ರೂ. 2.00 ಲಕ್ಷಗಳು" ಎಂದು ಮಾರ್ಪಡಿಸಲಾಗಿದೆ.

ಅಲ್ಲದೇ, ಜಂಟಿ ನಿರ್ದೇಶಕರು, ಸಿಬ್ಬಂದಿ, ತರಬೇತಿ ಮತ್ತು ಸಂಶೋಧನಾ ಕೇಂದ್ರ, ಮಳವಳ್ಳಿ ಇವರು ವಿಭಾಗೀಯ ಮಟ್ಟದ ಅಧಿಕಾರಿಗಳಿಗೆ ಸಮಾನಾಂತರವಾದ ಅಧಿಕಾರಿಯಾಗಿದ್ದು ಅವರು ವಿಭಾಗೀಯ ಮಟ್ಟದ ಅಧಿಕಾರಿಗಳಿಗೆ ನೀಡಿದ ಆರ್ಥಿಕ ವಿತ್ತಾಧಿಕಾರವನ್ನು ಚಲಾಯಿಸತಕ್ಕದ್ದು.

ಮುಂದುವರೆದು, ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಇತರ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರ ಪರಿಷ್ಕರಿಸಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2010 ದಿನಾಂಕ 30-04-2010ರಂದು ಆದೇಶ ಹೊರಡಿಸಿರುವುದರಿಂದ ಉದ್ಯೋಗ ಮತ್ತು ತರಬೇತಿ ಇಲಾಖೆಯು ತಮಗೆ ನೀಡಿರುವ ವಿಶೇಷ ವಿತ್ತಾಧಿಕಾರ ಅಥವಾ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2010 ದಿನಾಂಕ 30-04-2010ರ ಸಾಮಾನ್ಯ ವಿತ್ತಾಧಿಕಾರಗಳಲ್ಲಿ ಯಾವುದಾದರೂ ಒಂದನ್ನು ಚಲಾಯಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 793 ವೆಚ್ಚ-9/11 ದಿನಾಂಕ 02-01-2012ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ. ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಪಿ.ಆರ್. 422 ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

COMMERCE AND INDUSTRIES SECRETARIAT

Sub : Formation of Single Window Agency for monitoring mining leases in Districts regarding.

Read : Letter No. DMG/MLS/SWA/2011-12:5423 dated 15.12.2011 of Director, Department of Mines and Geology, Bangalore.

Preamble:

The State Government had referred several issues concerning illegal mining in the State, after framing comprehensive terms of reference to the Hon'ble Lokayukta for investigation under section 7 (2A) of Karnataka Lokayuktha act 1984. The Hon'ble Lokayuktha has submitted a detailed investigation report (part-II) to the State Government on 27-07-2011 containing many chapters and annexures. The State Government constituted High Level Committee under the chairmanship of the Additional Chief Secretary to advise the government regarding ways and means of implementation of recommendations contained in the Hon'ble Lokayukta's report. The High Level Committee has submitted its final report to the State Government on 24-10-2011.

The High Level Committee in its report has recommended to constitute single window agency at the District level headed by the Deputy Commissioner for effective monitoring of extraction of ore, and transportation by lease holders/issue of NOCs for grant of mining lease, trading in Iron Ore, illegal stockyards, purchase of ore by the end users etc., and the Committee/Agency should regularly watch and monitor the entire gamut of work undertaken by mine lessees and rigorously enforce compliance with law.

The Government has agreed in principle to constitute single window agency as per recommendation of High Level Committee.

The Director, Mines and Geology in his letter dated 15-12-2011 read above has suggested that the tasks proposed to be assigned to the single window agency may be entrusted to the taskforce already constituted under the chairmanship of Deputy Commissioner at District levels to look in to the matters/issues concerning illegal mining activities, vide the Government Order No. CI. 194:MMM 2005, dated 16-11-2005.

The proposal has been examined in detail and the following order has been made:-

Government Order No. CI 283 MMM 2011, Bangalore, dated 21-01-2012

In the circumstances explained in the preamble, the Task Force Committee under the chairmanship of Deputy Commissioner already constituted vide G.O. dated 16-11-2005 shall act as single window committee and shall perform the following tasks in addition to the functions entrusted earlier:-

i) Issue of NOCs for grant of mining leases after field inspection;

ii) Effective monitoring of extraction of ore by the lease holders within the permitted limit;

iii) To check transportation of ore by lease holders, like, overloading, illegal transportation without permits etc.,

iv) To check illegal trading in iron ore;

v) To control illegal stockyards;

vi) Purchase of ore by the end users etc.,

By Order and in the name of the Governor of Karnataka

M. V. Shivasubramani

Under Secretary to Government (Mines)

Commerce & Industries Department

P.R. 423

INFRASTRUCTURE DEVELOPMENT SECRETARIAT

Sub : Release of funds for engaging the services of MC&A as Branding and Communication Agency of Infrastructure Development Department.

Read : 1) G.O. No. IDD 138 IDM 2011, dated 28-07-2011

2) Letter No. IDD/CSD/2621, dated 16-12-2011 from DGM, MC&A, Bangalore.

Preamble:

In the G.O. read at (1) above, sanction was accorded for engaging the services of Marketing Consultants & Agencies ltd., Bangalore as Branding & Communication Agency of IDD with a view to project various activities of the Department before the GIM 2012.

In the letters read at (2) above, the Deputy General Manager, MC&A has submitted proposals towards providing consultancy services of Branding & Communication for IDD for the month of November 2011 for an amount of Rs. 2.00 lakhs and requested the Government for release of amount in this regard.

Hence the following orders.

Government Order No. IDD 138 IDM 2011, Bangalore, dated 20-01-2012

Under the circumstances explained in the preamble, Government is pleased to accord sanction to release Rs. 2.00 lakhs (Rupees two lakhs only) for the month of November 2011 to Managing Director, MC&A, Bangalore towards providing consultancy services of Branding & Communication for IDD for the progress achieved by MC&A Bangalore.

The expenditure shall be met out under the Budget Head 3451-00-090-1-06-059 infrastructure preliminary studies other expenditure (plan) 2011-12.

The Managing Director, MC&A, Bangalore is authorized to draw the amount on a payees receipt duly countersigned by the under secretary to government, Infrastructure Development Department from the State Huzoor Treasury, Bangalore.

This order is issued in accordance with the delegation of financial powers to principal secretary/secretary to govt., vide G.O. No. FD 1 TFP 2008, dated 16-05-2008.

By Order and in the name of the Governor of Karnataka

R. Shivalingaiah

Under Secretary to Government

Infrastructure Development Department

P.R. 424

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ : ರಾಜ್ಯದಲ್ಲಿ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (MKSP) ಯೋಜನೆಯ ಅನುಷ್ಠಾನದ ಬಗ್ಗೆ ಸಮಿತಿ ರಚಿಸುವ ಕುರಿತು.

ಓದಲಾಗಿದೆ : 1) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಸಂಖ್ಯೆ : D.O. No. J. 11011/01/2010-SGSY-1 ದಿನಾಂಕ : 24-12-2010.

2) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಸಂಖ್ಯೆ : D.O. No. J. 11011/01/2010-SGSY-I ದಿನಾಂಕ : 05-10-2011.

3) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಸಂಖ್ಯೆ : K-11011/37/2011/MKSP/Ktk ದಿನಾಂಕ : 28-09-2011.

ಪ್ರಸ್ತಾವನೆ :

ಕೇಂದ್ರ ಸರ್ಕಾರವು ಇತ್ತೀಚೆಗೆ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂ.ಕೆ.ಎಸ್.ಪಿ) ಯನ್ನು ಜಾರಿಗೊಳಿಸಿದ್ದು, ಈ ಯೋಜನೆಯು ಗ್ರಾಮೀಣಾ ಬಡವರಲ್ಲಿ ಅತೀ ಬಡವರಾದ ಮಹಿಳೆಯರಿಗೆ ಕೃಷಿಯಲ್ಲಿ ತರಬೇತಿ ನೀಡಿ, ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಗೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಗಳು ಕ್ರಮವಾಗಿ ಶೇ: 75:25 ರ ಅನುಪಾತದಲಿ ಅನುದಾನ ಭರಿಸುವುದು. ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ. 75 ರ ಅನುದಾನವನ್ನು 25:50:25 ರಂತೆ 3 ಕಂತುಗಳಲ್ಲಿ ನೀಡಲಾಗುವುದು. ಇದರನ್ವಯ ರಾಜ್ಯ ಸರ್ಕಾರವು ಶೇ. 25 ರ ಅನುದಾನವನ್ನು ಭರಿಸಬೇಕಾಗಿರುತ್ತದೆ.

ಈ ಯೋಜನೆಯನ್ನು ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮೆ. ಗ್ರೀನ್ ಫೌಂಡೇಶನ್ ಸಂಸ್ಥೆಯು ಮೊದಲಿಗೆ ಮುಂದೆ ಬಂದಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಒಟ್ಟು 6.25 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಕೇಂದ್ರದ

ಪಾಲು 4.69 ಹಾಗೂ ರಾಜ್ಯದ ಪಾಲು 1.56 ರೂಗಳಾಗಿರುತ್ತದೆ. ಕೇಂದ್ರ ಸರ್ಕಾರವು ಶೇ. 25 ರ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡಿರುತ್ತದೆ.

ರಾಜ್ಯ ಸರ್ಕಾರವು ರಾಜ್ಯದಲ್ಲಿ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂ.ಕೆ.ಎಸ್.ಪಿ) ಅನುಷ್ಠಾನದ ಪ್ರಗತಿ ಪರಿಶೀಲಿಸಲು ಮತ್ತು ಬೇರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ರಾಜ್ಯ ಮಟ್ಟದಲ್ಲಿ ಉತಸ್ತುವಾರಿ ಮತ್ತು ಪರಿಶೀಲನಾ ಸಮಿತಿ ಹಾಗೂ ತಾಂತ್ರಿಕ ಸಮಿತಿ ರಚಿಸಬೇಕಾಗಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 70 : ಎಸ್.ಜಿ.ವೈ : (ಇನ್‌ಫ್ರಾ) : 2011, ಬೆಂಗಳೂರು, ದಿನಾಂಕ: 7ನೇ ಜನವರಿ 2012

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1.	ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ	ಅಧ್ಯಕ್ಷರು
2.	ಆಯುಕ್ತರು, ಕೃಷಿ ಇಲಾಖೆ ಅಥವಾ ಅವರ ಪ್ರತಿನಿಧಿಗಳು	ಸದಸ್ಯರು
3.	ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಅವರ ಪ್ರತಿನಿಧಿಗಳು	ಸದಸ್ಯರು
4.	ಆಯುಕ್ತರು, ತೋಟಗಾರಿಕೆ ಇಲಾಖೆ ಅಥವಾ ಅವರ ಪ್ರತಿನಿಧಿಗಳು	ಸದಸ್ಯರು
5.	ಆಯುಕ್ತರು, ಪಶುಸಂಗೋಪನ ಇಲಾಖೆ ಅಥವಾ ಅವರ ಪ್ರತಿನಿಧಿಗಳು	ಸದಸ್ಯರು
6.	ಆಯುಕ್ತರು, ಆರೋಗ್ಯ ಇಲಾಖೆ ಅಥವಾ ಅವರ ಪ್ರತಿನಿಧಿಗಳು	ಸದಸ್ಯರು
7.	ಪ್ರತಿನಿಧಿಗಳು – ಯೋಜನಾ ಅನುಷ್ಠಾನದ ಸಂಸ್ಥೆ	ಸದಸ್ಯರು
8.	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಸಂಬಂಧಿಸಿದ ಜಿಲ್ಲಾ ಪಂಚಾಯತ್)	ಸದಸ್ಯರು
9.	ನಿರ್ದೇಶಕರು, (ಸ್ವಯಂ ಉದ್ಯೋಗ ಕಾರ್ಯಕ್ರಮ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ	ಸದಸ್ಯ ಕಾರ್ಯದರ್ಶಿ

ಎನ್.ಆರ್.ಎಲ್.ಎಂ. ಯೋಜನೆ ಅನುಷ್ಠಾನಕ್ಕೆ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, (ಕೆ.ಎಸ್.ಆರ್.ಎಲ್.ಪಿ.ಎಸ್.) ಅಸ್ತಿತ್ವಕ್ಕೆ ಬಂದ ನಂತರ ಈ ಸಮಿತಿಯ ಸದಸ್ಯ ಕಾರ್ಯದರ್ಶಿಗಳವರು ಮಿಷನ್ ನ ನಿರ್ದೇಶಕರು ಆಗುತ್ತಾರೆ.

ರಾಜ್ಯ ಮಟ್ಟದ ಉಸ್ತುವಾರಿ ಮತ್ತು ಪರಿಶೀಲನಾ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು :

- ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂ.ಕೆ.ಎಸ್.ಪಿ) ಪ್ರಸ್ತಾವನೆಗಳನ್ನು ಪಡೆಯುವ ಬಗ್ಗೆ ನೀತಿ ರೂಪಿಸುವುದು.
- ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು/ಸಭೆಗೆ ಆಹ್ವಾನಿಸಬಹುದು.
- ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು ಹಾಗೂ ಪ್ರಗತಿಯ ವರದಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ, ಅಂತರ್ ಜಾಲದಲ್ಲಿ ಅನುಷ್ಠಾನ ಸಂಸ್ಥೆಯು ಅಳವಡಿಸಿರುವುದರ ಬಗ್ಗೆ ಉಸ್ತುವಾರಿ ವಹಿಸುವುದು.
- ಕ್ರಿಯಾ ಯೋಜನೆಯನ್ನು ಜಾರಿಗೊಳಿಸುವಲ್ಲಿ ಸಹಕರಿಸುವುದು.
- ಎಂ.ಕೆ.ಎಸ್.ಪಿ ಯೋಜನೆಯ ಅನುಷ್ಠಾನದ ಬಗ್ಗೆ ಸಮಿತಿಯು ಸೂಕ್ತ ಸಲಹೆ ನೀಡುವುದು.

ತಾಂತ್ರಿಕ ಸಮಿತಿ :

ಕ್ರಮ ಸಂಖ್ಯೆ	ಅಧಿಕಾರಿಯ ಪದನಾಮ	
1.	ಮಿಷನ್ ನಿರ್ದೇಶಕರು, ಕೆ.ಎಸ್.ಆರ್.ಎಲ್.ಎಂ. (ಎನ್.ಆರ್.ಎಲ್.ಎಂ)	ಅಧ್ಯಕ್ಷರು
2.	ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ	ಸದಸ್ಯರು
3.	ನಿರ್ದೇಶಕರು, ಪಶುಸಂಗೋಪನ ಇಲಾಖೆ	ಸದಸ್ಯರು
4.	ನಿರ್ದೇಶಕರು, ಮೀನುಗಾರಿಕೆ ಇಲಾಖೆ	ಸದಸ್ಯರು
5.	ನಿರ್ದೇಶಕರು, ಕೃಷಿ ಇಲಾಖೆ	ಸದಸ್ಯರು
6.	ವ್ಯವಸ್ಥಾಪಕ ನಿರ್ದೇಶಕರು ಸಿ.ಎ.ಪಿ.ಇ.ಸಿ.	ಸದಸ್ಯರು
7.	ಜಂಟಿ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
8.	ಯೋಜನಾ ನಿರ್ದೇಶಕರು, (ಸ್ತ್ರೀಶಕ್ತಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	ಸದಸ್ಯರು
9.	ವಿಶೇಷ ಯೋಜನೆಗಳ ಯೋಜನಾ ಉತಸ್ತುವಾರಿ ಅಧಿಕಾರಿಗಳು, ಕೆ.ಎಸ್.ಆರ್.ಎಲ್.ಪಿ.ಎಸ್.	ಸದಸ್ಯ ಕಾರ್ಯದರ್ಶಿ

ತಾಂತ್ರಿಕ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು :

- ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ಸಂಸ್ಥೆಗೆ ಸಂಪೂರ್ಣ ಸಹಕಾರ ಮತ್ತು ಮಾರ್ಗದರ್ಶನ ನೀಡುವುದು.
- ಯೋಜನೆಯ ಗುಣಮಟ್ಟದ ಬಗ್ಗೆ ಪರಿಶೀಲಿಸುವುದು.
- ಪ್ರಗತಿಯ ವರದಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ, ಪ್ರಗತಿ ವರದಿಯನ್ನು ಅಂತರ್ ಜಾಲದಲ್ಲಿ ಅನುಷ್ಠಾನ ಸಂಸ್ಥೆಯು ಅಳವಡಿಸಿರುವುದರ ಬಗ್ಗೆ ಉಸ್ತುವಾರಿ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಗ್ಗಿಂದಾಗ್ಗೆ ನೀಡುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಿ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಮಿತಾ ಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್.425

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ ಬಿ.ವಿ.ಎಸ್ಸಿ & ಎ.ಹೆಚ್. ವಿದ್ಯಾರ್ಥಿಗಳ ಇಂಟರ್ನ್‌ಷಿಪ್ ಮಾಸಿಕ ಭತ್ಯೆಯನ್ನು ಹೆಚ್ಚಿಸುವಿಕೆ.

ಓದಲಾಗಿದೆ :
1) ಅಧ್ಯಕ್ಷರು, ಪಶುವೈದ್ಯಕೀಯ ವಿದ್ಯಾರ್ಥಿಗಳ ಕ್ರಿಯಾ ಸಮಿತಿ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರ ಮನವಿ.
2) ಪತ್ರ ಸಂಖ್ಯೆ: ಕುಪ/ಪಸಂಮೀ-ಇಮಾಭ/2011-12/II/2659/2443 ದಿನಾಂಕ: 29-08-2011.
3) ಪತ್ರ ಸಂಖ್ಯೆ: ಕುಪ/ಪಸಂಮೀ-ಇಮಾಭ/2011-12/II/2669 ದಿನಾಂಕ: 05-09-2011.
4) ಪತ್ರ ಸಂಖ್ಯೆ: ಕುಪಪ್ರಾಕಬೆಂ/ಪಸಂಮೀಇಮಾಭ/2011-12/00 ದಿನಾಂಕ: 24-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಮನವಿಯಲ್ಲಿ ಅಧ್ಯಕ್ಷರು, ಪಶುವೈದ್ಯಕೀಯ ವಿದ್ಯಾರ್ಥಿಗಳ ಕ್ರಿಯಾ ಸಮಿತಿ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರು ಪಶುವೈದ್ಯಕೀಯ ವಿದ್ಯಾರ್ಥಿಗಳು ಬಹುತೇಕ ಗ್ರಾಮೀಣ ಪ್ರದೇಶದಿಂದ ಆರ್ಥಿಕವಾಗಿ ಮಧ್ಯಮ ಮತ್ತು ಕೆಳಸ್ತರ ರೈತ ಕುಟುಂಬದಿಂದ ಬಂದವರಾಗಿರುವುದರಿಂದ ಕಿರಿಯ ಪಶುವೈದ್ಯರ ಇಂಟರ್ನ್‌ಷಿಪ್ ಭತ್ಯೆಯನ್ನು ರೂ. 5,400/- ರಿಂದ 11,000/-ಕ್ಕೆ ಮತ್ತು ಪ್ರಯಾಣ ಭತ್ಯೆಯನ್ನು ರೂ. 300/- ರಿಂದ ರೂ. 5000/-ಕ್ಕೆ ಹೆಚ್ಚಿಸುವಂತೆ ಕೋರಿರುತ್ತಾರೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2), (3) ಮತ್ತು (4) ರ ಪತ್ರಗಳಲ್ಲಿ ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ 5 ವರ್ಷ ಅವಧಿಯ B.V.Sc. & AH (ಪಶುವೈದ್ಯಕೀಯ ಕೋರ್ಸ್) ಮತ್ತು 4 ವರ್ಷ ಅವಧಿಯ B.Tech (D.Tech) (ಹೈನುಗಾರಿಕೆ ಕೋರ್ಸ್) ಮತ್ತು B.F.Sc. (ಮೀನುಗಾರಿಕೆ ಕೋರ್ಸ್) ಸ್ನಾತಕ ಪದವಿ ಕೋರ್ಸ್‌ಗಳು ಇರುತ್ತದೆಂದು ತಿಳಿಸಿರುತ್ತಾರೆ. ಭಾರತೀಯ ಪಶುವೈದ್ಯಕೀಯ ಪರಿಷತ್ತು (IVC) ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ICAR) ಶೈಕ್ಷಣಿಕ ನಿಯಮಾವಳಿಗಳಂತೆ ನಿಗದಿತ ಪಠ್ಯಕ್ರಮದ ಅನುಸಾರ 9 ಸೆಮಿಸ್ಟರ್‌ಗಳನ್ನು ಪೂರೈಸಿದ ನಂತರ ವಿದ್ಯಾರ್ಥಿಗಳು ಕಡ್ಡಾಯವಾಗಿ ಆರು ತಿಂಗಳ ಅವಧಿಗೆ ಇಂಟರ್ನ್‌ಷಿಪ್ ಮತ್ತು ಇನ್ ಪ್ಲಾಂಟ್ ತರಬೇತಿಗಳನ್ನು ರಾಜ್ಯ ವಿವಿಧ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ, ಜಾನುವಾರು ಕ್ಷೇತ್ರಗಳಲ್ಲಿ ಡೈರಿ ಮತ್ತು ಆಹಾರ ಸಂಸ್ಕರಣಾ ಘಟಕಗಳಲ್ಲಿ ನಿರ್ವಹಿಸಬೇಕಾಗಿದ್ದು ತರಬೇತಿ ಅವಧಿಯಲ್ಲಿ ಕಾಲೇಜಿನ ಆವರಣದಿಂದ ಹೊರಗುಳಿದು ಊಟ/ವಸತಿ ಸೌಕರ್ಯಗಳನ್ನು ತಾವೇ ಪೂರೈಸಿಕೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಕಳೆದ ಐದು ವರ್ಷಗಳಿಂದ ಇಂಟರ್ನ್‌ಷಿಪ್ ತರಬೇತಿಯಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿ ರೂ. 5,400/- ಮಾಸಿಕ ಭತ್ಯೆ (ರಾಜ್ಯ ಸರ್ಕಾರದಿಂದ ರೂ. 5,000/- ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನಿಂದ ರೂ. 400/-) ಮತ್ತು ಆರು ತಿಂಗಳ ಅವಧಿಗೆ ರೂ. 300/- ಪ್ರವಾಸ ಭತ್ಯೆ (ರಾಜ್ಯ ಸರ್ಕಾರದಿಂದ ರೂ. 100/- ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನಿಂದ ರೂ. 200/- ಹಾಗೂ ಇನ್‌ಪ್ಲಾಂಟ್ ತರಬೇತಿ ಪಡೆಯುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಕರ್ನಾಟಕ ಹಾಲು ಮಹಾಮಂಡಳಿ (ಕೆ.ಎಂ.ಎಫ್) ವತಿಯಿಂದ ಬೆಂಗಳೂರಿಗೆ ಸೀಮಿತವಾಗಿ ರೂ. 2000/- ಮಾಸಿಕ ಭತ್ಯೆ ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನಿಂದ ರೂ. 400/- ಮಾಸಿಕ ಭತ್ಯೆ ಪಡೆಯುತ್ತಿದ್ದಾರೆಂದು ತಿಳಿಸಿರುತ್ತಾರೆ. ಅವಶ್ಯಕ ವಸ್ತುಗಳ ಬೆಲೆ ಏರಿಕೆ, ಪ್ರಯಾಣದ ವೆಚ್ಚ ಅಧಿಕವಾಗಿರುವುದರಿಂದ ಹಾಗೂ ಸ್ನಾತಕ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕೃಷಿ ಕುಟುಂಬ ಮತ್ತು ಗ್ರಾಮೀಣ ಹಿನ್ನೆಲೆಯುಳ್ಳವರಾಗಿದ್ದು ತರಬೇತಿ ಅವಧಿಯಲ್ಲಿ ದೈನಂದಿನ ನಿರ್ವಹಣೆಗಾಗಿ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವುದರಿಂದ ಇಂಟರ್ನ್‌ಷಿಪ್ ಭತ್ಯೆಯನ್ನು ಮಾಸಿಕ ರೂ. 5,000/- ರಿಂದ ರೂ. 11,000/- ಕ್ಕೆ ಹೆಚ್ಚಿಸುವಂತೆ ಮತ್ತು ಪ್ರವಾಸ ಭತ್ಯೆಯನ್ನು ರೂ. 100/- ರಿಂದ ರೂ. 5000/-ಕ್ಕೆ ಹೆಚ್ಚಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅಂತಿಮ ವರ್ಷದ ಬಿ.ವಿ.ಎಸ್ಸಿ & ಎಹೆಚ್, ಬಿ.ಟೆಕ್ (ಡಿ.ಟೆಕ್), ಬಿ.ಎಫ್.ಎಸ್ಸಿ. ಕೋರ್ಸಿನ ಒಟ್ಟು 218 ವಿದ್ಯಾರ್ಥಿಗಳು ಫೆಬ್ರವರಿ 2012 ಇಂದ 6 ತಿಂಗಳ ಅವಧಿಗೆ ಇಂಟರ್ನ್‌ಷಿಪ್ ಮತ್ತು ಇನ್‌ಪ್ಲಾಂಟ್ ತರಬೇತಿಗಳಿಗೆ ಹಾಜರಾಗುತ್ತಿದ್ದು, ಆ ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಮತ್ತು ಇನ್‌ಪ್ಲಾಂಟ್ ತರಬೇತಿಗಳ ಮಾಸಿಕ ಭತ್ಯೆ ಪರಿಷ್ಕರಣೆಯಿಂದ ತಗಲಬಹುದಾದ ಅಂದಾಜು ರೂ. 1,54,78,000/- ಮೊತ್ತವನ್ನು ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

3. ಕುಲಪತಿಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಪಶುವೈದ್ಯಕೀಯ ವಿಶ್ವವಿದ್ಯಾಲಯದ ಇಂಟರ್ನ್‌ಷಿಪ್ ಮತ್ತು ಇನ್‌ಪ್ಲಾಂಟ್ ತರಬೇತಿಗೆ ಹಾಜರಾಗುವ ಪ್ರತಿಯಬ್ಬ ಬಿ.ವಿ.ಎಸ್ಸಿ & ಎಹೆಚ್ ಬಿ.ಟೆಕ್ (ಡಿ.ಟೆಕ್), ಬಿ.ಎಫ್.ಎಸ್ಸಿ. ಸ್ನಾತಕ ವಿದ್ಯಾರ್ಥಿಯು ಕಳೆದ 5 ವರ್ಷದಿಂದ ಅಂದರೆ 2006 ರಿಂದ ರೂ. 5,400/- ಮಾಸಿಕ ಭತ್ಯೆ ಮತ್ತು ರೂ. 300/- ಪ್ರವಾಸ ಭತ್ಯೆ ಪಡೆಯುತ್ತಿದ್ದು, ಸದರಿ ಭತ್ಯೆಗಳನ್ನು ಇದುವರೆಗೂ ಪರಿಷ್ಕರಿಸಿರುವುದಿಲ್ಲ. ತರಬೇತಿಯಲ್ಲಿರುವ ಬಹುತೇಕ ವಿದ್ಯಾರ್ಥಿಗಳು ಕೃಷಿ ಕುಟುಂಬ ಮತ್ತು ಗ್ರಾಮೀಣ ಹಿನ್ನೆಲೆಯಿಂದ ಬಂದವರಾಗಿದ್ದು ತರಬೇತಿ ಅವಧಿಯಲ್ಲಿ ಕಾಲೇಜಿನ ಆವರಣದಿಂದ ಹೊರಗುಳಿದು ಊಟ/ವಸತಿ ಸೌಕರ್ಯಗಳನ್ನು ಸ್ವತಃ ಒದಗಿಸಿಕೊಳ್ಳಬೇಕಾಗದ್ದು ಪ್ರಸ್ತುತ ಆಹಾರ

ಮತ್ತು ಪ್ರವಾಸದ ವೆಚ್ಚಗಳು ದುಪ್ಪಟ್ಟಾಗಿರುವುದರಿಂದ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ತೊಂದರೆಯಾಗಿರುವ ಜೊತೆಗೆ ದೈನಂದಿನ ನಿರ್ವಹಣೆಯೂ ಸಹ ಕಷ್ಟಕರವಾಗಿರುತ್ತದೆ. ಪಶ್ಚಿಮ ಬಂಗಾಳ ಸರ್ಕಾರ ಅಲ್ಲಿನ ಪಶುವೈದ್ಯಕೀಯ ವಿದ್ಯಾರ್ಥಿಗಳ ಇಂಟರ್ನ್‌ಷಿಪ್ ಮಾಸಿಕ ಭತ್ಯೆಯನ್ನು ರೂ. 4880/- ರಿಂದ ರೂ. 10,000/- ಕ್ಕೆ ಹೆಚ್ಚಿಸಿದೆ. ಅಲ್ಲದೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಗೃಹ ವೈದ್ಯ, ಸ್ನಾತಕೋತ್ತರ ಮತ್ತು ಎಂಸಿಹೆಚ್/ಡಿಎಂ/ಫೆಲೋಶಿಪ್ (ಸೂಪರ್ ಸ್ಪೆಷಾಲಿಟಿ) ವಿದ್ಯಾರ್ಥಿಗಳ ಮಾಸಿಕ ಶಿಷ್ಯವೇತನವನ್ನು ರೂ. 17,000 ರಿಂದ ರೂ. 30,000/-ಕ್ಕೆ ಪರಿಷ್ಕರಿಸಿದೆ. ಪ್ರಸ್ತುತ ಅವಶ್ಯಕ ವಸ್ತುಗಳ ಬೆಲೆ ಹೆಚ್ಚಳವಾಗಿರುವುದರಿಂದ ಮತ್ತು ಪ್ರಯಾಣ ವೆಚ್ಚ ಅಧಿಕಗೊಂಡಿರುವದರಿಂದ ಇಂಟರ್ನ್‌ಷಿಪ್ ಮಾಸಿಕ ತರಬೇತಿ ಭತ್ಯೆಯನ್ನು ಪರಿಷ್ಕರಿಸುವುದು ಸೂಕ್ತವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಿ.ವಿ.ಎಸ್ಸಿ & ಎ.ಹೆಚ್. ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಮಾಸಿಕ ಭತ್ಯೆಯನ್ನು ಪ್ರಸ್ತುತ ರೂ. 5000/- ದಿಂದ ರೂ. 11,000/- ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಪಸಂಮೀ 345 ಪಲಸೇ 2011, ಬೆಂಗಳೂರು, ದಿನಾಂಕ: 18ನೇ ಜನವರಿ 2011.

4. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಿದರ್ ಬಿ.ವಿ.ಎಸ್ಸಿ &ಎ.ಹೆಚ್. ಸ್ನಾತಕ ಪದವಿ ಕೋರ್ಸಿನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಮಾಸಿಕ ಭತ್ಯೆಯನ್ನು ಪ್ರಸ್ತುತ ರೂ. 5,000/- ದಿಂದ ರೂ. 11,000/- (ರೂಪಾಯಿ ಹನ್ನೊಂದು ಸಾವಿರ ಮಾತ್ರ) ಕ್ಕೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿದೆ.

5. ಇಂಟರ್ನ್‌ಷಿಪ್ ಮಾಸಿಕ ಭತ್ಯೆಯ ಹೆಚ್ಚಳದಿಂದ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಕರ್ನಾಟಕ ಪಶವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ತನ್ನ ಆಂತರಿಕ ಮೂಲದಿಂದ ಭರಿಸತಕ್ಕದ್ದು ಹಾಗೂ ಈ ಸಂಬಂಧ ಸರ್ಕಾರದಿಂದ ಹೆಚ್ಚುವರಿ ಅನುದಾನ ನೀಡಲಾಗುವುದಿಲ್ಲ.

6. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : ಆಇ 598 ವೆ4/2011, ದಿನಾಂಕ : 12-01-2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕೆ. ಶ್ರೀನಿವಾಸಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್.426 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.

(ಪಶುಸಂಗೋಪನೆ).

HEALTH AND FAMILY WELFARE SECRETARIAT

Sub : Awarding Contract to carry out the impact Evaluation of OD Scale-up Activities-reg.

Read : World Bank e-mail dt. 26-4-2011.

Preamble:

The World Bank assisted Karnataka health System Development and Reform Project is implemented to strengthen primary Healthcare services in Karnataka. It is felt that there is an urgent need for improvement in the quality of service in the health care delivery system in the State at all levels.

The main gaps identified at the personnel level are

a) Commitment towards service
b) Sensitiveness in dealing with the patients and their relatives.
c) Motivation
d) Service orientation
e) Managerial capacity
f) Time, people and conflict management.
g) Team spirit.

An Expression of Interest (EoI) was invited for conducting an impact Evaluation (OD Scale-up Activities) of the Programme 'Managerial Capacity Building and Attitudinal Change workshops' Category-2, 3 and 4. The same was published in the Kannada Prabha and Deccan Herald on 23-05-2011. In response to the EOI, 7 proposals were received from various firms. And these proposals are evaluated by the Evaluation Committee. The qualified firm was issued on RFP.

The RFP submitted by Administrative Staff College of India, Hyderabad was evaluated by the committee. This firm was found qualified to carryout the Impact Evaluation (OD Scale-Up Activities) of the Programme 'Managerial Capacity Building and Attitudinal Change workshops' Category-2, 3 and 4.

Negotiations were held and after the negotiations the firm has agreed to conduct the Impact evaluation (OD Scale-Up Activities) of the Programme 'Managerial Capacity Building and Attitudinal Change workshops' Category-2, 3 and 4, at the cost of Rs. 23,56,410-00 plus service tax as applicable.

The Secretary, Health and Family Welfare Department and Chairman, Programmed Steering Committee has approved the proposal, subject to ratification of the PSC for award of contract to Administrative Staff College of India, Hyderabad to carry out the impact Evaluation (OD Scale-Up Activities) of the Programme 'Managerial Capacity Building and Attitudinal Change workshops' Category-2, 3 and 4.

The World Bank has also given No objection for TOR vide e-mail read at above.

Hence, the following Order.

Government Order No. HFW/KHSDRP/OD/Impact Asst/02/11-12, Bangalore, Dated: 6th January 2012.

Under the circumstances mentioned in the preamble, Government are pleased to approve the award of contract to Administrative Staff College of India, Hyderabad to carry out the impact Evaluation (OD Scale-Up Activities) of the Programme 'Managerial Capacity Building and Attitudinal Change workshops' Category-2, 3 and 4, for a total negotiated cost of Rs. 23,56,410-00 (Rupees twentythree lakhs fiftysix thousand four huyndred and ten only) plus service tax as applicable.

The consultancy firm shall enter into an Ageement with the Project accordingly.

By Order and in the name of the Governor of Karnataka,

K.N. Ramesh

Deputy Secretary to Government (I/c)

KHSDRP

Health and Family Welfare Department

PR.427

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಒಂದು ಆಡಳಿತಾಧಿಕಾರಿಯ ಮತ್ತು ಒಂದು ಲೆಕ್ಕಪತ್ರ ಅಧೀಕ್ಷಕರು-1 ಇವರ ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಲಾ 130 ಎಲ್ಎಜಿ 79, ದಿನಾಂಕ: 07-10-1980.
2. ಸರ್ಕಾರದ ಆದೇಶ ಸಂಖ್ಯೆ: ಒಇ 168 ಪಿಪಿಇ 2005, ದಿನಾಂಕ: 18-10-2005
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಒಇ 29 ಪಿಪಿಇ 2006, ದಿನಾಂಕ: 24-06-2006
4. ಸರ್ಕಾರದ ಆದೇಶ ಸಂಖ್ಯೆ: ಒಇ 428 ಪಿಪಿಇ 2010, ದಿನಾಂಕ: 13-07-2011.
5. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂಖ್ಯೆ: ಡಿಪಿಎನ್/ಕೇಂಸ/ವಿವ/29/2011-12, ದಿನಾಂಕ: 07-07-2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 07-10-1980 ರ ಸರ್ಕಾರದ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕರ ಕಛೇರಿಗೆ ಒಂದು ಆಡಳಿತಾಧಿಕಾರಿಯ ಹುದ್ದೆಯನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ: 18-10-2005ರ ಸರ್ಕಾರದ ಆದೇಶದನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕರ ಕಛೇರಿಗೆ ಒಂದು ಲೆಕ್ಕಪತ್ರ ಅಧೀಕ್ಷಕರ ಹುದ್ದೆ (ವೇತನ ಶ್ರೇಣಿ: ರೂ. 5200-9580)ಯನ್ನು ತಾತ್ಕಾಲಿಕವಾಗಿ ಎರಡು ವರ್ಷಗಳ ಅವಧಿಗೆ ಸೃಜಿಸಲಾಗಿದ್ದು, ಮೇಲೆ (3)ರಲ್ಲಿ ಓದಲಾದ ದಿನಾಂಕ: 24-06-2006ರ ತಿದ್ದುಪಡಿ ಆದೇಶದನ್ವಯ ಲೆಕ್ಕಪತ್ರ ಅಧೀಕ್ಷಕರ ಹುದ್ದೆ-1 (ವೇತನ ಶ್ರೇಣಿ ರೂ. 5575-10620) ಎಂದು ತಿದ್ದುಪಡಿ ಮಾಡಲಾಗಿದೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ: 13-07-2011ರ ಸರ್ಕಾರದ ಆದೇಶದನ್ವಯ ಮೇಲೆ (1), (2) ಮತ್ತು (3)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಿ, ತಿದ್ದುಪಡಿ ಮಾಡಿ ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದಿರುವ ಒಂದು ಆಡಳಿತಾಧಿಕಾರಿಯ ಮತ್ತು ಒಂದು ಲೆಕ್ಕಪತ್ರ ಅಧೀಕ್ಷಕರು-1 ತಾತ್ಕಾಲಿಕ ಹುದ್ದೆಯನ್ನು ದಿನಾಂಕ: 31-03-2012ರ ವರೆಗೆ ಮುಂದುವರೆಸಲಾಗಿದೆ.

ಮೇಲೆ (5)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ದಿನಾಂಕ: 07-07-2011ರ ಪತ್ರದಲ್ಲಿ ಇಲಾಖೆಯಲ್ಲಿನ ಒಂದು ಆಡಳಿತಾಧಿಕಾರಿಯ ಮತ್ತು ಒಂದು ಲೆಕ್ಕಪತ್ರ ಅಧೀಕ್ಷಕರು-1 ಮೇಲೆ (1), (2) ಮತ್ತು (3)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಸೃಜಿಸಿ, ಕಾಲ-ಕಾಲಕ್ಕೆ ಮುಂದುವರಿಸಿಕೊಂಡು ಬಂದು ಮೇಲೆ (4)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ದಿನಾಂಕ: 31-03-2012ರ ವರೆಗೆ ಮುಂದುವರೆಸಲಾಗಿರುವ ಸದರಿ ತಾತ್ಕಾಲಿಕ ಹುದ್ದೆಗಳು ದೈನಂದಿನ ಆಡಳಿತಾತ್ಮಕ ಕಾರ್ಯದ ದೃಷ್ಟಿಯಿಂದ ಅತಿ ಅವಶ್ಯಕ ಹುದ್ದೆಗಳಾಗಿದ್ದು, ಇವುಗಳನ್ನು ಇಲಾಖೆಯ ಹಿತದೃಷ್ಟಿಯಿಂದ ಖಾಯಂಗೊಳಿಸುವುದು ಅವಶ್ಯಕವಾಗಿದೆ. ಆದ್ದರಿಂದ, ಸದರಿ ಒಂದು ಆಡಳಿತಾಧಿಕಾರಿಯ ಮತ್ತು ಒಂದು ಲೆಕ್ಕಪತ್ರ ಅಧೀಕ್ಷಕರು-1 ತಾತ್ಕಾಲಿಕ ಹುದ್ದೆಗಳನ್ನು ಖಾಯಂಗೊಳಿಸಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 300 ಪಿಪಿಇ 2011, ಬೆಂಗಳೂರು, ದಿನಾಂಕ: 20ನೇ ಜನವರಿ 2012

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಕಛೇರಿಗೆ ಹೊಂದಿಕೊಂಡಂತೆ ಈ ಮುಂದಿನ ತಃಖ್ತೆಯ ಅಂಕಣ (3)ರಲ್ಲಿನ ಸರ್ಕಾರಿ ಆದೇಶಗಳನ್ವಯ ಸೃಜನೆಯಾದ ಅಂಕಣ (2)ರಲ್ಲಿನ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಹುದ್ದೆಗಳೆಂದು ಘೋಷಿಸಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಯು ಸೃಜನೆಯಾದ ಆದೇಶ ಸಂಖ್ಯೆ ಮತ್ತು ದಿನಾಂಕ
(1)	(2)	(3)
1	ಆಡಳಿತಾಧಿಕಾರಿ	ಲಾ 130 ಎಲ್ಎಜಿ 79, ದಿನಾಂಕ: 07-10-1980
2	ಲೆಕ್ಕಪತ್ರ ಅಧೀಕ್ಷಕರು-1	ಒಇ 168 ಪಿಪಿಇ 2005, ದಿನಾಂಕ: 18-10-2005, ತಿದ್ದುಪಡಿ ಆದೇಶ ಸಂಖ್ಯೆ: ಒಇ 29 ಪಿಪಿಇ 2006, ದಿನಾಂಕ: 24-06-2006

ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ '2014 ನ್ಯಾಯಪರಿಪಾಲನೆ -00-114-ಕಾನೂನು ಸಲಹೆಗಾರರು ಮತ್ತು ಸಮೂಪದೇಶಕರು-0-02 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು' ಇದರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂ: ಎಫ್‌ಡಿ 58 ಎಸ್‌ಆರ್‌ಎಸ್ 79, ದಿನಾಂಕ: 27-09-1979ರ ಕಂಡಿಕೆ 2(iii) ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು-ಬಿ)

ಪಿ.ಆರ್. ನಂ. 428

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ವಿ.ಎಸ್. ಶಾನ್‌ವಾಡ್ ನಿವೃತ್ತ ಡಿವೈ.ಎಸ್.ಪಿ. ರವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ :
1. ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: ಸಿಬಿ(5)/43/08-09, ದಿನಾಂಕ: 08-04-2009.
2. ಸರ್ಕಾರದ ಆದೇಶ ಸಂಖ್ಯೆ: ಒಇ 445 ಪೊಸಿಪ 2008 ದಿನಾಂಕ: 14-02-2011.
3. ವಿಚಾರಣಾಧಿಕಾರಿಗಳು: ಪೊಲೀಸ್ ಅಧೀಕ್ಷಕರು, ರಾಜ್ಯ ಗುಪ್ತವಾರ್ತೆ, ಬೆಳಗಾಂ ರವರ ಪತ್ರ ಸಂಖ್ಯೆ: ಬೆಳಗಾವಿ/ಗುವಾ/ಇ.ವಿ/614/2011 ದಿನಾಂಕ: 17-12-2011.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ವಿ.ಎಸ್. ಶಾನ್‌ವಾಡ್ ನಿವೃತ್ತ ಡಿವೈ.ಎಸ್.ಪಿ. ರವರ ಈ ಹಿಂದೆ ಐ.ಜಿ.ಪಿ. ಕಛೇರಿ ಉತ್ತರ ವಲಯ, ಬೆಳಗಾಂನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಜೆ.ಎಂ.ಎಫ್.ಸಿ. ಹುಕ್ಕೇರಿ ನ್ಯಾಯಾಲಯವು ಸಿ.ಸಿ. ಸಂಖ್ಯೆ: 501/99ರಲ್ಲಿ ದಿನಾಂಕ: 07-11-2000 ರಂದು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಬಗ್ಗೆ 343 ದಿನಗಳು ವಿಳಂಬ ಮಾಡಿರುವ ಆರೋಪದ ಮೇರೆಗೆ ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ರವರು ದಿನಾಂಕ: 14-07-2008 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಅಧಿಕಾರಿಗಳು ಎಸಗಿರುವ ಆರೋಪಗಳು ಮೇಲ್ನೋಟಕ್ಕೆ ಸಾಭೀತಾಗಿರುವುದರಿಂದ ಶಿಸ್ತು ಕ್ರಮಕೈಗೊಳ್ಳಲು ಕೆ.ಸಿ.ಎಸ್.ಆರ್. ನಿಯಮ 213 ಮತ್ತು 214 ನ್ನು ಓದಿಕೊಂಡಂತೆ ಕೆ.ಎಸ್.ಪಿ. (ಡಿ.ಪಿ) ನಿಯಮಗಳು, 1965ರ ನಿಯಮ 6 ರಡಿಯಲ್ಲಿ ಇಲಾಖೆ ವಿಚಾರಣೆಗೆ ಆದೇಶಿಸಿ ಪ್ರಕರಣವನ್ನು ಪೊಲೀಸ್ ಅಧೀಕ್ಷಕರು, ರಾಜ್ಯ ಗುಪ್ತವಾರ್ತೆ, ಬೆಳಗಾವಿ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲು ಮತ್ತು ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲು ಪೊಲೀಸ್ ಮಹಾ ನಿರ್ದೇಶಕರು ರವರು ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 213 ಮತ್ತು 214 ಸೇರಿಸಿಕೊಂಡು ಓದಿಕೊಂಡಂತೆ ಶ್ರೀ ವಿ.ಎಸ್. ಶಾನ್‌ವಾಡ್, ಡಿವೈ.ಎಸ್.ಪಿ (ನಿವೃತ್ತ) ರವರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿರುವ ಬಗ್ಗೆ ಇಲಾಖಾ ಶಿಸ್ತು ಕ್ರಮ ಜರುಗಿಸಲು ಅವಕಾಶವಿರುವುದರಿಂದ ಶ್ರೀ ವಿ.ಎಸ್. ಶಾನ್‌ವಾಡ್ ನಿವೃತ್ತ ಡಿವೈ.ಎಸ್.ಪಿ. ರವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 213 ಮತ್ತು 214ನ್ನು ಓದಿಕೊಂಡಂತೆ ಕೆ.ಎಸ್.ಪಿ (ಡಿ.ಪಿ) ನಿಯಮಗಳು, 1965ರ ನಿಯಮ 6ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ ಪ್ರಕರಣದಲ್ಲಿ ಎಸ್.ಪಿ. ಗುಪ್ತವಾರ್ತೆ, ಬೆಳಗಾಂ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾಧಿಕಾರಿ ಹಾಗೂ ಎಸ್.ಪಿ. ರಾಜ್ಯ ಗುಪ್ತವಾರ್ತೆ, ಬೆಳಗಾಂ ಇವರು ತಮ್ಮ ದಿನಾಂಕ: 17-12-2011ರ ಪ್ರಸ್ತಾವನೆಯಲ್ಲಿ ಆರೋಪಿತ ಅಧಿಕಾರಿ ಶ್ರೀ ವಿ.ಎಸ್. ಶಾನ್‌ವಾಡ್ ನಿವೃತ್ತ ಡಿವೈ.ಎಸ್.ಪಿ. ರವರು ದಿನಾಂಕ: 04-12-2011 ರಂದು ಮೃತಪಟ್ಟಿರುವುದಾಗಿ ವರದಿ ಮಾಡಿ, ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿರುತ್ತಾರೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 10 ಸೇಇವಿ 03 ದಿನಾಂಕ: 12-11-2003 ರಲ್ಲಿ ಇಲಾಖಾ ವಿಚಾರಣೆ ನಡೆಯುತ್ತಿದ್ದಾಗ, ಸರ್ಕಾರಿ ನೌಕರನು ಮೃತನಾದರೆ, ಅಂತಹ ಸರ್ಕಾರಿ ನೌಕರರಿಂದ ಆರ್ಥಿಕ ನಷ್ಟ ಉಂಟಾಗಿದ್ದರೆ ತೆಗೆದುಕೊಳ್ಳಬಹುದಾದ ಕ್ರಮವನ್ನು ವಿವರಿಸಲಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಆಗಿರುವ ತೀವ್ರ ವಿಳಂಬದ ಬಗ್ಗೆ ಉಚ್ಛ ನ್ಯಾಯಾಲಯವು ಆದೇಶಿಸಿದಂತೆ ನಿವೃತ್ತ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿತ್ತು. ಈ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸಲು ವಿಳಂಬವಾಗಿದೆಯೇ ವಿನಹ ಯಾವುದೇ ಆರ್ಥಿಕ ನಷ್ಟ ಸರ್ಕಾರಕ್ಕೆ ಉಂಟುಮಾಡಿರುವ ಬಗ್ಗೆ ಪ್ರಸ್ತಾಪವಿರುವುದಿಲ್ಲ. ಆದುದರಿಂದ ಮೃತ ಪಟ್ಟ ಅಧಿಕಾರಿಯ (ನಿವೃತ್ತ ನೌಕರರ) ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 445 ಪೊಸಿಪ 2008 ಬೆಂಗಳೂರು, ದಿನಾಂಕ: 20-01-2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಶ್ರೀ ವಿ.ಎಸ್. ಶಾನ್‌ವಾಡ್ (ನಿ) ಡಿ.ವೈ.ಎಸ್.ಪಿ. ರವರು ದಿನಾಂಕ: 04-12-2011 ರಂದು ಮೃತಪಟ್ಟಿರುವುದರಿಂದ ಹಾಗೂ ಪ್ರಸ್ತಾಪಿತ ಪ್ರಕರಣದಲ್ಲಿ ಅಧಿಕಾರಿಗಳಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಆಗಿಲ್ಲದಿರುವುದರಿಂದ ಮೃತ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. ನಂ. 429

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಜಿಲ್ಲಾ ಮುದ್ರಣಾಲಯ, ತುಮಕೂರು ಹಾಗೂ ಸರ್ಕಾರಿ ವಿಭಾಗೀಯ ಮುದ್ರಣಾಲಯ ಗುಲ್ಬರ್ಗಾ, ಇಲ್ಲಿನ ಯಂತ್ರಗಳನ್ನು ಸ್ಥಳಾಂತರಿಸಲು ವೆಚ್ಚ ಭರಿಸುವ ಬಗ್ಗೆ.

ಓದಲಾಗಿದೆ :
1. ದಿನಾಂಕ: 11-05-2010 ರ ಸರ್ಕಾರದ ಆದೇಶ ಸಂಖ್ಯೆ: 569 ಇಎಸ್‌ಡಬ್ಲ್ಯೂ 2009.
2. ದಿನಾಂಕ: 30-10-2010ರ ಸರ್ಕಾರದ ಪತ್ರ ಸಂಖ್ಯೆ: ಇಡಿ 569 ಇಎಸ್‌ಡಬ್ಲ್ಯೂ 2009.
3. ದಿನಾಂಕ: 23-08-2011 ರ ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ: ಡಿಪಿಎಸ್/ಯೋಜನಾ-44/1578/2011-12.

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ತುಮಕೂರು ಸರ್ಕಾರಿ ಮುದ್ರಣಾಲಯವನ್ನು ಶಾಶ್ವತವಾಗಿ ಮುಚ್ಚಿ ಸದರಿ ಮುದ್ರಣಾಲಯದಲ್ಲಿರುವ ಯಂತ್ರೋಪಕರಣಗಳನ್ನು ಮೈಸೂರು ಮುದ್ರಣಾಲಯಕ್ಕೆ ಸ್ಥಳಾಂತರಿಸುವಂತೆ ಆದೇಶಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ತುಮಕೂರು ಜಿಲ್ಲಾ ಮುದ್ರಣಾಲಯದಲ್ಲಿರುವ ಕೆಲವೊಂದು ಯಂತ್ರಗಳನ್ನು ಕೇಂದ್ರ ಮುದ್ರಣಾಲಯದ ಪೀಣ್ಯದ ಕಟ್ಟಡಕ್ಕೆ ಸ್ಥಳಾಂತರಿಸಿ ಅಲ್ಲಿ ಒಂದು ಭದ್ರತಾ ಮುದ್ರಣಾಲಯವನ್ನು ಸ್ಥಾಪಿಸಲು ಅನುಮತಿಸಲಾಗಿರುತ್ತದೆ.

3. ಮೇಲೆ (3) ರಲ್ಲಿ ಓದಲಾದ ನಿರ್ದೇಶಕರ ಪ್ರಸ್ತಾವನೆಯಲ್ಲಿ ದಿನಾಂಕ: 11-05-2010 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 569 ಇಎಸ್‌ಡ್ಲ್ಯೂ 2009, ಹಾಗೂ ದಿನಾಂಕ: 30-10-2010 ರ ಪತ್ರದನ್ವಯ ತುಮಕೂರು ಮುದ್ರಣಾಲಯದಲ್ಲಿನ ಯಂತ್ರಗಳನ್ನು ಹಾಗೂ ಗುಲ್ಬರ್ಗಾ ವಿಭಾಗೀಯ ಮುದ್ರಣಾಲಯದ ಯಂತ್ರಗಳನ್ನು ಸ್ಥಳಾಂತರಿಸಲು ತಗಲುವ ಅಂದಾಜು ವೆಚ್ಚ ರೂ. 20 ಲಕ್ಷಗಳನ್ನು ಭರಿಸಲು ಇಲಾಖೆಯಲ್ಲಿನ ಲೆಕ್ಕ ಶೀರ್ಷಿಕೆ 2058-00-103-0-01-071 (ಕಟ್ಟಡ ವೆಚ್ಚಗಳು) ಇದರಡಿ ಉಳಿಕೆ ಇರುವ ರೂ. 53.73 ಲಕ್ಷಗಳ ಅನುದಾನದ ಮಿತಿಯಲ್ಲಿ ಭರಿಸಲು ಅನುಮತಿಸುವಂತೆ ಕೋರಿರುತ್ತಾರೆ.

4. ಸರ್ಕಾರಿ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 165 ಇಎಸ್‌ಡ್ಲ್ಯೂ 2011 ಬೆಂಗಳೂರು, ದಿನಾಂಕ: 18-01-2012

5. ಸರ್ಕಾರಿ ಜಿಲ್ಲಾ ಮುದ್ರಣಾಲಯ, ತುಮಕೂರು ಹಾಗೂ ಗುಲ್ಬರ್ಗಾ ಇಲ್ಲಿನ ಯಂತ್ರೋಪಕರಣಗಳನ್ನು ಅನುಬಂಧಗಳಲ್ಲಿ ಸೂಚಿಸಿದಂತೆ ಕರ್ನಾಟಕ ಪಾರದರ್ಶಕ ಅಧಿನಿಯಮದಡಿಯಲ್ಲಿ ಮುಕ್ತ ಟೆಂಡರ್ ಕರೆದು ಇಲಾಖೆಯ ಲೆಕ್ಕ ಶೀರ್ಷಿಕೆ 2058-00-103-0-01-071 (ಕಟ್ಟಡ ವೆಚ್ಚಗಳು) ಅಡಿಯಲ್ಲಿ ಉಳಿದಿರುವ ಅನುದಾನದಿಂದ ರೂ. 20.00 (ಇಪ್ಪತ್ತು ಲಕ್ಷ ರೂಪಾಯಿಗಳು) ಲಕ್ಷಕ್ಕೆ ಸೀಮಿತಗೊಳಿಸಿ ವೆಚ್ಚವನ್ನು ಭರಿಸಿ ಯಂತ್ರಗಳನ್ನು ಸ್ಥಳಾಂತರಿಸಲು ಅನುಮತಿಸಿ ಆದೇಶಿಸಿದೆ.

6. ಈ ಆದೇಶವನ್ನು ದಿನಾಂಕ: 26-09-2011 ರ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಿಇ 787 ಐಎಫ್‌ಎಸ್ 2011 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)
ಶಿಕ್ಷಣ ಇಲಾಖೆ.

ಅನುಬಂಧ - 1

Shifting of Machinery from Government District Press Tumkur to Government Text Book Press, Mysore

Sl. No.	Description	No. of M/c's
1	Ajit Web Offset Machine Single Colour	1
2	Print wel 4 Colour Web Offset Machine	1
3	HMT A2 Sheet Fed double colour Machine	2
4	HMT Programme Cutting Machine	1
5	Six Clamp Wellbound Machine (Cutting M/C)	1
6	Trident Three Knife Trimmer	2
7	Print Tool Three Size Cutting Machine	1
8	Harbajan Wire Stitching Machine	2

ಅನುಬಂಧ - 2

Shifting of Machinery from Government District Press Tumkur to Security Press, Peenya, Bangalore

Sl. No.	Description	No. of M/c's
1	Ajit Web Offset Machine Single Colour	1
2	Print Wel 2 Colour Web Offset Machine	1
3	HMT A2 Sheet Fed double colour Machine	1
4	HMT A1 Sheet Fed double colour Machine	1

5	Park-92 Programmable paper Cutting Machine-1	2
6	Harbajan Wire Stiching Machine	3
7	Paste up table	2
8	Plate Exposure	2
9	Plate Processor	1
10	Computer	1
11	3 KVA UPS System	1
12	Xerox Copier	1
13	Electronic Weighing Machine	1

ಅನುಬಂಧ – 3

Shifting of Machinery from Gulbarga from one unit of the Government Press to another unit

Sl. No.	Description	No. of M/c's
1	Web Offset Machine, Ashoka 900, A-1 size	1
2	Original perfecta cutting machine	1
3	Printing down frame	1
4	Wire stitching machines	2

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ

ಪಿ.ಆರ್. 430

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 180 ಎಸ್‌ಒಹೆಚ್ 2010 ಬೆಂಗಳೂರು, ದಿನಾಂಕ: 12–01–2012

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 180 ಎಸ್‌ಒಹೆಚ್ 2010. ದಿನಾಂಕ: 15–06–2011ರ ಅನುಬಂಧ–1 ರಲ್ಲಿನ ಕ್ರಮ ಸಂಖ್ಯೆ: 1778 ರಲ್ಲಿರುವ 'ಮೊಹಮ್ಮದ್ ಮ್ಯಸೂದ್ ಅಹ್ಮದ್" ಎಂಬುದರ ಬದಲಿಗೆ 'ಎಂ.ಡಿ. ಮಕ್ಸೂದ್ ಅಹ್ಮದ್" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಟಿ. ಜಯರಾಂ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ)

ಪಿ.ಆರ್. ನಂ. 431

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಆಕುಕ 47 ಪಿಟಿಡಿ 2011 ಬೆಂಗಳೂರು, ದಿನಾಂಕ: 17–01–2012

ಸರ್ಕಾರದ ಆದೇಶ ಸಂಖ್ಯೆ: ಆಕುಕ 47 ಪಿಟಿಡಿ 2011, ದಿನಾಂಕ: 23–09–2011ರ ಆದೇಶ ಭಾಗದ ಷರತ್ತುಗಳ ಕ್ರಮ ಸಂಖ್ಯೆ: 1 ಹಾಗೂ 7ಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸೇರ್ಪಡೆ ಮಾಡಿದೆ.

ಕ್ರಮ ಸಂಖ್ಯೆ: 1 : ಪ್ರಕೃತಿ ಚಿಕಿತ್ಸೆ ಮತ್ತು ಯೋಗದಲ್ಲಿ ಈವರೆವಿಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಪ್ರಾರಂಭವಾಗಿಲ್ಲದೆ ಇರುವುದರಿಂದ ಈ ವರ್ಷದ ಮಟ್ಟಿಗೆ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾ ವಿದ್ಯಾಲಯ, ಮೈಸೂರು, ಇಲ್ಲಿ BNYS ಪದವಿ ಪಡೆದವರನ್ನು ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ: 7 : ಸಕ್ಷಮ ಪ್ರಾಧಿಕಾರಿಯಾಗಿ "ಆಯುಷ್ ನಿರ್ದೇಶಕರು" ಕಾರ್ಯ ನಿರ್ವಹಿಸತಕ್ಕದ್ದು ಎಂದು ಸೇರಿಸಿಕೊಳ್ಳತಕ್ಕದ್ದು.

ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎನ್. ಹರಿಣೆಯಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. ನಂ. 432

HEALTH AND FAMILY WELFARE SECRETARIAT

CORRIGENDUM

No.HFW/KHSDRP/MS Office & NA/26/10-11, Bangalore Dated: 20-01-2012

In the Government Order No: HFW/KHSDRP/MS Office & NA/26/10-11, dt: 31.12.2011, in the order portion at 3rd line instead of **"Rs. 1,09,40,248/-** it shall be read as **Rs. 1,09,40,248/- excluding taxes.**

By Order and in the name of the Governor of Karnataka,

K.N. Ramesh

Deputy Secretary to Government (I/c)

KHSDRP

Health and Family Welfare Department

PR. 433

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಕೇಂದ್ರ ಮುದ್ರಣಾಲಯ, ಸರ್ಕಾರಿ ಮುದ್ರಣಾಲಯ, ಪೀಣ್ಯ ಶೆಡ್ ಮತ್ತು ಸರ್ಕಾರಿ ಹೊರವಲಯ ಮುದ್ರಣಾಲಯಗಳಲ್ಲಿ ಮಂಜೂರಾದ ಹುದ್ದೆಗಳನ್ನು ಅಪೆಂಡಿಕ್ಸ್-'ಬಿ' ನಲ್ಲಿ ಒಗ್ಗೂಡಿಸುವ ಬಗ್ಗೆ ಸರ್ಕಾರದ ಮಂಜೂರಾತಿ ಆದೇಶ.

ಓದಲಾಗಿದೆ: (1) ದಿನಾಂಕ: 10-07-1996 ರ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 96.

(2) ದಿನಾಂಕ: 30-11-2009, 03-05-2011 ಹಾಗೂ ದಿನಾಂಕ: 18-08-2011 ರ ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ: ಡಿಪಿಎಸ್/ಸಿಬ್ಬಂದಿ/ಸಿಸಿಎ/ಪಿ(ಪಿ)193/2009-10/ಸಿಸಿಎ-130(09)/1477/2011-12.

ಪ್ರಸ್ತಾವನೆ :

1. ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಇಂಥಹ ಪ್ರಕರಣಗಳನ್ನು ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ನಿರ್ದೇಶಕರ ಪ್ರಸ್ತಾವನೆಗಳಲ್ಲಿ ಸರ್ಕಾರಿ ಕೇಂದ್ರ ಮುದ್ರಣಾಲಯ, ಪೀಣ್ಯ ಮತ್ತು ಸರ್ಕಾರಿ ಮುದ್ರಣಾಲಯ, ಪೀಣ್ಯ ಶೆಡ್ ಮುದ್ರಣಾಲಯಗಳನ್ನು ಮೈಸೂರು ರಸ್ತೆ, ಕೆಂಗೇರಿಯ ನೂತನ ಕಟ್ಟಡದಲ್ಲಿರುವ ಸರ್ಕಾರಿ ಕೇಂದ್ರ ಮುದ್ರಣಾಲಯಕ್ಕೆ ಸ್ಥಳಾಂತರಿಸಲಾಗಿರುತ್ತದೆಂದು ನಿರ್ದೇಶಕರು ತಿಳಿಸಿರುತ್ತಾರೆ. ಅಲ್ಲದೆ ನೂತನ ಕಟ್ಟಡದ ಪಕ್ಕದಲ್ಲಿಯೇ ಸರ್ಕಾರಿ ಹೊರವಲಯ ಮುದ್ರಣಾಲಯವು ಸಹ ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಒಂದೇ ಆವರಣದಲ್ಲಿ ಮೂರು ಮುದ್ರಣಾಲಯಗಳು ಕಾರ್ಯ ನಿರ್ವಹಿಸುತ್ತಿದೆ. ಈ ಮುದ್ರಣಾಲಯಗಳಿಗೆ ಪ್ರತ್ಯೇಕವಾದ ಮಂಜೂರಾದ ವೃಂದ ಬಲವಿರುತ್ತದೆ. ಹಾಗೂ ಅಪೆಂಡಿಕ್ಸ್-'ಬಿ' ರಲ್ಲಿಯೂ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ. ಮೂರು ಮುದ್ರಣಾಲಯಗಳಿಗೂ ಬೇರೆ ಬೇರೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿರುತ್ತಾರೆ. ಪ್ರಸ್ತುತ ನೌಕರರ ಸಂಬಳ ಮತ್ತು ಇತರೇ ಭತ್ಯೆಗಳನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಡ್ರಾ ಮಾಡಲಾಗುತ್ತಿರುವುದರಿಂದ ಒಂದೇ ಕಡೆ ಎಲ್ಲಾ ನೌಕರರ ವೇತನಗಳನ್ನೂ ಅಭ್ಯರ್ಥಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿರುತ್ತದೆ. ಇದರಿಂದ ಲೆಕ್ಕ ಪತ್ರ ಮತ್ತು ಆಡಳಿತಕ್ಕೆ ಸಂಬಂಧಿಸಿದ ಸಿಬ್ಬಂದಿಗಳನ್ನು ಕಡಿತಗೊಳಿಸಲೂ ಸಹ ಅನುಕೂಲವಾಗುತ್ತದೆ. ಅಲ್ಲದೇ, ಕೆಲವೊಂದು ವಿಭಾಗಗಳನ್ನೂ ಸಹ ಒಗ್ಗೂಡಿಸಬಹುದಾಗಿರುತ್ತದೆ. ಇದರಿಂದ, ಮೇಲ್ವಿಚಾರಣ ವೆಚ್ಚವನ್ನೂ ಸಹ ಕಡಿಮೆಗೊಳಿಸಬಹುದಾಗಿರುತ್ತದೆ. ಎರಡೂ ಮುದ್ರಣಾಲಯಗಳೂ ಒಂದೇ ಕಟ್ಟಡದಲ್ಲಿರುತ್ತವೆ. ಮತ್ತು ಇನ್ನೊಂದು ಮುದ್ರಣಾಲಯವು ಪಕ್ಕದ ಕಟ್ಟಡದಲ್ಲಿ ಇರುತ್ತದೆ. ಇಲ್ಲಿನ ಸಿಬ್ಬಂದಿಗಳನ್ನು ಈ ಮುದ್ರಣಾಲಯಗಳಲ್ಲಿಯೇ ಕೆಲಸ ಹಂಚಿಕೆ ಮಾಡಬೇಕಾದರೆ ವರ್ಗಾವಣೆ ಅವಧಿಯಲ್ಲಿಯೇ ಮಾಡಬೇಕು. ಇದನ್ನು ವರ್ಗಾವಣೆ ಎಂಬಂತೆ ಪರಿಗಣಿಸಬೇಕಾಗುತ್ತದೆ. ಇದು ಈ ಮುದ್ರಣಾಲಯಗಳ ಕಾರ್ಯ ವೈಖರಿ ಮೇಲೆ ದುಷ್ಪರಿಣಾಮ ಬೀರುತ್ತಿರುತ್ತದೆ. ಆದ್ದರಿಂದ, ನೂತನ ಕಟ್ಟಡಕ್ಕೆ ಸ್ಥಳಾಂತರಿಸಿರುವ ಸರ್ಕಾರಿ ಕೇಂದ್ರ ಮತ್ತು ಪೀಣ್ಯ ಶೆಡ್ ಮುದ್ರಣಾಲಯ ಹಾಗೂ ಸರ್ಕಾರಿ ಹೊರವಲಯ ಮುದ್ರಣಾಲಯಗಳಲ್ಲಿ ಮಂಜೂರಾದ ವೃಂದ ಬಲವನ್ನು ಒಗ್ಗೂಡಿಸಿ ಅಪೆಂಡಿಕ್ಸ್-'ಬಿ' ರಲ್ಲಿ ಸರ್ಕಾರಿ ಕೇಂದ್ರ ಮುದ್ರಣಾಲಯ, ಮೈಸೂರು ರಸ್ತೆ, 8ನೇ ಮೈಲಿ, ಬೆಂಗಳೂರು ಎಂದು ತಿದ್ದುಪಡಿ ಮಾಡುವುದರಿಂದ ಇಲಾಖೆಯ ಆಡಳಿತಾತ್ಮಕ ಕಾರ್ಯಗಳಿಗೆ ಅನುಕೂಲವಾಗುತ್ತದೆ ಹಾಗೂ ಮುಂದೆ ಆರ್ಥಿಕ ಮಿತವ್ಯಯ ಸಾಧಿಸಲು ಸಾಧ್ಯವಾಗುತ್ತದೆಂದು ತಿಳಿಸುತ್ತಾ ಈ ಸಂಬಂಧ ಮುದ್ರಣಾಲಯಗಳಿಗೆ ಅನುಬಂಧ-1 ಮತ್ತು ಅನುಬಂಧ-2 ರಂತೆ ಮಂಜೂರಾದ ಹುದ್ದೆಗಳನ್ನು ಒಗ್ಗೂಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

3. ಸರ್ಕಾರಿ ಮುದ್ರಣ ಇಲಾಖೆಯ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 193 ಇಎಸ್‌ಡಬ್ಲ್ಯೂ, 2011, ಬೆಂಗಳೂರು, ದಿನಾಂಕ: 20-01-2012

ಬೆಂಗಳೂರಿನ ಪೀಣ್ಯ ಸರ್ಕಾರಿ ಮುದ್ರಣಾಲಯ ಮತ್ತು ಪೀಣ್ಯ ಶೆಡ್ ಸರ್ಕಾರಿ ಮುದ್ರಣಾಲಯಗಳನ್ನು ಮೈಸೂರು ರಸ್ತೆ, ಕೆಂಗೇರಿಯಲ್ಲಿರುವ ಸರ್ಕಾರಿ ಕೇಂದ್ರ ಮುದ್ರಣಾಲಯದ ನೂತನ ಕಟ್ಟಡಕ್ಕೆ ಸ್ಥಳಾಂತರಿಸಿರುವ ಹಿನ್ನೆಲೆಯಲ್ಲಿ ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನಮೂದಿಸಿರುವಂತೆ ಸದರಿ ಮುದ್ರಣಾಲಯಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಒಗ್ಗೂಡಿಸಿ ಅಪೆಂಡಿಕ್ಸ್-'ಬಿ' ನಲ್ಲಿ ಒಟ್ಟಿಗೆ ಸೇರಿಸಿ ಬೆಂಗಳೂರಿನ ಸರ್ಕಾರಿ ಕೇಂದ್ರ ಮುದ್ರಣಾಲಯದಡಿ ತರಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 12-12-2011 ರ ಆರ್ಥಿಕ ಇಲಾಖೆಯ ಅ. ಟಿ. ಸಂಖ್ಯೆ: ಆಇ 826 ವೆಚ್ಚ-8 2011 ರಲ್ಲಿನ ಸಹಮತಿಯಂತೆ ಹಾಗೂ ದಿನಾಂಕ: 10-07-1996 ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ

ಸರ್ಕಾರಿ ಕೇಂದ್ರ ಮುದ್ರಣಾಲಯ, ಶೆಡ್ ಘಟಕ ಹಾಗೂ ಸರ್ಕಾರಿ ಹೊರವಲಯ ಮುದ್ರಣಾಲಯ ಇಲ್ಲಿ ಮಂಜೂರಾದ ಹುದ್ದೆಗಳ ವಿವರಣಾ ಪಟ್ಟಿ (ಅನುಬಂಧ-1)

Sl. No.	Name of the Cadre	Sanctioned Posts in Govt. Central Press	Sanctioned Posts in Govt. Press Shed	Sanctioned Posts in Govt. Sub-urban Press	Total
1	2	3	4	5	6
1	Director	1			1
2	Joint Director	1		1	2
3	Sr. Dy. Director	1			1
4	Dy. Director (Acct. & Ad)	1			1
5	Asst. Director (Non-Tech)	2	1	1	4
6	Asst. Director (Tech)	4	1	2	7
7	Labour Welfare Officer	1			1
8	Medical Officer	1			1
9	Audit Superintendent	1			1
10	Superintendent (M)	5	1	2	8
11	Chief Cost Accountant	1			1
12	Cost Accountant	2		2	4
13	F.D.A. (Auditor)	1		1	2
14	F.D.A. (M)	10	2	5	17
15	Stenographer	1		2	3
16	Senior Typist	1			1
17	S.D.A. (M)	10	4	10	24
18	Typist	2	1	1	4
19	Nurse			1	1
20	Pharmacist			1	1
21	Daffedar		1		1
22	Gardner	1			1
23	Attender	4	1	3	8
24	Lorry Driver	1			1
25	Jeep Driver	1			1
26	Driver	3		1	4
27	Peon	11	2	6	19
28	Supervisor	7		6	13
29	Artist	1		2	3
30	Foreman	14	6	17	37
31	Mechanical Foreman	1		1	2
32	Chief Examiner	2			2
33	Deputy Chief Examiner	1		1	2
34	Superintendent (1)	2		1	3
35	Senior Proof Examiner	8	3	4	15
36	Technical Assistant	2	1	4	7
37	F.D.A. (Indl)	6		5	11
38	S.D.A. (Indl)	15	10	10	35
39	Junior Proof Examiner	17	11	7	35
40	Electrician	1		1	2
41	Senior Offset Printer	5		7	12
42	Offset Printer	7		15	22
43	Asst. Offset Printer	22		20	42
44	Sr. D.T.P. Operator	4		3	7
45	Asst. D.T.P. Operator	15		9	24
46	Chief Time Keeper	1			1
47	Time Keeper	1		2	3
48	Gate Keeper	1		1	2

49	Asst. Gate Keeper	1		2	3
50	Senior Binder	15	11	12	38
51	Binder	30	20	20	70
52	Asst. Binder	28	10	95	133
53	Head Caster	2	1	2	5
54	Caster	6		5	11
55	Assistant Caster			5	5
56	Sr. Packer		9	2	11
57	Head Packer		2	1	3
58	Packer	6	4	8	18
59	Lino Mono Operator	4	5	7	16
60	Senior Compositors	12	15	20	47
61	Compositor	42	32	44	118
62	Senior Machine Minder	15	5	10	30
63	Machine Minder	22	12	26	60
64	Rubber Stamp Caster	2			2
65	Senior Plate Maker	2		4	6
66	Plate Maker	4		5	`9
67	Wireman			1	1
68	Mechanic	2	1	2	5
69	Assistant Mechanic			1	1
70	Attender (1)	2	2	4	8
71	Watchman	3	2	2	7
72	Night Watchman			1	1
73	Sweeper/Scavenger	7	2	`11	20
74	Head Carpenter			2	2
	Total	405	178	447	1030

ಸರ್ಕಾರಿ ಕೇಂದ್ರ ಮುದ್ರಣಾಲಯ, ಶೆಡ್ ಘಟಕ ಹಾಗೂ ಸರ್ಕಾರಿ ಹೊರವಲಯ ಮುದ್ರಣಾಲಯ ಇಲ್ಲಿ ಮಂಜೂರಾದ ಹುದ್ದೆಗಳನ್ನು ಒಗ್ಗೂಡಿಸಿದ ತುಲನಾತ್ಮಕ ಪಟ್ಟಿ (ಅನುಬಂಧ-2)

Sl. No.	Name of the Cadre	Sanctioned Posts in Govt. Central Press Mysore Road, Bangalore
1	2	3
1	Director	1
2	Joint Director	2
3	Sr. Dy. Director	1
4	Dy. Director (Acct. & Ad)	1
5	Asst. Director (Non-Tech)	4
6	Asst. Director (Tech)	7
7	Labour Welfare Officer	1
8	Medical Officer	1
9	Audit Superintendent	1
10	Superintendent (M)	8
11	Chief Cost Accountant	1
12	Cost Accountant	4
13	F.D.A. (Auditor)	2
14	F.D.A. (M)	17
15	Stenographer	3
16	Senior Typist	1
17	S.D.A. (M)	24
18	Typist	4
19	Nurse	1
20	Pharmacist	1
21	Daffedar	1
22	Gardner	1

23	Attender	8
24	Lorry Driver	1
25	Jeep Driver	1
26	Driver	4
27	Peon	19
28	Supervisor	13
29	Artist	3
30	Foreman	37
31	Mechanical Foreman	2
32	Chief Examiner	2
33	Deputy Chief Examiner	2
34	Superintendent (I)	3
35	Senior Proof Examiner	15
36	Technical Assistant	7
37	F.D.A. (Indl)	11
38	S.D.A. (Indl)	35
39	Junior Proof Examiner	35
40	Electrician	2
41	Senior Offset Printer	12
42	Offset Printer	22
43	Sr. D.T.P. Operator	7
44	Asst. Offset Printer	42
45	Asst. D.T.P. Operator	24
46	Chief Time Keeper	1
47	Time Keeper	3
48	Gate Keeper	2
49	Asst. Gate Keeper	3
50	Senior Binder	38
51	Binder	70
52	Asst. Binder	133
53	Head Caster	5
54	Caster	11
55	Assistant Caster	5
56	Sr. Packer	11
57	Head Packer	3
58	Packer	18
59	Lino Mono Operator	16
60	Senior Compositors	47
61	Compositor	118
62	Senior Machine Minder	30
63	Machine Minder	60
64	Rubber Stamp Caster	2
65	Senior Plate Maker	6
66	Plate Maker	9
67	Wireman	1
68	Mechanic	5
69	Assistant Mechanic	1
70	Attender (I)	8
71	Watchman	7
72	Night Watchman	1
73	Sweeper/Scavenger	20
74	Head Carpenter	2
	Total	**1030**

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ

ಪಿ.ಆರ್. 434

ಶಿಕ್ಷಣ ಸಚಿವಾಲಯ

ವಿಷಯ : ಚಿಕ್ಕಬಳ್ಳಾಪುರ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಬೋಧಕ ಸಿಬ್ಬಂದಿಗೆ ಪದನಾಮದೊಂದಿಗೆ ಪರಿಷ್ಕರಿಸಿದ ವೇತನ ಶ್ರೇಣಿಯನ್ನು ನೀಡುವ ಬಗ್ಗೆ.

ಓದಲಾಗಿದೆ: (1) ದಿನಾಂಕ: 16-02-2010 ರ ಸರ್ಕಾರದ ಆದೇಶ ಸಂಖ್ಯೆ:ಇಡಿ 121 ಪಿಟಿಐ 2009.

(2) ದಿನಾಂಕ: 11-02-2011 ರ ಸರ್ಕಾರದ ಆದೇಶ ಸಂಖ್ಯೆ:ಇಡಿ 366 ಪಿಟಿಐ 2010.

(3) ದಿನಾಂಕ: 10-03-2011 ರ ಚಿಕ್ಕಬಳ್ಳಾಪುರ ಸರ್ಕಾರಿ ಟಿ.ಟಿ.ಐ.ನ ಬೋಧಕ ಸಿಬ್ಬಂದಿಯವರ ಮನವಿ.

(4) ದಿನಾಂಕ: 03-06-2011 ರ ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಪತ್ರ ಸಂಖ್ಯೆ: ಶಿತ6, ಹಸ್ತಾಂತರ 59/2010-11/17.

(5) ದಿನಾಂಕ: 03-12-2011 ರ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪತ್ರ ಸಂಖ್ಯೆ: ಸಿ(1)ಇತರೆ.ಶಿ.ತ.ಸಂ.ಪ್ರಾ.ಹು.ನೇ-11/2011-12.

ಪ್ರಸ್ತಾವನೆ :

1. ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಚಿಕ್ಕಬಳ್ಳಾಪುರ ನಗರಸಭೆಯ ಆಡಳಿತದಲ್ಲಿರುವ ಡಿ.ಎಡ್., ಕಾಲೇಜನ್ನು ಬೋಧಕ/ಬೋಧಕೇತರ ಸಿಬ್ಬಂದಿ ಸಮೇತ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆಗಳ ಸ್ನಾತಕೋತ್ತರ ಪದವಿ ಪಡೆದ ಬೋಧಕ ಸಿಬ್ಬಂದಿ ವೇತನ ಶ್ರೇಣಿಯನ್ನು 5ನೇ ವೇತನ ಆಯೋಗದ ವರದಿಯನ್ವಯ ಪರಿಷ್ಕರಿಸಿ ಆದೇಶಿಸಲಾಗಿದೆ. ಸದರಿ ಆದೇಶದಂತೆ ವೇತನ ಶ್ರೇಣಿಯನ್ನು ಪರಿಷ್ಕರಿಸಿ ನಿಗದಿಗೊಳಿಸುವಂತೆ ಮೇಲೆ (3) ರಲ್ಲಿ ಓದಲಾದ ಮನವಿಯಲ್ಲಿ ಚಿಕ್ಕಬಳ್ಳಾಪುರ ಟಿ.ಟಿ.ಐ. ನ ಬೋಧಕ ಸಿಬ್ಬಂದಿಯವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯ ಮೇಲೆ ಡಿ.ಎಸ್.ಇ.ಆರ್.ಟಿ. ನಿರ್ದೇಶಕರು ಮೇಲೆ (4) ರಲ್ಲಿ ಓದಲಾದ ಪತ್ರದಂತೆ ವರದಿಯನ್ನು ಸಲ್ಲಿಸಿದ್ದು ಅದರಂತೆ, ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ ಸಂಸ್ಥೆಯು ಈ ಹಿಂದೆ ಪುರಸಭಾ ಆಡಳಿತಕ್ಕೆ ಒಳಪಟ್ಟ ಸಂಸ್ಥೆಯಾಗಿದ್ದು ಸದರಿ ಸಂಸ್ಥೆಯು ಸರ್ಕಾರದ ಆದೇಶ ಸಂಖ್ಯೆ: ಇಡಿ 121 ಪಿಟಿಐ 2009, ದಿನಾಂಕ: 16-02-2010 ರ ಪ್ರಕಾರ ಚರಾಸ್ತಿಗಳೊಂದಿಗೆ ಕೆಲವು ಷರತ್ತುಗಳನ್ವಯ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಲಾಗಿರುತ್ತದೆ. ಸದರಿ ಸಿಬ್ಬಂದಿಯವರು ಎನ್.ಸಿ.ಟಿ.ಇ. ನಿಯಮಾನುಸಾರ ಸರ್ಕಾರದ ನೇರ ಆಡಳಿತಕ್ಕೆ ಒಳಪಡಿಸಿದ ದಿನಾಂಕಕ್ಕೆ ಅರ್ಹ ವಿದ್ಯಾರ್ಹತೆಯನ್ನು ಹೊಂದಿದ್ದರು ಹಾಗೂ ಇವರಿಗೆ ವೇತನ ನಿಗದಿಯು ಸಹ ಪ್ರೌಢಶಾಲಾ ಶಿಕ್ಷಕರ ವೇತನವನ್ನೇ ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:ಇಡಿ 366 ಪಿಟಿಐ 2010 ಬೆಂಗಳೂರು, ದಿನಾಂಕ: 11-02-2011 ರನ್ವಯ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಅಧೀಕ್ಷಕರನ್ನು ಪ್ರಾಂಶುಪಾಲರಾಗಿ, ಪ್ರಶಿಕ್ಷಕರನ್ನು ಉಪನ್ಯಾಸಕರಾಗಿ ಷರತ್ತುಗಳನ್ವಯ ಮರು ಪದನಾಮೀಕರಿಸಿ ವೇತನ ಶ್ರೇಣಿಯನ್ನು ಪರಿಷ್ಕರಿಸಲಾಗಿರುತ್ತದೆ. ಪ್ರಸ್ತುತ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು ಪ್ರೌಢಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಆಯಾ ಆಯುಕ್ತಾಲಯಗಳಿಗೆ ಅನುಮತಿಸಲಾಗಿರುತ್ತದೆ. ಆದ್ದರಿಂದ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ ಸಲ್ಲಿಸಿರುವ ಮನವಿಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ. ಮೇಲೆ (5) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿನ ಅಧೀಕ್ಷಕರ ಹುದ್ದೆಗಳನ್ನು ಪ್ರಾಂಶುಪಾಲರು ಎಂದು ಮರು ಪದನಾಮೀಕರಿಸಿರುವುದರಿಂದ ಈ ಹುದ್ದೆಗಳನ್ನು ಶಿಕ್ಷಣಾಧಿಕಾರಿಗಳ ವೃಂದದಿಂದ ಭರ್ತಿ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿದ್ದು, ಮರುಪದನಾಮೀಕರಿಸಿದ ಉಪನ್ಯಾಸಕರ ಹುದ್ದೆಗಳನ್ನು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ವೃಂದಕ್ಕೆ ಸೇರಿಸಿಕೊಂಡು ಭರ್ತಿ ಮಾಡುವ ಬಗ್ಗೆ ಸ್ಪಷ್ಟೀಕರಣ ಕೋರಿರುವುದಾಗಿ ತಿಳಿಸಿರುತ್ತಾರೆ.

3. ಚಿಕ್ಕಬಳ್ಳಾಪುರ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಎಲ್ಲಾ ಬೋಧಕ ಸಿಬ್ಬಂದಿಯು ನೇರವಾಗಿ ಡಿ.ಎಡ್., ಕಾಲೇಜಿಗೆ ಉಪನ್ಯಾಸಕರಾಗಿ ಮತ್ತು ಅಧೀಕ್ಷಕರಾಗಿ ಎನ್.ಸಿ.ಟಿ.ಇ. ನಿಯಮಾನುಸಾರ ನೇರ ನೇಮಕಾತಿ ಹೊಂದಿರುತ್ತಾರೆ. ಸದರಿಯವರುಗಳನ್ನು ಯಾವುದೇ ಪ್ರೌಢ ಶಾಲೆಯಿಂದ ನಿಯೋಜನೆಗೊಳಿಸಿರುವುದಿಲ್ಲ. ಅಲ್ಲದೇ ಸದರಿಯವರ ಜ್ಯೇಷ್ಠತೆಯು ಪ್ರೌಢಶಾಲಾ ಸಹ ಶಿಕ್ಷಕರ ಜ್ಯೇಷ್ಠತಾ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವುದಿಲ್ಲ. ಸದರಿ ಸಂಸ್ಥೆಯನ್ನು ಸರ್ಕಾರವು ತನ್ನ ನೇರ ಆಡಳಿತಕ್ಕೆ ಒಳಪಡಿಸಿ ಹೊರಡಿಸಲಾದ ಆದೇಶದಲ್ಲಿ ಅವರುಗಳನ್ನು ಉಪನ್ಯಾಸಕರು ಮತ್ತು ಪ್ರಾಂಶುಪಾಲರ ಪದನಾಮದೊಂದಿಗೆ ಆದೇಶಿಸಲಾಗಿದೆ. ಈ ಮೇಲಿನ ಉಪನ್ಯಾಸಕರುಗಳು ಮೂಲತಃ ಉಪನ್ಯಾಸಕರುಗಳಾಗಿಯೇ ಚಿಕ್ಕಬಳ್ಳಾಪುರ ಪುರಸಭೆಯ ಮೂಲಕ ನೇಮಕಾತಿ ಹೊಂದಿರುತ್ತಾರೆ. ಪ್ರೌಢಶಾಲಾ ಸಹಾಯಕ ಶಿಕ್ಷಕರ ಜ್ಯೇಷ್ಠತಾ ಪಟ್ಟಿಯಲ್ಲಿ ಸದರಿ ಉಪನ್ಯಾಸಕರ ಹೆಸರುಗಳು ಸೇರಿಸಲ್ಪಟ್ಟಿರುವುದಿಲ್ಲ. ಅಂದರೆ, ಸದರಿಯವರು ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಸೇರಿಲ್ಲ. ನೇರವಾಗಿ ಉಪನ್ಯಾಸಕರಾಗಿಯೇ ನೇಮಕಾತಿ ಹೊಂದಿರುತ್ತಾರೆ.

4. ಈ ಮೇಲ್ಕಂಡ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 40 ಪಿಟಿಐ 2011, ಬೆಂಗಳೂರು, ದಿನಾಂಕ: 18-01-2012

ಚಿಕ್ಕಬಳ್ಳಾಪುರ ನಗರಸಭೆಯ ಆಡಳಿತದಲ್ಲಿದ್ದು, ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟಿರುವ ಚಿಕ್ಕಬಳ್ಳಾಪುರ ಡಿ.ಎಡ್., ಕಾಲೇಜಿನ ಬೋಧಕ ಸಿಬ್ಬಂದಿಯ ಪದನಾಮವನ್ನು ಹಾಗೂ ವೇತನ ಶ್ರೇಣಿಯನ್ನು ಅನುಬಂಧದಲ್ಲಿರುವಂತೆ ದಿನಾಂಕ: 11-02-2011 ರ ಸರ್ಕಾರದ ಆದೇಶ ಸಂಖ್ಯೆ:ಇಡಿ 366 ಪಿಟಿಐ 2010 ರನ್ವಯ ಪರಿಷ್ಕರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿದೆ.

ಸದರಿ ಬೋಧಕ ಸಿಬ್ಬಂದಿಯ ವೇತನವನ್ನು ದಿನಾಂಕ: 11-02-2011 ರ ಸರ್ಕಾರದ ಆದೇಶದಂತೆ ಪರಿಷ್ಕರಿಸಿ ನಿಗದಿಗೊಳಿಸುವಂತೆ ಡಿ.ಎಸ್.ಇ.ಆರ್.ಟಿ. ನಿರ್ದೇಶಕರಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಇಡಿ 40 ಪಿಟಿಐ 2011, ಬೆಂಗಳೂರು, ದಿನಾಂಕ: 18-01-2012

ಬೋಧಕ ವರ್ಗ

ಕ್ರ. ಸಂ.	ಹೆಸರು ಹಾಗೂ ವಿದ್ಯಾರ್ಹತೆ	ಈಗಿರುವ ಪದನಾಮ	ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ ರೂ.	ಮರು ಪದನಾಮೀಕರಿಸಿದ ಪದನಾಮ	ಪರಿಷ್ಕರಿಸಿದ ವೇತನ ಶ್ರೇಣಿ ರೂ.
1.	ಶ್ರೀಮತಿ ವಿಜಯಲಕ್ಷ್ಮಿ ವಿ. ಎಂಎ.ಎಂಎಡ್.,ಎಂ.ಫಿಲ್.,	ಅಧೀಕ್ಷಕರು	11,400-21,600	ಪ್ರಾಂಶುಪಾಲರು	14,050-25,050
2.	ಶ್ರೀ ಬಿ. ರವೀಂದ್ರ ಎಂಎಸ್ಸಿ., ಎಂಎಡ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
3.	ಶ್ರೀ ಸಿ.ಕೆ. ವರದರಾಜು ಎಂಎ., ಎಂಎಡ್., ಎಂ.ಫಿಲ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
4.	ಶ್ರೀ ಸಿ.ಎನ್. ಸೂರ್ಯಪ್ರಕಾಶ್ ಎಂಎಸ್ಸಿ., ಎಂಎ., ಎಂ.ಎಡ್., ಎಂ.ಫಿಲ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
5.	ಶ್ರೀ ವಿ. ಗುರುಮೂರ್ತಿ ಎಂ.ಎ., ಎಂ.ಎ., ಎಂ.ಎಡ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
6.	ಶ್ರೀಮತಿ ಹೆಚ್. ಮಮತಾ ಎಂಎಸ್ಸಿ., ಎಂ.ಎಡ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
7.	ಶ್ರೀ ಎ. ಆನಂದ್ ಎಂಎಸ್ಸಿ., ಎಂಎ., ಎಂ.ಎಡ್., ಎಂ.ಫಿಲ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600
8.	ಶ್ರೀ ಕೆ.ಹೆಚ್. ಮೋಹನೇಶ ಎಂಎ., ಎಂ.ಫಿಲ್., ಎಂ.ಎಡ್., ಎಂ.ಫಿಲ್.,	ಉಪನ್ಯಾಸಕರು	8,825-16,000	ಉಪನ್ಯಾಸಕರು	11,400-21,600

ಎಸ್.ಬಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)
ಶಿಕ್ಷಣ ಇಲಾಖೆ

ಪಿ.ಆರ್. 435

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ವೃಂದದ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಾಮರ್ಶಿಸಲು ಸಮಿತಿಯನ್ನು ರಚಿಸುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿ) ನಿಯಮಗಳು, 2000ದ ನಿಯಮ 9ರನ್ವಯ ವರದಿ/ಪರಿಶೀಲನಾ/ಅಂಗೀಕಾರ ಪ್ರಾಧಿಕಾರಗಳು ಸರ್ಕಾರಿ ನೌಕರನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಪ್ರತಿಕೂಲ ಅಥವಾ ಸಲಹಾತ್ಮಕ ಷರಾಗಳನ್ನು ದಾಖಲಿಸಿದ್ದಾರೆ, ಆ ಬಗ್ಗೆ ಅಂತಹ ಷರಾಗಳು ಪ್ರತಿಕೂಲವೇ ಅಥವಾ ಸಲಹಾತ್ಮಕವೇ ಎಂಬ ಬಗ್ಗೆ ಟಿಪ್ಪಣಿ ಮಾಡಬೇಕು. ಗ್ರೂಪ್-ಎ ಹಾಗೂ ಮೇಲ್ಪಟ್ಟದ ಅಧಿಕಾರಿಗಳ ಪ್ರಕರಣಗಳಲ್ಲಿ ಸರ್ಕಾರ ಮತ್ತು ಗ್ರೂಪ್-ಬಿ ಹಾಗೂ ಗ್ರೂಪ್-ಸಿ ನೌಕರರ ಪ್ರಕರಣಗಳಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲಿಸಿ ಅದರಲ್ಲಿನ ಷರಾಗಳು ಪ್ರತಿಕೂಲವೇ ಅಥವಾ ಸಲಹಾತ್ಮಕವೇ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಪ್ರತಿಕೂಲ ಷರಾಗಳನ್ನು ಒಳ್ಳೆಯ ಇತರ ಅಂಶಗಳು ಹಾಗೂ ಸಲಹಾತ್ಮಕ ಷರಾಗಳೂ ಸೇರಿದಂತೆ ಸಂಬಂಧಪಟ್ಟ ಸರ್ಕಾರಿ ನೌಕರನಿಗೆ ಸಂಬಂಧಿಸಿದ ಅಂಗೀಕಾರ ಪ್ರಾಧಿಕಾರ ಅಥವಾ ಸರ್ಕಾರದಿಂದ ಅಧಿಕಾರ ಹೊಂದಿದ ಪ್ರಾಧಿಕಾರ ಸಾಮಾನ್ಯವಾಗಿ ವರದಿ-ವರ್ಷ ಮುಗಿದ ಮೂರು ತಿಂಗಳೊಳಗಾಗಿ ತಿಳಿಸತಕ್ಕದ್ದು. ಪ್ರತಿಕೂಲ ಷರಾಗಳ ಬಗ್ಗೆ ಸಂಬಂಧಪಟ್ಟ ನೌಕರರು ಮೇಲ್ಮನವಿಯನ್ನು ಅಂಗೀಕಾರ ಪ್ರಾಧಿಕಾರದ ನಿಕಟ ಮೇಲಿನ ಪ್ರಾಧಿಕಾರಕ್ಕೆ ಅಥವಾ ಸರ್ಕಾರ ಅಧಿಕಾರಯುಕ್ತಗೊಳಿಸಿದ ಇತರ ಪ್ರಾಧಿಕಾರಕ್ಕೆ ಪ್ರತಿಕೂಲ ಷರಾಗಳು ಸ್ವೀಕೃತಗೊಂಡ ದಿನಾಂಕದಿಂದ 45 ದಿನಗಳೊಳಗೆ ಸಲ್ಲಿಸಬಹುದು. ಮೇಲ್ಮನವಿ ಪ್ರಾಧಿಕಾರ ಅವಶ್ಯವೆನಿಸಿದಲ್ಲಿ ಮೇಲ್ಮನವಿಯ ಬಗ್ಗೆ ಸಂಬಂಧಪಟ್ಟ ವರದಿ ಅಥವಾ ಪರಿಶೀಲನಾ ಅಥವಾ ಅಂಗೀಕಾರ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ನಿರ್ಣಯವನ್ನು ಸಂಬಂಧಿಸಿದ ನೌಕರನಿಗೆ ಕೂಡಲೇ ತಿಳಿಸಬೇಕು. ಸರ್ಕಾರಿ ನೌಕರನ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ವರದಿ ಪ್ರಾಧಿಕಾರ/ಪರಿಶೀಲನಾ ಪ್ರಾಧಿಕಾರ/ಅಂಗೀಕಾರ ಪ್ರಾಧಿಕಾರ ನೀಡಿದ ಶ್ರೇಣಿ ನೀಡಿಕೆ (Grading)ಯನ್ನು ಸಂಬಂಧಿಸಿದ ನೌಕರನಿಗೆ ತಿಳಿಸಲು ಮೇಲ್ಕಂಡ ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲ.

2. ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 7631/2002-ಶ್ರೀ ದೇವದತ್ತ ವಿರುದ್ಧ ಕೇಂದ್ರ ಸರ್ಕಾರ ಪ್ರಕರಣದಲ್ಲಿ, ಸರ್ಕಾರಿ ನೌಕರನನ್ನು ಮುಂಬಡ್ತಿಗೆ ಪರಿಗಣಿಸಿದಾಗ ಆತನ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿನ ಶ್ರೇಣಿ ನೀಡಿಕೆಯು ಮುಂಬಡ್ತಿಗೆ ನಿಗದಿಪಡಿಸಿರುವ Bench Mark ಗಿಂತ ಕಡಿಮೆ ಇದ್ದಲ್ಲಿ, ಆ ಕಾರ್ಯನಿರ್ವಹಣಾ ವರದಿಯನ್ನು ಸಂಬಂಧಿಸಿದ ನೌಕರನಿಗೆ ತಿಳಿಸಬೇಕೆಂದು ಮತ್ತು ಸಂಬಂಧಿಸಿದ ನೌಕರನು ಸಲ್ಲಿಸುವ ಮನವಿಯನ್ನು ಪರಿಗಣಿಸಿ ಶ್ರೇಣಿ ನೀಡಿಕೆಯನ್ನು ಮಾರ್ಪಡಿಸುವ ಬಗ್ಗೆ ಸಕ್ಷಮ ಪ್ರಾಧಿಕಾರ ಆದೇಶ ಹೊರಡಿಸಬೇಕೆಂದು ನಿರ್ದೇಶನ ನೀಡಿರುತ್ತದೆ. ಸದರಿ ಆದೇಶದ ಸುಸಂಬದ್ಧವಾದ ಭಾಗವನ್ನು ಕೆಳಗೆ ಉದ್ಧರಿಸಲಾಗಿದೆ:

"In the present case, we are developing the principles of natural justice by holding that fairness and transparency in public administration requires that all entries (whether poor, fair, average, good or very good) in the Annual Confidential Report of a public servant, whether in civil, Judicial, police or any other State service (except the military), must be communicated to him within a reasonable period so that he can make a reresentation for its upgradation. This in our opinion is the correct legal position even though there may be no Rule/G.O. requiring communication of the entry, or even if there is a Rule/G.O. prohibiting it, because the principle of non-arbitrariness in State action as envisaged by Article 14 of the constitution in our opinion requires such communication. Article 14 will override all rules or Government orders."

3. ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ಆದೇಶವನ್ನು ಅನುಸರಿಸಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಕೆಲವು ಗ್ರೂಪ್-ಎ ಅಧಿಕಾರಿಗಳು ತಮ್ಮ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ದಾಖಲು ಮಾಡಿರುವ ಶ್ರೇಣಿ ನೀಡಿಕೆಯನ್ನು upgrade ಮಾಡುವಂತೆ ಕೋರಿ ಮನವಿ ಸಲ್ಲಿಸುತ್ತಿದ್ದಾರೆ.

4. ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2062/2003 – ಸತ್ಯನಾರಾಯಣ ಶುಕ್ಲ ವಿರುದ್ಧ ಕೇಂದ್ರ ಸರ್ಕಾರ ಪ್ರಕರಣದಲ್ಲಿ ದಿನಾಂಕ 11.5.2006ರಂದು ನೀಡಿರುವ ತೀರ್ಪಿನಲ್ಲಿ ಸರ್ಕಾರಿ ನೌಕರರಿಗೆ ಅವರುಗಳ ಕಾರ್ಯನಿರ್ವಹಣಾ ವರದಿಗಳ ಆಧಾರದ ಮೇಲೆ ಮುಂಬಡ್ತಿ ನೀಡುವ ಬಗ್ಗೆ ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಗದಿಪಡಿಸಿ ಸೂಚನೆಗಳನ್ನು ಹೊರಡಿಸುವ ಕಾರ್ಯವು ಸರ್ಕಾರಕ್ಕೆ ಸೇರಿದ ವಿಷಯವಾಗಿದ್ದು, ಈ ಸಂಬಂಧವಾಗಿ ನ್ಯಾಯಾಲಯ ನಿರ್ದೇಶನ ನೀಡುವುದು ಸೂಕ್ತವಲ್ಲವೆಂದು ಅವಲೋಕನೆ ಮಾಡಿರುತ್ತದೆ. ಸದರಿ ಆದೇಶದ ಸುಸಂಬದ್ಧವಾದ ಭಾಗವನ್ನು ಕೆಳಗೆ ಉದ್ಧರಿಸಲಾಗಿದೆ.

"The appellant also argued that the remarks made in the ACR were not communicated to him. It was also urged by the appellant that this Court should direct the authorities to streamline the whole procedure so that even remarks like 'good' or 'very good' made in ACRs should be made compulsorily communicable to the officers concerned so that an officer may not lose his chance of empanelment at a subsequent point of his service.

In our view, it is not our function to issue such directions. It is for the Government to consider how to streamline the procedure for selection. We can only examine if the procedure for selection as adopted by the Government is unconstitutional or otherwise illegal or vitiated by arbitrariness and malafides."

5. The All India Services (Performance Appraisal Report) Rules, 2007ರಲ್ಲಿ Referral Board ರಚಿಸಲು ಆಸ್ಪದ ಕಲ್ಪಿಸಲಾಗಿರುತ್ತದೆ. ಇದೇ ಮಾದರಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000ಕ್ಕೆ ತಿದ್ದುಪಡಿ ಮಾಡಿ ಪರಾಮರ್ಶೆ ಸಮಿತಿಯನ್ನು ರಚಿಸಬಹುದಾಗಿರುತ್ತದೆ. ಇದಕ್ಕೆ ಕಾಲಾವಕಾಶಬೇಕಾಗುತ್ತದೆ.

6. ಮೇಲ್ಕಂಡ ಹಿನ್ನೆಲೆಯಲ್ಲಿ, ಸರ್ಕಾರವು ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 1 ಸೇರವ 2011, ಬೆಂಗಳೂರು, ದಿನಾಂಕ: 18-01-2012

ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ವೃಂದದ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ನೀಡಿರುವ ಶ್ರೇಣಿಯನ್ನು ಮೇಲ್ದರ್ಜೆಗೇರಿಸಲು ಅಧಿಕಾರಿಗಳು ಸಲ್ಲಿಸುವ ಮನವಿಗಳನ್ನು ಪರಿಗಣಿಸಿ, ಕಾರ್ಯನಿರ್ವಹಣಾ ವರದಿಯಲ್ಲಿ ಮಾಡಿರುವ ಶ್ರೇಣಿ ನೀಡಿಕೆ (Grading)ಯನ್ನು ಪರಾಮರ್ಶಿಸಿ ಆದೇಶಿಸಲು ಈ ಕೆಳಕಂಡಂತೆ ಪರಾಮರ್ಶೆ ಸಮಿತಿಯನ್ನು ರಚಿಸಲಾಗಿದೆ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಅಥವಾ ಸಮಾನಾಂತರ ಅಧಿಕಾರಿ : ಅಧ್ಯಕ್ಷರು

2) ಸಚಿವಾಲಯದ ಸಂಬಂಧಿಸಿದ ಆಡಳಿತ ಇಲಾಖೆಯ
ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ : ಸದಸ್ಯರು

3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು
ನಾಮನಿರ್ದೇಶನ ಮಾಡುವ ಇತರ ಅಧಿಕಾರಿ : ಸದಸ್ಯರು

4) ಸಚಿವಾಲಯದ ಸಂಬಂಧಿಸಿದ ಆಡಳಿತ ಇಲಾಖೆಯ
ಸರ್ಕಾರದ ಉಪ ಕಾರ್ಯದರ್ಶಿ : ಸಂಚಾಲಕರು

ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿ) ನಿಯಮಗಳು, 2000ಕ್ಕೆ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಮೊಹಮ್ಮದ್ ಸನಾವುಲ್ಲ

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಪಿ.ಆರ್. 436

ಇಂಧನ ಸಚಿವಾಲಯ

ವಿಷಯ : ಶ್ರೀಮತಿ ಶಮೀಮ್ ಭಾನು, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರು ದಿನಾಂಕ 16.01.2012ರಂದು ಭಾಗವಹಿಸಬೇಕಾಗಿದ್ದ ಹೆಸ್ಕಾಂ ಆಡಳಿತ ಮಂಡಳಿಯ ಸಭೆ ಹಾಗೂ ಡಾಕ್ಯೂಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಂ ಉದ್ಘಾಟನಾ ಕಾರ್ಯಕ್ರಮವು ಮುಂದೂಡಲಾದ ಕಾರಣ ಏರ್ ಟಿಕೆಟ್ ರದ್ದುಪಡಿಸಿರುವ ಮೊತ್ತ ರೂ. 1000/-ಗಳನ್ನು ಕ್ಲೇಮ್ ಮಾಡುವ ಬಗ್ಗೆ.

ಓದಲಾಗಿದೆ: ಸಂಖ್ಯೆ ಇಎನ್ 15 ಅಮುಕಾ 2012 ದಿನಾಂಕ: 13.1.2012 ರ ಟಿಪ್ಪಣಿ.

ಪ್ರಸ್ತಾವನೆ :

ಮೇಲೆ ಓದಲಾದ ಟಿಪ್ಪಣಿಯಲ್ಲಿ ಶ್ರೀಮತಿ ಶಮೀಮ್ ಬಾನು, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಹಾಗೂ ಅಧ್ಯಕ್ಷರು, ಹೆಸ್ಕಾಂ ರವರು ದಿನಾಂಕ 16.1.2012ರಂದು ಹುಬ್ಬಳ್ಳಿಯಲ್ಲಿ ಹೆಸ್ಕಾಂ ಬೋರ್ಡ್ ಮೀಟಿಂಗ್ ಹಾಗೂ ಹೆಸ್ಕಾಂನ ಡಾಕ್ಯೂಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಂ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಆದರೆ ಅದೇ ದಿನ ಬೆಂಗಳೂರಿನಲ್ಲಿ ಕೆ.ಪಿ.ಟಿ.ಸಿ.ಎಲ್. ಬೋರ್ಡ್ ಮೀಟಿಂಗ್ ಹಾಗೂ ಮತ್ತೊಂದು ತುರ್ತು ಸಭೆ ಏರ್ಪಡಿಸಿದ ಕಾರಣ ಸದರಿ ಹುಬ್ಬಳ್ಳಿ ಪ್ರವಾಸವನ್ನು ಮುಂದೂಡಲಾಯಿತು. ಆದಕಾರಣ ಈ ಪ್ರವಾಸದ ಸಂಬಂಧ ಬೆಂಗಳೂರಿನಿಂದ ಹುಬ್ಬಳ್ಳಿಗೆ ಪ್ರಯಾಣಿಸಲು ಕಾಯ್ದಿರಿಸಿದ ವಿಮಾನದ ಟಿಕೆಟ್ ಸಂಖ್ಯೆ 090/5382008279ನ್ನು ದಿನಾಂಕ 12.1.2012 ರಂದು ರದ್ದುಮಾಡಿಸಬೇಕಾಯಿತು. ಈ ಸಂಬಂಧ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 01 ಸಮನ್ವಯ 2012, ಬೆಂಗಳೂರು, ದಿನಾಂಕ: 23.01.2012

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ವಿಮಾನದ ಟಿಕೆಟ್ ಸಂಖ್ಯೆ 090/5382008279ನ್ನು ದಿನಾಂಕ 12.1.2012 ರಂದು ರದ್ದುಗೊಳಿಸಲಾಗಿದ್ದು, ಈ ಬಾಬ್ತು ಎಂ.ಎಸ್.ಐ.ಎಲ್. ರವರು ವಿಧಿಸಿರುವ ರೂ. 1000/- (ರೂಪಾಯಿ ಒಂದು ಸಾವಿರ ಮಾತ್ರ) ಕ್ಯಾನ್ಸಲೇಷನ್ ಚಾರ್ಜ್‌ನ್ನು ಪಡೆಯಲು ಅನುಮೋದನೆ ನೀಡಲಾಗಿದೆ.

ಸಂಖ್ಯೆ ಇಎನ್ 15 ಅಮುಕಾ 2012 ದಿನಾಂಕ 13.1.2012ರ ಟಿಪ್ಪಣಿ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 437

ಇಂಧನ ಸಚಿವಾಲಯ

ವಿಷಯ : ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಹಂದಿಕಲ್ಲೂರು ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 293 ಎನ್‌ಸಿಇ 2006, ದಿನಾಂಕ : 16-10-2006.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-251 ಹಂದಿಕಲ್ಲೂರು ಕಿಜವಿಯೊ/2011/4733, ದಿನಾಂಕ : 24/26-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಹಂದಿಕಲುರು ಗ್ರಾಮದ ಬಳಿ ಸೀತಾ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಹಂದಿಕಲುರು ಕಿರು ಜಲ ವಿದ್ಯುತ್ ಯೋಜನೆಯನ್ನು ಜಲ ಸಂಪನ್ಮೂಲ ಇಲಾಖೆ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅನುಮತಿ ಪಡೆಯಬೇಕೆಂದು ಹಾಗೂ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು, ಮೇಲ್ತೊರೆಯಲ್ಲಿರುವ ಮೆ: ಮಾರುತಿ ಪವರ್ ಜನರೇಷನ್ (ಇಂಡಿಯಾ) ಪ್ರೈ ಲಿ., ನವರ ಯೋಜನೆಗಳಿಗೆ ಯಾವುದೇ ದಕ್ಕೆಯಾಗಬಾರದು ಎಂಬ ಷರತ್ತಿಗೊಳಪಟ್ಟು ಹಾಗೂ ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿರುವ ಯೋಜನೆಯು ವನ್ಯಜೀವಿಗಳ ಸುರಕ್ಷಿತ ಪ್ರದೇಶದಲ್ಲಿ ಬರುವುದರಿಂದ ಅರಣ್ಯ ಇಲಾಖೆಯವರು ಸ್ಥಳಾವಕಾಶ ನೀಡಲಾಗುವುದಿಲ್ಲವೆಂದು ತಿಳಿಸಿರುವ ಕಾರಣ ಯೋಜನೆಯನ್ನು ಮುಂದುವರಿಸಲಾಗುವುದಿಲ್ಲವೆಂದೂ ಮತ್ತು ಯೋಜನೆ ರದ್ದುಪಡಿಸುವಂತೆ ಅಭಿವೃದ್ಧಿದಾರರು ಕೋರಿರುವುದನ್ನು ಪರಿಗಣಿಸಿ ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 11 ಎನ್‌ಸಿಇ 2012, ಬೆಂಗಳೂರು, ದಿನಾಂಕ : 21-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ : ಇಎನ್ 293 ಎನ್‌ಸಿಇ 2006 ದಿನಾಂಕ : 16-10-2006ರಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಹಂದಿಕಲುರು ಗ್ರಾಮದ ಬಳಿ ಸೀತಾ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿದ್ದ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಹಂದಿಕಲುರು ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಮತ್ತು ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಅಭಿವೃದ್ಧಿದಾರರಿಗೆ ಶುಲ್ಕ ಹಿಂದಿರುಗಿಸುವ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ತಮ್ಮ ಮಟ್ಟದಲ್ಲೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 438 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಚಾರಾ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 295 ಎನ್‌ಸಿಇ 2006, ದಿನಾಂಕ : 16-10-2006.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-249 ಚಾರಾ ಕಿಜವಿಯೊ/2011/4731, ದಿನಾಂಕ : 24/26-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಬಳಿ ಸೀತಾ ನದಿಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಚಾರಾ ಕಿರು ಜಲ ವಿದ್ಯುತ್ ಯೋಜನೆಯನ್ನು ಜಲ ಸಂಪನ್ಮೂಲ ಇಲಾಖೆ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅನುಮತಿ ಪಡೆಯಬೇಕೆಂದು ಹಾಗೂ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು, ಮೇಲ್ತೊರೆಯಲ್ಲಿರುವ ಮೆ: ಮಾರುತಿ ಪವರ್ ಜನರೇಷನ್ (ಇಂಡಿಯಾ) ಪ್ರೈ ಲಿ., ನವರ ಯೋಜನೆಗಳಿಗೆ ಯಾವುದೇ ದಕ್ಕೆಯಾಗಬಾರದು ಎಂಬ ಷರತ್ತಿಗೊಳಪಟ್ಟು ಹಾಗೂ ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿರುವ ಯೋಜನೆಯು ವನ್ಯಜೀವಿಗಳ ಸುರಕ್ಷಿತ ಪ್ರದೇಶದಲ್ಲಿ ಬರುವುದರಿಂದ ಅರಣ್ಯ ಇಲಾಖೆಯವರು ಸ್ಥಳಾವಕಾಶ ನೀಡಲಾಗುವುದಿಲ್ಲವೆಂದು ತಿಳಿಸಿರುವ ಕಾರಣ ಯೋಜನೆಯನ್ನು ಮುಂದುವರಿಸಲಾಗುವುದಿಲ್ಲವೆಂದೂ ಮತ್ತು ಯೋಜನೆ ರದ್ದುಪಡಿಸುವಂತೆ ಅಭಿವೃದ್ಧಿದಾರರು ಕೋರಿರುವುದನ್ನು ಪರಿಗಣಿಸಿ ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 12 ಎನ್‌ಸಿಇ 2012, ಬೆಂಗಳೂರು, ದಿನಾಂಕ : 21-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ : ಇಎನ್ 295 ಎನ್‌ಸಿಇ 2006 ದಿನಾಂಕ : 16-10-2006ರಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಬಳಿ ಸೀತಾ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿದ್ದ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಹಂದಿಕಲುರು ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಮತ್ತು ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಅಭಿವೃದ್ಧಿದಾರರಿಗೆ ಶುಲ್ಕ ಹಿಂದಿರುಗಿಸುವ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ತಮ್ಮ ಮಟ್ಟದಲ್ಲೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 439 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಸೀತಾನದಿ II ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 288 ಎನ್‌ಸಿಇ 2006, ದಿನಾಂಕ : 16-10-2006.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-250/ಸೀತಾನದಿ II ಕಿಜವಿಯೊ/2011/4732, ದಿನಾಂಕ : 24/26-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಸೀತಾನದಿ ಗ್ರಾಮದಿಂದ 3 ಕಿ.ಮೀ. ನಲ್ಲಿ ಹೆಬ್ರಿಯಿಂದ 9 ಕಿ.ಮೀ. ನಲ್ಲಿ ಸೀತಾ ನದಿಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್

ಸಾಮರ್ಥ್ಯದ ಸೀತಾನದಿ II ಕಿರು ಜಲ ವಿದ್ಯುತ್ ಯೋಜನೆಯನ್ನು ಜಲ ಸಂಪನ್ಮೂಲ ಇಲಾಖೆ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅನುಮತಿ ಪಡೆಯಬೇಕೆಂದು ಹಾಗೂ ಕೆಳ ತೂರೆ ಮತ್ತು ಮೇಲ್ತೂರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು, ಕೆಳತೊರೆಯಲ್ಲಿರುವ ಮೆ: ಮಾರುತಿ ಪವರ್ ಜನರೇಷನ್ (ಇಂಡಿಯಾ) ಪ್ರೈ ಲಿ., ನವರ ಯೋಜನೆಗಳಿಗೆ ಯಾವುದೇ ದಕ್ಕೆಯಾಗಬಾರದು ಎಂಬ ಷರತ್ತಿಗೊಳಪಟ್ಟು ಹಾಗೂ ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿರುವ ಯೋಜನೆಯು ವನ್ಯಜೀವಿಗಳ ಸುರಕ್ಷಿತ ಪ್ರದೇಶದಲ್ಲಿ ಬರುವುದರಿಂದ ಅರಣ್ಯ ಇಲಾಖೆಯವರು ಸ್ಥಳಾವಕಾಶ ನೀಡಲಾಗುವುದಿಲ್ಲವೆಂದು ತಿಳಿಸಿರುವ ಕಾರಣ ಯೋಜನೆಯನ್ನು ಮುಂದುವರಿಸಲಾಗುವುದಿಲ್ಲವೆಂದೂ ಮತ್ತು ಯೋಜನೆ ರದ್ದುಪಡಿಸುವಂತೆ ಅಭಿವೃದ್ಧಿದಾರರು ಕೋರಿರುವುದನ್ನು ಪರಿಗಣಿಸಿ ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 13 ಎನ್‌ಸಿಇ 2012, ಬೆಂಗಳೂರು, ದಿನಾಂಕ : 21-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ : ಇಎನ್ 288 ಎನ್‌ಸಿಇ 2006 ದಿನಾಂಕ : 16-10-2006ರಲ್ಲಿ ಮೆ: ಜಿವಿಆರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಸೀತಾ ನದಿ ಗ್ರಾಮದಿಂದ 3 ಕಿ.ಮೀ. ನಲ್ಲಿ ಹೆಬ್ರಿಬಿಂದ 9 ಕಿ.ಮೀ. ನಲ್ಲಿ ಸೀತಾ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಿದ್ದ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಸೀತಾನದಿ II ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಮತ್ತು ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಅಭಿವೃದ್ಧಿದಾರರಿಗೆ ಶುಲ್ಕ ಹಿಂದಿರುಗಿಸುವ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ತಮ್ಮ ಮಟ್ಟದಲ್ಲೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 440

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ನವಲಗುಂದ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :
1. ಅಧ್ಯಕ್ಷರು, ವಕೀಲರ ಸಂಘ, ನವಲಗುಂದ ಇವರ ಪತ್ರ ದಿನಾಂಕ : 08-04-2011.
2. ಸರ್ಕಾರದ ಪತ್ರ ಸಂಖ್ಯೆ : ಲಾ 130 ಎಲ್‌ಸಿಎಲ್ 2011, ದಿನಾಂಕ : 08-06-2011 ಹಾಗೂ 06-09-2011.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರ ಪತ್ರ ಸಂಖ್ಯೆ : 1673/2011, ದಿನಾಂಕ : 11-11-2011.

ಪ್ರಸ್ತಾವನೆ :

ಅಧ್ಯಕ್ಷರು, ನ್ಯಾಯವಾದಿಗಳ ಸಂಘ, ನವಲಗುಂದ ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ : 08-04-2011ರ ಪತ್ರದಲ್ಲಿ ನವಲಗುಂದ ಕಂದಾಯ ತಾಲ್ಲೂಕಿಗೆ ಇಬ್ಬರು ನೋಟರಿಗಳನ್ನು ನೇಮಕ ಮಾಡಿದ್ದು ಅದರಲ್ಲಿ ಒಬ್ಬ ನೋಟರಿಯವರು ಮಾತ್ರ ನೋಟರಿ ಕಾರ್ಯ ನಿರ್ವಹಿಸುತ್ತಿದ್ದು, ಅವರು ತಮ್ಮ ಕೆಲಸ ಕಾರ್ಯನಿಮಿತ್ತ ಬೇರೆ ಊರಿಗೆ ಹೋದಾಗ ಅಫಿಡೆವಿಟ್‌ಗಳನ್ನು ಮಾಡಿಸಿಕೊಳ್ಳಲು ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ನವಲಗುಂದ ತಾಲ್ಲೂಕಿಗೆ ಸುಮಾರು 2 ಲಕ್ಷ ಜನ ಸಂಖ್ಯೆ ಹೊಂದಿದ್ದು, 1 ತಾಲ್ಲೂಕು ಪಂಚಾಯಿತಿ 2 ಪುರಸಭೆ ಹಾಗೂ ಅನೇಕ ಮಹಾವಿದ್ಯಾಲಯಗಳನ್ನು, ಪ್ರೌಢಶಾಲೆಗಳನ್ನು ಹೊಂದಿದ್ದು, ದಿನೇ ದಿನೇ ಅಫಿಡೆವಿಟ್‌ಗಳನ್ನು ಮಾಡಿಸಲು ಅವಶ್ಯಕತೆ ಹೆಚ್ಚಾಗುತ್ತಾ ಇದ್ದು, ಅಂದರೆ ಸಂಧ್ಯಾಸುರಕ್ಷ ವಿಧವಾ ವೇತನ, ಜಾತಿ/ಆದಾಯ, ಜನನ ಮರಣ ಪ್ರಮಾಣ ಪತ್ರ ಇನ್ನೂ ಅನೇಕ ಕೆಲಸ ಕಾರ್ಯಗಳಿಗೆ ಅಫಿಡೆವಿಟ್‌ಗಳ ಅವಶ್ಯಕತೆ ಇದ್ದು ಇರುವ ಒಬ್ಬ ನೋಟರಿಯವರಿಂದ ಪ್ರಮಾಣ ಪತ್ರ ಮಾಡಿಸಿಕೊಳ್ಳಲು ಬಹಳ ತೊಂದರೆಯಾಗುತ್ತಿರುವುದರಿಂದ ನವಲಗುಂದ ತಾಲ್ಲೂಕಿಗೆ 5 ಹೆಚ್ಚುವರಿ ನೋಟರಿಗಳನ್ನು ನೇಮಕ ಮಾಡುವಂತೆ ಕೋರಿದ್ದರು. ಆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಮೇಲೆ (2)ರಲ್ಲಿ ಓದಲಾದ ದಿನಾಂಕ : 08-06-2011 ಹಾಗೂ 06-09-2011ರ ಸರ್ಕಾರದ ಪತ್ರಗಳಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರನ್ನು ಕೋರಲಾಗಿತ್ತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ : 11-11-2011ರ ಪತ್ರದಲ್ಲಿ ನವಲಗುಂದ ಕಂದಾಯ ತಾಲ್ಲೂಕು ಸುಮಾರು 2 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ವಾಣಿಜ್ಯ ಹಾಗೂ ಶೈಕ್ಷಣಿಕ ಸಂಸ್ಥೆಗಳ ಹೆಚ್ಚಳದಿಂದ ವ್ಯವಹಾರ, ಸರ್ಕಾರಿ ಕಛೇರಿಗಳ ಕೆಲಸಗಳು ಹೆಚ್ಚಾಗುತ್ತಿದೆ ಎಂದು ತಿಳಿಸಿ ಇನ್ನು ಹೆಚ್ಚುವರಿ ನೋಟರಿ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆಯಿರುವುದೆಂಬ ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 130 ಎಲ್‌ಸಿಎಲ್ 2011, ಬೆಂಗಳೂರು, ದಿನಾಂಕ : 20-01-2012.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಧಾರವಾಡ ಜಿಲ್ಲೆಯ ನವಲಗುಂದ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ 5 ನೋಟರಿ ಹುದ್ದೆಗಳನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ಕೆ. ಲಕ್ಷ್ಮೀನರಸಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2) (ಪ್ರಭಾರ)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 441

ಆರ್ಥಿಕ ಸಚಿವಾಲಯ

ವಿಷಯ : ರಾಜ್ಯ ಸರ್ಕಾರದ ಆಸ್ತಿ-ಋಣ ನಿರ್ವಹಿಸಲು ಖಜಾನೆ-II ಯೋಜನೆಯಡಿ ಸಮಾಲೋಚಕರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಆಇ 27307 ಮುಂಗಡ 2011, ದಿನಾಂಕ : 13-12-2011.
2. ಸರ್ಕಾರದ ಪತ್ರ ಸಂಖ್ಯೆ : ಎಫ್‌ಡಿ 5 ಎಸ್‌ಓಎಫ್‌ಸಿ 2011, ದಿನಾಂಕ : 10-01-2012.
3. ಸಮಾಲೋಚಕರ ಪತ್ರ ಸಂಖ್ಯೆ : Consultant (A&LM)/FD/CR-5/2011-12, ದಿನಾಂಕ : 10-01-2012.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರದ ಆಸ್ತಿ-ಋಣ ನಿರ್ವಹಣೆಗಾಗಿ ಖಜಾನೆ-II ಯೋಜನೆಯಡಿ ಡಾಟಾಬೇಸ್ ಸಿದ್ಧಪಡಿಸುವ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಾಕಿ ಮೊತ್ತಗಳೆಂದು ತೋರಿಸಲಾದ ಅಂಕಿ-ಅಂಶಗಳ ಹೊಂದಾಣಿಕೆ ಕಾರ್ಯದಲ್ಲಿ ಸರ್ಕಾರಕ್ಕೆ ನೆರವಾಗಲು ಆರು ತಿಂಗಳ ಅವಧಿಗೆ ಸಮಾಲೋಚಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕೆಳಕಂಡವರಿಗೆ ಪ್ರತಿ ತಿಂಗಳು ಮಾಸಿಕ ವರದಿ ಸಲ್ಲಿಸಿದ ನಂತರ ಮಾಸಿಕ ತಲಾ 25,000/- (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) ಶುಲ್ಕವನ್ನು ಖಜಾನೆ ಇಲಾಖೆಯ ಲೆಕ್ಕ ಶೀರ್ಷಿಕೆ '2054-00-095-0-01-125 (ಆಧುನೀಕರಣ)' ಅಡಿಯಲ್ಲಿ ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಹೆಸರು
1.	ಶ್ರೀ ಟಿ.ಎನ್ ನಾಗರಾಜನ್ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
2.	ಶ್ರೀ ಸಿ.ಎಂ. ರಘೋತ್ತಮ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
3.	ಶ್ರೀ ಕೆ. ವಾದಿರಾಜ್ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
4.	ಶ್ರೀ ಕೆ.ವಿ. ವೆಂಕಟೇಶ್ ನಿವೃತ್ತ ಜಿಲ್ಲಾ ಖಜಾನಾಧಿಕಾರಿ

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಮಹಾಲೇಖಪಾಲರ ಕಛೇರಿ (ಆಡಿಟ್)ಯಲ್ಲಿ ಹಿರಿಯ ಸೂಪರ್‌ವೈಸರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಶ್ರೀ ಸಿ.ಕೆ. ಅನಂತನಾರಾಯಣ ರವರನ್ನು ದಿನಾಂಕ : 01-01-2012 ರಿಂದ 3 ತಿಂಗಳ ಅವಧಿಗೆ ಸಮಾಲೋಚಕರುಗಳ ತಂಡದ ಜೊತೆಯಲ್ಲಿ ಕಾರ್ಯನಿರ್ವಹಿಸಲು ಮತ್ತು ಮಾಸಿಕ 20,000/- ಶುಲ್ಕ ಪಾವತಿಸಲು ಅನುಮತಿ ನೀಡಲಾಗಿದೆ.

ಈ ಸಮಾಲೋಚಕರುಗಳಿಗೆ ಇನ್ನು ಮುಂದೆ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯ ಲೆಕ್ಕ ಶೀರ್ಷಿಕೆಯಡಿ ಶುಲ್ಕವನ್ನು ಪಾವತಿಸಲು ಸರ್ಕಾರದ ಆದೇಶ ಸಂಖ್ಯೆ : ಆಇ 27307 ಮುಂಗಡ 2011, ದಿನಾಂಕ : 13-12-2011ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಾರ್ಪಡಿಸಿ ಪರಿಷ್ಕೃತ ಸರ್ಕಾರಿ ಆದೇಶವನ್ನು ಹೊರಡಿಸುವುದು ಸೂಕ್ತವೆಂದು ಭಾವಿಸಿ ಸರ್ಕಾರ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 27307 ಮುಂಗಡ 2011, ಬೆಂಗಳೂರು, ದಿನಾಂಕ : 12-01-2012

ರಾಜ್ಯ ಸರ್ಕಾರದ ಆಸ್ತಿ-ಋಣ ನಿರ್ವಹಣೆಗಾಗಿ ಖಜಾನೆ-II ಯೋಜನೆಯಡಿ ಡಾಟಾಬೇಸ್ ಸಿದ್ಧಪಡಿಸುವ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಾಕಿ ಮೊತ್ತಗಳೆಂದು ತೋರಿಸಲಾದ ಅಂಕಿ-ಅಂಶಗಳ ಹೊಂದಾಣಿಕೆ ಕಾರ್ಯದಲ್ಲಿ ಸರ್ಕಾರಕ್ಕೆ ನೆರವಾಗಲು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈಗಾಗಲೇ ಸಮಾಲೋಚಕರಾಗಿ ಕಾರ್ಯ ನಿರ್ವಹಿಸುತ್ತಿರುವ ನಾಲ್ಕು ಸಮಾಲೋಚಕರುಗಳ ಜೊತೆಗೆ ಶ್ರೀ ಸಿ.ಕೆ. ಅನಂತನಾರಾಯಣ, ನಿವೃತ್ತ ಹಿರಿಯ ಸೂಪರ್‌ವೈಸರ್, ಮಹಾಲೇಖಪಾಲರ ಕಛೇರಿ (ಆಡಿಟ್), ಇವರಿಗೆ ಮಾಸಿಕ 20,000/- (ಇಪ್ಪತ್ತು ಸಾವಿರ ರೂಪಾಯಿ ಮಾತ್ರ) ಸಮಾಲೋಚನಾ ಶುಲ್ಕ ಪಾವತಿ ಮಾಡಲು ಅನುಮೋದನೆ ನೀಡಲಾಗಿದೆ.

ಡಿಸೆಂಬರ್ 2011 ರಿಂದ ಉಳಿದ ನಾಲ್ಕು ತಿಂಗಳ ಅವಧಿಗೆ ಎಲ್ಲಾ ಐದು ಸಮಾಲೋಚಕರುಗಳಿಗೆ ಸಮಾಲೋಚನಾ ಶುಲ್ಕವನ್ನು ಲೆಕ್ಕ ಶೀರ್ಷಿಕೆ '2047-00-103-0-01-051 ಸಾಮಾನ್ಯ ವೆಚ್ಚಗಳು' ಅಡಿಯಲ್ಲಿ ಭರಿಸತಕ್ಕದ್ದು. ಸರ್ಕಾರದ ಆದೇಶ ಸಂ. ಆಇ 27307 ಮುಂಗಡ 2011, ದಿನಾಂಕ : 13-12-2011ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಾರ್ಪಡಿಸಲಾಗಿದೆ ಮತ್ತು ಇದೇ ಆದೇಶದಲ್ಲಿ ಸಮಾಲೋಚನಾ ಶುಲ್ಕ ಪಾವತಿಗಿರುವ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಡಿ.ಜಿ. ಪಟಗಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಪಿ.ಆರ್. 442

ಆರ್ಥಿಕ ಸಚಿವಾಲಯ

ವಿಷಯ : ಖಜಾನೆ ಯೋಜನೆ-II ಕಾರ್ಯ ಸಂಬಂಧ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್ ಸಂಸ್ಥೆಗೆ ಮುಂಗಡ ಪಾವತಿಸುವ ಬಗ್ಗೆ.

ಓದಲಾಗಿದೆ :
1. ಪತ್ರ ಸಂಖ್ಯೆ : ಎಫ್‌ಡಿ 5 ಎಸ್‌ಓಎಫ್‌ಸಿ-1/2011, ದಿನಾಂಕ : 27-08-2011.
2. ಅಧಿಸೂಚನೆ ಸಂಖ್ಯೆ : ಆಇ 766 ವೆಚ್ಚ-12/11, ದಿನಾಂಕ : 22-09-2011.
3. ಸರ್ಕಾರದ ಆದೇಶ ಸಂಖ್ಯೆ ಆಇ165 ಆಖಇ 2011, ದಿನಾಂಕ : 13-10-2011.
4. ಅಧ್ಯಕ್ಷರು, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್, ಬೆಂಗಳೂರು ಅವರ ಪತ್ರ ಸಂಖ್ಯೆ : ಕೆಐಪಿಎ/ಖಜಾನೆ-II/2011-12, ದಿನಾಂಕ : 19-09-2011 ಮತ್ತು 06-01-2012.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 27-08-2011ರ ಪತ್ರದಲ್ಲಿ ಬೆಂಗಳೂರಿನ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್ ಸಂಸ್ಥೆ ಸಲ್ಲಿಸಿದ ಪ್ರಸ್ತಾವನೆಯನ್ನು ಒಪ್ಪಿ ಖಜಾನೆ-II ಯೋಜನೆ ಸಂಬಂಧ Domain expert ಕಾರ್ಯವನ್ನು ವಹಿಸಲಾಗಿತ್ತು. ಸದರಿ ಕಾರ್ಯ

ನಿರ್ವಹಿಸಿರುವುದಕ್ಕೆ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್, ಬೆಂಗಳೂರು ಇವರ ಕೋರಿಕೆಯಂತೆ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ರೂ. 1.00 ಲಕ್ಷಗಳ ಮುಂಗಡ/ಭಾಗಶಃ ಮೊತ್ತವನ್ನು ಪಾವತಿಸಲಾಗಿದೆ. ಉಳಿದ ಮೊತ್ತ ರೂ. 1,49,278/-ಗಳನ್ನು ಪಾವತಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ದಿನಾಂಕ : -6-01-2012ರ ಪತ್ರದಲ್ಲಿ ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 165 ಆಖಇ 2011, ಬೆಂಗಳೂರು, ದಿನಾಂಕ : 16-01-2012

ನಿರ್ದೇಶಕರು, ಖಜಾನೆ ಇಲಾಖೆ ರವರು ಖಜಾನೆ-II ಯೋಜನೆ ಸಂಬಂಧ Domain expert ಕಾರ್ಯವನ್ನು ನಿರ್ವಹಿಸಿದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್, ಬೆಂಗಳೂರು ಸಂಸ್ಥೆಗೆ ಬಾಕಿ ಇರುವ ಉಳಿದ ಮೊತ್ತ ರೂ. 1,49,278/-ಗಳನ್ನು ಪಾವತಿಸಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಸಂಬಂಧ ತಗಲುವ ವೆಚ್ಚವನ್ನು 2011-12ರ ಆಯವ್ಯಯ ಲೆಕ್ಕ ಶೀರ್ಷಿಕೆ 2054-00-095-001-125 (ಆಧುನೀಕರಣ) ರಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಡಿ.ಜಿ. ಪಟಗಾರ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಪಿ.ಆರ್. 443

ಆರ್ಥಿಕ ಸಚಿವಾಲಯ

ವಿಷಯ : ಶ್ರೀಮತಿ ಬಿ. ಮಧುಮತಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ಬಗ್ಗೆ.

ಓದಲಾಗಿದೆ :
1. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ : ಜಾವಿ/20/ಬಿಸಿ/ಬಿಡಿ/ನಾಹಜಾನಿ/2003 ದಿನಾಂಕ : 07-11-2008.
2. ವಾಣಿಜ್ಯ ತೆರಿಗೆ ಆಯುಕ್ತರ ಪತ್ರ ಸಂಖ್ಯೆ : ವಿಸಿಆರ್/ಜಿಎಜಡ್/ಸಿಆರ್-35/2008-2009 ದಿನಾಂಕ : 27-11-2008.

ಪ್ರಸ್ತಾವನೆ :

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1)ರ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ರವರ ಪತ್ರದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಪರಿಶಿಷ್ಟ ಜಾತಿಯ ಮೀಸಲಾತಿ ಅಡಿಯಲ್ಲಿ ನೌಕರಿ ಪಡೆದಿರುವ ಶ್ರೀಮತಿ ಬಿ. ಮಧುಮತಿ, ಪ್ರಸ್ತುತ ವಾಣಿಜ್ಯ ತೆರಿಗೆ ಉಪ ಆಯುಕ್ತರು, ಬೆಂಗಳೂರು, ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ಕೋರಿ ವಾಣಿಜ್ಯ ತೆರಿಗೆ ಆಯುಕ್ತರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ವಿಚಾರಣೆಯಿಂದ ಕಂಡುಬಂದ ಸತ್ಯಾಂಶಗಳ ಪ್ರಕಾರ ಪರ್ಸೋನಲ್-1, ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಬೆಂಗಳೂರು, ಇಲ್ಲಿ ವಾಣಿಜ್ಯ ತೆರಿಗೆ ಉಪ ಆಯುಕ್ತರಾಗಿರುವ ಶ್ರೀಮತಿ ಮಧುಮತಿರವರು 'ಹಿಂದೂ ಕೋಟೆಯಾರ್' ಜನಾಂಗಕ್ಕೆ ಸೇರಿದ್ದು, ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 192, 196 ಮತ್ತು 420ರ ರೀತ್ಯ ಮೊಕದ್ದಮೆ ಸಂಖ್ಯೆ : 329/2008ರ ಕಲಂ 3ರ ಕ್ಲಾಸ್ (1) ಸಬ್ ಕ್ಲಾಸ್ (9) ಎಸ್.ಸಿ./ಎಸ್.ಟಿ./(ಪಿಎ)1989ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿದ್ದು, ತನಿಖೆಯಲ್ಲಿ ಅಧಿಕಾರಿಯವರು ನೀಡಿರುವ 'ಕೋಟೆಗಾರ್' ಪರಿಶಿಷ್ಟ ಜಾತಿ ಪ್ರಮಾಣ ಪತ್ರವು ಸುಳ್ಳೆಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ ಬೆಂಗಳೂರು ನಗರ ಜಿಲ್ಲೆ ಇವರ ಆದೇಶದ ದಿನಾಂಕ : 17-06-2004ರ ಮೇರೆಗೆ ಶ್ರೀಮತಿ ಬಿ. ಮಧುಮತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರು ಪರಿಶಿಷ್ಟ ಜಾತಿ "ಕೋಟೆಗಾರ್" ಜಾತಿ ಪ್ರಮಾಣ ಪತ್ರ ನೀಡಿದ್ದು, ದಿನಾಂಕ : 29-03-2003ರ ರೀತ್ಯ ಇವರಿಗೆ ಪರಿಶಿಷ್ಟ ಜಾತಿಯ ಮೀಸಲಾತಿಯಡಿಯಲ್ಲಿ ಯಾವುದೇ ಸೌಲಭ್ಯವನ್ನು ನೀಡಬಾರದೆಂದು "ಹಿಂದೂ ಕೋಟೆಯಾರ್" ಸಾಮಾನ್ಯ ಜಾತಿಯಲ್ಲಿ ಮುಂದುವರೆಯಲು ಆದೇಶಿಸಿರುತ್ತಾರೆ.

ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಹೆಚ್ಚುವರಿ ಡಿ.ಜಿ.ಪಿ.ರವರು ಇವರ ಜಾತಿ ಪ್ರಮಾಣ ಪತ್ರದ ಬಗ್ಗೆ ತನಿಖೆ ನಡೆಸಿದ್ದು, ಶ್ರೀಮತಿ ಬಿ.ಮಧುಮತಿ, ಪ್ರಸ್ತುತ ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರು ಮೂಲತಃ "ಹಿಂದೂ ಕೋಟೆಯಾರ್" ಜಾತಿಗೆ ಸೇರಿದವರಾಗಿದ್ದು, ಇವರು 1991-92ನೇ ಸಾಲಿನಲ್ಲಿ 'ಕೋಟೆಗಾರ್' ಎಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ, 1985ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ವರ್ಗದ ವಿಶೇಷ ನೇಮಕಾತಿಯಡಿಯಲ್ಲಿ ಗ್ರೂಪ-ಎ ಹುದ್ದೆಗೆ ಅರ್ಜಿ ಸಲ್ಲಿಸಿ, ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರಿಗೆ ಸುಳ್ಳು ಮಾಹಿತಿ ನೀಡಿ, 1991-92ನೇ ಸಾಲಿನಲ್ಲಿ "ಕೋಟೆಗಾರ್" ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದು, ಹಾಜರುಪಡಿಸಿ ದಿನಾಂಕ : 16-01-1991ನೇ ಸಾಲಿನಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾಗಿ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಗ್ರೂಪ್-ಎ ಹುದ್ದೆಗೆ ನೇಮಕವಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಹೆಚ್ಚುವರಿ ಡಿ.ಜಿ.ಪಿ ರವರು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿ, ಶ್ರೀಮತಿ ಬಿ. ಮಧುಮತಿರವರನ್ನು ಕೂಡಲೇ ಕೆಲಸದಿಂದ ವಜಾ ಮಾಡುವಂತೆ ಸೂಚಿಸಿರುತ್ತಾರೆ. ಹೆಚ್ಚುವರಿ ಡಿ.ಜಿ.ಪಿ. ರವರು ಉಲ್ಲೇಖಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಉದ್ಧೃತ ಭಾಗವು ಈ ಕೆಳಕಂಡತಿದೆ :

"A person procuring appointment in a post meant for reserved category candidate, on the basis of false caste certificate, held, in not a person holding civil post with in the meaning of article 311 such appointment, held, is no appointment in the eye of the law. Hence dismissal of a person so appointed, held does not attract article 311".

ಭಾರತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ : 4636/2008ರ ಮಧುಲಿಕ ಗುರುಪ್ರಸಾದ ಧಾಹಿರ್ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ : 27-05-2008 ರಂದು ನೀಡಿರುವ ತೀರ್ಪಿನ ಅನುಸಾರ ಯಾವುದೇ ನೋಟೀಸನ್ನು ನೀಡದೇ ನೇಮಕಾತಿಯನ್ನು ರದ್ದು ಮಾಡತಕ್ಕದ್ದು ಮತ್ತು ಯಾವುದೇ ಹುದ್ದೆಯಲ್ಲಿ ಮುಂದುವರೆಸತಕ್ಕದ್ದಲ್ಲ ಎಂದು ತಿಳಿಸಲಾಗಿದೆ. ಅದರ ಉದ್ಧೃತ ಭಾಗ ಈ ಕೆಳಕಂಡಂತೆ ಇರುತ್ತದೆ.

"as soon as the finding is recorded by the the scrutiny committee holding that the certificate obtained was false on its cancellation and confiscation simultaneously, it should be communicated to the educational institution concerned, or the appointing

authority with a request to cancel the admission on the appointment thereon, the admission or appointment shall be cancelled without any further notice to the candidate and the candidate shall be debarred from further study or continue in office in a post".

ಶ್ರೀಮತಿ ಬಿ.ಮಧುಮತಿ, ಪ್ರಸ್ತುತ ವಾಣಿಜ್ಯ ತೆರಿಗೆ ಉಪ ಆಯುಕ್ತರು ಮತ್ತು ಇತರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ : 15034/2008ನ್ನು ವಾಪಸ್ಸ್ ಪಡೆದಿರುವ ಕಾರಣ ದಿನಾಂಕ : 08-04-2011ರ ಆದೇಶದಲ್ಲಿ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ತನಿಖೆಯಿಂದ ಶ್ರೀಮತಿ ಬಿ. ಮಧುಮತಿರವರು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ, ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಹುದ್ದೆಗೆ ನೇಮಕಗೊಂಡಿರುವುದು ಸಾಬೀತಾಗಿರುವುದರಿಂದ ಮೇಲೆ ಉಲ್ಲೇಖಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಸರ್ಕಾರವು ಪರಿಶೀಲಿಸಿ, ಶ್ರೀಮತಿ ಬಿ. ಮಧುಮತಿ ಇವರನ್ನು ಸೇವೆಯಲ್ಲಿ ಮುಂದುವರೆಸುವುದು ಸೂಕ್ತವಲ್ಲವೆಂದು ತೀರ್ಮಾನಿಸಿ ಅವರನ್ನು ತಕ್ಷಣ ಸರ್ಕಾರಿ ಸೇವೆಯಿಂದ ವಜಾ ಮಾಡುವುದು ಸೂಕ್ತವೆಂದು ಪರಿಗಣಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 79 ವಾತೆತ 2008, ಬೆಂಗಳೂರು, ದಿನಾಂಕ : 25-01-2012

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಶಿಸ್ತುಪ್ರಾಧಿಕಾರವಾದ ಸರ್ಕಾರವು, ಶ್ರೀಮತಿ ಬಿ.ಮಧುಮತಿ, ಪ್ರಸ್ತುತ ವಾಣಿಜ್ಯ ತೆರಿಗೆ ಉಪ ಆಯುಕ್ತರು (ಪರ್ಸೋನಲ್-I), ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು, ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಆರ್. ಚಂದ್ರಶೇಖರಾರಾಧ್ಯ
ಪೀಠಾಧಿಕಾರಿ
ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

ಪಿ.ಆರ್. 444

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETRIAT

Sub: Withdrawl of approval of the project proposal of M/s OPTO Circuits (India) Limited to establish "SEZ Electronics Hardware Projects and Transfer of approval from M/s Opto Circuits (India) Limited to M/s Opto Infrastructure Ltd.

Read :
1. Government Order No. ITD 34 MDA 2007(1) dated : 04-03-2008.
2. Government Order No. ITD 08 MDA 2008 (37) dated : 27-05-2008.
3. Proceedings of 26th State High Level Clearance Committee (SHLCC) meeting held on 09-11-2011.
4. Letter No. CI/286/SPI/2011, dated : 17-12-2011 of Director (Technical Cell) Commerce and Industries department, Bangalore.

Preamble:

In the Government Order read at (1) above, approval was accorded to M/s Opto Circuits (India) Ltd., to establish SEZ for Electronics Hardware Sector at Pharma SEZ, Hassan in 250 acres of land in KIADB Industrial area at Hassan.

In the Government Order read at (2) above, Government was accorded approval to transfer of approval from M/s Opto Circuits (India) Ltd., to M/s Opto Infrastructure Ltd. and to include IT and ITES activities to SEZ for Electronic Hardware Project activity.

In the Proceedings read at (3) it states that, again the company is seeking SHLCC approval for change of activity to manufacturing of Equipments, Devices, Accessories including Consumables for medical and other applications. Instead of SEZ, for Electronic Hardware, IT and ITES approved earlier.

The committee approved for change of activity from "SEZ for Electronic Hardware and IT/ITES to manufacturing equipment, Devices, Accessories including Consumables for Medical and other applications - SEZ". The project proponent to comply with the norms under SEZ.

1. In the letter read at (4) Director, technical cell, Commerce and Industries Departments requested to issue amended G.O. from Information technology, Bio-technology and Science and technology department. But the change of activity is not pertains to Information technology, Bio-technology and Science and technology department.

This proposal has been examined. Government is pleased to withdraw the Orders. Hence this Order.

Government Order No. ITD 55 MDA 2011, Bangalore, Dated: 23rd January 2012

In the circumstances explained in the Preamble, Government are pleased to withdraw the Government Orders (1) ITD 34 MDA 2007 (1) dated : 04-03-2008 and (2) ITD 08 MDA 2008 (37) dated : 27-05-2008.

By Order and in the Name of the Governor of Karnataka
E. Ramakrishnappa
Under Secretary to Government
Department of Information Technology, Biotechnology
and Science & Technology

PR. No. 445

INFORMATION TECHNOLOGY, BIO TECHNOLOGY AND SCIENCE & TECHNOLOGY SECRETARIAT

ADDENDUM

Sub : Constitution of Selection Committee for BT Finishing School.

No. ITD 18 MDA 2011, Bangalore Dated: 24-01-2012

In the order portion of Government Order No: ITD 01 MDA 2010 Dated: 27-05-2010 after Sl No: 6 the following shall be inserted.

7) Smt. Ramya S. — Member
General Manager (F & A),
KBITS

By Order and in the name of the Governor of Karnataka,
S. Raju
Deputy Secretary to Government
Department of Information Technology,
Bio Technology and Science & Technology

PR. 446

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2011–2012 ನೇ ಸಾಲಿನ ಮೂರನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಯೋಇ 25 ಹೈಕಮಂ 2011, ದಿನಾಂಕ: 20.05.2011.
2. ಸರ್ಕಾರದ ಆದೇಶ ಸಂಖ್ಯೆ: ಯೋಇ 25 ಹೈಕಮಂ 2011, ದಿನಾಂಕ: 20.09.2011.
3. ಪತ್ರ ಸಂಖ್ಯೆ: ಹೈಕಪ್ರಮಂ/ಹನಿ/ಎಸಿ–1/2011–12, ದಿನಾಂಕ: 24.11.2011.

ಪ್ರಸ್ತಾವನೆ :

2011–12ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515–00–800–0–01 (ಯೋಜನೆ)" ಅಡಿಯಲ್ಲಿ ರೂ. 130.00 ಲಕ್ಷಗಳನ್ನು ಹಾಗೂ 4515–0–800–0–01 ಅಡಿಯಲ್ಲಿ ರೂ. 4370.00 ಲಕ್ಷಗಳನ್ನು ಒದಗಿಸಲಾಗಿದೆ ಮೇಲೆ ಓದಲಾದ (1) ಮತ್ತು (2) ರಲ್ಲಿನ ಸರ್ಕಾರದ ಆದೇಶದಲ್ಲಿ ಮೊದಲನೇ ಹಾಗೂ ಎರಡನೇ ಕಂತಾಗಿ ಒಟ್ಟು ರೂ. 2250.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (3) ರ ಪತ್ರದಲ್ಲಿ ಕಾರ್ಯದರ್ಶಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಮೂರನೇ ಕಂತನ್ನು ಬಿಡುಗಡೆ ಮಾಡಲು ಕೋರಿರುವ ಹಿನ್ನೆಲೆಯಲ್ಲಿ ಮಂಡಳಿಗೆ ಮೂರನೇ ಕಂತಾಗಿ ರೂ. 1125.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯೋಇ, 25 ಹೈಕಮಂ 2011, ಬೆಂಗಳೂರು, ದಿನಾಂಕ: 27ನೇ ಡಿಸೆಂಬರ್ 2011

2011–12ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಆಡಳಿತ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "2515–00–800–0–01–101–(ಸಹಾಯಾನುದಾನ)" ಅಡಿಯಲ್ಲಿ ರೂ. 40.00 ಲಕ್ಷಗಳನ್ನು (ನಲವತ್ತು ಲಕ್ಷಗಳು ಮಾತ್ರ) ಬಂಡವಾಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "4515–00–800–0–01–132" ಅಡಿ ರೂ. 835.00 ಲಕ್ಷಗಳನ್ನು (ಎಂಟುನೂರಾ ಮೂವತ್ತೈದು ಲಕ್ಷಗಳು ಮಾತ್ರ) ವಿಶೇಷ ಘಟಕ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515–00–800–0–01–422" ಅಡಿಯಲ್ಲಿ ರೂ. 175.00 ಲಕ್ಷಗಳನ್ನು (ಒಂದು ನೂರ ಎಪ್ಪತ್ತೈದು ಲಕ್ಷಗಳು ಮಾತ್ರ) ಹಾಗೂ ಗಿರಿಜನ ಉಪಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515–00–800–0–01–423" ಅಡಿಯಲ್ಲಿ ರೂ. 75.00 ಲಕ್ಷಗಳು (ರೂ. ಎಪ್ಪತ್ತೈದು ಲಕ್ಷಗಳು ಮಾತ್ರ) ಒಟ್ಟು ರೂ. 1125.00 ಲಕ್ಷಗಳನ್ನು (ಹನ್ನೊಂದು ಕೋಟಿ ಇಪ್ಪತ್ತೈದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

2) ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2011–12ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/537/ವೆಚ್ಚ–06/2011, ದಿನಾಂಕ: 17.12.2011ರಲ್ಲಿನ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಚಿಕ್ಕರಾಜು
ಸರ್ಕಾರದ ಅಧೀನ ಕಾರ್ಯದರ್ಶಿ–1 & 2
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 447

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಯೋಇ 15 ಮಪ್ರಮಂ 2011, ಬೆಂಗಳೂರು, ದಿನಾಂಕ: 25-1-2012

ಸರ್ಕಾರದ ಆದೇಶ ಸಂಖ್ಯೆ: ಯೋಇ 15 ಮಪ್ರಮಂ 2011 ದಿ: 16-1-2012ರಲ್ಲಿ ಲೆಕ್ಕಶೀರ್ಷಿಕೆ "4515-00-80-0-03-132" ಅಡಿಯಲ್ಲಿ ರೂ. 640.00 ಲಕ್ಷ ಎಂಬುದನ್ನು ಬದಲಾಗಿ 625.00 ಲಕ್ಷ ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 448

ಎಂ.ಜಿ. ಮುಳ ಕೂರ

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ) ಈ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/117/ಎಸ್‌ಒಆರ್-1/2011-12 ದಿನಾಂಕ 4/10/2011

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 4/10/2011ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು ಈ ಸಂಘವು ಸಂಖ್ಯೆ:466/75-76 ರಂತೆ ನೊಂದಣಿಯಾಗಿದ್ದು ಸಂಘದ ಬೈಲಾ ಪ್ರಕಾರ ಸಮಿತಿ ಅವಧಿ 3 ವರ್ಷಗಳಾಗಿರುತ್ತವೆ. ದಿನಾಂಕ 3/2/2008 ರಂದು ಸಮಿತಿಗೆ ಚುನಾವಣೆ ನಡೆದು ದಿನಾಂಕ 31/1/2011ಕ್ಕೆ ಅವಧಿ ಮುಕ್ತಾಯವಾಗಿದ್ದು ಇದುವರೆವಿಗೂ ಚುನಾವಣೇ ನಡೆಸಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಬೆಂಗಳೂರು ನಗರ ಜಿಲ್ಲೆ, ಸಂಘಗಳ ನೊಂದಣಾಧಿಕಾರಿ, ಕೇಂದ್ರವಲಯ, ಇವರು ವರದಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಸಂಘಕ್ಕೆ ಚುನಾವಣೇ ನಡೆಯದೆ ಇರುವುದರಿಂದ ದೂರು ಅರ್ಜಿಗಳು ಬರುತ್ತಿವೆ. ಸಂಘಕ್ಕೆ ಬೈಲಾ ಪ್ರಕಾರ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸುವುದು ಅವಶ್ಯಕವಾಗಿದೆ. ಅಲ್ಲದೆ ಮಂಡಳಿ ಚುನಾವಣೆ ನಡೆಸಲು ವಿಫಲರಾಗಿರುವುದರಿಂದ ಸದರಿ ಸಂಘಕ್ಕೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960 ರ ಕಲಂ 27 (ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಜಿಲ್ಲಾ ಸಂಘಗಳ ನೊಂದಣಾಧಿಕಾರಿಗಳು, ಕೇಂದ್ರವಲಯ, ಬೆಂಗಳೂರುರವರ ಅಭಿಪ್ರಾಯದ ಶಿಫಾರಸ್ಸನ್ನು ಪರಿಗಣಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆಯ ಆಡಳಿತ ಅವಧಿ ಮುಗಿದಿದ್ದು, ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ವಿಫಲರಾಗಿರುವುದರಿಂದ ಈ ಸಂಸ್ಥೆಯಲ್ಲಿ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960 ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 04 ಸಸಂನೋ 2012, ಬೆಂಗಳೂರು, ದಿನಾಂಕ: 21ನೇ ಜನವರಿ, 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ) ಬೆಂಗಳೂರು ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಂಘಗಳ ಜಿಲ್ಲಾ ನೊಂದಣಾಧಿಕಾರಿಗಳು ಕೇಂದ್ರ ವಲಯ, ಮಲ್ಲೇಶ್ವರಂ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯಾಗಿ ಆರು (06) ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಸ್ಥೆಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ

449

ಸರ್ಕಾರದ ಅಧೀನ ಕಾರ್ಯದರ್ಶಿ-2

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಹಣ್ಣು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬೆಂಗಳೂರು –ಬ್ಯಾಟರಾಯನಪುರ ಉಪ ಮಾರುಕಟ್ಟೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ.) ಆಧುನಿಕ ಮಾರುಕಟ್ಟೆ ನಿರ್ಮಾಣ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪತ್ರಸಂಖ್ಯೆ: ಕೃಮಾಇ/ಮಾಆಯೋ/ಆಆ-2410/2010-11 ದಿ: 21.10.2010.
2. ಸರ್ಕಾರದ ಪತ್ರ ಸಂಖ್ಯೆ: ಸಇ 322 ಎಂಆರ್‌ಇ 2010 ದಿನಾಂಕ: 4.11.2010
3. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪತ್ರಸಂಖ್ಯೆ: ಕೃಮಾಇ/ಮಾಆಯೋ/ಆಆ-10285/2010-11 ದಿ: 16.12.2010
4. ಸರ್ಕಾರ ಪ್ರಧಾನ ಕಾರ್ಯದರ್ಶಿ ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04.01.2011 ರಂದು ನಡೆದ ಸಭೆಯ ನಡವಳಿಗಳು.
5. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಇವರ ಪತ್ರಸಂಖ್ಯೆ: ಕೃಮಾಇ/ಮಾಆಯೋ/ಆಆ/ತಾಂತ್ರಿಕ/11595/2010-11 ದಿ: 24.1.2011
6. ಸರ್ಕಾರದ ಆದೇಶ ಸಂಖ್ಯೆ: ಸಇ 322 ಎಂಆರ್‌ಇ 2010 ದಿನಾಂಕ: 25.1.2011
7. ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಇವರ ಪತ್ರ ಸಂಖ್ಯೆ: DAM/PAS/42/2011-12 ದಿನಾಂಕ: 18.7.2011

ಪ್ರಸ್ತಾವನೆ :

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 1966 ಹಾಗೂ ನಿಯಮಗಳು 1968 ರನ್ವಯ ಬೆಂಗಳೂರಿನಲ್ಲಿ 1994 ರಲ್ಲಿ ಸ್ಥಾಪಿಸಲಾದ ಹಣ್ಣು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ ಈ ಮಾರುಕಟ್ಟೆಗೆ ರೈತರ ಹಿತ ಕಾಪಾಡಲು ಹಾಗೂ ಹಣ್ಣು ಮತ್ತು ತರಕಾರಿ ವ್ಯಾಪಾರಕ್ಕೆ ಪೂರಕವಾದ ವ್ಯವಸ್ಥಿತ ಸೌಲಭ್ಯವನ್ನು ಕಲ್ಪಿಸಲು ಕಲಾಸಿಪಾಳ್ಯದಲ್ಲಿ ನಡೆಯುತ್ತಿರುವ ತರಕಾರಿ ವ್ಯಾಪಾರವನ್ನು ಬೆಂಗಳೂರು ನಗರ ಕೇಂದ್ರ ಪ್ರದೇಶದ ದಟ್ಟಣೆಯಿಂದ ನಗರದ ಹೊರ ವಲಯಕ್ಕೆ ಸ್ಥಳಾಂತರಿಸಲು 1987 ರಲ್ಲಿ ತರಕಾರಿಗಾಗಿ ಸಗಟು ಮಾರುಕಟ್ಟೆಯನ್ನಾಗಿ ಸ್ಥಾಪಿಸಿ ಉಪ ಮಾರುಕಟ್ಟೆ ಪ್ರಾಂಗಣವಾಗಿ ಅಭಿವೃದ್ಧಿಪಡಿಸಲು 31 ಎಕರೆ ಜಮೀನನ್ನು ಭೂ ಸ್ವಾಧೀನದ ಮೂಲಕ ಪಡೆಯಲಾಗಿದೆ.

ಹಣ್ಣು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ ಬೆಂಗಳೂರು ಇದಕ್ಕೆ ಸೇರಿದ ಬ್ಯಾಟರಾಯನಪುರ ಉಪ ಮಾರುಕಟ್ಟೆಯಲ್ಲಿ ಟರ್ನ್ ಕೀ ಆಧಾರದ ಮೇಲೆ ರೂ. 23-00 ಕೋಟಿ ವೆಚ್ಚದಲ್ಲಿ ಆಧುನಿಕ ಸಗಟು ಮಾರುಕಟ್ಟೆ ನಿರ್ಮಿಸಲು ಮೆ॥ ಎನ್.ಡಿ.ಡಿ.ಬಿ ಯೊಂದಿಗೆ ಕರಾರನ್ನು ಮಾಡಿಕೊಳ್ಳಲಾಗಿತ್ತು. ನಂತರ ಸದರಿ ಸಂಸ್ಥೆ ರೂ. 41.00 ಕೋಟಿ ವೆಚ್ಚವಾಗುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ದಿನಾಂಕ: 16.03.2006 ರಂದು ಸರ್ಕಾರದ ಕಾರ್ಯದರ್ಶಿ ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಸ್ಥೆಯೊಂದಿಗೆ ಮಾಡಿಕೊಂಡ ಕರಾರನ್ನು ರದ್ದುಪಡಿಸಲಾಯಿತು.

ತದನಂತರ ದಿನಗಳಲ್ಲಿ ಬೆಂಗಳೂರು ಹಣ್ಣು ತರಕಾರಿಗಳ (ವಿಶೇಷ) ಮಾರುಕಟ್ಟೆ ಪ್ರಾಂಗಣದಲ್ಲಿ 400 ಸಗಟು ವ್ಯಾಪಾರಸ್ಥರು ಲೈಸೆನ್ಸ್ ಪಡೆದು ವ್ಯಾಪಾರ ವಹಿವಾಟು ನಡೆಸುತ್ತಿದ್ದು ಆ ಪ್ರದೇಶದ ಜಾಗವು ಕಿರಿದಾಗಿದ್ದು ಇವರಿಗೆಲ್ಲ ಬ್ಯಾಟರಾಯನಪುರದಲ್ಲಿರುವ ಜಾಗದಲ್ಲಿ ಹೊಸ ಮಾರುಕಟ್ಟೆಯನ್ನು ಸ್ಥಾಪಿಸಿ ಮಳಿಗೆಗಳನ್ನು ಹಂಚಿಕೆ ಮಾಡುವ ಬಗ್ಗೆ ಪರಿಶೀಲಿಸಲಾಯಿತು. ಇದಕ್ಕಾಗಿ ತಗಲುವ ವೆಚ್ಚವು ಅತ್ಯಧಿಕವಾಗಿದ್ದು ಸಮಿತಿಯಲ್ಲಿ ಅಷ್ಟೊಂದು ಹಣವು ಇಲ್ಲದೇ ಇರುವುದರಿಂದ ಸಾರ್ವಜನಿಕ ಸಹಭಾಗಿತ್ವದಲ್ಲಿ ಆಧುನಿಕ ಸಗಟು ಮಾರುಕಟ್ಟೆಯನ್ನು ವಿನ್ಯಾಸಗೊಳಿಸಲಾಯಿತು. ಈ ಹಿನ್ನೆಲೆಯಲ್ಲಿ ಪ್ರಥಮವಾಗಿ 2007 ರಲ್ಲಿ ಸಾರ್ವಜನಿಕ ಟೆಂಡರ್‌ನ್ನು ಕರೆಯಲಾಗಿತ್ತು ಅಂದರೆ ಈ ಟೆಂಡರ್‌ಗೆ ಇದರಲ್ಲಿ ಮೆ॥ ಯೂನಿಟೆಕ್ ಲಿ. ನವದೆಹಲಿ ಇವರೊಬ್ಬರು ಮಾತ್ರ ತಾಂತ್ರಿಕ ಅರ್ಹತೆಯನ್ನು ಹೊಂದಿದ್ದು ಒಂದೇ ಸಂಸ್ಥೆ ಭಾಗವಹಿಸಿದ್ದರಿಂದ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ: 22.10.2007ರಂದು ನಿರರ್ಥಕಗೊಳಿಸಿ ರದ್ದುಪಡಿಸಲಾಯಿತು. ಎರಡನೇ ಬಾರಿ ಕರೆಯಲಾದ ಟೆಂಡರ್‌ನಲ್ಲಿ ಮೆ॥ ಎಸ್.ಪಿ.ಎಂ.ಎಲ್. ಜೊತೆಗೆ ಎಲ್.ಎಂ.ಜೆ. ಇಂಟರ್ ನ್ಯಾಷನಲ್ ಲಿ. ಮತ್ತು ಝಡ್ ಸಿಸಿಎಲ್ ಜೊತೆಗೆ ಜಿ.ವಿ.ಪಿ.ಆರ್.ಇ.ಎಲ್. ಎಂಬ ಎರಡು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದು ತಾಂತ್ರಿಕ ಅರ್ಹತೆಯಲ್ಲಿ ಒಂದೇ ಸಂಸ್ಥೆ ಭಾಗವಹಿಸಿದ ಕಾರಣ ಸದರಿ ಟೆಂಡರ್‌ನ್ನು ಸಹ ದಿನಾಂಕ: 15.02.2010 ರಂದು ರದ್ದುಪಡಿಸಲಾಯಿತು.

ಬ್ಯಾಟರಾಯನಪುರದಲ್ಲಿ ಕಟ್ಟಿಸಲು ಉದ್ದೇಶಿಲಾಗಿದ್ದ ಮಾರುಕಟ್ಟೆ ಸಂಕೀರ್ಣದ ಅಭಿವೃದ್ಧಿಗೆ ಸಾಕಷ್ಟು ಸಂಸ್ಥೆಗಳು ಭಾಗವಹಿಸದಿರುವುದರ ಹಿನ್ನೆಲೆಯಲ್ಲಿ ದಿ: 24.04.2010 ರಂದು ಅಂದಿನ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ 20 ಎಕರೆ ನಿವೇಶನವನ್ನು ಮಾರುಕಟ್ಟೆ ಸಂಕೀರ್ಣ ನಿರ್ಮಾಣಕ್ಕಾಗಿ ಮತ್ತು 10 ಎಕರೆ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಬಳಸುವುದಕ್ಕಾಗಿ ಕಾಯ್ದಿರಿಸಲು ತೀರ್ಮಾನಿಸಿದೆ, ಕೆಲವು ಸರ್ಕಾರಿ ಸಂಸ್ಥೆಗಳು ಇದೇ ರೀತಿಯ ಯೋಜನೆಯಲ್ಲಿ ಹೆಚ್ಚಿನ ರಿಯಾಯಿತಿ ಅವಧಿಯನ್ನು ನಿಗದಿಪಡಿಸಿರುವುದನ್ನು ಪರಿಗಣಿಸಿ ಈ ಯೋಜನೆಯಲ್ಲಿಯೂ ಅವಧಿಯನ್ನು 30 ವರ್ಷಗಳಿಂದ 60 ವರ್ಷಗಳಿಗೆ ವಿಸ್ತರಿಸಲು ತೀರ್ಮಾನಿಸಿದೆ.

ಅದರಂತೆ ಮಾರುಕಟ್ಟೆ ನಿರ್ಮಿಸಲು ಇರುವ ಜಾಗದಲ್ಲಿ 20 ಎಕರೆ ಜಮೀನನ್ನು ಮಾರುಕಟ್ಟೆ ಸಂಕೀರ್ಣ ನಿರ್ಮಾಣಕ್ಕಾಗಿ ಮತ್ತು 10 ಎಕರೆ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಬಳಸಲು ತೀರ್ಮಾನಿಸಿ, ಯೋಜನೆಯಲ್ಲಿ ಹೆಚ್ಚಿನ ರಿಯಾಯಿತಿ ಅವಧಿಯನ್ನು 30 ವರ್ಷಗಳಿಂದ 60 ವರ್ಷಗಳಿಗೆ ವಿಸ್ತರಿಸಲು ತೀರ್ಮಾನಿಸಿ ಯೋಜನೆಯಲ್ಲಿ 3 ಬ್ಲಾಕ್‌ಗಳಲ್ಲಿ 436 ಅಂಗಡಿಗಳು, 20 ಮೀಟರ್ ಅಗಲದ ಕಾಂಕ್ರೀಟ್ ರಸ್ತೆ, ಶೀತಲಗೃಹ ನಿರ್ಮಾಣ, ವರ್ಗೀಕರಣ, ವಿಂಗಡಣೆ ಮತ್ತು ಪೂರಕ ಚಟುವಟಿಕೆಗಳಿಗಾಗಿ ಸೌಲಭ್ಯಗಳನ್ನು ನೀಡುವುದು. ಮಾರುಕಟ್ಟೆ ಸಮಿತಿಯ ಆಡಳಿತ ಕಛೇರಿ, ಬ್ಯಾಂಕ್, ವಿಶ್ರಾಂತಿ ಗೃಹ ಮುಂತಾದ ಸೌಲಭ್ಯಗಳಿಗಾಗಿ ಎರಡು ಮಹಡಿಗಳ ಕಟ್ಟಡವನ್ನು ಹಾಗೂ ಬಾಡಿಗೆ ಮೇಲೆ ನೀಡುವ ಸಲುವಾಗಿ ಹೆಚ್ಚುವರಿ ಕಛೇರಿ ಜಾಗವನ್ನು ನಿರ್ಮಿಸುವುದು ಹಾಗೂ ನೆಲಮಾಳಿಗೆಯಲ್ಲಿ ವಾಹನಗಳ ನಿಲುಗಡೆ ಸೌಲಭ್ಯವನ್ನು ಒದಗಿಸುವುದು. ಟೆಂಡರ್ ದಾಖಲೆಯಲ್ಲಿ

ಪ್ರತಿಯೊಂದು ಸೌಲಭ್ಯಕ್ಕೆ ಗುರುತಿಸಲಾದ ನಿರ್ದಿಷ್ಟ ವಿಸ್ತೀರ್ಣ ಮತ್ತು ಕಟ್ಟಡ ನಿರ್ಮಾಣದ ನಿರ್ದಿಷ್ಟ ಗುಣಮಟ್ಟವನ್ನು ನಿಗದಿಪಡಿಸಲು ತೀರ್ಮಾನಿಸಿ 3ನೇ ಬಾರಿಗೆ ದಿನಾಂಕ: 20.08.2010 ರಂದು ಟೆಂಡರ್ ಕರೆಯಲಾಯಿತು.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ) ಆಧುನಿಕ ಮಾರುಕಟ್ಟೆ ನಿರ್ಮಿಸುವ ಕುರಿತು ಟೆಂಡರ್ ಕರೆದು ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳ ತಾಂತ್ರಿಕ ಬಿಡ್‌ನ್ನು ಮೌಲ್ಯಮಾಪನ ಮಾಡಲು ಟೆಂಡರ್ ಪರಿಶೀಲನ ಉಪ ಸಮಿತಿಯನ್ನು ರಚಿಸುವಂತೆ ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಲೆಕ್ಕ ಪತ್ರ ಇಲಾಖೆ, ಪ್ರಧಾನ ವಾಸ್ತುಶಿಲ್ಪಿ ಕರ್ನಾಟಕ ಸರ್ಕಾರ, ಮೂಲಸೌಲಭ್ಯ ಇಲಾಖೆಯ ಪ್ರತಿನಿಧಿ ಮತ್ತಿತರರನ್ನು ಒಳಗೊಂಡ ಒಂದು ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ದಿನಾಂಕ: 04.11.2010 ರಂದು ರಚಿಸಲಾಗಿತ್ತು.

ಟೆಂಡರ್ ಮೌಲ್ಯಮಾಪನ ಸಮಿತಿಯು ದಿನಾಂಕ: 13.12.2010 ರಂದು ತೀರ್ಮಾನಿಸಿದಂತೆ ಹಾಗೂ ಮೆ॥ ಐಡೆಕ್ ಸಂಸ್ಥೆಯಿಂದ ತಾಂತ್ರಿಕ ಮಾಹಿತಿಯನ್ನು ಮೌಲ್ಯಮಾಪನ ಮಾಡಿಸಿ ಟೆಂಡರ್‌ನಲ್ಲಿ ಭಾಗವಹಿಸಿದ 4 ಸಂಸ್ಥೆಗಳಲ್ಲಿ ಮೆ॥ ಟ್ರ್ಯೂ ಫ್ಯಾಬ್ ಇಂಜಿನಿಯರ್ಸ್ ಲಿ. ಸಂಸ್ಥೆಯನ್ನು ಹೊರತುಪಡಿಸಿ ಉಳಿದ 3 ಸಂಸ್ಥೆಗಳಾದ ಮೆ॥ ಕೋಸ್ಟಲ್ ಪ್ರಾಜೆಕ್ಟ್ಸ್ ಲಿ. ಮೆ॥ ಶೋಭಾ ಡೆವಲಪರ್ಸ್ ಲಿ., ಮೆ॥ ಆಕೃತಿ ಸಿಟಿ ಲಿ. ಇವರುಗಳು ಯೋಜನಾ ವರದಿಯಲ್ಲಿನ ಷರತ್ತುಗಳನ್ನು ಪೂರೈಸಿರುವುದರಿಂದ ಅರ್ಹರಾಗಿರುವುದಾಗಿ ಮೇಲೆ(3) ರಲ್ಲಿ ಓದಲಾದ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04.01.2011 ರಂದು ನಡೆದ ಸಭೆಯಲ್ಲಿ ಐಡೆಕ್ ಸಂಸ್ಥೆಯು ನೀಡಿದ ವರದಿಯ ಮೇರೆಗೆ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಗಳಿಸಿದ್ದ ಮೂರು ಸಂಸ್ಥೆಗಳ ಆರ್ಥಿಕ ಬಿಡ್‌ನ್ನು ತೆರೆಯಲು ತೀರ್ಮಾನಿಸಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಆಧುನಿಕ ಮಾರುಕಟ್ಟೆಯ ನಕ್ಷೆ, ಸ್ಥಳದ ವಿಸ್ತೀರ್ಣ ಇವುಗಳನ್ನು ಪರಿಶೀಲಿಸಿ ಕಟ್ಟಡದಲ್ಲಿ ಗಾರ್ಬೇಜ್ ವಿಲೇವಾರಿ, ಮಳೆ ನೀರು ಕೊಯ್ಲು (Rain water Harvesting), ಸೋಲಾರ್ ಉಪಕರಣಗಳನ್ನು ಅಳವಡಿಸುವುದು ಹಾಗೂ ಮಾರುಕಟ್ಟೆಯಲ್ಲಿ ವಾಹನಗಳ ಸುಲಲಿತ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸುವುದು, ಅಂಗಡಿ ಪ್ಲಾಟ್ ಫಾರಂಗಳನ್ನು ಉದ್ದಗಲಕ್ಕೂ ನಿರ್ಮಿಸುವುದು, ಕಾಂಕ್ರಿಟ್ ರಸ್ತೆಗಳನ್ನು ನಿರ್ಮಿಸುವುದು, ಕಟ್ಟಡದಲ್ಲಿ ಟೊಳ್ಳು ಇಟ್ಟಿಗೆಗಳನ್ನು (Hollow Bricks) ಬಳಸುವುದು, ಕಟ್ಟಡದ ಮೊದಲನೇ ಮಹಡಿಯಲ್ಲಿ ಕಛೇರಿಯ ಕಟ್ಟಡಕ್ಕೆ ಅವಕಾಶ ಕಲ್ಪಿಸಿ ಉಳಿದ ಭಾಗವನ್ನು ವಾಣಿಜ್ಯ ಉದ್ದೇಶದಿಂದ ಬಾಡಿಗೆ ನೀಡುವುದು. ಮಾರುಕಟ್ಟೆಯಲ್ಲಿ ಮುಖ್ಯವಾಗಿ ರೈತರಿಗೆ ಅವಶ್ಯವಿರುವ ಎಲ್ಲಾ ತರಹದ ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ಸಾಧ್ಯವಿದ್ದಲ್ಲಿ ಇಲಾಖೆಯ ಸಲುವಾಗಿ ಒಂದು ಗೆಸ್ಟ್ ಹೌಸ್ ನಿರ್ಮಿಸಲು ಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಮಟ್ಟದ ಏಕ ಗವಾಕ್ಷಿ ಪರಿಶೀಲನಾ ಸಮಿತಿ ಮುಂದೆ ಮಂಡಿಸಿ ನಂತರ ಸಚಿವ ಸಂಪುಟದ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.

ಮೇಲೆ(5) ರಲ್ಲಿ ಓದಲಾದ ಪತ್ರದಲ್ಲಿ ದಿನಾಂಕ: 20.01.2011 ರಂದು ಯೋಜನೆಯ ಆರ್ಥಿಕ ಬಿಡ್ ತೆರೆದು ಸಮಿತಿಯು ನಡವಳಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ ಹಾಗೂ ಮೇಲೆ(6) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಪಿಪಿಪಿ ಸೆಲ್ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ, ಕಾರ್ಯಕಾರಿ ನಿರ್ದೇಶಕರು ಕರ್ನಾಟಕ ರಾಜ್ಯ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಐಡೆಕ್ ಮತ್ತು ಸರ್ಕಾರದ ಉಪ ಕಾರ್ಯದರ್ಶಿ (ಬಿ&ಆರ್), ಆರ್ಥಿಕ ಇಲಾಖೆ ಇವರನ್ನು ಒಳಗೊಂಡ ಆರ್ಥಿಕ ಬಿಡ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ: 03.03.2011 ರಂದು ನಡೆದ ಸದರಿ ಆರ್ಥಿಕ ಬಿಡ್ ಪರಿಶೀಲನ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 3 ತಿಂಗಳಿಗೆ ರೂ. 2.6 ಕೋಟಿ ನೀಡಲು ಒಪ್ಪಿರುವ ಮೆ॥ ಶೋಭಾ ಡೆವಲಪರ್ಸ್ ಲಿ. ಮೂವರು ಬಿಡ್ಡುದಾರರಲ್ಲಿ ಅತೀ ಹೆಚ್ಚು ಬಿಡ್ಡು ಮಾಡಿರುವುದರಿಂದ, ಈ ಸಂಸ್ಥೆಗೆ ರಿಯಾಯಿತಿ ಅವಧಿಯನ್ನು 60 ವರ್ಷಗಳಿಗೆ ನೀಡಲು ತೀರ್ಮಾನಿಸಿತು ಹಾಗೂ ಸದರಿ ಸಂಸ್ಥೆಯ ಬಿಡ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಲಾಭದಾಯಕವಾಗುವುದರಿಂದ ಇವರನ್ನು Preferred Bidder ಆಗಿ ಪರಿಗಣಿಸಿ ಯೋಜನೆಯನ್ನು ಈ ಸಂಸ್ಥೆಗೆ ವಹಿಸಲು ತೀರ್ಮಾನಿಸಿದೆ.

ಉದ್ದೇಶಿತ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆಯ ಅಭಿಪ್ರಾಯವನ್ನು ಪಡೆದ ನಂತರ ಬ್ಯಾಟರಾಯನಪುರದಲ್ಲಿ ಆಧುನಿಕ ಕೃಷಿ ಉತ್ಪನ್ನ ಮಾರುಕಟ್ಟೆ ಸಂಕೀರ್ಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಯಿತು ಹಾಗೂ ದಿನಾಂಕ: 31.12.2011 ರ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವನೆಗೆ ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 322 ಎಂಆರ್‌ಇ 2010, ಬೆಂಗಳೂರು, ದಿನಾಂಕ: 20–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಣ್ಣು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇವರ ಒಡೆತನದ ಬ್ಯಾಟರಾಯನಪುರ ಉಪ ಮಾರುಕಟ್ಟೆಯಲ್ಲಿರುವ ಒಟ್ಟು 30 ಎಕರೆ ವಿಸ್ತೀರ್ಣದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ.) ಯೋಜನೆಯಡಿ ಆಧುನಿಕ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ನಿರ್ಮಿಸುವ ಯೋಜನೆಗೆ ಈ ಕೆಳಕಂಡ ಅಂಶಗಳ ಬಗ್ಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1. ಕೃಷಿ ಮಾರಾಟ ಇಲಾಖೆಯ ಬೆಂಗಳೂರಿನ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಪ್ರಸ್ತಾಪಿಸಿರುವಂತೆ ತಾನು ಹೊಂದಿರುವ ಜಮೀನಿನ 20 ಎಕರೆ ಪ್ರದೇಶದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಾಣ ಮತ್ತು ಸಂಬಂಧಿಸಿದ ಪ್ರಾಧಿಕಾರಗಳು ಕಟ್ಟಡದ ಎತ್ತರ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಅನುಮತಿಸುವ ಮಿತಿಗೊಳಪಟ್ಟು 10 ಎಕರೆ ಪ್ರದೇಶದಲ್ಲಿ ವಾಣಿಜ್ಯ ಸಂಕೀರ್ಣವನ್ನು ಒಳಗೊಂಡಿರುವಂತೆ ಬ್ಯಾಟರಾಯನಪುರದಲ್ಲಿ ಆಧುನಿಕ ಕೃಷಿ ಉತ್ಪನ್ನ ಮಾರುಕಟ್ಟೆ ಸಂಕೀರ್ಣವನ್ನು ಅಭಿವೃದ್ಧಿಪಡಿಸುವುದು.
2. ಈ ಸಂಬಂಧ ಕರ್ನಾಟಕ ಪಾರದರ್ಶಕ ಕಾಯ್ದೆ 1999ರನ್ವಯ ಇ–ಟೆಂಡರ್ ಪದ್ಧತಿಯ ಮೂಲಕ ಕರೆಯಲಾದ ಟೆಂಡರ್‌ನಂತೆ ರೂ. 106.30 ಕೋಟಿ ವೆಚ್ಚದಲ್ಲಿ 20 ಎಕರೆ ಪ್ರದೇಶದಲ್ಲಿ ಮಾರುಕಟ್ಟೆ ಸಂಕೀರ್ಣವನ್ನು ನಿರ್ಮಿಸುವ ಮತ್ತು ಉಚಿತವಾಗಿ ಈ ಸಂಕೀರ್ಣವನ್ನು ಮಾರುಕಟ್ಟೆ ಸಮಿತಿಗೆ ಹಸ್ತಾಂತರಿಸುವುದರ ಜೊತೆಗೆ 60 ವರ್ಷಗಳವರೆಗೆ ತ್ರೈಮಾಸಿಕ ರೂ. 2.60 ಕೋಟಿ ರಿಯಾಯಿತಿ ಹಣವನ್ನು ವಾರ್ಷಿಕ ಶೇ. 3 ರ

ಹೆಚ್ಚಳದೊಂದಿಗೆ ಪಾವತಿ ಮಾಡುವ ಕುರಿತು ಅತಿ ಹೆಚ್ಚು ರಿಯಾಯಿತಿ ದರವನ್ನು ನಮೂದಿಸಿರುವ ಮೆ॥ ಶೋಭಾ ಡೆವಲಪರ್ಸ್ ಲಿ.. ಇವರನ್ನು ಆಯ್ಕೆಯಾದ ಬಿಡ್‌ದಾರರೆಂದು ಘೋಷಿಸುವುದು.

3. ಯಶಸ್ವಿ ಬಿಡ್‌ದಾರರು ಒಪ್ಪಂದದ ಅವಧಿ ಮುಗಿದ ಕೂಡಲೇ ವಾಣಿಜ್ಯ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಿದ ಸ್ಥಳದಲ್ಲಿರುವ ಕಟ್ಟಡ ಹಾಗೂ ಅದರಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಸುಸ್ಥಿತಿಯಲ್ಲಿ ಮಾರುಕಟ್ಟೆ ಸಮಿತಿಗೆ ಹಿಂತಿರುಗಿಸುವುದು.
4. ಮಾರುಕಟ್ಟೆ ಸಮಿತಿಯು ಒಪ್ಪಂದದ ಸಂಪೂರ್ಣ ಅವಧಿಯಲ್ಲಿ ಪೂರ್ಣ ನಿವೇಶನದ ಮಾಲೀಕತ್ವದ ಹಕ್ಕನ್ನು ಹೊಂದಿರುತ್ತದೆ ಮತ್ತು ಅಭಿವೃದ್ಧಿದಾರರು ಸದರಿ ನಿವೇಶನದ ಮೇಲೆ ಯಾವುದೇ ಹಕ್ಕು ಪ್ರತಿಪಾದಿಸತಕ್ಕದ್ದಲ್ಲ.
5. ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ, ಸಹಾಯಧನ ಬ್ಯಾಂಕ್ ಗ್ಯಾರಂಟಿ, ನೀಡುವುದಿಲ್ಲ.
6. ಕಾರ್ಯದರ್ಶಿ ಹಣ್ಣು ಮತ್ತು ತರಕಾರಿ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇವರು ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 1966 ರಲ್ಲಿನ ಅವಕಾಶದ ರೀತ್ಯ ಕ್ರಮ ಜರುಗಿಸಿ ಯೋಜನೆಯ ಯಶಸ್ವಿ ಬಿಡ್‌ದಾರರಾದ ಮೆ॥ ಶೋಭಾ ಡೆವಲಪರ್ಸ್ ಲಿ. ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು (Project Development and Implimention Agreement (PDIA), ಸಹಿ ಪಡೆಯತಕ್ಕದ್ದು.
7. ಯೋಜನೆಯ ಅನುಷ್ಠಾನ ಪ್ರಗತಿಯ ಬಗ್ಗೆ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರು ಕಾಲಕಾಲಕ್ಕೆ ಪರಿಶೀಲಿಸಿ ಕಾಲಮಿತಿಯೊಳಗೆ ಯೋಜನೆ ಅನುಷ್ಠಾನಗೊಳಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

450

ಸಹಕಾರ ಸಚಿವಾಲಯ

ವಿಷಯ : ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ). ದೊಡ್ಡಬಳ್ಳಾಪುರ ಈ ಸಂಸ್ಥೆಗೆ ನೇಮಕ ಮಾಡಿರುವ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಇ 156 ಸಸಂನೋ 2010 ದಿನಾಂಕ: 13/01/2011 ಹಾಗೂ 12/9/2011

2) ಆಡಳಿತಾಧಿಕಾರಿಗಳು, ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪತ್ರ ದಿನಾಂಕ 30/12/2011

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 13/01/2011 ರ ಆದೇಶದಲ್ಲಿ, ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಸಂಸ್ಥೆಯ ಆಡಳಿತ ಮಂಡಳಿಯ ಅವಧಿಯು ಮುಗಿದಿದ್ದು ಹಾಗೂ ಸಂಘದ ಆಡಳಿತ ಮಂಡಳಿಯು ನೂತನ ಆಡಳಿತ ಸಮಿತಿಯನ್ನು ಕಾನೂನು ಬದ್ಧವಾಗಿ ಚುನಾವಣೆ ನಡೆಸಿ ರಚಿಸುವಲ್ಲಿ ವಿಫಲವಾಗಿರುವುದು ದೃಢಪಟ್ಟಿರುವುದರಿಂದ, ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27ಎ ರಡಿಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ದೊಡ್ಡಬಳ್ಳಾಪುರ ಇವರನ್ನು ಸಂಸ್ಥೆಯ ಆಡಳಿತ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಗಾರರನ್ನಾಗಿ 06 ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಕಾನೂನು ಬದ್ಧವಾಗಿ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ, ಆಡಳಿತಾಧಿಕಾರಿಗಳು ಸಂಘಗಳ ನೋಂದಣಿ ಅಧಿನಿಯಮ 1960, ಸಂಘಗಳ ನೋಂದಣಿ ನಿಯಮಗಳು/ಸಂಘಗಳ ನಿಬಂಧನೆಗಳ ಅವಕಾಶಗಳನ್ನು ಗಮನಿಸಿ ಸಂಘದ ಆಡಳಿತ ಸಮಿತಿಗೆ ಚುನಾವಣೆ ನಡೆಸಿ, ನೂತನ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಆದೇಶಿಸಲಾಗಿತ್ತು. ದಿನಾಂಕ 12/09/2011ರ ಸರ್ಕಾರಿ ಆದೇಶದಲ್ಲಿ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ 9/7/2011ರಿಂದ 6 ತಿಂಗಳ ಅವಧಿಗೆ ವಿಸ್ತರಿಸಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಆಡಳಿತಾಧಿಕಾರಿಗಳು, ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ಸದರಿ ಮಹಿಳಾ ಸಮಾಜಕ್ಕೆ ಚುನಾವಣೆ ನಡೆಸಲು ದಿನಾಂಕ 2/12/2011 ರಲ್ಲಿ ಚಾಲ್ತಿಯಲ್ಲಿರುವ ಸದಸ್ಯರ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗಿದ್ದು ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಹೆಸರು ಬಿಟ್ಟು ಹೋಗಿರುವುದಕ್ಕೆ ಹಾಗೂ ಪ್ರಕಟಿಸಿರುವ ಸದಸ್ಯರ ಪಟ್ಟಿಯನ್ನು ಆಕ್ಷೇಪಿಸಿ ಪರಿಶೀಲಿಸುವಂತೆ ಕೋರಿ ಸಲ್ಲಿಸಲಾದ ಆಕ್ಷೇಪಣೆಗಳ ಬಗ್ಗೆ ತೀರ್ಮಾನ ಕೈಗೊಂಡು ಅಂತಿಮ ಪಟ್ಟಿ ತಯಾರಿಸಲು ಈಗಾಗಲೇ ಸಹಾಯಕ ನಿಬಂಧಕರು ದೊಡ್ಡಬಳ್ಳಾಪುರ ಇವರ ಮಾರ್ಗದರ್ಶನ ನೀಡುವಂತೆ ಕೋರಲಾಗಿದೆ. ಆದ್ದರಿಂದ ಅಂತಿಮ ಪಟ್ಟಿಯನ್ನು ಪ್ರಕಟಿಸಿ ಕಾರ್ಯಾಕಾರಿ ಸಮಿತಿಗೆ ಚುನಾವಣೆ ನಡೆಸಲು ಸಮಯಾವಕಾಶ ಅಗತ್ಯವಿರುವುದರಿಂದ ನೀಡಲಾದ ಗಡುವನ್ನು ಇನ್ನೂ 2 ತಿಂಗಳ ಕಾಲ ಮುಂದೂಡಿ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಆಡಳಿತಾಧಿಕಾರಿಗಳು ಸರ್ಕಾರಕ್ಕೆ ಬರೆದಿರುವ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 117 ಸಸಂನೋ 2011, ಬೆಂಗಳೂರು, ದಿನಾಂಕ: 21ನೇ ಜನವರಿ, 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮಹಿಳಾ ಸಮಾಜ ಕಸ್ತೂರಿಬಾ ಶಿಶುವಿಹಾರ (ರಿ), ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾದ

ಅಧಿಕಾರವನ್ನು ಚಲಾಯಿಸಿ, ಆಡಳಿತಾಧಿಕಾರಿಯಾಗಿ ನೇಮಕವಾಗಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ದೊಡ್ಡಬಳ್ಳಾಪುರ ಇವರ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 09/01/2012 ರಿಂದ ಮುಂದಿನ ಎರಡು (02) ತಿಂಗಳ ಹೆಚ್ಚುವರಿ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಎಸ್. ವಿಶ್ವೇಶ್ವರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಹಕಾರ ಇಲಾಖೆ

451

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀಮತಿ ಎಸ್. ಸುಜಾತ, ಅಪರ ಸರ್ಕಾರಿ ವಕೀಲರು ಇವರ ಸೇವಾವಧಿಯನ್ನು ಮುಂದುವರೆಸುವ ಬಗ್ಗೆ.-

ಓದಲಾಗಿದೆ : 4) ಸರ್ಕಾರಿ ಆದೇಶ ಸಂಖ್ಯೆ: ಲಾ 128 ಎಲ್ಎಜಿ 2010, ದಿನಾಂಕ 25-09-2010

5) ಅಡ್ವೋಕೇಟ್ ಜನರಲ್‌ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: 204/AG/EST/2011-12 ದಿನಾಂಕ 13-09-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್‌ರವರ ಕಚೇರಿ, ಬೆಂಗಳೂರು ಇಲ್ಲಿ ಒಂದು ಅಪರ ಸರ್ಕಾರಿ ವಕೀಲರ ಹುದ್ದೆಯನ್ನು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿ ಸದರಿ ಹುದ್ದೆಗೆ ಶ್ರೀಮತಿ ಎಸ್. ಸುಜಾತ, ವಕೀಲರು, ಮನೆ ನಂ. 230, 17ನೇ 'ಸಿ' ಕ್ರಾಸ್, 3ನೇ ಬ್ಲಾಕ್, 4ನೇ ಸ್ಟೇಜ್, ಬಸವೇಶ್ವರ ನಗರ, ಬೆಂಗಳೂರು-5600079, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 23ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಕಾರ್ಯಭಾರ ವಹಿಸಿಕೊಳ್ಳುವ ದಿನಾಂಕದಿಂದ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಿಸಲಾಗಿತ್ತು. ತದನಂತರ ಕ್ರ.ಸಂ. (2) ಅಡ್ವೋಕೇಟ್ ಜನರಲ್‌ರವರ ಅರೆ ಸರ್ಕಾರಿ ಪತ್ರದಲ್ಲಿ ಕೋರಿರುವಂತೆ ಸದರಿ ವಕೀಲರ ನೇಮಕಾತಿ ಅವಧಿಯು ದಿನಾಂಕ 27-09-2011ರಂದು ಮುಕ್ತಾಯವಾಗುವ ಹಿನ್ನೆಲೆಯಲ್ಲಿ ಮತ್ತೊಂದು ಅವಧಿಗೆ ಮುಂದುವರೆಸುವಂತೆ ಕೋರಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 174 ಎಲ್ಎಜಿ 2011, ಬೆಂಗಳೂರು, ದಿನಾಂಕ 27-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಎಸ್. ಸುಜಾತ, ಅಪರ ಸರ್ಕಾರಿ ವಕೀಲರು ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 23ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 28-09-2011ರಿಂದ ಮತ್ತೊಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಕಚೇರಿಯ ಅಪರ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 512 ವೆಚ್ಚ-10/2011, ದಿನಾಂಕ 06-01-2012ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಡಿ. ಎ. ಗೌರೀಶ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 452

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೊಳ್ಳೇಗಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 7290.00 ಲಕ್ಷಗಳಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.-

ಓದಲಾಗಿದೆ : ವ್ಯ.ನಿ., ಕನನೀಸಒಚಮಂಡಳಿರವರ ಪತ್ರ ಸಂಖ್ಯೆ: ಕಜಮಂ/ತಾಂತ್ರಿಕ/ಕೊಳ್ಳೇಗಾಲ-ಒ.ಚ.ಯೋ01/1050/2010-11, ದಿನಾಂಕ 07-07-2010.

ಪ್ರಸ್ತಾವನೆ :

ಕೊಳ್ಳೇಗಾಲ ಪಟ್ಟಣವು ಚಾಮರಾಜನಗರ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಈ ಪಟ್ಟಣದ ಜನಸಂಖ್ಯೆಯು 2001ರ ಜನಗಣತಿಯ ಪ್ರಕಾರ 52,607 ಇದ್ದು, ಪ್ರಸ್ತುತ ಸುಮಾರು 60,000 ಜನಸಂಖ್ಯೆ ಇರುತ್ತದೆ. ಕೊಳ್ಳೇಗಾಲ ಪಟ್ಟಣಕ್ಕೆ ಕಾವೇರಿ ನದಿಯಿಂದ 1970ರಲ್ಲಿ ಕಾರ್ಯಗತಗೊಳಿಸಲಾದ 1.0 ಎಂ.ಜಿ.ಡಿ. ಕುಡಿಯುವ ನೀರು ಸರಬರಾಜು ಯೋಜನೆಯಿಂದ ಹಾಗೂ 2006ರಲ್ಲಿ ಕಾರ್ಯಗತಗೊಳಿಸಲಾದ 13.50 ಎಂ.ಎಲ್.ಡಿ., ಕುಡಿಯುವ ನೀರು ಸರಬರಾಜುಯೋಜನೆಯಿಂದ ತಲಾ ದಿನಂಪ್ರತಿ 100 ಲೀ.ನಂತೆ ನೀರು ಸರಬರಾಜು ಮಾಡಲಾಗುತ್ತಿದೆ.

ಕೊಳ್ಳೇಗಾಲ ಪಟ್ಟಣದ ಕೆಲವು ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ಇದ್ದು (21,425 ಕಿ.ಮಿ> ಉದ್ದದ ಒಳಚರಂಡಿ ಕೊಳವೆ ಮಾರ್ಗ) ಪಟ್ಟಣದ ನೈರ್ಮಲ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಪಟ್ಟಣದ ಎಲ್ಲಾ ಭಾಗಗಳಿಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ. ಪ್ರಸ್ತುತ ಒಳಚರಂಡಿ ಯೋಜನೆಯನ್ನು 2027ರಲ್ಲಿ ಅಂದಾಜಿಸಲಾದ ಮಧ್ಯಂತರ ಅವಧಿಯ 80,078ಕ್ಕೆ ಜನಸಂಖ್ಯೆಗೆ ಮತ್ತು 2042ರಲ್ಲಿ ಅಂದಾಜಿಸಲಾದ ಅಂತಿಮ ಅವಧಿಯ 1,02,203 ಜನಸಂಖ್ಯೆ ಎಂದು ಪರಿಗಣಿಸಿ ದಿನಂಪ್ರತಿ ತಲಾ 110 ಲೀ ತ್ಯಾಜ್ಯ ನೀರನ್ನು ಅಂದಾಜಿಸಿ ಯೋಜನೆ ವಿನ್ಯಾಸಿಸಲಾಗಿದೆ.

ಪಟ್ಟಣವನ್ನು 4 ವಲಯಗಳನ್ನಾಗಿ ವಿಂಗಡಿಸಿ ಅಂತರಿಕ ಕೊಳವೆ ಮಾರ್ಗಗಳಿಗೆ ಸ್ಟೋನ್‌ವೇರ್ ಕೊಳವೆಗಳು, ಆರ್.ಸಿ.ಸಿ. ಕೊಳವೆಗಳು ಹಾಗೂ ಯು.ಪಿ.ವಿ.ಸಿ. (SDR) ಕೊಳವೆಗಳನ್ನು ಅಳವಡಿಸಲು ಹಾಗೂ ಇಟ್ಟಿಗೆ ಹಾಗೂ ಆರ್.ಸಿ.ಸಿ. ಆಳುಗುಂಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ವಿನ್ಯಾಸದ ಪ್ರಕಾರ ವೆಟ್‌ವೆಲ್‌ಗಳನ್ನು ನಿರ್ಮಿಸಲು ಹಾಗೂ 4.5 ಎಂ.ಎಲ್.ಡಿ., ಸಾಮರ್ಥ್ಯದ SBR technology ಅಳವಡಿಸಿಕೊಂಡು ಮೇಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ಉದ್ದೇಶಿಸಿದೆ.

ಮೇಲ್ಕಂಡ ಅಂದಾಜನ್ನು 2009-10ನೇ ಸಾಲಿನ ಮಂಡಳಿ ಹಾಗೂ ಮೈಸೂರು ವೃತ್ತದ ಲೋಕೋಪಯೋಗಿ ಬಂದರು ಹಾಗೂ ಒಳನಾಡು ಸಾರಿಗೆ ಇಲಾಖೆಯ ದರಪಟ್ಟಿಯನ್ವಯ ರೂ. 7290.00 ಲಕ್ಷಗಳಿಗೆ ಅಂದಾಜಿಸಿ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿಯವರು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ ಸಾಲ (50%)	ರೂ. 3645.00 ಲಕ್ಷಗಳು
ಸರ್ಕಾರದ ಸಾಲ (25%)	ರೂ. 1822.50 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಗೆ (25%)	ರೂ. 1822.50 ಲಕ್ಷಗಳು
ಒಟ್ಟು	ರೂ. 7290.00 ಲಕ್ಷಗಳು

ಆದರೆ, ಪ್ರಸ್ತುತ ಸರ್ಕಾರವು ಹಾಲಿ ಜಾರಿಯಲ್ಲಿರುವ ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯು ಸರ್ಕಾರದ ಸಾಲದಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಹಾಗೂ ಸ್ಥಳೀಯ ಸಂಸ್ಥೆಗಳ ವಂತಿಕೆಯಿಂದ ಯೋಜನೆಯ ಅಂದಾಜನ್ನು ಬರಿಸಲಾಗುತ್ತಿದ್ದು, ಸದರಿ ಸ್ಥಳೀಯ ಸಂಸ್ಥೆಗಳಲ್ಲಿನ ನಾಗರೀಕರ ಹಿತದೃಷ್ಟಿಯಿಂದ, ಪರಿಸರ ಸಂರಕ್ಷಣೆ ಹಿತದಲ್ಲಿ ಮತ್ತು ಮಲಿನ ನೀರು ನದಿಗಳನ್ನು/ಅಂತರ್ಜಲ ನೀರನ್ನು ಕಲುಷಿತಗೊಳಿಸದಿರುವ ದೃಷ್ಟಿಯಿಂದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ಯೋಜನೆಗಳನ್ನು ಕಲ್ಪಿಸುವ ದೃಷ್ಟಿಯಿಂದ ಮತ್ತು ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸಬಲವಿಲ್ಲದ ಕಾರಣ ಈ ಯೋಜನೆಗಳ ಪ್ರಯೋಜನವನ್ನು ಪಡೆಯುವುದರಿಂದ ವಂಚಿತರಾಗುವುದನ್ನು ತಡೆಯಲು ಒಳಚರಂಡಿ ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 201, ದಿನಾಂಕ 20-07-2011 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ, ಆದೇಶಿಸಿರುತ್ತದೆ. ಸದರಿ ಆದೇಶದನ್ವಯ ಕೊಳ್ಳೇಗಾಲ ನಗರ ಸಭೆಯಾಗಿದ್ದು, ಈ ಯೋಜನೆಯ ಆರ್ಥಿಕ ಮಾದರಿಯನ್ನು ಈ ಕೆಳಕಂಡಂತೆ ನಿಗದಿಗೊಳಿಸಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಅನುದಾನ (70%)	ರೂ. 5103.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (20%)	ರೂ. 1458.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (10%)	ರೂ. 729.00 ಲಕ್ಷಗಳು
ಒಟ್ಟು	ರೂ. 7290.00 ಲಕ್ಷಗಳು

ಈ ಯೋಜನೆಯನ್ನು 2011-12ನೇ ಸಾಲಿನ ಅನುಮೋದಿತ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ. 2430.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಸರ್ಕಾರವು ಯೋಜನೆಯ ಅಂದಾಜಿನಲ್ಲಿ ವಿಧಿಸಲಾಗುತ್ತಿರುವ ಇಟಿಪಿ, ದರಗಳನ್ನು ಶೇಕಡ 10ಕ್ಕೆ ಮಿತಿಗೊಳಿಸಲು ನಿರ್ಧರಿಸುವ ಹಿನ್ನಲೆಯಲ್ಲಿ ಹಾಗೂ ಯೋಜನೆಯಡಿ ಉದ್ಭವಿಸಬಹುದಾದ ಟೆಂಡರ್ ಪ್ರೀಮಿಯಮ್ ಮತ್ತು ಎಸ್ಕಲೇಶನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಬರಿಸಬೇಕಾಗಿರುವುದರಿಂದ ಸದರಿ ಮೊತ್ತಗಳನ್ನು ಅಂದಾಜು ಪಟ್ಟಿಯಿಂದ ಹೊರತು ಪಡಿಸಲು ತೀರ್ಮಾನಿಸಿದೆ. ಅದರಂತೆ ಯೋಜನೆಯ ಅಂದಾಜು ವೆಚ್ಚದಲ್ಲಿ ಮೂಲ ಅಂದಾಜು ಮೊತ್ತವಾದ ರೂ. 5469.44 ಲಕ್ಷಗಳಿಗೆ ಶೇಕಡ 10ರಷ್ಟು ಇಟಿಪಿ ದರಗಳನ್ನು ಅಂದರೆ ರೂ 546.94 ಲಕ್ಷಗಳು ಮತ್ತು ಇತರೆ ವೆಚ್ಚಗಳಾದ ರೂ. 0.62 ಲಕ್ಷಗಳನ್ನು ಸೇರಿಸಿ ಯೋಜನೆಯ ಅಂದಾಜು ಮೊತ್ತವನ್ನು ರೂ. 6017.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿದೆ.

ಸರ್ಕಾರವು ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 05 ಯುಡಿಎಸ್ 2010, ಬೆಂಗಳೂರು, ದಿನಾಂಕ 24-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಳ್ಳೇಗಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 6017.00 ಲಕ್ಷಗಳಲ್ಲಿ (ರೂ. ಆರು ಸಾವಿರದ ಹದಿನೇಳು ಲಕ್ಷಗಳು ಮಾತ್ರ) ಕಲ್ಪಿಸುವ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) ETP/Contingencies are limited to 10% of the project cost
3) The board shall invite the tender immediately after the handing over of the land required under the scheme in order to avoid time and cost run over.
4) The consent of the ULB shall be obtained to meet the extra cost that might occur due to deviations, extra item works or variations in the scheme.
5) Adequate provision to be made by the Board in the following years for timely completion of the Project.
6) Water rates as proposed by KUWS & DB have to be implemented to meet O & M cost of UGD.
7) KTPP provisions, quality control and timely completion should be ensured
8) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 665 Exp-9/2010, ದಿನಾಂಕ 05-10-2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಎಂ. ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. 453

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮಾರ್ಚ್ ೮, ೨೦೧೨ (ಫಾಲ್ಗುಣ ೧೮, ಶಕ ವರ್ಷ ೧೯೩೩)	ಸಂಚಿಕೆ ೧೦

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Sub: KVAT Act, 2003 – Clarification under Section 59(4) regarding the rate of tax applicable on 'fruit fly trap' reg.,

Ref: Application dated: 03-05-2011 of the Barrix Agro Sciences Pvt. Ltd., Plot No. 19, TVS Cross, 1st Stage, Peenya Industrial Area, Bangalore-560 058 TIN : 29830603817.

The registered dealer under the Act, Barix Agro Sciences Pvt. Ltd., Bangalore, has sought clarification regarding the rate of tax applicable on 'fruit fly-trap.'

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR.29/2011-12, DATED 23.07.2011

It is clarified that 'fruit fly trap' is liable to tax at 14% under the Section 4(1)(b) of the Karnataka Value Added Tax Act, 2003.

PRADEEP SINGH KHAROLA
Commissioner of Commercial Taxes,
(Karnataka), Bangalore.

PR-802

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೋಲಾರ

ಅಧಿಸೂಚನೆ

ಪ್ರಕರಣ ಸಂಖ್ಯೆ: ಡಬ್ಲ್ಯೂ.ಸಿ.ಎ.ಎಫ್.ಸಿ-03/2011

ಅರ್ಜಿದಾರರು

1) Smt.Shardhamma w/o Shankar
2) Sri Ramiah S/o Kasappa
3) Smt. Mangama w/o Ramiah

All are permanent residents of Patha Kedapatha Village Kathapalli Gangavarammandalam Chittur District Now residing at sundarpalyam Bangarpet Taluk Kolar District.

V/s

ಪ್ರತಿವಾದಿಗಳು

1) Smt. Ranganayaki w/o Velayudham Door No. 12-259 Madampally Road Palamaner Chittur District A.P.
2) Shriram General Insurance Co. Ltd. Office No. 8 Eplp, RIICo Industrial Area Sitapura Jaipur Pin-302022

ಅರ್ಜಿದಾರರಾದ ಶ್ರೀಮತಿ ಶಾರದಮ್ಮ ಅವರು ತಮ್ಮ ಗಂಡ ಲೇಟ್ ಶಂಕರ್ ಅವರು 1ನೇ ಪ್ರತಿವಾದಿ ಶ್ರೀಮತಿ ರಂಗನಾಯಕಿರವರ ಬಳಿ ಚಾಲಕ:ಕ್ಲೀನರ್:ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ 24/25-01-2011ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದುದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಂ ಅರ್ಜಿ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ. ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ : 01-07-2011ರಂದು ನೀಡಲಾಗಿದೆ.

ರೇವಣ್ಣ ಎಸ್.
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು
ಕೋಲಾರ ಉಪ ವಿಭಾಗ, ಕೋಲಾರ

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೋಲಾರ

ಅಧಿಸೂಚನೆ

ಪ್ರಕರಣ ಸಂಖ್ಯೆ: ಡಬ್ಲ್ಯೂ.ಸಿ.ಎ.ಎಫ್.ಸಿ-04/2011

ಅರ್ಜಿದಾರರು:

4) Smt. Lakshmamma w/o Venkatesh V/s
5) Sri Venkateshappa s/o Sajeevappa R/o Rekkamanu Village S. Banda Pally Post, V. Kote Mandalam Palamaner Taluk, Chittoor District A.P.

ಪ್ರತಿವಾದಿಗಳು

3) Sri H. C. Chandrappa s/o Chinna Muniyappa R/o Chalepalli Village, Nazni palli V. Kote Mandalam, Chittoor District A.P.
4) Sri. Ram General Insurance Co. Ltd. Indira Tower, 4th Floor, 2nd Cross, Wilson Gardan, Bangalore.

ಅರ್ಜಿದಾರರಾದ ಶ್ರೀಮತಿ ಲಕ್ಷ್ಮಮ್ಮ ಅವರು ತಮ್ಮ ಮಗ ಲೇಟ್ ವೆಂಕಟೇಶ್ ಅವರು 1ನೇ ಪ್ರತಿವಾದಿ ಹೆಚ್. ಸಿ. ಚಂದ್ರಪ್ಪರವರ ಬಳಿ ಕ್ಲೀನರ್ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ 09-05-2011ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದುದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಂ ಅರ್ಜಿ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ. ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ : 01-07-2011ರಂದು ನೀಡಲಾಗಿದೆ.

ರೇವಣ್ಣ ಎಸ್.
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು
ಕೋಲಾರ ಉಪ ವಿಭಾಗ, ಕೋಲಾರ

ಪಿ.ಆರ್. 803

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ದ.ಕ. ಉಪ ವಿಭಾಗ-1

ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಅಧಿಸೂಚನೆ

ಪ್ರಕರಣ ಸಂಖ್ಯೆ: ಡಬ್ಲ್ಯೂ.ಸಿಎ/ಸಿಆರ್-20/2011ಪಿ ದಿನಾಂಕ: 05/08/2011

ಅರ್ಜಿದಾರರು

1. ಶ್ರೀಮತಿ ರಕ್ಕೀಯದೇವಿ, w/o ನಾರಾಯಣಸಿಂಗ್, ಮತ್ತು ಇತರರು
ವಿಳಾಸ : 12/2, ಹರಿಹರಪುರ, ನಾರಾಯಣಪುರ P.O. ಗೋಕುಲ, ಜಂತರ ಜಿಲ್ಲೆ, ಜಾರ್ಖಾಂಡ್ ಸ್ಟೇಟ್

ವಿರುದ್ಧ

ಪ್ರತಿವಾದಿಗಳು

1. ಪ್ರಾಜೆಕ್ಟ್ ಡೈರೆಕ್ಟರ್, ಎಸ್. ಕೆ. ಇ ಮತ್ತು ಸಿ.-ಕೆಐಡಿ ಜಾಯಿಂಟ್ ವೆಂಚರ್, ಸ್ಟ್ರಾಟೇಜಿಕ್ ಸ್ಟೋರೇಜ್ ಆಫ್ ಕ್ರೂಡ್ ಆಯಿಲ್ ಪ್ರಾಜೆಕ್ಟ್, ಚಂದ್ರಹಾಸ ನಗರ, ಪೆರ್ಮುದೆ P.O. ಮಂಗಳೂರು-9
2. ಮೆ: Nig & ರಿಚ್ ಇನ್‌ಫ್ರಾಟೆಕ್ (ಪ್ರೈ) ಲಿ., Sub Contractor,

ಅರ್ಜಿದಾರಳಾದ ಶ್ರೀಮತಿ ರಕ್ಕೀಯದೇವಿ ಇವರ ಗಂಡನಾದ ಶ್ರೀ ನಾರಾಯಣಸಿಂಗ್ 1ನೇ ಪ್ರತಿವಾದಿಗಳಾದ ಮ॥ ಪ್ರಾಜೆಕ್ಟ್ ಡೈರೆಕ್ಟರ್ ಎಸ್.ಕೆ. ಇ ಮತ್ತು ಸಿ. ಕೆ.ಸಿ.ಟಿ ಜಾಯಿಂಟ್ ವೆಂಚರ್ ಕುಶಲಕಾರ್ಮಿಕ ಕೆಲಸಗಾರಾಗಿದ್ದು ಕೆಲಸದಲ್ಲಿ ನಿರತವಾಗಿದ್ದಾಗ, ದಿನಾಂಕ 14-05-2011ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಮು ಅರ್ಜಿ/ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ. ಜಿ. ನಾಗೇಶ್,
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು
ದ.ಕ. ಉಫ ವಿಭಾಗ-1, ಮಂಗಳೂರು

ಪಿ.ಆರ್. 804

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, 'ಬಿ' ಬ್ಲಾಕ್, ಹಾವೇರಿ (ದೇವಗಿರಿ)

ಪ್ರಕಟಣೆ

ಸಂ:ಜಿಸಕಅ:ಎಸ್-4:ಕಾ.ಪ.ತ/ಸಿಆರ್/11-12/1090, ದಿನಾಂಕ: 23/07/2011

ವಿಷಯ : 2011-12ನೇ ಸಾಲಿಗಾಗಿ ಪರಿಶಿಷ್ಟ ಜಾತಿ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂ: SWL-68/ssSEW-89, ಬೆಂಗಳೂರು ದಿ: 02-11-1990.
2) ಸರ್ಕಾರಿ ಆದೇಶ ಸಂ:ಸಕಇ:421:ಪಕವಿ:95, ದಿ: 29-07-1997
3) ಸರ್ಕಾರಿ ಆದೇಶ ಸಂ:ಸಕಇ:349:ಪಕವಿ. ದಿ: 28-01-06

2011-12ನೇ ಸಾಲಿಗಾಗಿ ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ನೀಡುವ ಕುರಿತ ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಯೋಜನೆ ಹೆಸರು	ತರಬೇತಿಯ ಅವಧಿ	ತರಬೇತಿ ಶಿಷ್ಯವೇತನ (ಪ್ರತಿ ಮಾಹೆಯಾನ)
1	ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಕಾರ್ಯಕ್ರಮ	04 ವರ್ಷ	ರೂ. 2000-00

ಅರ್ಹತೆಗಳು :

1) ಸದರಿ ಯೋಜನೆಯಲ್ಲಿ ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದ ಕಾನೂನು ಪದವಿಧರರಾಗಿರಬೇಕು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು 2 ವರ್ಷ ಪೂರ್ವ ಕಾನೂನು ಪದವಿಯನ್ನು ಪಾಸುಮಾಡಿರಬೇಕು. 2010-11 ಮತ್ತು 2011-12ನೇ ಸಾಲಿನಲ್ಲಿ ಅಂತಿಮ ಕಾನೂನು ಪರೀಕ್ಷೆಗಳನ್ನು ಪಾಸಾದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
2) ವಕೀಲ ವೃತ್ತಿಯನ್ನು ನಡೆಸಲು ಅರ್ಹತೆಗಳನ್ನು ಪಡೆದಿರುವ ಕಾನೂನು ಪದವೀಧರರು ಮಾತ್ರ ಅರ್ಜಿಗಳನ್ನು ಸಲ್ಲಿಸಲು ಅರ್ಹರು.
3) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯ ಗರಿಷ್ಟ ವಯಸ್ಸು 35 ವರ್ಷ ಮೀರಿರಬಾರದು.

4) ಅಪೂರ್ಣ ಮತ್ತು ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟು ಹೋಗಬಾರದು. ಬಿಟ್ಟು ಹೋದಲ್ಲಿ ಶಿಷ್ಯವೇತನವನ್ನು ಪರತ್ ವಸೂಲ ಮಾಡಲಾಗುವುದು.
6) ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ. 2000-00 (ರೂ. ಎರಡು ಸಾವಿರ ಮಾತ್ರ) ದಂತೆ ಶಿಷ್ಯವೇತನ ನೀಡಲಾಗುವುದು.
7) ಆಯ್ಕೆಯಾದ ಅಭ್ಯರ್ಥಿಗಳನ್ನು ಡಿಸ್ಟಿಕ್ ಪಬ್ಲಿಕ್ ಪ್ರಾಸಿಕ್ಯೂಟರ್/ಸರ್ಕಾರಿ ವಕೀಲರು ಅಥವಾ 20 ವರ್ಷಕ್ಕೂ ಮೆಲ್ಪಟ್ಟು ವಕೀಲ ವೃತ್ತಿಯನ್ನು ನಡೆಸಿದ ಖಾಸಗಿ ವಕೀಲರ ಬಳಿ ತರಬೇತಿಗೆ ನಿಯೋಜಿಸಲಾಗುವುದು.
8) ಅರ್ಹ ಅಭ್ಯರ್ಥಿಗಳು ಸಂಬಂಧಿಸಿದ ಜಿಲ್ಲಾ/ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯಿಂದ ನಿಗಧಿತ ಅರ್ಜಿ ನಮೂನೆ ಪಡೆದು, ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ ಹಾಗು ಜಾತಿ ಪ್ರಮಾಣ ಪತ್ರ, ಜನ್ಮ ದಾಖಲೆ ಕುರಿತು (ಎಸ್.ಎಸ್.ಎಲ್.ಸಿ.ಅಂಕಪಟ್ಟಿ) ಮತ್ತು ಬಾರ್ ಅಸೋಸಿಯೇಶನಲ್ಲಿ ಸದಸ್ಯತ್ವ ಪಡೆದ ಬಗ್ಗೆ ದೃಡೀಕರಣ ಪ್ರಮಾಣ ಪತ್ರ, ಕಾನೂನು ಪದವಿಯ ಅಂಕಪಟ್ಟಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : 26-08-2011 ರೊಳಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಹಾವೇರಿ (ಜಿಲ್ಲಾ ಆಡಳಿತ ಭವನ, 'ಬಿ' ಬ್ಲಾಕ್, ರೂ. ನಂ. 25 ದೇವಗಿರಿ) ಇವರಿಗೆ ತಲುಪುವಂತೆ ಅರ್ಜಿ ಸಲ್ಲಿಸಬೇಕು.

ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಮಟ್ಟದ ಕಾನೂನು ಪದವೀಧರರ ಆಡಳಿತ ನ್ಯಾಯಾಧೀಕರಣ ತರಬೇತಿ
ಆಯ್ಕೆ ಸಮಿತಿ ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಹಾವೇರಿ.

ಪಿ.ಆರ್. 805

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ಸಂಖ್ಯೆ: ಎಲ್ಆರ್ಎಫ್ (109) ಸಿಆರ್ 01/2011-12 ಬೆಂಗಳೂರು, ದಿನಾಂಕ : 20-8-2011

ವಿಷಯ : ಮೆ॥ ಇಂಡಿಯನ್ ಅಕಾಡೆಮಿ ಎಜುಕೇಷನ್ ಟ್ರಸ್ಟ್ [ರಿ], ಹೆಣ್ಣೂರು ಕ್ರಾಸ್, ಹೆಣ್ಣೂರು ಮುಖ್ಯರಸ್ತೆ, ಕಲ್ಯಾಣನಗರ, ಬೆಂಗಳೂರು-43ರವರು ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಜಾಲಾ ಹೋಬಳಿ, ಚಾಗಲಹಟ್ಟಿ ಗ್ರಾಮದ ಸ.ನಂ. 35/2ರಲ್ಲಿ 2-31 ಎಕರೆ/ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣಾ [ತಿದ್ದುಪಡಿ] ಕಾಯ್ದೆ 2003ರ ಕಲಂ 109 [1] [ii]ರಡಿ ಖರೀದಿಸಲು ಅನುಮತಿ ಕೋರಿರುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಶಾಇ 47 ಶಾಸನ/2011 ಬೆಂಗಳೂರು ದಿನಾಂಕ : 23-04-2003.
2. ಸರ್ಕಾರದ ಪತ್ರದ ಸಂಖ್ಯೆ : ಕಂಇ 86 ಎಲ್ಆರ್ಎಂ 2011, ದಿನಾಂಕ : 20-08-2011.
3. ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾದ, ಬೆಂಗಳೂರು ಇವರ ಪತ್ರದ ಸಂಖ್ಯೆ : ಎಲ್.ಆರ್.ಎಫ್. ಸಿಆರ್/109/7/11-12 ದಿನಾಂಕ : 28-05-2011.
4. ಮೆ॥ ಇಂಡಿಯನ್ ಅಕಾಡೆಮಿ ಎಜುಕೇಷನ್ ಟ್ರಸ್ಟ್ [ರಿ], ಹೆಣ್ಣೂರು ಕ್ರಾಸ್, ಹೆಣ್ಣೂರು ಮುಖ್ಯರಸ್ತೆ, ಕಲ್ಯಾಣನಗರ, ಬೆಂಗಳೂರು-43 ಇದರ ಪರವಾಗಿ ಡಾ॥ ಟಿ. ಸೋಮಶೇಖರ್, ಇವರ ಮನವಿ ದಿನಾಂಕ : 11-04-201

ಮೆ॥ ಇಂಡಿಯನ್ ಅಕಾಡೆಮಿ ಎಜುಕೇಷನ್ ಟ್ರಸ್ಟ್ [ರಿ], ಹೆಣ್ಣೂರು ಕ್ರಾಸ್, ಹೆಣ್ಣೂರು ಮುಖ್ಯರಸ್ತೆ, ಕಲ್ಯಾಣನಗರ, ಬೆಂಗಳೂರು-43 ಇದರ ಪರವಾಗಿ ಡಾ॥ ಟಿ. ಸೋಮಶೇಖರ್.ರವರು ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಜಾಲಾ ಹೋಬಳಿ ಚಾಗಲಹಟ್ಟಿ ಗ್ರಾಮದ ಸ.ನಂ. 35/2ರಲ್ಲಿ 2-31 ಎಕರೆ/ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ಅಡಿ ಖರೀದಿಸಲು ಮಾಡಿರುವ ಬೇಡಿಕೆ ಹಾಗೂ ನಮೂನೆ-15ಎ ಮತ್ತು 15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ಉಲ್ಲೇಖ [3]ರ ಮತ್ತು ಉಪವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪವಿಭಾಗ ಇವರ ವರದಿಯಲ್ಲಿ ಪ್ರಸ್ತಾಪಿತ ಚಾಗಲಹಟ್ಟಿ ಗ್ರಾಮದ ಸ.ನಂ. 35/2ರಲ್ಲಿ 2-31 ಎಕರೆ/ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109 (1)(ii)ರಡಿ ವಿನಾಯ್ತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯು ನೋಂದಣಿ ಸಂಖ್ಯೆ : 104/1998-99 ದಿನಾಂಕ : 15-09-1998ರಲ್ಲಿ ನೋಂದಾಯಿಸಲ್ಪಟ್ಟಿದೆ. ಸದರಿ ಜಮೀನಿನ ಖಾತೇದಾರರಿಂದ ಜಮೀನು ಖರೀದಿಸಲು ಒಪ್ಪಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಈ ಪ್ರಸ್ತಾವನೆ ಬಗ್ಗೆ ಉಲ್ಲೇಖ [2]ರ ಸರ್ಕಾರದ ಪತ್ರದಲ್ಲಿ ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 109 (1)(ii)ರಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ 2 ಯುನಿಟ್‌ವರೆಗೆ ಜಮೀನು ಖರೀದಿಸಲು ಅನುಮತಿ ನೀಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರದತ್ತವಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

ಆದ್ದರಿಂದ ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಜಾಲಾ ಹೋಬಳಿ, ಚಾಗಲಹಟ್ಟಿ ಗ್ರಾಮದ ಸ.ನಂ. 35/2ರಲ್ಲಿ 2-31 ಎಕರೆ/ಗುಂಟೆ ಜಮೀನನ್ನು [ಸ.ನಂ. 35/2ರ ಬ್ಲಾಕ್ 1ರ ಚೆಕ್ಕುಬಂದಿ : ಪೂರ್ವಕ್ಕೆ ಸ.ನಂ. 35/2ರ ಉಳಿಕೆ ಜಮೀನು, ಪಶ್ಚಿಮಕ್ಕೆ : ಹಾಲಿ ರಸ್ತೆ, ಉತ್ತರಕ್ಕೆ : ಲಾ.ಹಿ

ನಂ. 1ರ ಜಮೀನು ದಕ್ಷಣಕ್ಕೆ 35/2ರ ಉಳಿಕೆ ಜಮೀನು ಬ್ಲಾಕ್ 2ರ ಚೆಕ್ಕುಬಂದಿ : ಸ.ನಂ. 35/2ರ ಉಳಿಕೆ ಜಮೀನು : ಪಶ್ಚಿಮಕ್ಕೆ : ಸ.ನಂ. 35/2ರ ಉಳಿಕೆ ಜಮೀನು ಉತ್ತರಕ್ಕೆ : ಲಾ.ಹಿ.1ರ ಜಮೀನು : ದಕ್ಷಿಣಕ್ಕೆ : ಸ.ನಂ. 35/2ರ ಉಳಿಕೆ ಜಮೀನು ಹಾಗೂ ಬ್ಲಾಕ್ 3ರ ಚೆಕ್ಕುಬಂದಿ : ಲಾ.ಸ.ನಂ. 36, 52ರ ಜಮೀನುಗಳು, ಪಶ್ಚಿಮಕ್ಕೆ : ಸ.ನಂ. 35/2ರ ಉಳಿಕೆ ಜಮೀನು, ಉತ್ತರಕ್ಕೆ ಲಾ.ಹಿ. ನಂ. 1ರ ಜಮೀನು : ದಕ್ಷಿಣಕ್ಕೆ ; ಲಾ.ಸ.ನಂ. 54ರ ಜಮೀನು] ಮೆ॥ ಇಂಡಿಯನ್ ಅಕಾಡೆಮಿ ಎಜುಕೇಷನ್ ಟ್ರಸ್ಟ್ [ರಿ], ಹೆಣ್ಣೂರು ಕ್ರಾಸ್, ಹೆಣ್ಣೂರು ಮುಖ್ಯರಸ್ತೆ, ಕಲ್ಯಾಣನಗರ, ಬೆಂಗಳೂರು-43 ಇವರ ಹೆಸರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಕ್ರಯಕ್ಕೆ ಪಡೆಯಲು ಕರ್ನಾಟಕ ಭೂ ಸುಧಾರಣಾ [ತಿದ್ದುಪಡಿ] ಕಾಯ್ದೆ 2003ರ ಕಲಂ 109 (1)(ii)ರ ಪ್ರಕಾರ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ಸಂಖ್ಯೆ : ಶಾಇ 47/ಶಾಸನ/2011 ಬೆಂಗಳೂರು ದಿನಾಂಕ : 23-04-2003 ರಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ, ಅನುಮತಿ ನೀಡಿದೆ.

ಷರತ್ತುಗಳು :

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯಿದೆ 1995ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡಾ 55 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ-ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ, ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೇ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮಿನು ಸಿ.ಡಿ.ಪಿ. ಪ್ರಕಾರ ಕೃಷಿ ವಲಯದಲ್ಲಿ ಬರುತ್ತಿದ್ದು, ಶೈಕ್ಷಣಿಕ ನಿರ್ಮಾಣದ ಉದ್ದೇಶಕ್ಕೆ ಉಪಯೋಗಿಸಿಕೊಳ್ಳತಕ್ಕದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯದೇ ಹಾಗೂ ಅನ್ಯಕ್ರಾಂತ ಪಡಿಸದೇ ಬೇರೆ ಉದ್ದೇಶಕ್ಕೆ ಬಳಸತಕ್ಕದಲ್ಲ.
4. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯಿದೆ 1964ರ ಕಲಂ 95[2]ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಷರತ್ತಿಗೆ ಒಳಪಡಿಸಿದೆ.
5. ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ಅನುಮೋದಿತಗೊಂಡಿರುವ ಆರ್.ಎಂ.ಪಿ. 2015ರ ಸಿ.ಡಿ.ಪಿ ಆಧರಿಸಿ, ಹಸಿರು/ಕೃಷಿ ವಲಯ ವ್ಯಾಪ್ತಿಯೊಳಗೆ ಬಂದರೆ ಅದರಿಂದ ಅನುಮತಿ ಪಡೆದು, ಜಮೀನನ್ನು ಉಪಯೋಗಿಸಿಕೊಳ್ಳತಕ್ಕದ್ದು.
6. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣ ಮುಕ್ತವಾಗಿಸಿ, ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.
7. ಈ ಅನುಮತಿ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರನ್ವಯ ಮಾತ್ರ ನೀಡಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
8. ಪ್ರಸ್ತುತ ಸಂಸ್ಥೆ ಎರಡು ವರ್ಷಗಳಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಸೂಕ್ತ ಅನುಮೋದನೆ ಪಡೆದುಕೊಳ್ಳುವ ಷರತ್ತಿಗೊಳಪಡಿಸಿ, ಅನುಮತಿ ನೀಡಿದೆ.

ಜಿ. ಎಸ್. ನಾಯಕ್,
ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 934

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003,

Sub: KVAT Act, 2003 – Clarification under Section 59(4) regarding the rate of tax applicable on 'fish oil-reg.,'

Ref: · Application dated: 17-06-2011 of Sri Nissar F.M. Proprietor, Coastal Exports Corporation, P.B. # 122, Goods Shed Road, Mangalore-575 012. TIN : 29440226556

The registered dealer under the Act, Sri Nissar F.M. Proprietor, Coastal Exports Corporation, Mangalore, has sought clarification regarding the rate of tax applicable on 'fish oil'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is

within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR. 76/2011-12, DATED 23.08.2011

It is clarified that 'fish oil' is taxable at 5% from o1-04-2011 as per entry No. 1(4) of notification No. FD 197 CLS 2005(6), dated : 30-04-2005.

PRADEEP SINGH KHAROLA
Commissioner of Commercial Taxes,
(Karnataka), Bangalore.

PR-942

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Sub: KVAT Act, 2003 – Clarification under Section 59(4) regarding the rate of tax applicable on 'gear boxes' reg.,

Ref: Application dated: 27-04-2011 of Sri P. Sreenivasan, Senior Manager-Finance, Triveni Engineering & Industries Ltd., Plot No. 1,2,3, Belagola Industrial Area, K.R.S. Road, Metagalli Post, Mysore-570 016. TIN : 29900069066

The registered dealer under the Act, Triveni Engineering & Industries Ltd., Mysore, has sought clarification regarding the rate of tax applicable on 'gear boxes.'

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR. 30/2011-12, DATED 23.08.2011

It is clarified that 'gear boxes' covered under CET Code 8483.40.00 are liable to tax at 14% under the Section 4(1)(b) of the Karnataka Value Added Tax Act, 2003.

PRADEEP SINGH KHAROLA
Commissioner of Commercial Taxes,
(Karnataka), Bangalore.

PR-943

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Sub: KVAT Act, 2003 – Clarification under Section 59(4) regarding the rate of tax applicable on 'unsaturated polyester resins'- reg.,

Ref: Application dated: 06-06-2011 of Golden resins Pvt. Ltd., Plot No. 3-B, 2nd Phase, Jigani Industrial Area, Bangalore-560 095. TIN: 29720091087

The registered dealer under the Act, Golden Resins Pvt. Ltd., Bangalore, has sought clarification regarding the rate of tax applicable on 'unsaturated polyester resins.'

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary of expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within

the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR. 59/2011-12, DATED 25.08.2011

It is clarified that 'unsaturated polyester resins' falling under CET Heading 3907 are taxable at 5% as per serial No. 133 in the table of the notification No. FD 197 CSL 2005(6), dated : 30-04-2005.

PRADEEP SINGH KHAROLA
Commissioner of Commercial Taxes,
(Karnataka), Bangalore.

PR-944

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES (KARNATAKA), BANGALORE- CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ/ಸಿಒ/1391/ಸಿಎಲ್‌ಎಂ/2010 ಬೆಂಗಳೂರು ದಿನಾಂಕ : 17-02-1011ರ ಪ್ರಕಾರ ದತ್ತವಾದ ಅಧಿಕಾರದನ್ವಯ ಇಲ್ಯಾಸ್ ಉಲ್ಲಾ ಷರೀಫ್, ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಆದ ನಾನು ಬಗ್ಗನಡು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಗ್ಗನಡು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ, ಈ ಸಂಘದ ನೋಂದಣಿ ಸಂಖ್ಯೆ/ಸನಿ/30/51/ಆರ್ ಜಿಎನ್/30460/2000-01 ದಿನಾಂಕ : 06-12-2000ನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದು ಪಡಿಸಿರುತ್ತೇನೆ. ಈ ದಿನದಿಂದ ಸಂಘವು ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ. ಸಮಾಪನಾಧಿಕಾರಿಗಳು ಸಂಘದ ಎಲ್ಲಾ ದಾಖಲೆಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರಿಗೆ ಒಪ್ಪಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ : 30-11-2011ರಂದು ನೀಡಿರುತ್ತೇನೆ.

....

ಸಹಕಾರ ಸಂಘಗಳ ಉಪ ನಿಬಂಧಕರು,

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಪಿ.ಆರ್. ನಂ. 62

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯ,

ಬಿ3:ಅಮೊ:ವಾಹನ:ವಿವ.01/10-11 ದಿನಾಂಕ:16-07-2011

ಉಪಸ್ಥಿತರು	:	ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಪಿರ್ಯಾಧಿದಾರರು	:	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಭಾದ್ಯತೆದಾರರು	:	ಯಾರು ಇರುವುದಿಲ್ಲ.

ಪ್ರಸ್ತಾವನೆ:-

ದಿ:09-04-2010 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಸಿಬ್ಬಂದಿಯೊಂದಿಗೆ ಅಂಜನಾಪುರ-ಶಿಕಾರಿಪುರ ರಸ್ತೆಯಲ್ಲಿ ಗಸ್ತು ತಿರುಗುತ್ತಿರುವಾಗ ಒಂದು ವಾಹನದಲ್ಲಿ ಅರಣ್ಯ ಉತ್ಪನ್ನ ಅಕ್ರಮ ಸಾಗಾಣಿಕೆ ಮಾಡಿದ ಬಗ್ಗೆ ಪತ್ತೆಹಚ್ಚಿ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:09-04-2010 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಮತ್ತು ಇವರ ಸಿಬ್ಬಂದಿಯವರು ಶಿಕಾರಿಪುರ ತಾ॥ ಅಂಜನಾಪುರ ಹೋಬಳಿ ಅಂಜನಾಪುರ-ಶಿಕಾರಿಪುರ ರಸ್ತೆಯ ಮೂಡುಗೆರೆ ಕ್ರಾಸ್ ಬಳಿ ಇಲಾಖಾ ವಾಹನದಲ್ಲಿ ಬೆಳಗಿನ ಜಾವ 5-30ರ ಸಮಯದಲ್ಲಿ ಗಸ್ತು ಮಾಡುತ್ತಾ ಹೋಗುತ್ತಿರುವಾಗ ಒಂದು ವಾಹನ ಟಾಟಾ ಸುಮೋ ಕೆಎ-03-ಬಿ-9183 ಬರುತ್ತಿರುವುದನ್ನು ಬ್ಯಾಟರಿ ಬೆಳಕಿನ ಸಹಾಯದಿಂದ ನಿಲ್ಲಿಸಲು ಸೂಚಿಸಿದರು. ನಿಲ್ಲಿಸದೇ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಡ್ಯಾಂಹೊಸೂರು ಹತ್ತಿರ ತಡೆದು ನಿಲ್ಲಿಸಿ, ವಾಹನದ ಚಾಲಕನನ್ನು ಹಿಡಿದು ವಿಚಾರಿಸಲಾಗಿ ಅವನ ಹೆಸರು ಬಿ.ಎಸ್.ರಾಜು ಬಿನ್ ಸಿದ್ದರಾಜು, 25 ವರ್ಷ, ವಾಸ-ತಾಯಪ್ಪಲೇಔಟ್, ರಾಚೇನಹಳ್ಳಿ ಮುಖ್ಯರಸ್ತೆ, ಬೆಂಗಳೂರು-45 ಎಂದು ತಿಳಿಸಿದನು. ನಂತರ ವಾಹನ ಪರಿಶೀಲಿಸಿದಾಗ ಟಾಟಾ ಸುಮೋ ನಂ.ಕೆಎ-03-ಬಿ-9183, ಇಂಜಿನ್ ನಂ.483DL-SI-BUZ-704313, ಛಾಸಿಸ್ ನಂ.446252-BUZ-908535 ಆಗಿದ್ದು, ವಾಹನದೊಳಗಡೆ 6 ಬೀಟೆ ನಾಟಾವಿದ್ದು, ಅದರ ಅಳತೆ 0.845 ಎಂ3 ಪ್ರಮಾಣವಿದ್ದು, ಇದನ್ನು ಸಾಗಿಸಲು ರಹದಾರಿ ಇಲ್ಲವೆಂದು ತಿಳಿಸಿರುತ್ತಾನೆ. ಅಲ್ಲದೇ ಈ ನಾಟಾಗಳು ಹಸಿಯಾಗಿದ್ದು, ಯಾವುದೇ ಇಲಾಖಾ ಛಾಪದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ, ಅರಣ್ಯ ಉತ್ಪನ್ನ ಹಾಗೂ ಒಬ್ಬ ಆಸಾಮಿಯನ್ನು, ಪ್ರಥಮ ಮಾಹಿತಿ ವರದಿ, ಮಹಜರ್ ವರದಿ, ಮತ್ತು ಜಪ್ತು ವರದಿಯೊಂದಿಗೆ, ಇಲಾಖಾ ಪರ ಜಪ್ತು ಮಾಡಿ, ಕರ್ನಾಟಕ ಅರಣ್ಯ ಕಾಯಿದೆ 1963, ಸೆಕ್ಷನ್ 33, 71(ಎ), 104 (ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಅರಣ್ಯ ಸಂಚಾರಿದಳ, ಶಿಕಾರಿಪುರ ಕಛೇರಿಯ ಅ.ಮೊ.ಸಂಖ್ಯೆ:02/10-11ದಿ:09-04-2010ನ್ನು ದಾಖಲಿಸಿ, ಆಸಾಮಿಗಳನ್ನು ಜೆಎಂಎಫ್‌ಸಿ ಶಿಕಾರಿಪುರಕ್ಕೆ ಒಪ್ಪಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾದ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಈ ವಾಹನದ ಆರ್.ಸಿ. ಮಾಲೀಕರನ್ನು ತನಿಖೆ ಮಾಡುವ ಬಗ್ಗೆ "ಬಿ" ಎಕ್ಸ್‌ಟ್ರ್ಯಾಕ್ಟ್‌ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಇಂದಿರಾನಗರ (ಪೂರ್ವ) ಬೆಂಗಳೂರು ಇವರಿಂದ ಪಡೆದು, ಆರ್.ಸಿ.ಮಾಲೀಕರಾದ ಶ್ರೀ ವಿಲಿಯಂ ಕ್ರಿಸ್ಟಫರ್ ಬಿನ್ ಕೆ.ಕ್ರಿಸ್ಟಫರ್, ಮನೆ ನಂ:23/5, ಎಲ್.ಜಿ.ರಾಮಣ್ಣ ಲೇಔಟ್, ಲವಕುಶನಗರ, 2ನೇ ಮೈನ್ ಲಗ್ಗೇರೆ ಬೆಂಗಳೂರು ಇವರಿಗೆ ದಿ:14-05-2011 ರಂದು ನೀಡಿದ ನೋಟಿಸ್ ಸ್ವೀಕರಿಸುವುದಿಲ್ಲವೆಂದು, ಮತ್ತು ಈ ವಾಹನ ಕಳ್ಳುವಾದ ಬಗ್ಗೆ ದೂರು ನೀಡಿರುವುದಿಲ್ಲವೆಂದು, ಇದರಿಂದ ಆರ್.ಸಿ. ಮಾಲೀಕರು ವಾಹನದಲ್ಲಿ ಅಕ್ರಮ ಅರಣ್ಯ ಉತ್ಪನ್ನ ಸಾಗಾಣಿಕೆ ಮಾಡಲು ಉಪಯೋಗಿಸಿರುತ್ತಾರೆ. ಆದ್ದರಿಂದ ಇವರ ಮೇಲೆ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ವಿಚಾರಣಾ ವರದಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

"ಬಿ" ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ.ಮಾಲೀಕರಿಗೆ ಈ ನ್ಯಾಯಾಲಯದಿಂದ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಬಿ)(1)ರ ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ, ವಾಹನದ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಹೇಳಿಕೆಯೊಂದಿಗೆ ಸಲ್ಲಿಸಲು ಮತ್ತು ನಿಗದಿತ ಸಮಯದೊಳಗೆ ಹೇಳಿಕೆ ಸಲ್ಲಿಸದೇ ಹೋದಲ್ಲಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಕಾರಣ ಕೇಳಿ ನೋಟಿಸನ್ನು ದಿ:29-07-2010 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದ, ಲಕೋಟೆ ಮೇಲೆ ಅಂಚೆ ಇಲಾಖೆಯವರು "No such Number in" ಎಂದು ಬರೆದು ಹಿಂದಿರುಗಿಸಿರುತ್ತಾರೆ.

ಈ ನಡುವೆ ಈ ವಾಹನದ ಬಗ್ಗೆ ಹೆಚ್ಚಿನ ಪ್ರಚಾರಕ್ಕಾಗಿ ಈ ನ್ಯಾಯಾಲಯದಿಂದ 30 ದಿನಗಳ ಕಾಲಾವಕಾಶ ನೀಡಿ ಸಂಖ್ಯೆ:ಬಿ3:ಅಮೊ:ವಾಹನ: ಸಿಆರ್:19/10-11/ದಿ:01-07-2010ರಂದು ಪ್ರಕಟಣೆಯನ್ನು ಹೊರಡಿಸಿ ಪ್ರತಿಯನ್ನು ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ

ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಹಾಗೂ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ರಾಜ್ಯ ಮಟ್ಟದ ಪ್ರಚಲಿತ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿತ್ತು. ಆದರಂತೆ ಈ ಪ್ರಕಟಣೆಯು ದಿ:17-07-2010ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಮತ್ತು ದಿ:19-08-2010ರಂದು ರಾಜ್ಯ ಗೆಜೆಟ್ ಪತ್ರಿಕೆಯಲ್ಲಿ ಪ್ರಕಟಗೊಂಡು 30 ದಿನಗಳಾದರು ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಈ ನ್ಯಾಯಾಲಯಕ್ಕೆ ಹಕ್ಕುಬಾಧ್ಯತೆಯ ಅರ್ಜಿ ಸಲ್ಲಿಸಿರುವುದಿಲ್ಲ.

ವಿಚಾರಣಾಧಿಕಾರಿ ಹಾಗೂ ಪ್ರಾಸಿಕ್ಯೂಶನ್ ಸಾಕ್ಷಿ ಶ್ರೀ ಕೆ.ಆರ್.ಸತೀಶ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರನ್ನು ದಿ:02-07-2011 ರಂದು ಈ ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಿ, ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಕಳೆದ $2^1/_2$ ವರ್ಷಗಳಿಂದ ಅರಣ್ಯ ಸಂಚಾರಿದಳದಲ್ಲಿ ಕರ್ತವ್ಯ ನಿರ್ವಹಿಸಿದೆಂದು, ದಿ:09-04-2010ರಂದು ಬೆಳಗಿನ ಜಾವ 4-30ರ ಸಮಯದಲ್ಲಿ ಆನಂದಪುರಂ ಕಡೆಯಿಂದ ಒಂದು ವಾಹನ ಟಾಟಾ ಸುಮೋವನ್ನು ತಡೆದು ನಿಲ್ಲಿಸಿದರೂ, ನಿಲ್ಲಿಸದೇ ವಾಹನ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹಿಡಿಯಲಾಯಿತು. ಅದರಲ್ಲಿದ್ದ 2 ಜನ ಆಸಾಮಿಗಳು ಓಡಿ ಹೋಗಲು ಪ್ರಯತ್ನಿಸಿದ್ದು, ರಾಜು ಎಂಬುವವನ್ನು ಹಿಡಿದು ವಿಚಾರಿಸಲಾಗಿ, ಬೀಟೆ ನಾಟಾವನ್ನು ಸಾಗಿಸಲು ರಹದಾರಿ ಇಲ್ಲವೆಂದು ತಿಳಿಸಿದನು. ಇನ್ನೊಬ್ಬನು ತಪ್ಪಿಸಿಕೊಂಡಿರುತ್ತಾನೆಂದು ವಾಹನದಲ್ಲಿ ರಹದಾರಿ ಇಲ್ಲದೇ ಬೀಟೆ ನಾಟಾ ಸಾಗಿಸಿದ್ದರಿಂದ ವಾಹನ ಟಾಟಾ ಸುಮೋ ಕೆಎ-03-ಬಿ-9183ನ್ನು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ. ಯಾರು ಕ್ಲೇಮು ಅರ್ಜಿ ಸಲ್ಲಿಸದೇ ಇರುವುದರಿಂದ ಪಾಟೀಸವಾಲು ಇರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:02-07-2011 ರಂದು ವಾದ ಮಂಡಿಸಿ, ಸದರಿ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಸಾಗಿಸುತ್ತಿರುವಾಗ ಮಾಲು ಸಹಿತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ವಾಹನವನ್ನು ಜಪ್ತುಮಾಡಿ ಮಹಜರ್ ಪ್ರತಿ ಮತ್ತು ಪ್ರಥಮ ವರ್ತಮಾನ ವರದಿ, ಜಪ್ತಿ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದರಿಂದ ಈ ವಾಹನದಲ್ಲಿ ಬೀಟೆ ತುಂಡುಗಳನ್ನು ಅಕ್ರಮವಾಗಿ ಸಾಗಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಅಭಿಯೋಜಕರ ವಾದವನ್ನು ಕೇಳಿದೆ. ಹಾಗೂ ಈ ವಾಹನದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತದೆ. ಈ ಪ್ರಕಟಣೆಯು ರಾಜ್ಯ ಗೆಜೆಟ್‌ನಲ್ಲಿ ಮತ್ತು ದಿನಪತ್ರಿಕೆಯಲ್ಲಿ ಪ್ರಕಟಗೊಂಡು ಮತ್ತು ಆರ್.ಸಿ. ಮಾಲೀಕರಿಗೆ ನೋಟೀಸ್ ಜಾರಿ ಮಾಡಿ 30 ದಿನಗಳಾದರೂ ಯಾರೂ ಹಕ್ಕು ಬಾಧ್ಯತೆಯ ಅರ್ಜಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದುದ್ದರಿಂದ ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು, ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ)ಪ್ರಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಇವರು ಜಪ್ತು ಮಾಡಿದ ವಾಹನ ಟಾಟಾಸುಮೋ ಕೆಎ-03-ಬಿ-9183 (ಇಂಜಿನ್ ನಂ.483DL-SI- BUZ-704313, ಛಾಸಿಸ್ಸ್ ನಂ.446252-BUZ-908535) ಮತ್ತು ಈ ವಾಹನದಲ್ಲಿದ್ದ, 06 ತುಂಡು ಬೀಟೆ 0.845 ಎಂ3ವು ಕರ್ನಾಟಕ ಸರ್ಕಾರದ ಸಂಪತ್ತು ಆಗಿರುವುದರಿಂದ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದ್ದೇನೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ **ದಿ:16-07-2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಗರ ವಿಭಾಗ, ಸಾಗರ

ಪಿ.ಆರ್. 767

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ:ವಿವ:07/05-06 ದಿನಾಂಕ:27-08-2011

ಉಪಸ್ಥಿತರು	:	ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಪಿರ್ಯಾಧಿದಾರರು	:	ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ.(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)
ಬಾಧ್ಯತೆದಾರರು	:	ಶ್ರೀ ಲೋಕೇಶ ಪಿ. ಬಿನ್ ಪಾಯಪ್ಪ, ಜಮೇಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ-ಅಂಚೆ, ಹೊಸನಗರ ತಾ॥ (ಶ್ರೀ ಕೆ.ಎನ್.ಶ್ರೀಧರ್, ವಕೀಲರು, ಸಾಗರ)

ಪ್ರಸ್ತಾವನೆ:-

ದಿ:19-07-2005 ರಂದು ಟಾಟಾ-407 ವಾಹನದಲ್ಲಿ ಬೀಟೆ ನಾಟಾ ಅಕ್ರಮವಾಗಿ ಸಾಗಿಸುತ್ತಿರುವಾಗ ಆನಂದಪುರಂ ವಲಯದ ವಲಯ ಅರಣ್ಯಾಧಿಕಾರಿ ರವರು ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಬರೆದ ಮಹಜರ್ ವಿವರ ಈ ಕೆಳಗಿನಂತಿದೆ.

ದಿ:19-07-2005ರ ಬೆಳಿಗ್ಗೆ 5-00ಗಂಟೆ ಸಮಯದಲ್ಲಿ ವಲಯ ಅರಣ್ಯಾಧಿಕಾರಿ, ಚೋರಡಿ ಇವರು ಮತ್ತು ಸಿಬ್ಬಂದಿಯವರು ಸಾಗರ ತಾ॥ ಆನಂದಪುರಂ ಹೋಬಳಿ ಆನಂದಪುರಂದಿಂದ-ಶಿಕಾರಿಪುರ ಕಡೆ ಹೋಗುವ ರಸ್ತೆ ಕ್ರಾಸ್ ಬಳಿ ಗಸ್ತು ಮಾಡುತ್ತಾ, ರಸ್ತೆಯಲ್ಲಿ ಬರುವ ಎಲ್ಲಾ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡುತ್ತಿರುವಾಗ ಶಿವಮೊಗ್ಗ ಕಡೆಯಿಂದ ಸಾಗರ ಕಡೆಗೆ ಒಂದು ವಾಹನ ಟಾಟಾ-407 [illegible] ನಿಲ್ಲಿಸಲು ಸೂಚಿಸಿದರು ನಿಲ್ಲಿಸದೇ ವೇಗ ಮುಂದೆ ಹೋಯಿತು. ನಂತರ ವಾಹನವನ್ನು ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಆ ವಾ[illegible] ತಾ॥ ಆನಂದಪುರಂ ಹೋಬಳಿ ಹಕ್ರೆಕೊಪ್ಪದ ಬಳಿ ತಡೆದು ನಿಲ್ಲಿಸಲಾಯಿತು. ಈ ವಾಹನದಲ್ಲಿದ್ದ ಮೂರು ಜನ ಆಸಾಮಿಗಳು ವಾಹನದಿಂದ ಇಳಿದು ಕೈಗೇ ಸಿಗದೇ ಪರಾರಿಯಾದರು. ನಂತರ ವಾಹನ ಪರಿಶೀಲಿಸಲಾಗಿ, ಟಾಟಾ-407 ಕೆಎ-31-1286 ಆಗಿದ್ದು, ವಾಹನದ ಹಿಂಬದಿಯ ಬಾಡಿಯ ತಾಡಪಲನ್ನು ಎತ್ತಿನೋಡಿದಾಗ ಹಸಿ 8 ನಾಟಾ ಇದ್ದು, ಈ ತುಂಡುಗಳಿಗೆ ಸಂಖ್ಯೆ ನೀಡಿ ಅಳತೆ ಮಾಡಿದಾಗ 01.402 ಎಂ3 ಪ್ರಮಾಣವಿರುತ್ತದೆ. ಈ ತುಂಡುಗಳ ತುದಿಬುಡವು ಗರಗಸದಿಂದ ಕೊಯ್ತ ಮಾಡಿದಾಗಿದ್ದು, ಈ ತುಂಡುಗಳ ಮೇಲೆ ಇಲಾಖಾ ಛಾಪಾದ ಗುರುತಿರಲಿಲ್ಲ. ಹಾಗೂ ಸಾಗಿಸಲು ರಹದಾರಿ ಇಲ್ಲದ ಕಾರಣ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾ ಪರ ವಶಪಡಿಸಿಕೊಂಡು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 127, 144ರ ಪ್ರಕಾರ ಆನಂದಪುರಂ ವಲಯದ ಅ.ಮೊ. ಸಂಖ್ಯೆ:36/05-06ನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ನಂತರ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ವಾಹನದ 'ಬಿ' ಎಕ್ಸ್‌ಟ್ರಾಕ್ಟ್‌ನ್ನು ಈ ನ್ಯಾಯಾಲಯಕ್ಕೆ ಒದಗಿಸುವಂತೆ ಈ ನ್ಯಾಯಾಲಯದಿಂದ ಬಿ3.ಅಮೊ.ವಾಹನ.ವಿವ.07/05-06 ದಿ:11-08-2005, 04-03-2006, 24-06-2006 ಮತ್ತು 07-08-2006 ರಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಪತ್ರವನ್ನು ಬರೆದು ಕೋರಲಾಯಿತು. ಅದರಂತೆ, ಈ ವಾಹನದ 'ಬಿ' ಎಕ್ಸ್‌ಟ್ರಾಕ್ಟ್‌ನ್ನು ದಿ:05-09-2006 ರಂದು ಈ ನ್ಯಾಯಾಲಯಕ್ಕೆ ಒದಗಿಸಿರುತ್ತಾರೆ. ಈ 'ಬಿ' ಎಕ್ಸ್‌ಟ್ರಾಕ್ಟ್‌ನಲ್ಲಿ ಶ್ರೀ ಲೋಕೇಶ ಪಿ. ಜನ್ ಪಾಯಪ್ಪ, ಜಮೀಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ-ಅಂಚೆ, ನಗರ-ಹೋಬಳಿ, ಹೊಸನಗರ ತಾ॥ ಎಂದು ನಮೂದಿಸಲಾಗಿದ್ದು, ಈ ವಾಹನ ಜಪ್ತು ಮಾಡುವಾಗ ಅದರಲ್ಲಿ ಸಿಕ್ಕಿದ್ದ ಜೆರಾಕ್ಸ್ ಆರ್.ಸಿ. ಪುಸ್ತಕದಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಬಿ)(1)ರ ಪ್ರಕಾರ 30ದಿನಗಳ ಕಾಲಾವಕಾಶ ನೀಡಿ ದಿ:18-08-2005 ರಂದು ಕಾರಣ ಕೇಳಿ ಪತ್ರವನ್ನು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ.

ಈ ವಾಹನದ ಆರ್.ಸಿ. ಮಾಲೀಕರು ಈ ವಾಹನ ಮಧ್ಯಂತರ ಅವಧಿಗೆ ಬಿಡುಗಡೆ ಮಾಡುವಂತೆ ಕೋರಿ ವಕೀಲರ ಮುಖಾಂತರ ದಿ:23-09-2005 ರಂದು ಕ್ಲೇಮು ಅರ್ಜಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಡುಗಡೆಗೆ ಕೋರಿದ ವಾಹನ ಮಾಲೀಕರ ಅರ್ಜಿಯನ್ನು ದಿ:05-01-2008 ರಂದು ತಿರಸ್ಕರಿಸಿ ಈ ನ್ಯಾಯಾಲಯದಿಂದ ಆದೇಶ ಹೊರಡಿಸಿದೆ.

ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಮುಕುಂದಚಂದ್ರ, ವಲಯ ಅರಣ್ಯಾಧಿಕಾರಿ, ಭದ್ರಾವತಿ ವಲಯ, ಭದ್ರಾವತಿ (ಚೋರಡಿ ವಲಯದಲ್ಲಿ ಹಿಂದೆ ಕರ್ತವ್ಯ ನಿರ್ವಹಿಸಿರುವ) ಇವರನ್ನು ದಿ:16-07-2011 ರಂದು ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಲಾಯಿತು. ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಜುಲೈ-2005 ರಿಂದ 2008 ನವೆಂಬರ್‌ರವರೆಗೆ ಚೋರಡಿ ವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತೇನೆ. ದಿ:19-07-2005 ರಂದು ಗಸ್ತು ಮಾಡುತ್ತಾ, ಶಿಕಾರಿಪುರ ರಸ್ತೆ ದಾಸನಕೊಪ್ಪ ಕ್ರಾಸ್ ಬಳಿ ಸಿಬ್ಬಂದಿಯೊಂದಿಗೆ ಕಾಯುತ್ತಿದ್ದಾಗ ಶಿವಮೊಗ್ಗದ ಕಡೆಯಿಂದ ಸಾಗರ ಕಡೆಗೆ ಟಾಟಾ ಮಿನಿಲಾರಿ ಬರುತ್ತಿರುವುದನ್ನು ತಪಾಸಣೆಗೆ ನಿಲ್ಲಿಸಲು ಸೂಚಿಸಿದರು. ನಿಲ್ಲಿಸದೇ ವೇಗವಾಗಿ ಮುಂದೆ ಹೋದಾಗ ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹಕ್ರೆಕೊಪ್ಪ ಬಸ್‌ಸ್ಟಾಂಡ್ ಹತ್ತಿರ ಹಿಡಿದೆವು. ಅದರಲ್ಲಿದ್ದ 3 ಜನ ಆಸಾಮಿಗಳು ಕೈಗೆ ಸಿಗದೇ ಪರಾರಿಯಾದರು. ವಾಹನದೊಳಗಡೆ 8 ಹಸಿ ಬೀಟೆ ತುಂಡುಗಳಿದ್ದು, ಈ ತುಂಡುಗಳನ್ನು ಗರಗಸದಿಂದ ಕೊಯ್ತ ಮಾಡಲಾಗಿತ್ತು. ಅವುಗಳ ಮೇಲೆ ಯಾವುದೇ ಛಾಪಾದ ಗುರುತಿರಲಿಲ್ಲ. ಹಿಡಿದ ವಾಹನದ ಡ್ಯಾಸ್ ಬೋರ್ಡ್‌ನಲ್ಲಿ ಡಿ.ಎಲ್., ಆರ್.ಸಿ.ಪುಸ್ತಕ ಸಿಕ್ಕಿತ್ತು. ಓಡಿ ಹೋದ ಒಬ್ಬ ವ್ಯಕ್ತಿಯಾಗಿ ಡಿ.ಎಲ್.ನಲ್ಲಿರುವ ಫೋಟೋಕ್ಕೆ ಹೋಲಿಕೆಯಾಗಿದ್ದು, ಅವನ ಹೆಸರು ಲೋಕೇಶ್ ಜಿನ್ ಪಾಯಪ್ಪ ಎಂದಿತ್ತು. ಇನ್ನಿಬ್ಬರ ಮಾಹಿತಿ ಸಿಗಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ನಾಟಾಗಳನ್ನು ಅಳತೆ ಮಾಡಿ ಕ್ರಮ ಸಂಖ್ಯೆಕೊಟ್ಟು ಇಲಾಖಾ ಛಾಪಾ ಹೊಡೆದೆವು. ವಾಹನ ಪರಿಶೀಲಿಸಿದಾಗ ಕೆಎ-31-1286 ಆಗಿದ್ದು, ಸ್ಥಳದಲ್ಲಿ ಮಾಡಿದ ಮಹಜರ್-ನಿಪಿ1, ಅದರ ಸಹಿಯನ್ನು 1(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಅದರಲ್ಲಿನ ನನ್ನ ಸಹಿಯನ್ನು 2(ಎ) ಜಪ್ತುವರದಿಯನ್ನು ನಿಪಿ-3 ಎಂದು ಅದರಲ್ಲಿನ ನನ್ನ ಸಹಿಯನ್ನು 3(ಪಿ) ಎಂದು ಗುರುತಿಸಿದೆ. ಬೀಟೆ ಮರದ ದೃಢೀಕರಣ ಪತ್ರವನ್ನು ವಲಯ ಅರಣ್ಯಾಧಿಕಾರಿ, ಹಣಗೆರೆ ವಲಯ, ಹಣಗೆರೆ ಇವರಿಂದ ಪಡೆದನು. ವಿಚಾರಣಾ ವರದಿ ತಯಾರಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೆ ಸಲ್ಲಿಸಿ, ಆರೋಪಿಗಳ ವಿರುದ್ಧ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ವಿಚಾರಣಾ ವರದಿಯನ್ನು ನಿಪಿ-4 ಎಂದು

ಪತ್ರವನ್ನು ನಿಪಿ-5, 6, 7 ಎಂದು ಗುರುತಿಸಿದೆ. ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮ ಸಾಗಿಸಲು ಉಪಯೋಗಿಸಿರುವುದರಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ".

ಪಾಟಿ ಸವಾಲಿಗೆ ವಕೀಲರು ಗೈರು ಹಾಜರಾಗಿದ್ದರಿಂದ ಪಾಟಿಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:23-07-2011, 30-07-2011 ಮತ್ತು 06-08-2011 ರಂದು ಮತ್ತು ವಾದ ಮಂಡಿಸಲು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:20-08-2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 407 ಕೆಎ-31-1286 ರಲ್ಲಿ ಅರಣ್ಯ ಉತ್ಪನ್ನವಾದ 08 ಬೀಟೆ ನಾಟಾ 1.402ಎಂ3ನ್ನು ದಿ:19-07-2005ರಂದು ಅಕ್ರಮವಾಗಿ ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ 407 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ-1:

ದಿ:19-07-2005 ರಂದು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಮತ್ತು ಸಿಬ್ಬಂದಿಯವರು ಸಾಗರ ತಾ॥ ಆನಂದಪುರಂ ಹೋಬಳಿ ಆನಂದಪುರಂದಿಂದ ಶಿಕಾರಿಪುಕ್ಕೆ ಹೋಗುವ ರಸ್ತೆಯ ಕ್ರಾಸ್ ಬಳಿ ರಾತ್ರಿ ಗಸ್ತು ತಿರುಗುತ್ತಿರುವಾಗ ಬೆಳಿಗ್ಗೆ 5-00 ಗಂಟೆ ಸಮಯದಲ್ಲಿ ಟಾಟಾ 407 ಕೆಎ-31-1286ರಲ್ಲಿ ಬೀಟೆ ನಾಟಾ 08=1.402 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಬೀಟೆ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ಶ್ರೀ ಪಿ.ಲೋಕೇಶ್ ಬಿನ್ ಪಾಯಪ್ಪ, ಜಮೇಜಡ್ಡು ಗ್ರಾಮ, ಹೂಕೊಪ್ಪಲು, ಬೈಸೆ-ಅಂಚೆ, ಹೊಸನಗರ ತಾ॥ ಇವರು ದಿ:23-09-2005ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:18-08-2005 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ಮೂರು ಬಾರಿ ದಿನಾಂಕಗಳನ್ನು ನೀಡಲಾಗಿದ್ದು, ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ

ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ-3:

ದಿ:19-07-2005 ರಂದು ಟಾಟಾ 407 ನಂ:ಕೆಎ-31-1286ರಲ್ಲಿ 08 ಬೀಟೆ ನಾಟಾ 1.402 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನಂದಪುರಂ, ವಲಯ, ಚೋರಡಿಯ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನಂದಪುರಂ, ವಲಯ ಚೋರಡಿ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:23-09-2005ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನಚ್ಚೆರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of-Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that *"the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ....It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".*

ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡ ಬಗ್ಗೆ ಈ ನ್ಯಾಯಾಲಯಕ್ಕೆ ಸಾಭೀತುಪಡಿಸಿರುವುದಿಲ್ಲ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ಅರಣ್ಯ ಮೊಕದ್ದಮೆಯಲ್ಲಿ ಜಪ್ತು ಮಾಡಿದ ಟಾಟಾ-407 ಕೆಎ-31-1286 (ಇಂಜಿನ್ ನಂ:4975P21MUQ806487, ಛಾಸ್ಸಿಸ್ ನಂಬರ್: 357010MUQ838404) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ನಾಟಾ 08=1.402 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:27-08-2011 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ

ಸಾಗರ ವಿಭಾಗ, ಸಾಗರ.

ಸಿ.ಆರ್. 1103

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ ಸಾಗರ ಇವರ ನ್ಯಾಯಾಲಯದಲ್ಲಿ

ಕ್ರ: ಬಿ3:ಅಮೊ:ವಾಹನ:22/06–07 ದಿನಾಂಕ:23–07–2011

ಉಪಸ್ಥಿತರು	:	ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ
ಪಿರ್ಯಾಧಿದಾರರು	:	ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಸಾಗರ, (ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)
ಬಾಧ್ಯತೆದಾರರು	:	ಶ್ರೀ ಇರ್ಫಾನ್ ಹಿತ್ತಲಮನಿ ಬಿನ್ ಭಾಷಾ ಸಾಬ್, ನೆಹರೂ ಕಾಲೋನಿ,2ನೇ ತಿರುವು, ಸೊರಬ ರಸ್ತೆ, ಶಿರಾಳಕೊಪ್ಪ ಟೌನ್, ಶಿಕಾರಿಪುರ. (ಶ್ರೀ ಆರಿಫ್ ಆಲಿ ಖಾನ್, ವಕೀಲರು, ಸಾಗರ)

ಪ್ರಸ್ತಾವನೆ:–

ದಿ:03–12–2006 ರಂದು ವಲಯ ಅರಣ್ಯಾಧಿಕಾರಿ, ಸಾಗರ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಒಂದು ವಾಹನದಲ್ಲಿ ಬೀಟೆ ನಾಟಾ ಅಕ್ರಮ ಸಾಗಾಣಿಕೆ ಮಾಡುತ್ತಿದ್ದ ಬಗ್ಗೆ ಪತ್ತೆಹಚ್ಚಿ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:03–12–2006ರಂದು ವಲಯ ಅರಣ್ಯಾಧಿಕಾರಿ, ಸಾಗರ ಮತ್ತು ಸಿಬ್ಬಂದಿಗಳಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾಲ್ಲೂಕು ಆನಂದಪುರಂ ಹೋಬಳಿ ತ್ಯಾಗರ್ತಿ ಗ್ರಾಮದ ಬೆಳಂದೂರಿಗೆ ಹೋಗುವ ರಸ್ತೆಯಲ್ಲಿ ಕಾಯುತ್ತಿರುವಾಗ ಸುಮಾರು ಸಾಯಂಕಾಲ 6–30ರ ಸಮಯದಲ್ಲಿ ಮೈಲಾರಿಕೊಪ್ಪದ ಕಡೆಯಿಂದ ಒಂದು ವಾಹನ ಬರುವುದನ್ನು ನಿಲ್ಲಿಸಲು ಸೂಚಿಸಿದಾಗ ಸುಮಾರು 200 ಅಡಿ ದೂರದಲ್ಲಿ ವಾಹನ ನಿಲ್ಲಿಸಿ ಅದರಲ್ಲಿದ್ದ ಅಸಾಮಿಗಳು ವಾಹನದಿಂದ ಜಿಗಿದು ಓಡಿಹೋಗಿರುತ್ತಾರೆ. ಓಡಿಹೋದ ಅಸಾಮಿಗಳನ್ನು ಬೆನ್ನಟ್ಟಿದರೂ ಕೈಗೆ ಸಿಗದೆ ಪರಾರಿಯಾಗಿರುತ್ತಾರೆ. ಓಡಿಹೋದ ಅಸಾಮಿಗಳು ಯಾರೆಂದು ಗೊತ್ತಾಗಿರುವುದಿಲ್ಲ. ವಾಹನ ಪರಿಶೀಲಿಸಿದಾಗ ಬಿಳಿ ಬಣ್ಣದ ಟಾಟಾ 207 ನೊಂದಣಿ ಸಂಖ್ಯೆ:ಕೆಎ–25–ಸಿ–7771, ಛಾಸ್ಸಿಸ್ ನಂ: 374415 DWZ 910150, ಇಂಜಿನ್ ನಂ: DWZ 872793 ಆಗಿದ್ದು, ವಾಹನದೊಳಗೆ ಬೀಟೆ ಜಾತಿಯ ನಾಟಾಗಳಿದ್ದು, ಅವುಗಳ ಮೇಲೆ ಇಲಾಖೆಯ ಛಾಪಾದ ಗುರುತಿರಲಿಲ್ಲ. ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಬೀಟೆ ನಾಟಾಗಳಿಗೆ ನಂಬರ್ ಕೊಟ್ಟು 8 ಬೀಟೆ ನಾಟಾಗಳನ್ನು ಅಳತೆ ಮಾಡಿದಾಗ ಅವುಗಳ ಪ್ರಮಾಣ 01.032ಎಂ3 ಇದ್ದು, ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತುವರದಿಯೊಂದಿಗೆ ವಾಹನ ಮತ್ತು ಬೀಟೆ ನಾಟಾವನ್ನು ಇಲಾಖಾ ಪರ ಜಪ್ತುಮಾಡಿ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71(ಎ), 104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಕಾನೂನು ಉಲ್ಲಂಘಿಸಿರುವುದರಿಂದ ಸಾಗರ ವಲಯದ ಅ.ಮೊ.ಸಂಖ್ಯೆ 110/06–07ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ವಾಹನದ ಆರ್.ಸಿ. ಮಾಲೀಕರು ವಕೀಲರ ಮುಖಾಂತರ ಅರ್ಜಿಯನ್ನು ದಿ:29–01–2007 ರಂದು ಸಲ್ಲಿಸಿ, ವಾಹನ ಮಧ್ಯಂತರ ಅವಧಿಗೆ ಬಿಡಲು ಕೋರಿರುತ್ತಾರೆ. ಇವರ ಅರ್ಜಿಯನ್ನು ದಿ:19–09–2009 ರಂದು ತಿರಸ್ಕರಿಸಿ ಈ ನ್ಯಾಯಾಲಯದಿಂದ ಆದೇಶ ಹೊರಡಿಸಿದೆ.

ನಂತರ ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎಸ್.ಎಸ್.ಚಂದ್ರಶೇಖರ್, ವಲಯ ಅರಣ್ಯಾಧಿಕಾರಿ, ಆನೇಕಲ್ ವಲಯ, (ಆಗಿನ ಸಾಗರ ವಲಯದ ವಲಯ ಅರಣ್ಯಾಧಿಕಾರಿ) ಇವರನ್ನು ದಿ:30–10–2010 ರಂದು ಈ ನ್ಯಾಯಾಲಯಕ್ಕೆ ಕರೆಸಿ, ಸತ್ಯಪ್ರತಿಜ್ಞೆ ಬೋಧಿಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ನಾನು ದಿ:02–07–2005 ರಿಂದ 30–08–2008 ರವರೆಗೆ ಸಾಗರ ವಲಯದಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿ:03–12–2006 ರಂದು ಬಂದ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಯೊಂದಿಗೆ ತ್ಯಾಗರ್ತಿ ಗ್ರಾಮದ ಬೆಳಂದೂರು ರಸ್ತೆಯಲ್ಲಿ ಇಲಾಖಾ ವಾಹನದಲ್ಲಿ ಕಾಯುತ್ತಿದ್ದೆವು. ಆ ಸಮಯದಲ್ಲಿ ಅಂಬ್ಲಿಗೊಳ ವಲಯದ ವಲಯ ಅರಣ್ಯಾಧಿಕಾರಿ, ಸುದರ್ಶನ್‌ರವರು ನಮ್ಮೊಂದಿಗಿದ್ದರು. ಸುಮಾರು ಸಂಜೆ 6–30ರ ಸಮಯದಲ್ಲಿ ಮೈಲಾರಿಕೊಪ್ಪ ಕಡೆಯಿಂದ ಬೆಳಂದೂರು ರಸ್ತೆ ಬದಿ ವಾಹನ ಬರುತ್ತಿರುವುದನ್ನು ನೋಡಿ ನಾವು ಅದನ್ನು ತಡೆಯಲು ರಸ್ತೆಗೆ ಅಡ್ಡ ಬಂದಾಗ ನಮ್ಮಿಂದ 200 ಅಡಿ ದೂರದಲ್ಲಿ ವಾಹನ ನಿಲ್ಲಿಸಿ ಓಡಿಹೋಗಿದ್ದು, ಅವರನ್ನು ಹಿಡಿಯಲು ಪ್ರಯತ್ನಿಸಿದರೂ ಸಿಗಲಿಲ್ಲ. ನಂತರ ವಾಹನವನ್ನು ಪರಿಶೀಲಿಸಲಾಗಿ ಅದರ ನೊಂದಣಿ ಸಂ: ಕೆಎ–25–ಸಿ–7771 ಆಗಿತ್ತು. ಅದರಲ್ಲಿ ಬೀಟೆ ಜಾತಿಯ 8 ತುಂಡುಗಳಿತ್ತು, ಅವುಗಳ ಮೇಲೆ ಇಲಾಖಾ ಛಾಪಾದ ಗುರುತಿರಲಿಲ್ಲ. ಆದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ಅವುಗಳನ್ನು ಅಳತೆ ಮಾಡಿ ಕ್ರಮ ಸಂಖ್ಯೆ ಕೊಟ್ಟು ಇಲಾಖಾ ಛಾಪಾ ಹೊಡೆದು ಅವುಗಳನ್ನು ಮತ್ತು ವಾಹನವನ್ನು ಮಹಜರ್ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಮಹಜರ್ ಬರೆದೆವು. ಆಗ ಮಾಡಿದ ಮಹಜರ್ ಈಗ ನೋಡುತ್ತಿದ್ದು, ಅದನ್ನು ನಿಪಿ–1 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–1ಎ ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ–2 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–2ಎ ಎಂದು, ಜಪ್ತು ವರದಿಯನ್ನು ನಿಪಿ–3 ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ–3ಎ ಎಂದು ಗುರುತಿಸಿದೆ. ವಾಹನ ಮತ್ತು ತುಂಡುಗಳನ್ನು ವಲಯ ಕಛೇರಿಗೆ ತಂದೆವು. ಸದರಿ ವಾಹನವನ್ನು ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುವುದರಿಂದ ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ.

ಪಾಟಿಸವಾಲಿಗೆ ಡಿಫೆನ್ಸ ಕಡೆಯ ವಕೀಲರೇ ಸಮಯ ಕೋರಿರುತ್ತಾರೆ. ಆದರೆ, ಸಕಾರಣವಿಲ್ಲದ ಕಾರಣ ಪಾಟಿಸವಾಲು ಇಲ್ಲವೆಂದು ತೀರ್ಮಾನಿಸಿ ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಿದೆ.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:20-11-2010, 29-01-2011, 05-02-2011, 19-02-2011, 02-04-2011, 28-05-2011 ರಂದು ದಿನಾಂಕ ನೀಡಿದ್ದರೂ, ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರು ಈ ಪ್ರಕರಣದಲ್ಲಿ ಹೇಳಿಕೆ ನೀಡಿರುವುದಿಲ್ಲ. ಈ ನಡುವೆ ಡಿಫೆನ್ಸ್ ಕಡೆ ವಕೀಲರು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಈ ಪ್ರಕರಣದಿಂದ ನಿವೃತ್ತಿ ಹೊಂದಿದ್ದೇನೆಂದು ತಿಳಿಸಿರುತ್ತಾರೆ. ಈ ಬಗ್ಗೆ ಆರ್.ಸಿ. ಮಾಲೀಕರಿಗೆ ದಿ:02-07-2011 ರಂದು ಈ ನ್ಯಾಯಾಲಯದಿಂದ ಪತ್ರ ಬರೆದು ದಿ:16-07-2011 ರಂದು 11-00 ಗಂಟೆಗೆ ಹಾಜರಾಗಲು ತಿಳಿಸಿದೆ. ಆದರೆ, ಆರ್.ಸಿ. ಮಾಲೀಕರು ದಿ:16-07-2011 ರಂದು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:16-07-2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 207 ಕೆಎ-15-ಸಿ-7771 ರಲ್ಲಿ 08 ಬೀಟೆ ನಾಟಾ 1.032ಎಂ3ನ್ನು ದಿ:03-12-2006ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ-207 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟೆ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ-1:

ದಿ:03-12-2006 ರಂದು ವಲಯ ಅರಣ್ಯಾಧಿಕಾರಿ, ಸಾಗರ ವಲಯ ಮತ್ತು ಸಿಬ್ಬಂದಿಯವರಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಸಾಗರ ತಾ॥ ಆನಂದಪುರಂ ಹೋಬಳಿ ತ್ಯಾಗರ್ತಿ ಗ್ರಾಮದ ಬೆಳಂದೂರಿಗೆ ಹೋಗುವ ರಸ್ತೆಯಲ್ಲಿ ಕಾಯುತ್ತಿರುವಾಗ ಒಂದು ವಾಹನ ಟಾಟಾ 207 ಕೆಎ-15-ಸಿ-7771ರಲ್ಲಿ ಬೀಟೆ ನಾಟಾ 08=1.032 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಬೀಟೆ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ಶ್ರೀ ಇರ್ಫಾನ್ ಓತ್ತಲಮನಿ ಬಿನ್ ಭಾಷಾ ಸಾಬ್, ನೆಹರೂ ಕಾಲೋನಿ, 2ನೇ ತಿರುವು, ಸೊರಬ ರಸ್ತೆ, ಶಿರಾಳಕೊಪ್ಪ ಟೌನ್, ಶಿಕಾರಿಪುರ. ಇವರು ದಿ:29-01-2007 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರಾಕ್ಟ್‌ನಲ್ಲಿ

ಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಚ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:31-01-2007 ರಂದು ಅಂಚೆ ಮೂಲಕ ರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ನಾಲ್ಕು ಬಾರಿ ದಿನಾಂಕಗಳನ್ನು ನೀಡಲಾಗಿದ್ದು, ಮತ್ತು ಡಿಫೆನ್ಸ್ ವಾದ ಮಂಡಿಸಲು ಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಂಶ-3:

ದಿ:03-12-2006 ರಂದು ಟಾಟಾ 207 ನಂ:ಕೆಎ-15-ಸಿ-7771ರಲ್ಲಿ 08 ಬೀಟೆ ನಾಟಾ 1.032 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಲಯ ಅರಣ್ಯಾಧಿಕಾರಿ, ಸಾಗರ ವಲಯ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಸಾಗರ ವಲಯ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:24-01-2007ರಂದು ಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲ ವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥಾವ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of - Ramesh N. Dixit V/S State of Karnataka, 1987 (2) ar.L.j.Sh.N.278:ILR 1985 Kar.2571 held that " the owners required to show under sub-section (2) of section 71-B is that he, his gent, if any and the person in charge of the vehicle (In this case the driver) each, had taken all reasonable and necessary ecautions against the misusing of the vehicle and that this offence had been committed without the knowledge or connivance ny of them ...... It is not merely enough if the truck owner says that his truck had been misused without his knowledge or nnivance, but in addition he is bound to show that he had taken all reasonable and necessary precautions against such misuse".

ಅಲ್ಲದೇ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಲಕರಾಗಲೀ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ಸಾಕ್ಷಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಜರ್ಪಡಿಸಿರುವುದಿಲ್ಲ.

ಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ) ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಸಾಗರ ವಲಯ, ಇವರು ಜಪ್ತು ಮಾಡಿದ ಟಾಟಾ 207 ನೊಂದಣಿ ಸಂಖ್ಯೆ: ಕೆಎ-25-ಸಿ-7771, ಾಸ್ಸಿಸ್ ನಂ: 374415 DWZ 910150, ಇಂಜನ್ ನಂ: DWZ 872793) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಬೀಟೆ ಟಾ 08=1.032 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಪಡಿಸಿ ದಿ:23-07-2011 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ (ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ

ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.

ಆರ್. 912

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಕ್ರ:ಬಿ3:ಅಮೊ:ವಾಹನ:ವಿವ:32/06-07 ದಿನಾಂಕ:25-06-2011

ಉಪಸ್ಥಿತರು	:	ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.
ಫಿರ್ಯಾಧಿದಾರರು	:	ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ. (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ)
ಭಾದ್ಯತೆದಾರರು	:	ಶ್ರೀ ಕೆ. ಅಬ್ದುಲ್ ವಾಹಿದ್, ಬಿನ್ ಕೆ. ಮಹ್ಮದ್ ಸಾಹಿಬ್,50 ವರ್ಷ, 4ನೇ ಕ್ರಾಸ್, ಜನ್ನತ್ ನಗರ ವಾಸಿ, ಸಾಗರ ಟೌನ್. (ಶ್ರೀ ಎಸ್.ಎನ್. ಮಂಜುನಾಥ, ವಕೀಲರು)

ಪ್ರಸ್ತಾವನೆ:-

ದಿ:23-03-2007 ರಂದು ಆನಂದಪುರಂ ವಲಯ, ಚೋರಡಿಯ ತುಪ್ಪೂರು ಶಾಖೆಯ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ಮರಗಳಿಂದ ನಾಟಾ ತಯಾರಿಸಿ ವಾಹನದಲ್ಲಿ ಅಕ್ರಮವಾಗಿ ಸಾಗಿಸಿದ ಬಗ್ಗೆ ತುಪ್ಪೂರು ಶಾಖೆಯ ವನಪಾಲಕರು ಈ ಕೆಳಗಿನಂತೆ ಮಹಜರ್ ತಯಾರಿಸಿರುತ್ತಾರೆ.

ದಿ:23-03-2007ರಂದು ಆನಂದಪುರಂ ವಲಯ, ಚೋರಡಿಯ ತುಪ್ಪೂರು ಶಾಖೆಯ ವನಪಾಲಕ ಹಾಗೂ ಇವರ ಸಿಬ್ಬಂದಿಯವರು ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿ ಕೋಣೆಹೊಸೂರು ಗ್ರಾಮದ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನಲ್ಲಿ ಕಾಯುತ್ತಿರುವಾಗ ಬೆಳಗಿನ ಜಾವ 6-00ಗಂಟೆ ಸಮಯದಲ್ಲಿ ಒಂದು ವಾಹನ ನೆಡುತೋಪಿನಿಂದ ಎನ್.ಹೆಚ್. 206ರ ರಸ್ತೆಕಡೆ ಬಂದಿತು. ಸದರಿ ವಾಹನವನ್ನು ಇಲಾಖೆಯವರು ತಡೆದು ನಿಲ್ಲಿಸಲಾಗಿ, ವಾಹನದಲ್ಲಿದ್ದ 3 ಜನ ಆಸಾಮಿಗಳು ಓಡಲಾರಂಬಿಸಿದಾಗ ಒಬ್ಬನನ್ನು ಬೆನ್ನಟ್ಟಿ ಹಿಡಿಯಲಾಯಿತು. ಆತನ ಹೆಸರು (1) ಖಾಸಿಂ ಬಿನ್ ಭಾಷಾ, ಎಸ್.ಎನ್. ನಗರ, ಸಾಗರ ಟೌನ್ ಎಂದು ಮತ್ತು ಓಡಿಹೋದವರ ಹೆಸರು (1) ಮಂಜ ಅಲಿಯಾಸ್ ಗದ್ದೆ ಮಂಜ, ಅಂದಾಜು 28 ವರ್ಷ, ಎಸ್.ಎನ್. ನಗರ, ಸಾಗರ ಟೌನ್ ವಾಸಿ (2) ಮುಸ್ತಾಫ್, ಅಂದಾಜು 38 ವರ್ಷ, ಕಾರ್ಗಲ್ ವಾಸಿ, ಸಾಗರ ತಾಲ್ಲೂಕು ಎಂದು ಹಿಡಿದ ಆಸಾಮಿಯು ಹೇಳಿರುತ್ತಾನೆ. ನಂತರ ಆಸಾಮಿಯನ್ನು ವಾಹನದ ಬಳಿ ಕರೆತಂದು ವಾಹನವನ್ನು ಪರಿಶೀಲಿಸಿ ನೋಡಲಾಗಿ, ವಾಹನದೊಳಗೆ ಸಾಗುವಾನಿ ನಾಟಾಗಳಿದ್ದು, ಈ ನಾಟಾಗಳ ಮೇಲೆ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ. ಮತ್ತು ಸಾಗಿಸಲು ರಹದಾರಿ ಇರಲಿಲ್ಲ. ಆದ್ದರಿಂದ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ ವಾಹನ ಟಾಟಾ 207 ಡಿ.ಐ. ಕೆಎ-15-3147ನ್ನು, ಅದರಲ್ಲಿದ್ದ ಸಾಗುವಾನಿ ನಾಟಾ 9=1.607ಎಂ3ನ್ನು ಹಾಗೂ ಆಸಾಮಿಯನ್ನು ಇಲಾಖಾ ಪರ ವಶಪಡಿಸಿಕೊಂಡು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿ ಪ್ರಕಾರ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24 62, 71(ಎ), 80 ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಅರಣ್ಯ ಮೊಕದ್ದಮೆ ಸಂಖ್ಯೆ:151/06-07ನ್ನು ದಾಖಲಿಸಿಲಾಯಿತು. ನಂತರ ಆಸಾಮಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿ, ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಸದರಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಈ ನ್ಯಾಯಾಲಯದಿಂದ ಆದೇಶವಾಗಿದೆ.

ಈ ಪ್ರಕರಣದಲ್ಲಿ ವಿಚಾರಣಾ ವರದಿಯನ್ನು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಸಲ್ಲಿಸಿ ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ಕೋರಿರುತ್ತಾರೆ.

ನಂತರ ಈ ವಾಹನದ ಆರ್.ಸಿ. ಮಾಲಿಕರ ಬಗ್ಗೆ ತಿಳಿಯಲು ನ್ಯಾಯಾಲಯದಿಂದ ಸಂಖ್ಯೆ: ಬಿ3:ಅಮೊ:ವಾಹನ-32/06-07 ದಿ:09-04-2007ರಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಸಾಗರ ಇವರಿಗೆ ಪತ್ರ ಬರೆದು ಈ ವಾಹನದ 'ಬಿ'ಎಕ್ಸ್‌ಟ್ರ್ಯಾಕ್ಟ್‌ನ್ನು ಒದಗಿಸಲು ಕೋರಿದೆ. ಈ ವಾಹನದ 'ಬಿ'ಎಕ್ಸ್‌ಟ್ರ್ಯಾಕ್ಟ್‌ನ್ನು ಸಾರಿಗೆ ಅಧಿಕಾರಿ, ಸಾಗರ ಇವರು ಪತ್ರ ಸಂಖ್ಯೆ:ಸಪ್ರಾಸಾಅ/ಸಾಗರ /ಜಿವಪಿ/07-08 ದಿ:09-05-2007ರ ಮುಖಾಂತರ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ. ಮಾಲಿಕರಾದ ಶ್ರೀ ಅಬ್ದುಲ್ ವಾಹಿದ್ ಬಿನ್ ಕೆ. ಮಹಮ್ಮದ್ ಸಾಹೇಬ್, ಜನ್ನತ್ ನಗರ, 4ನೇ ಕ್ರಾಸ್, ಸಾಗರ ಇವರಿಗೆ ದಿ:24-03-2008 ರಂದು ಕಾರಣ ಕೇಳಿ ಪತ್ರವನ್ನು 30 ದಿನಗಳ ಕಾಲವಕಾಶ ನೀಡಿ ನೋಟೀಸ್‌ನ್ನು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ.

ವಾಹನದ ಮಾಲೀಕರು ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಕೋರಿ ಈ ನ್ಯಾಯಾಲಯಕ್ಕೆ ದಿ:08-05-2007 ರಂದು ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ದಿ:23-01-2010 ರಂದು ತಿರಸ್ಕರಿಸಿ ಆದೇಶ ಹೊರಡಿಸಿದೆ.

ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎ.ಜಿ.ಯೋಗೇಂದ್ರಪ್ಪ ವನಪಾಲಕ, ಆನಂದಪುರಂ ವಲಯ, ತುಪ್ಪೂರು ಶಾಖೆ, ಇವರನ್ನು ದಿ:17-07-2010 ರಂದು ನ್ಯಾಯಾಲಯಕ್ಕೆ ಕರೆಯಿಸಿ ಸತ್ಯಪ್ರತಿಜ್ಞೆ ಭೋದಿಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ "ಕಳೆದ ನಾಲ್ಕು ವರ್ಷಗಳಿಂದ ಚೋರಡಿ ವಲಯದ ತುಪ್ಪೂರು ಶಾಖೆಯಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:22-03-2007 ರಂದು ರಾತ್ರಿ ಬಂದ ಮಾಹಿತಿಯ ಮೇರೆಗೆ ನಾನು ಇತರೆ ಸಿಬ್ಬಂದಿಗಳಾದ ಅರಣ್ಯ ರಕ್ಷಕ ಎಂ. ಹಾಲಪ್ಪ ಮತ್ತು ವಾಹನ ಚಾಲಕ ಚಂದ್ರಶೇಖರ್ ಮತ್ತು ಲೋಕೇಶ ಇವರೊಂದಿಗೆ ಇಲಾಖಾ ವಾಹನದಲ್ಲಿ ಬಿ.ಹೆಚ್. ರಸ್ತೆಯ ಗಿಳಾಲಗುಂಡಿಯ ಹತ್ತಿರ ವಾಹನ ನಿಲ್ಲಿಸಿ ನೆಡುತೋಪಿನಲ್ಲಿ ಕಾಯುತ್ತಿದ್ದಾಗ ದಿ:23-03-2007 ರಂದು ಬೆಳಿಗ್ಗೆ 6-00 ಗಂಟೆಗೆ ಕಾಡಿನ ಕಡೆ ರಸ್ತೆಯಿಂದ ಮುಖ್ಯ ರಸ್ತೆಗೆ ಒಂದು ವಾಹನ ಬರುತ್ತಿರುವುದನ್ನು ನೋಡಿ ಅದನ್ನು ಅಡ್ಡಹಾಕಿ ನಿಲ್ಲಿಸಲು ಪ್ರಯತ್ನಿಸಿದೆವು. ವಾಹನವನ್ನು ನಿಲ್ಲಿಸಿ ಅದರಲ್ಲಿದ್ದ 3 ಜನ ಓಡಿಹೋಗಿದ್ದು, ನಾವು ಬೆನ್ನಟ್ಟಿ ಅವರಲ್ಲಿ ಒಬ್ಬನನ್ನು ಹಿಡಿದೆವು. ನಾವು ತಡೆದ ವಾಹನ ಹಸಿರು ಬಣ್ಣದ ಟಾಟಾ 207 ಡಿ.ಐ. ಆಗಿದ್ದು, ಅದರಲ್ಲಿ ಅಗತಾನೆ ಕತ್ತರಿಸಿದ ಹಸಿಯಾದ ಸಾಗುವಾನಿ ತುಂಡುಗಳಿದ್ದವು. ನಂತರ ಹಿಡಿದ ವ್ಯಕ್ತಿಯನ್ನು ವಿಚಾರಿಸಲಾಗಿ ಅವನ ಹೆಸರು ಖಾಸಿಂ ಎಂದು ಹೇಳಿ ವಿಳಾಸ ಹೇಳಿದ ಓಡಿಹೋದ ವ್ಯಕ್ತಿಗಳನ್ನು ಮಂಜು ಮತ್ತು ಮುಸ್ತಾಫ್ ಎಂದು ಹೇಳಿದ. ಆತನ ಬಳಿ ಸದರಿ ತುಂಡುಗಳನ್ನು ಸಾಗಿಸಲು ರಹದಾರಿಯಾಗಲೀ, ಇಲಾಖಾ ಯಾವುದೇ ಛಾಪಾದ ಗುರುತು ಇರಲಿಲ್ಲ. ಆದ್ದರಿಂದ ಇದನ್ನು ಅಕ್ರಮ ಸಾಗಾಣಿಕೆ ಎಂದು ತೀರ್ಮಾನಿಸಿ, ತುಂಡುಗಳಿಗೆ ಕ್ರಮ ಸಂಖ್ಯೆ ಕೊಟ್ಟು, ಅಳತೆ ಮಾಡಿ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡು ಮಹಜರ್ ಬರೆದೆವು. ವಾಹನ ಸಂಖ್ಯೆ ಕೆಎ-15-3147 ಆಗಿರುತ್ತದೆ. ಸಾಗುವಾನಿ ತುಂಡುಗಳು ಒಟ್ಟು 09=1.607 ಎಂ3 ಇತ್ತು. ಆರೋಪಿ ಹಾಗೂ ತುಂಡುಗಳೊಂದಿಗೆ ಕಛೇರಿಗೆ ಬಂದೆವು. ಸ್ಥಳದಲ್ಲಿ ಮಾಡಿದ ಮಹಜರ್‌ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿನ ನನ್ನ ಸಹಿಯನ್ನು 1ಎ ಎಂದು ಗುರ್ತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿದ್ದು, ಅದನ್ನು ನಿಶಾನೆ ಪಿ2 ಎಂದು, ನನ್ನ ಸಹಿಯನ್ನು 2ಎ ಎಂದು, ಜಪ್ತು ವರದಿಯನ್ನು ನಿಶಾನೆ ಪಿ3 ಎಂದು, ನನ್ನ ಸಹಿಯನ್ನು 3ಎ ಎಂದು ಗುರ್ತಿಸಿದೆ. ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರ್ಪಡಿಸಿದೆವು. ವಾಹನ ಮತ್ತು ಸಾಗುವಾನಿ ತುಂಡುಗಳನ್ನು ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರಕ್ಕೆ ಸಾಗಿಸಿದೆವು. ಮುಂದಿನ ತನಿಖೆಯನ್ನು ವಲಯ ಅರಣ್ಯಾಧಿಕಾರಿಗಳಿಗೆ ಒಪ್ಪಿಸಿರುತ್ತೇನೆ. ವಾಹನವನ್ನು ಅರಣ್ಯ ಉತ್ಪನ್ನಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ.

ಪಾಟಿ ಸವಾಲಿಗೆ ಡಿಫೆನ್ಸ್ ಕಡೆಯ ವಕೀಲರಿಗೆ ತಿಳಿವಳಿಕೆ ಪತ್ರದ ಮೂಲಕ ತಿಳಿಸಿದ್ದು ಹಾಗೂ ಆ ಪತ್ರಕ್ಕೆ ಡಿಫೆನ್ಸ್ ಕಡೆಯ ವಕೀಲರು ಸಹಿ ಮಾಡಿದ್ದರೂ ಸಹಾ 17-07-2010ರಂದು ಡಿಫೆನ್ಸ್ ಕಡೆಯ ವಕೀಲರು ಗೈರು ಹಾಜರಾಗಿರುತ್ತಾರೆ. ಪಾಟಿಸವಾಲು ಇಲ್ಲವೆಂದು ತೀರ್ಮಾನಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:19-02-2011, 26-02-2011, 05-03-2011, ' 02-04-2011,ರಂದು ಮತ್ತು ವಾದ ಮಂಡಿಸಲು ದಿ:28-05-2011 ರಂದು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗೆ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:28-05-2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ 207 ಕೆಎ-15-3147 ರಲ್ಲಿ 09 ಸಾಗುವಾನಿ ನಾಟಾ 1.607ಎಂ3ನ್ನು ದಿ:23-03-2007ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ 207 ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಸಾಗುವಾನಿ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

ಅಂಶ–1: ದಿ:23–03–2007 ರಂದು ವಲಯ ಅರಣ್ಯಾಧಿಕಾರಿ, ಆನಂದಪುರಂ ವಲಯ, ಚೋರಡಿ ಮತ್ತು ಸಿಬ್ಬಂದಿಯವರು ಶಿವಮೊಗ್ಗ ತಾ॥ ಕುಂಸಿ ಹೋಬಳಿ ಕೋಣೆಹೊಸೂರು ಗ್ರಾಮದ ಗಿಳಾಲಗುಂಡಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನಿಂದ ಎಸ್.ಹೆಚ್–206ರ ಕಡೆ ಟಾಟಾ 207 ಕೆಎ–15 3147ರಲ್ಲಿ ಸಾಗುವಾನಿ ನಾಟಾ 09=1.670 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಪತ್ತೆಹಚ್ಚಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖಾಪರ ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಸಾಗುವಾನಿ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಕೆ.ಅಬ್ದುಲ್ ವಾಹಿದ್ ಬಿನ್ ಕೆ.ಮಹ್ಮದ್‌ವಾಹಿದ್, 50 ವರ್ಷ, 4ನೇ ಕ್ರಾಸ್, ಜೆನ್ನತ್‌ನಗರ ವಾಸಿ, ಸಾಗರ ಟೌನ್, ಇವರು ದಿ:08–05–2007 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಜ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಬಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:24–03–2008 ರಂದು ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ನಾಲ್ಕು ಬಾರಿ ದಿನಾಂಕಗಳನ್ನು ನೀಡಲಾಗಿದ್ದು, ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿ:23–03–2007 ರಂದು ಟಾಟಾ 207 ನಂ:ಕೆಎ–15–3147ರಲ್ಲಿ 9 ಸಾಗುವಾನಿ ನಾಟಾ 01.607 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನಂದಪುರಂ, ವಲಯ, ಚೋರಡಿಯ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನಂದಪುರಂ, ವಲಯ ಚೋರಡಿ ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:08–05–2007ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ದರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವಾನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of-Ramesh N. Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that "the owners required to show under sub-section (2) of section 71-B is that he, his agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ....It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse".

ಅಲ್ಲದೇ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ಸಾಕ್ಷಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದಿಲ್ಲ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಆದೇಶ</u>

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಂದ (ಎ) ಕಾಯಿದೆ ಪ್ರಕಾರ ಅರಣ್ಯ ಮೊಕದ್ದಮೆಯಲ್ಲಿ ಜಪ್ತು ಮಾಡಿದ ಟಾಟಾ-207 ಕೆಎ-15-3147 (ಇಂಜಿನ್ ನಂ:497SP27GVZ911398, ಛಾಸ್ಸಿಸ್ ನಂಬರ್:374435GVZ926399) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಸಾಗುವಾನಿ ನಾಟಾ 09=1.607 ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:25-06-2011 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್. 911 **ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ:ವಿವ:38/08-09 ದಿನಾಂಕ:16-07-2011

ಉಪಸ್ಥಿತರು : ಶ್ರೀ ಮನೋಜ್‌ಕುಮಾರ್ ತ್ರಿಪಾಠಿ, ಭಾ.ಅ.ಸೇ
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಆನವಟ್ಟಿ ವಲಯ, ಆನವಟ್ಟಿ.(ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಭಾದ್ಯತೆದಾರರು : ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ. (ಶ್ರೀ ಎಂ.ಹೆಚ್. ಬೆಂಡಿಗೇರಿ, ವಕೀಲರು, ಶಿಗ್ಗಾಂ)

<u>ಪ್ರಸ್ತಾವನೆ:-</u>

ದಿ:27-12-2008 ರಂದು ಆನವಟ್ಟಿ ವಲಯದ ಆನವಟ್ಟಿ ಶಾಖೆಯ ವನಪಾಲಕರು ಹಸವಿ ಗ್ರಾಮದ ಸಮೀಪ ಗಸ್ತು ತಿರುಗುತ್ತಿರುವಾಗ ಒಂದು ವಾಹನದಲ್ಲಿ ಅರಣ್ಯ ಉತ್ಪನ್ನ ಅಕ್ರಮ ಸಾಗಾಣಿಕೆ ಮಾಡಿದ ಬಗ್ಗೆ ಬರೆದ ಮಹಜರ್‌ನ ವಿವರ ಈ ಕೆಳಗಿನಂತಿದೆ.

ದಿ:27-12-2008ರಂದು ಆನವಟ್ಟಿ ವಲಯದ ಆನವಟ್ಟಿ ಶಾಖೆಯ ವನಪಾಲಕ ಮತ್ತು ಸಿಬ್ಬಂದಿಯವರು ಸೊರಬ ತಾ॥ ಕುಪ್ಪಗಡ್ಡೆ ಹೋಬಳಿ, ಹಸವಿ ಗ್ರಾಮದ ಬೆಟ್ಟದ ಕುರ್ಲಿ ಮೀಸಲು ಅರಣ್ಯದ ಸಾಗುವಾನಿ ನೆಡುತೋಪಿನ ಡಿ ಲೈನ್ ಕಲ್ಲು ಸಂಖ್ಯೆ: 18 ಮತ್ತು 19 ರಲ್ಲಿ ಗಸ್ತು ಕಾರ್ಯ ಮಾಡುತ್ತಿರುವಾಗ ದಿ:28-12-2008ರ ಬೆಳಗಿನ ಜಾವ ಸುಮಾರು 4-00 ಗಂಟೆಯ ಸಮಯದಲ್ಲಿ 1 ವಾಹನಕ್ಕೆ ತುಂಡುಗಳನ್ನು ಹಾಕುತ್ತಿರುವ ಶಬ್ದ ಕೇಳಿ ಬ್ಯಾಟರಿ ಬೆಳಕಿನ ಸಹಾಯದಿಂದ ಹತ್ತಿರ ಹೋಗುತ್ತಿರುವಾಗ ಇಲಾಖೆಯವರನ್ನು ನೋಡಿ ಅಲ್ಲಿದ್ದ 8, 10 ಜನ ಅಸಾಮಿಗಳು ಕತ್ತಲೆಯಲ್ಲಿ ಪರಾರಿಯಾದರು. ತಕ್ಷಣ ಇಲಾಖಾ ಡಿ.ಬಿ.ಬಿ.ಎಲ್. ಬಂದೂಕಿನಿಂದ ಒಂದು ಸುತ್ತು ಗುಂಡು ಗಾಳಿಯಲ್ಲಿ ಹಾರಿಸಿ, ನಂತರ ವಾಹನ ಪರಿಶೀಲಿಸಲಾಗಿ ಟಾಟಾ 709 ಕೆಎ-25-ಎ-5148, ಛಾಸ್ಸಿಸ್ ನಂ:386125-K-22822893, ಇಂಜಿನ್ ನಂ:497-TC-84-K-22772333 ಇದ್ದು, ವಾಹನದೊಳಗಡೆ 15 ಸಾಗುವಾನಿ ತುಂಡಿದ್ದು, ವಾಹನದ ಕೆಳಗೆ 5 ಸಾಗುವಾನಿ ತುಂಡಿದ್ದು, ಒಟ್ಟು 20=1.403 ಎಂ3 ಪ್ರಮಾಣವಿದ್ದು, ಈ ತುಂಡುಗಳು ಹಸಿಯಾಗಿದ್ದು, ಗರಗಸದಿಂದ ಕೊಯ್ದು ತುಂಡುಗಳಾಗಿದ್ದು, ಈ ತುಂಡುಗಳಿಗೆ ಛಾಪಾದ ಗುರುತಿರಲಿಲ್ಲ. ಹಾಗೂ ಸಾಗಿಸಲು ರಹದಾರಿ ಇಲ್ಲದ ಕಾರಣ, ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ವಾಹನ ಮತ್ತು ಸಾಗುವಾನಿ ನಾಟಾವನ್ನು ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯೊಂದಿಗೆ ಇಲಾಖಾ ಪರ ಜಮ್ತುಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 62, 71(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969ರ ಉಪನಿಯಮ 144, 165ರ ಪ್ರಕಾರ ಆನವಟ್ಟಿ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ: 98/08-09ನ್ನು ದಾಖಲಿಸಿ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿದೆ.

ಈ ಪ್ರಕರಣದಲ್ಲಿ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ವಲಯ ಅರಣ್ಯಾಧಿಕಾರಿ, ಆನವಟ್ಟಿ ಇವರ ಪತ್ರ ಸಂಖ್ಯೆ:368/09-10ದಿ: 08-07-2009ರಂದು ವಿಚಾರಣಾ ವರದಿ ಸಲ್ಲಿಸಿ ಕೋರಿರುತ್ತಾರೆ.

ಈ ವಾಹನದ 'ಬಿ' ಪ್ರತಿಯನ್ನು ಒದಗಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಧಾರವಾಡ ಇವರಿಗೆ ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ:ವಾಹನ-38/08-09 ದಿ:29-12-2008ರಂದು ಪತ್ರ ಬರೆದು ಕೋರಲಾಗಿತ್ತು. 'ಬಿ' ಪ್ರತಿಯಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಾದ ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲೆ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1)ರ ಪ್ರಕಾರ ಕಾರಣ ಕೇಳಿ ನೋಟಿಸ್‌ನ್ನು 30 ದಿನಗಳ ಕಾಲಾವಕಾಶ ನೀಡಿ ದಿ:02-06-2009ರಂದು ನೊಂದಣಿ ಅಂಚೆ ಮೂಲಕ ಜಾರಿಮಾಡಿದೆ.

ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲೆ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎದಾರರಾದ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ ಇವರು ವಕೀಲರ ಮುಖಾಂತರ ದಿ:18-04-2009ರಂದು ಮನವಿ ತಯಾರಿಸಿ, ವಾಹನ ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಈ ನ್ಯಾಯಾಲಯವನ್ನು ಕೋರಿರುತ್ತಾರೆ. ಇವರ ಅರ್ಜಿಯನ್ನು ದಿ:02-01-2010ರಂದು ಈ ನ್ಯಾಯಾಲಯದಿಂದ ತಿರಸ್ಕರಿಸಿ ಆದೇಶವಾಗಿದೆ.

ಪ್ರಾಸಿಕ್ಯೂಶನ್ ಸಾಕ್ಷಿ ಶ್ರೀ ರವೀಂದ್ರ ವನಪಾಲಕ, ಆನವಟ್ಟಿ ವಲಯ, ಇವರನ್ನು ಹೇಳಿಕೆ ಪಡೆಯಲು ದಿ:19-02-2011 ರಂದು ನ್ಯಾಯಾಲಯಕ್ಕೆ ಕರೆಸಿ ಸತ್ಯಪ್ರತಿಜ್ಞೆ ಬೋಧಿಸಿ, ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ಕಳೆದ 5 ವರ್ಷಗಳಿಂದ ಆನವಟ್ಟಿ ನಗರ ಶಾಖೆಯಲ್ಲಿ ವನಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:27-12-2008ರ ರಾತ್ರಿ ಸಿಬ್ಬಂದಿ ಜೊತೆಯಲ್ಲಿ ಬೆಟ್ಟದಕುರ್ಲಿ ಸಾಗುವಾನಿ ನೆಡುತೋಪಿನಲ್ಲಿ ಗಸ್ತು ಮಾಡುತ್ತಿದ್ದಾಗ ದಿ:28-12-2008ರ ಬೆಳಗಿನ ಜಾವ ಸುಮಾರು 4-00 ಗಂಟೆ ಸಮಯದಲ್ಲಿ ವಾಹನಕ್ಕೆ ತುಂಡುಗಳನ್ನು ತುಂಬುತ್ತಿರುವ ಸಬ್ಬ ಕೇಳಿ ಬ್ಯಾಟರಿ ಬೆಳಕು ಬಿಟ್ಟು ನೋಡಲಾಗಿ, ಮಿನಿಲಾರಿಗೆ 8-10 ಜನ ಸಾಗುವಾನಿ ತುಂಡುಗಳನ್ನು ತುಂಬುತ್ತಿದ್ದುದು ಕಂಡುಬಂತು. ಕೂಡಲೇ ಇಲಾಖಾ ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ಆಗ ಎಲ್ಲಾ ಜನರು ಕೈಗೆ ಸಿಗದೇ ಓಡಿ ಹೋಗಿರುತ್ತಾರೆ. ಸ್ಥಳ ಪರಿಶೀಲಿಸಲಾಗಿ ಅದು ಮಿನಿಲಾರಿ ಕೆಎ-25-ಎ-5148 ಆಗಿದ್ದು, ಅದಕ್ಕೆ 15 ಸಾಗುವಾನಿ ತುಂಡುಗಳನ್ನು ತುಂಬಿದ್ದು, ಇನ್ನೂ ಕೆಳಗೆ 5 ತುಂಡುಗಳು ಬಿದ್ದವು. ಸದರಿ ತುಂಡುಗಳು ಗರಗಸದಿಂದ ಕೊಯ್ದ ಹಸಿ ತುಂಡುಗಳಾಗಿದ್ದವು. ಹಾಗೂ ಅವುಗಳ ಮೇಲೆ ಯಾವುದೇ ಇಲಾಖಾ ಛಾಪಾ ಇರಲಿಲ್ಲ. ಸ್ಥಳದಿಂದ 5 ಕಿ.ಮೀ. ಅಂತದಲ್ಲಿ 2 ಸಾಗುವಾನಿ ತುಂಡುಗಳನ್ನು ಕತ್ತರಿಸಿ ತುಂಡುಗಳನ್ನಾಗಿ ಪರಿವರ್ತಿಸಲಾಗಿತ್ತು. ತುಂಡುಗಳನ್ನು ಅಳತೆ ಮಾಡಿ. ಸಂಖ್ಯೆಗಳನ್ನು ಕೊಟ್ಟು, ಇಲಾಖಾ ಛಾಪಾ ಮುದ್ರಿಸಿ, ಇಲಾಖಾ ಪರ ಅಮಾನತ್ತುಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ಬರೆಯಲಾಯಿತು. ನಂತರ ಲಾರಿ ಮತ್ತು ತುಂಡುಗಳನ್ನು ಕಛೇರಿಗೆ ಸಾಗಿಸಿ ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿರುತ್ತೇನೆ. ಜಪ್ತು ಪಟ್ಟಿ ತಯಾರಿಸಲಾಯಿತು. ಮುಂದಿನ ತನಿಖೆಯನ್ನು ವಲಯ ಅರಣ್ಯಾಧಿಕಾರಿಗಳಿಗೆ ವಹಿಸಿದೆನು. ಸ್ಥಳದಲ್ಲಿ ಮಾಡಿದ ಮಹಜರ್‌ನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿನ ನನ್ನ ಸಹಿಯನ್ನು 1ಎ ಎಂದು ಗುರುತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿದ್ದು, ಅದನ್ನು ನಿಶಾನೆ ಪಿ2 ಎಂದು, ನನ್ನ ಸಹಿಯನ್ನು 2ಎ ಎಂದು. ಜಪ್ತು ವರದಿಯನ್ನು ನಿಶಾನೆ ಪಿ3 ಎಂದು, ನನ್ನ ಸಹಿಯನ್ನು 3ಎ ಎಂದು ಗುರುತಿಸಿದೆ. ವಾಹನದಲ್ಲಿದ್ದ ಸಾಗುವಾನಿ ತುಂಡುಗಳನ್ನು ಸರ್ಕಾರಿ ನಾಟಾ ಸಂಗ್ರಹಾಲಯ ಮತ್ತು ವಾಹನವನ್ನು ಅಧಿಕೃತ ಅಧಿಕಾರಿ ಹಾಗು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮತಿಯ ಮೇರೆಗೆ ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರಕ್ಕೆ ಸಾಗಿಸಿದೆವು. ಸದರಿ ವಾಹನವನ್ನು ಅರಣ್ಯ ಉತ್ಪನ್ನಗಳ ಅಕ್ರಮ ಸಾಗಾಣಿಕೆಗೆ ಉಪಯೋಗಿಸಿರುವುದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರುತ್ತೇನೆ".

ಪಾಟಿಸವಾಲು ಮಾಡಲು ದಿ:19-02-2011ರಂದು ಡಿಫೆನ್ಸ್ ಕಡೆಯ ವಕೀಲರು ಗೈರು ಹಾಜರಾಗಿದ್ದರಿಂದ ಪಾಟಿಸವಾಲು ಇಲ್ಲವೆಂದು ಪರಿಗಣಿಸಿ, ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಲಾಯಿತು.

ಡಿಫೆನ್ಸ್ ಸಾಕ್ಷಿ ಹೇಳಿಕೆ ಪಡೆಯಲು ದಿ:05-03-2011, 02-04-2011, 28-05-2011 ರಂದು ಮತ್ತು ವಾದ ಮಂಡಿಸಲು ದಿ:02-07-2011 ರಂದು ದಿನಾಂಕ ನೀಡಿ ತಿಳಿಸಿದರೂ ಸಹ ಡಿಫೆನ್ಸ್ ಕಡೆಯವರು ಯಾರು ವಿಚಾರಣೆಗ ಹಾಜರಾಗಿರುವುದಿಲ್ಲ. ಡಿಫೆನ್ಸ್ ಕಡೆಯವರಿಗೆ ಈ ಪ್ರಕರಣದಲ್ಲಿ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮುಂದಿನ ಕ್ರಮಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:02-07-2011ರಂದು ವಾದ ಮಂಡಿಸಿ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ಸಮಯದಲ್ಲಿ ವಾಹನವನ್ನು ಅರಣ್ಯ ಉತ್ಪನ್ನ ಸಮೇತ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ. ಇವರು ಜಪ್ತುಮಾಡಿ, ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುತ್ತಾರೆ. ಆದ್ದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತಾವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಟಾಟಾ-709 ನಂ:ಕೆಎ-25-ಎ-5148 ರಲ್ಲಿ 20 ಸಾಗುವಾನಿ ನಾಟಾ 01.403ಎಂ3ನ್ನು ದಿ:28-12-2008 ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ? ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಟಾಟಾ-709ರಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಸಾಗುವಾನಿ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?

4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ

2. ಎರಡನೇ ಅಂಶಕ್ಕೆ ಹೌದು ಎಂತಲೂ

3. ಮೂರನೇ ಅಂಶದ ಮೊದಲ ಭಾಗದ ಪ್ರಶ್ನೆಗೆ ಹೌದು ಎಂತಲು ಎರಡನೇ ಭಾಗದ ಪ್ರಶ್ನೆಗೆ ಇಲ್ಲವೆಂಬುದಾಗಿರುತ್ತದೆ.

<u>ಅಂಶ-1:</u>

ದಿ:27-12-2008 ರಂದು ಆನವಟ್ಟಿ ವಲಯದ ವನಪಾಲಕರು ಮತ್ತು ಸಿಬ್ಬಂದಿಯವರು ಸೊರಬ ತಾ॥ ಕುಪ್ಪಗಡ್ಡೆ ಹೋಬಳಿ ಬೆಟ್ಟದಕುರ್ಲಿ ರಕ್ಷಿತ ಅರಣ್ಯದ ಸಾಗುವಾನಿ ನೆಡುತೋಪಿನಲ್ಲಿ ರಾತ್ರಿ 11-30ಕ್ಕೆ ಗಸ್ತು ಕಾಯುತ್ತಿರುವಾಗ, ದಿ:28-12-2008ರ ಬೆಳಗಿನ ಜಾವ ಸುಮಾರು 4-00 ಗಂಟೆಗೆ ಒಂದು ಟಾಟಾ-709ಗೆ 8-10 ಜನ ಸಾಗುವಾನಿ ನಾಟಾ 20=1.403 ಎಂ3ನ್ನು ತುಂಬಿ ಅಕ್ರಮವಾಗಿ ಸಾಗಿಸಲು ಪ್ರಯತ್ನಿಸುತ್ತಿದ್ದಾಗ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಇಲಾಖೆಯವರು ಜಪ್ತು ಮಾಡಿ ಪ್ರಥಮ ವರ್ತಮಾನ ವರದಿ, ಜಪ್ತು ವರದಿ, ಮಹಜರ್ ವರದಿ ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಸಾಗುವಾನಿ ನಾಟಾವನ್ನು ಹಾಜರ್ಪಡಿಸಿರುತ್ತಾರೆ. ಇದರಿಂದ ಈ ವಾಹನದಲ್ಲಿ ಸಾಗುವಾನಿ ನಾಟಾವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆಂದು ನನ್ನ ಉತ್ತರವಾಗಿದೆ.

<u>ಅಂಶ-2:</u>

ಆರ್.ಸಿ. ಮಾಲೀಕರಾದ ಶ್ರೀ ಮೂಕಪ್ಪ ಬಿನ್ ರಾಮಪ್ಪ ಗುಂಡ್ಲ, ಕುಂಬಾರಗಲ್ಲಿ ವಾಸಿ, ನವಲಗುಂದ, ಧಾರವಾಡ ಜಿಲ್ಲೆ ಇವರ ಜಿಪಿಎ ಶ್ರೀ ಬಶೀರ್ ಅಹಮದ್ ಬಿನ್ ಗೌಸ್ ಮೊಹಿದ್ದೀನ್, ಸವಣೂರು, ತಿಳುವಳ್ಳಿ ವಾಸಿ, ಹಾನಗಲ್ ತಾ॥, ಧಾರವಾಡ ಜಿಲ್ಲೆ, ಇವರು ದಿ:18-04-2009 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. 'ಬಿ' ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71ಜಿ (1)ರ ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:07-06-2009ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದ ಲಕೋಟೆಯ ಮೇಲೆ ಅಂಚೆ ಇಲಾಖೆಯವರು " No Such Number in " ಎಂದು ನಮೂದಿಸಿ ಈ ನ್ಯಾಯಾಲಯಕ್ಕೆ ಹಿಂದಿರುಗಿಸಿರುತ್ತಾರೆ. ನಂತರ ಡಿಫೆನ್ಸ್ ಕಡೆ ಸಾಕ್ಷಿ ಹೇಳಿಕೆ ಪಡೆಯಲು ಮೂರು ಬಾರಿ ದಿನಾಂಕಗಳನ್ನು ನೀಡಲಾಗಿದ್ದು, ಮತ್ತು ಡಿಫೆನ್ಸ್ ವಾದ ಮಂಡಿಸಲು ಒಂದು ಬಾರಿ ದಿನಾಂಕವನ್ನು ನೀಡಲಾಗಿತ್ತು. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

<u>ಅಂಶ-3:</u>

ದಿ:28-12-2008 ರಂದು ಟಾಟಾ-709 ನಂ: ಕೆಎ-25-ಎ-5148ರಲ್ಲಿ 20 ಸಾಗುವಾನಿ ನಾಟಾ 1.403 ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ, ಆನವಟ್ಟಿ ವಲಯದ ವನಪಾಲಕರು ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ, ಇವರು ವಿಚಾರಣಾ ವರದಿ ಸಲ್ಲಿಸಿ, ಜಪ್ತಾದ ವಾಹನ ಮತ್ತು ವಾಹನದಲ್ಲಿದ್ದ ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿ:18-04-09ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಅರ್ಜಿದಾರರು ಮುಗ್ಧರೆನ್ನುವುದಕ್ಕಾಗಲೀ, ವಾಹನ ಮಾಲೀಕರ ಗಮನಕ್ಕೆ ಬಾರದೇ ಈ ಕೃತ್ಯ ನಡೆದಿದೆನ್ನುವುದಕ್ಕಾಗಲೀ, ಅಲ್ಲದೇ ಈ ಪ್ರಕರಣದಲ್ಲಿ ಅರ್ಜಿದಾರರು ಭಾಗಿಯಾಗಿಲ್ಲವೆನ್ನುವುದಕ್ಕಾಗಲೀ, ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ಅಲ್ಲದೇ, ವಾಹನ ಮಾಲೀಕರಾಗಲೀ, ಅವರ ಪರ ಚಾಲಕರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ವಾಹನದಲ್ಲಿ ಕಳ್ಳ ಸಾಗಾಣಿಕೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕಾಗಿರುತ್ತದೆ. ಈ ಬಗ್ಗೆ ಗೌರವಾನ್ವಿತ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕವು ಈ ಕೆಳಗಿನಂತೆ ಆದೇಶ ನೀಡಿರುವುದನ್ನು ಉಲ್ಲೇಖಿಸುತ್ತಾ,

The Hon'ble high Court of Karnataka Bangalore in the case of - Ramesh N Dixit V/S State of Karnataka, 1987 (2) Kar.L.j.Sh.N.278:ILR 1985 Kar.2571 held that the owners required to show under sub-section (2) of section 71-B is that he, his

agent, if any and the person in charge of the vehicle (In this case the driver) each, had taken all reasonable and necessary precautions against the misusing of the vehicle and that this offence had been committed without the knowledge or connivance any of them. ....It is not merely enough if the truck owner says that his truck had been misused without his knowledge or connivance, but in addition he is bound to show that he had taken all reasonable and necessary precautions against such misuse. ಅಲ್ಲದೇ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿರುತ್ತದೆ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಆನವಟ್ಟಿ ವಲಯ, ಇವರು ಜಪ್ತು ಮಾಡಿದ ಟಾಟಾ-709 ನಂ:ಕೆಎ-25 ಎ-5148 (ಛಾಸ್ಸಿಸ್ ನಂ: 386125-K-22822893, ಇಂಜಿನ್ ನಂ: 497-TC-84-K-22772333) ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಸಾಗುವಾನಿ ನಾಟಾ 20=1.403ಎಂ3ನ್ನು ಸರ್ಕಾರಕ್ಕೆ ಅಂತಿಮವಾಗಿ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:**16-07-2011** ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ

ಪಿ.ಆರ್. 766 **ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ.**

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/22/ಡಿಟಿಸಿಆರ್/2010-11 ದಿನಾಂಕ: 22-09-2011

ಉಪಸ್ಥಿತರು: **ಬಿ.ವಿ. ಹೂವಪ್ಪಗೌಡ** ಅಧಿಕೃತ ಅಧಿಕಾರಿಗಳು ಹಾಗೂ ಡಿಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ
ಪುತ್ತೂರು.

ಆರೋಪಿ

1) ಜಗದೀಶ ಶೆಟ್ಟಿ, ಬಿನ್:ರೋಹಿತಾಶ್ವ ಶೆಟ್ಟಿ, ವಾಸ: ಕುತ್ಯಾಳ ಮನೆ, ನೆಟ್ಟಣಿಗೆ ಮಾಡ್ನೂರು ಗ್ರಾಮ, ಪುತ್ತೂರು
2) ಸದಾನಂದ ರೈ, ಬಿನ್:ಬೀರಣ್ಣ ರೈ, ವಾಸ: ಅರೆಪ್ಪಾಡಿ ಮನೆ, ಪಡ್ಡೆ ಬಡಗನ್ನೂರು ಗ್ರಾಮ, ಪುತ್ತೂರು ತಾಲೂಕು

ವಾಹನದ ಮಾಲೀಕರು

ಶ್ರೀ.ಸಂಜೀವ ರೈ.ಕೆ, ಬಿನ್:ಮೈಲಪ್ಪ ರೈ, ಕೊಲ್ಯ ಹೌಸ್, ನೆಟ್ಟಣಿಗೆ ಅಂಚೆ,ಬೆಳ್ಳೂರು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21-8-2010ರಂದು ಸಂಜೆ 3-30 ಗಂಟೆ ಸಮಯಕ್ಕೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಪುತ್ತೂರು ತಾಲೂಕಿನ ನೆಟ್ಟಣಿಗೆ ಮುಡ್ನೂರು ಗ್ರಾಮದ ಈಶ್ವರಮಂಗಲ-ಕರ್ನೂರು ಎಂಬಲ್ಲಿ ಶ್ರೀ.ಪಂಚಲಿಂಗೇಶ್ವರ ದೇವಸ್ಥಾನದ ಕೂಡು ರಸ್ತೆಯ ಸಮೀಪ ವಾಹನ ತಪಾಸಣೆ ನಡೆಸುತ್ತಿದ್ದಾಗ ಈಶ್ವರ ಮಂಗಲ ಕಡೆಯಿಂದ ಕರ್ನೂರು ಕಡೆಗೆ ಬರುತ್ತಿದ್ದ ಜೀಪು ನೊಂದಣಿ ಸಂ: KL-14-4283 ಇದನ್ನು ತಪಾಸಣೆ ಮಾಡಿದಾಗ, ಜೀಪಿನ ಹಿಂಭಾಗದಲ್ಲಿ 8 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು 69.120 ಲೀ ಮದ್ಯವನ್ನು ಯಾವುದೇ ದಾಖಲಾತಿಗಳಿಲ್ಲದೇ ಅಕ್ರಮವಾಗಿ ಹೊಂದಿ

ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34,43(ಎ)ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ,ಆರೋಪಿಗಳಾದ ಜಗದೀಶ್ ಶೆಟ್ಟಿ, ಬಿನ್:ರೋಹಿತಾಕ್ಷ ಶೆಟ್ಟಿ, ವಾಸ: ಕುತ್ಯಾಳ ಮನೆ, ನೆಟ್ಟಣಿಗೆ ಮೂಡ್ನೂರು ಗ್ರಾಮ, ಪುತ್ತೂರು ಮತ್ತು ಸದಾನಂದ ರೈ,ಬಿನ್: ಜೀರಣ್ಣ ರೈ ವಾಸ:ಅರೆಪ್ಪಾಡಿ ಮನೆ, ಪಡ್ಡೆ ಬಡಗನ್ನೂರು ಗ್ರಾಮ, ಪುತ್ತೂರು ತಾಲೂಕು ಇವರುಗಳ ವಿರುದ್ಧ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಕ್ರೈಂ ಸಂ: 81/2010, ದಿನಾಂಕ: 21-8-2010-ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:7-9-2010ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು ಪುತ್ತೂರು ವಲಯ ಇವರಿಗೆ ದಿ:22-9-2010 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಜೀಪು ನೊಂದಣಿ ಸಂ: KL-14-4283

2) 8 ರಟ್ಟಿನ ಪೆಟ್ಟಿಗೆಗಳಲ್ಲಿ ತಲಾ 48ರಂತೆ 180 ಎಂ ಎಲ್ ನ ಜಾನ್ ಬುಲ್ ವಿಸ್ಕಿಯ ಒಟ್ಟು 384 ಬಾಟಲಿಗಳಲ್ಲಿ ಒಟ್ಟು 69.120 ಲೀಟರು ಮದ್ಯ.

(ಮೇಲಿನ 8 ಪೆಟ್ಟಿಗೆಗಳಿಂದ ತಲಾ 4ರಂತೆ ಒಟ್ಟು 32 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ:ಅನಿ/ಪು.ವ/ ಅರ್‌ಸಿಆರ್/10/2010-11 ದಿ: 26-11-2010ರೊಂದಿಗೆ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು,ಮಂಗಳೂರು ವಲಯ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ:ಇಎಕ್ಸ್‌ನಂ: ಇ-196-8, 26-10-2010 ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾಸರಗೋಡು ಇವರು ವಾಹನ ಸಂ: KL-14-4283 ಜೀಪಿನ ಬಗ್ಗೆ ನೀಡಿದ ಬಿ ಎಕ್ಸ್‌ಟ್ರಾಕ್ಟ್ ವರದಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರು ನೀಡಿದ ಮೌಲ್ಯ ಮಾಪನ ವರದಿ ಹಾಗೂ ಪ್ರಕರಣದ ದಾಖಲಾತಿಗಳ ಪ್ರತಿಗಳನ್ನು ಒಪ್ಪಿಸಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಳ್ಳಲಾದ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ 42% ವಿ/ವಿ ಇರುವುದಾಗಿ ದೃಡೀಕರಿಸಿರುತ್ತಾರೆ. ವಶಪಡಿಸಿಕೊಂಡ ವಾಹನದ ಬಿ ರಿಜಿಸ್ಟಾರ್ ವರದಿಯಲ್ಲಿ ಶ್ರೀ.ಸಂಜೀವ ರೈ ಕೆ, ಬಿನ್:ಮೈಲಪ್ಪ ರೈ, ಕೊಲ್ಯ ಹೌಸ್, ನೆಟ್ಟಣಿಗೆ ಅಂಚೆ, ಬೆಳ್ಳೂರು ಇವರು ದಿನಾಂಕ: 20-11-2007ರಿಂದ ಅನ್ವಯವಾಗುವಂತೆ ವಾಹನದ ಮಾಲೀಕರಾಗಿರುವುದಾಗಿ ದೃಡೀಕೃತವಾಗಿರುವ ಮೇರೆಗೆ ಅವರಿಗೆ ಈ ಪ್ರಾಧಿಕಾರದಿಂದ ದಿ:08-03-2011ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೊಂದಾಯಿತ ಅಂಚೆಯ ಮೂಲಕ ನೀಡಲಾದ ಕಾರಣ ಕೇಳಿ ನೋಟಿಸು ದಿನಾಂಕ: 21-3-2011 ರಂದು ಜಾರಿಯಾಗಿದ್ದು, ಸದ್ರಿಯವರು ದಿ:12-05-2011ರಂದು ಉತ್ತರಿಸುತ್ತಾ ತಾನು ವಾಹನವನ್ನು ದಿ:23-03-2010 ರಂದು ಶ್ರೀ.ಅಮರನಾಥ ಆಳ್ವ ,ಬಿನ್:ರಾಮಣ್ಣ ಆಳ್ವ, ಅಮರ ನಿವಾಸ, ಕರ್ನೂರು ಮನೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ದ.ಕ ಜಿಲ್ಲೆ ಎಂಬವರಿಗೆ ಡೆಲಿವರಿ ನೋಟು ಪಡೆದು ಮಾರಾಟ ಮಾಡಿರುತ್ತೇನೆ. ಮತ್ತು ಈ ಬಗ್ಗೆ ಫಾರಂ ನಂ:2ನ್ನು ನೀಡಿರುತ್ತೇನೆ. ಸದ್ರಿ ವಾಹನ ಮಾರಾಟ ಮಾಡಲಾಗಿದ್ದರೂ , ನೋಂದಾಣಿ ಬದಲಾವಣೆ ಮಾಡದ ಬಗ್ಗೆ ಕಾಸರಗೋಡು ಅರ್.ಟಿ.ಓ ರವರಿಗೆ ಸದ್ರಿ ಈ ಎರಡು ದಾಖಲೆಗಳ ಪ್ರತಿಯನ್ನು ಲಗತ್ತಿಸಿ ದೂರು ನೀಡಿರುತ್ತೇನೆ ಎಂದು ತಿಳಿಸಿ ತನಗೂ , ವಾಹನಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದು ಹಾಗೂ ಕಾನೂನಿನಲ್ಲಿ ಯುಕ್ತ ಕಂಡ ಕ್ರಮ ಜರುಗಿಸಬಹುದೆಂದು ಉತ್ತರಿಸಿರುತ್ತಾರೆ.ವಾಹನ ಶ್ರೀ.ಅಮರನಾಥ ಆಳ್ವ ಇವರಿಗೆ ಪರಭಾರೆ ಆದ ಬಗ್ಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಿರುವುದಿಲ್ಲ ಹಾಗೂ ಪ್ರಕರಣ ದಾಖಲಾಗಿ 1 ವರ್ಷ ಕಳೆದರೂ ವಾಹನದ ಮಾಲೀಕ /ಸುಪರ್ಧಿ ಹೊಂದಿರುವವರಾಗಲೀ ಅವರ ಪರ ಪ್ರತಿನಿಧಿಗಳಾಗಲೀ ಸದ್ರಿ ವಾಹನಕ್ಕೆ ವಾರೀಸುದಾರಿಕೆ ನಿರೂಪಿಸಿ ಅದನ್ನು ಹಸ್ತಾಂತರ ಪಡೆಯುವ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದು ಕಂಡು ಬರುವುದಿಲ್ಲ. ಅಬಕಾರಿ ಕಾಯಿದೆ 43 ಎ ರಡಿ ಜಪ್ತಾದ ವಾಹನ/ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಅಭಿಪ್ರಾಯಕ್ಕೆ ಒಳಪಟ್ಟು ಯಾವುದೇ ವಿಳಂಭವಿಲ್ಲದೇ ವಿಲೇವಾರಿ ಮಾಡಲು ಕಾನೂನಾತ್ಮಕ ಅವಕಾಶವಿರುತ್ತದೆ.

ಪ್ರಕರಣದ ತನಿಖಾಧಿಕಾರಿಗಳು ದಿ:26-11-2010ರಂದು ಸಲ್ಲಿಸಿರುವ ಶಿಫಾರಸ್ಸು ವರದಿಯನ್ನು ಪರಿಗಣಿಸಿ ಜಪ್ತುಪಡಿಸಿಕೊಂಡ ವಾಹನ ಸಂ: KL-14-4283 ಜೀಪು ಇದನ್ನು ಹೊರತುಪಡಿಸಿ ಉಳಿದ ಮದ್ಯ (ಮಾದರಿ ಹೊರತುಪಡಿಸಿ)ವನ್ನು ದಿನಾಂಕ :11-02-2011ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ವಾಹನವನ್ನು ದಿ:21-08-2010ರಂದು ವಶಪಡಿಸಿಕೊಂಡು ಈಗಾಗಲೆ 1 ವರ್ಷ 1 ತಿಂಗಳು ಕಳೆದರೂ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾಧಿಕಾರವು ಮನಗಂಡು ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ಫಿರ್ಯಾದುದಾರರೊಂದಿಗೆ ಸಹ–ಸಾಕ್ಷಿದಾರರಾದ ಶ್ರೀ.ಪ್ರಮೋದ್ ಎ.ಎಸ್, ಪಿ.ಸಿ ಸಂ:572 ಮತ್ತು ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ ಇವರುಗಳನ್ನು ಪ್ರಾಸಾ–1 ಮತ್ತು 2 ರವರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ದಾಖಲಾತಿಗಳನ್ನು ನಿಶಾನೆ ಪಿ–1ರಿಂದ ನಿಶಾನೆ ಪಿ– 6ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿಯ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಆ ಈ ಕೆಳಗಿನಂತೆ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:21–08–2010ರಂದು ಜೀಪು ನೊಂದಣಿ ಸಂ: KL–14–4283ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ:21–08–2010 ರಂದು ಜೀಪು ನೊಂದಣಿ ಸಂ: KL-14-4283ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಸಹಾಯಕ ರಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ನೀಡಿರುವ ವರದಿ ಸಂ: ಇಎಕ್ಸ್‌ನಂ: ಇ–196–8, 26–10–2010 ರಲ್ಲಿ ಮದ್ಯದ ತೀಕ್ಷ್ಣತೆ 42% ವಿ/ವಿ ಇರುವುದಾಗಿ ದೃಡೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಸಾಭೀತಾಗಿದ್ದು ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿ ಒಪ್ಪಿಸಿರುವ ದಾಖಲಾತಿಗಳು ಹಾಗೂ ತನಿಖೆ ಕೈಗೊಂಡ ಬಗ್ಗೆ ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳ ಮೇಲೆ ದಿ:21–08–2011 ರಂದು ಜಪ್ತಿಪಡಿಸಿರುವ ಜೀಪು ನೊಂದಣಿ ಸಂ: KL-14-4283 ಅಕ್ರಮವಾಗಿ 69.120 ಲೀ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಹೊಂದಿ ಸಾಗಾಣಿಕೆ ಮಾಡಿರುವುದು ಮತ್ತು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32,34 ಮತ್ತು 43 ಎ ರೀತ್ಯಾ ಅಪರಾಧಕ್ಕೆ ಬಳಸಿರುವುದು ಸಾಭೀತಾಗಿರುವುದರಿಂದ ಎರಡನೆ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ಜೀಪು ನೊಂದಣಿ ಸಂ: KL–14–4283 ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾಸರಗೋಡು ಇವರಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ಕಾರಣ ಕೇಳಿ ನೋಟಿಸನ್ನು ನೊಂದಾಯಿತ ಅಂಚೆಯ ಮೂಲಕ ನೀಡಲಾಗಿ, ಸದ್ರಿಯವರು ದಿ:12–05–2011ರಂದು ಉತ್ತರಿಸುತ್ತಾ ತಾನು ದಿ:23–03–2010ರಂದು ಶ್ರೀ.ಅಮರನಾಥ ಆಳ್ವ ,ಬಿನ್:ರಾಮಣ್ಣ ಆಳ್ವ, ಅಮರ ನಿವಾಸ, ಕರ್ನೂರು ಮನೆ, ನೆಟ್ಟಣಿಗೆ ಮುಡ್ನೂರು ಗ್ರಾಮ, ಪುತ್ತೂರು ದ.ಕ ಜಿಲ್ಲೆ ಎಂಬವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುವರಾದರೂ, ಸದ್ರಿ ವಾಹನ 2ನೇ ವ್ಯಕ್ತಿಗೆ ಪರಭಾರೆಯಾಗಿರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅದಿಕಾರಿಗಳಿಂದ ಅಧಿಕೃತ ದಾಖಲೆಗಳು ಲಭ್ಯ ವಾಗದೇ ಇರುವುದರಿಂದ ವಾಹನದ ಪರಭಾರೆ ಅಂಶವನ್ನು ಪರಿಗಣಿಸಲು ಬರುವುದಿಲ್ಲ. ಹಾಗೂ ವಾಹನವನ್ನು ಖರೀದಿಸಿಕೊಂಡ ವ್ಯಕ್ತಿಯಾಗಲೀ ಆತನ ಪರ ಪ್ರತಿನಿಧಿಗಳಾಗಲೀ ವಾಹನದ ಬಿಡುಗಡೆ ಬಗ್ಗೆ ಯಾವುದೇ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ವಾಹನದ ಮಾಲೀಕ/ಸುಪರ್ಧಿ ಹೊಂದಿರುವವರು ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟದಂತಹ ಅಪರಾಧವೆಸಗಿರುವುದು ಹಾಗೂ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಇದೊಂದು ಕವಾರೀಸುದಾರರು ಇಲ್ಲದ ಪ್ರಕರಣವೆಂದು ಕಿ ಸಾಭೀತಾಗಿದ್ದು ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

<u>ಪೂರಕ ಅಂಶ–:</u>

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾದಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ,

ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,ಪುತ್ತೂರು ಇವರ ತಕ್ಷೀರು ಸಂಖ್ಯೆ:81/2010, ದಿ: 21-08-2010 ರಂದು ದಾಖಲಿಸಿದ ಪ್ರಕರಣದಲ್ಲಿ ಆರೋಪಿಯು 69.120 ಲೀ ಅಕ್ರಮ ಮದ್ಯ ಸಾಗಾಣಿಕೆ ಮಾಡುವುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿ ಹಾಗೂ ವಾಹನದಲ್ಲಿ ಜಪ್ತು ಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟು, ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಪ್ರಾಧಿಕಾರವು ಈ ಕೆಳಕಂಡಂತೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ: 81/2010, ದಿ: 21-08-2010ರಲ್ಲಿ ಜಪ್ತಿಪಡಿಸಿಕೊಂಡಿರುವ ಜೀಪು ನೊಂದಣಿ ಸಂ: KL-14-4283 (ಚಾಸೀಸ್ ನಂ:CJ447303599 ಮತ್ತು ಇಂಜಿನ್ ನಂ: DI3216S) ನಿಯಮ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ: 11-02-2011ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ: 22-09-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವುಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1066

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/178/ಡಿಟಿಸಿಆರ್/2010-11 ದಿನಾಂಕ: 15-09-2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡಿಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:	**ಆರೋಪಿ**
ಪೊಲೀಸ್ ಉಪ ನಿರೀಕ್ಷಕರು (ಕಾ &ಸು) ಪುತ್ತೂರು ನಗರ ಪೊಲೀಸ್ ಠಾಣೆ ಪುತ್ತೂರು	ಸಂತೋಷ್ ಕುಮಾರ್

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:30-10-2010ರಂದು ಬೆಳಿಗ್ಗೆ 10-45 ಗಂಟೆ ಸಮಯಕ್ಕೆ ಫಿರ್ಯಾದು ದಾರರಾದ ಪೊಲೀಸ್ ಉಪ ನಿರೀಕ್ಷಕರು, (ಕಾ&ಸು) ಪುತ್ತೂರು ನಗರ ಪೊಲೀಸ್ ಠಾಣೆ, ಪುತ್ತೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಪುತ್ತೂರು ತಾಲೂಕು ಕಣ್ಣೂರು ಗ್ರಾಮದ ಆನೆಮಜಲು ಎಂಬಲ್ಲಿರುವ ಸಂತೋಷ್ ಕುಮಾರ್ ಎಂಬವರ ಮನೆಯ ಬಳಿಯ ಕಾಡು ಪ್ರದೇಶದೊಳಗೆ ಧಾಳಿ ಮಾಡಲಾಗಿ ಅಲ್ಲಿ KA-19-P-6837 ನೊಂದಣಿ ಸಂಖ್ಯೆ ಇರುವ ಕ್ವಾಲಿಸ್ ಕಾರಿನೊಳಗೆ 35 ಲೀಟರು ಸಾಮರ್ಥ್ಯದ 34 ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಒಟ್ಟು 1,020 ಲೀಟರು ಮದ್ಯಸಾರ ಇರುವುದನ್ನು ಪತ್ತೆಹಚ್ಚಿ , ಪ್ರಕರಣ ಸಂದರ್ಭದಲ್ಲಿ ಅರೋಪಿಗಳು ತಲೆಮರೆಸಿಕೊಂಡಿರುವ ಮೇರೆಗೆ ಇದೊಂದು ಅಕ್ರಮ ಮದ್ಯಸಾರ ಹೊಂದಿ ಸಾಗಾಟ ಮಾಡುತ್ತಿರುವ ಪ್ರಕರಣವೆಂದು ಪರಿಗಣಿಸಿ ಇದು ಅಬಕಾರಿ ಕಾಯಿದೆ ಕಲಂ 32,34, 43(3)ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯಸಾರದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ತಲೆಮರೆಸಿಕೊಂಡಿರುವ ಸಂತೋಷ್ ಕುಮಾರ್ ಎಂಬವರ ವಿರುದ್ಧ ಪುತ್ತೂರು ನಗರ ಠಾಣೆ ಕ್ರೈಂ ಸಂ: 218/2010. ದಿನಾಂಕ:30-10-2010 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:22-1-2011 ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು

ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ದಿ:14-3-2011 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಕ್ವಾಲಿಸ್ ಕಾರು ಸಂ: KA-19-P-6837 (ಇಂಜಿನ್ ಸಂ:2L9729418 ಮತ್ತು ಚಾಸೀಸ್ ಸಂ:LF5010507820102)

2) 35 ಲೀಟರು ಸಾಮರ್ಥ್ಯದ 34 ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಒಟ್ಟು 1,020 ಲೀಟರು ಮದ್ಯಸಾರ. ಸದ್ರಿ ಮದ್ಯಸಾರವನ್ನು ಹಸ್ತಾಂತರಿಸುವ ಸಮಯದಲ್ಲಿ 11 ಕ್ಯಾನುಗಳು ಒಡೆದು ಹೋಗಿದ್ದು 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 72.750 ಲೀ ಮದ್ಯಸಾರ ಇರುತ್ತದೆ.

(ಮೇಲಿನ ಮದ್ಯಸಾರದಿಂದ ತಲಾ 180 ಮಿಲಿಯ 23 ಬಾಟಲಿಗಳಲ್ಲಿ ಮದ್ಯಸಾರವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:14-3-2011ರಂದು ಸಲ್ಲಿಸಿರುವ ವರದಿ ಸಂ: ಅನಿ/ಪುವ/ಅರ್ ಸಿಆರ್/34/2010-11ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಪ್ತುಪಡಿಸಲಾದ 35 ಲೀಟರು ಸಾಮರ್ಥ್ಯದ 34 ಬಿಳಿ ಕ್ಯಾನುಗಳಲ್ಲಿ ತಲಾ 30 ಲೀಟರಿನಂತೆ 1020 ಲೀಟರು ಮದ್ಯಸಾರದ ಪೈಕಿ 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 672.750 ಮದ್ಯಸಾರ ಮಾತ್ರ ಸ್ವೀಕೃತವಾಗಿದ್ದು ಉಳಿದಂತೆ 11 ಕ್ಯಾನುಗಳು ಒಡೆದುಹೋಗಿ ಅದರಲ್ಲಿದ್ದ ಮದ್ಯಸಾರ ಸೋರಿಹೋಗಿರುತ್ತದೆ ಎಂದು ತಿಳಿಸಿ ಈ ಬಗ್ಗೆ ಸೊತ್ತುಗಳನ್ನು ಪೊಲೀಸ್ ಅಧಿಕಾರಿಗಳಿಂದ ಸ್ವೀಕರಿಸುವ ಸಂದರ್ಭದಲ್ಲಿ ಇಲಾಖಾ ಸಿಬ್ಬಂದಿಗಳು ಮತ್ತು ಪಂಚರ ಸಮಕ್ಷಮ ತಯಾರಿಸಲಾದ ಮಹಜರನ್ನು ವರದಿಯೊಂದಿಗೆ ಒಪ್ಪಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಅನಿ/ಪು.ವ/ ಅರ್‌ಸಿಆರ್/35/2010-11 ದಿ: 17-5-2011ರ ವರದಿಯೊಂದಿಗೆ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು.ಮಂಗಳೂರು ವಲಯ ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಇಎಕ್ಸ್‌ನಂ: ಇ-47-23 ದಿ:29-4-2011, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು, ದ.ಕ ಜಿಲ್ಲೆ ಇವರು ವಾಹನ ಸ ಸಂ: KA-19-P-6837 ಕ್ವಾಲಿಸ್ ಕಾರಿನ ಬಗ್ಗೆ ನೀಡಿದ ಬಿ ಎಕ್ಸ್ ಟ್ರಾಕ್ಟ್ ವರದಿ, ಮೌಲ್ಯ ಮಾಪನ ವರದಿ ಮತ್ತು ಪ್ರಕರಣದ ದಾಖಲಾತಿಗಳ ಪ್ರತಿಗಳನ್ನು ಒಪ್ಪಿಸಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಳ್ಳಲಾದ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯಸಾರದ ತೀಕ್ಷ್ಣತೆ 80% ವಿ/ವಿ @ 60 ಡಿಗ್ರಿ F ಇರುವುದಾಗಿ ದೃಡೀಕರಿಸಿರುತ್ತಾರೆ. ವಶಪಡಿಸಿಕೊಂಡ ವಾಹನದ ನೊಂದಣಿ ಸಂಖ್ಯೆ ಆಧಾರಿತವಾಗಿ ಪಡೆಯಲಾದ ಬಿ ರಿಜಿಸ್ಟ್ರಾರ್ ವರದಿಯಲ್ಲಿ ನಮೂದಿತವಾದ ವಾಹನವು ಮಾರುತಿ ಕಂಪೆನಿ ನಿರ್ಮಿತ ವಾಹನವಾಗಿದ್ದು, ಜಪ್ತುಪಡಿಸಿಕೊಂಡ ವಾಹನವು ಕ್ವಾಲಿಸ್ ಕಾರು ಆಗಿರುವುದರಿಂದ ಒಂದಕ್ಕೊಂದು ತಾಳೆಯಾಗದೇ ಇರುವುದು ಕಂಡುಬಂದಿದ್ದು ವಾಹನಕ್ಕೆ ನಕಲಿ ನಂಬರ್ ಪ್ಲೇಟು ಅಳವಡಿಸಿ ಅಕ್ರಮಕ್ಕೆ ಬಳಸಿಕೊಂಡಿರುವುದು ಖಾತ್ರಿಯಾಗಿರುತ್ತದೆ. ಆದಾಗ್ಯೂ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾದ ವಾಹನದ ಮಾಲೀಕರಾದ ಶ್ರೀ.ಅಬ್ದುಲ್ ಅಜೀಜ್ .ಬಿನ್:ಚೆಯ್ಯಬ್ಬ ಪ್ಲಾಟ್ ನಂ:502, ಸಿಂಪನಿ ಅಪಾರ್ಟ್‌ಮೆಂಟ್, ಕಾಸಾಗ್ರಾಂಡ , ಸ್ವರಕ್ ರೋಡ್, ಅತ್ತಾವರ, ಮಂಗಳೂರು ಇವರಿಗೆ ಪ್ರಾಧಿಕಾರದಿಂದ ದಿ:30-5-2011ರಂದು ನೀಡಲಾದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರು ದಿ: 6-6-2011 ರಂದು ಉತ್ತರಿಸುತ್ತಾ ಜಪ್ತಾದ ವಾಹನ ಹಾಗೂ ತನ್ನ ವಾಹನ ಒಂದಕ್ಕೊಂದು ತಾಳೆಬಾರದೇ ಇರುವುದರಿಂದ ಈ ಪ್ರಕರಣಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿ ಪ್ರಕರಣದಲ್ಲಿ ಜಪ್ತಾದ ಟೋಯೋಟೋ ಕಂಪೆನಿ ನಿರ್ಮಿತ ಕ್ವಾಲಿಸ್ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ತನ್ನ ಅಭ್ಯಂತರವೇನು ಇಲ್ಲವೆಂದು ತಿಳಿಸಿರುತ್ತಾರೆ.

ವಾಹನವನ್ನು ದಿ:30-10-2010ರಂದು ವಶಪಡಿಸಿಕೊಂಡು ಈಗಾಗಲೇ 10 ತಿಂಗಳು ಕಳೆದರೂ, ವಾಹನದ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರವನ್ನು ಸಾಗಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಜಪ್ತಾದ ಸೊತ್ತುಗಳ ಸಮೇತ ವಾಹವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಸೂಕ್ತವೆಂದು ಪ್ರಾಧಿಕಾರವು ಮನಗಂಡು ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ತನಿಖಾಧಿಕಾರಿ ಮತ್ತು ಫಿರ್ಯಾದುದಾರರನ್ನು ಪ್ರಾಸಾ-1 ಮತ್ತು 2ರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ಮುಖ್ಯ ದಾಖಲಾತಿಗಳನ್ನು ನಿಶಾನೆ ಪಿ-1ರಿಂದ ನಿಶಾನೆ ಪಿ-10ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದ ಮಂಡನೆಯನ್ನು ಆಲಿಸಿ ಆ ವಾದ ಮಂಡನೆಯನ್ನು ಆಲಿಸಿ ಈ ಕೆಳಗಿನ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:30-10-2010ರಂದು ಕ್ವಾಲಿಸ್ ನೊಂದಣಿ ಸಂ: KA-19-P-6837ರಲ್ಲಿ ಸಾಗಾಣಿಕೆ ಯಾದ ಸೊತ್ತು ಮದ್ಯಸಾರ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 30-10-2010 ರಂದು ಕ್ವಾಲಿಸ್ ಕಾರು ನೊಂದಣಿ ಸಂ: KA-19-P-6837 ಇದರಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯಸಾರ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯಸಾರದ ಮಾದರಿಗಳ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ಸಹಾಯಕ ರಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ನೀಡಿರುವ ವರದಿ ಸಂ: ಇ-47-20 ದಿ:29-4-2011ರಲ್ಲಿ ಮದ್ಯಸಾರದ ತೀಕ್ಷ್ಣತೆ 80% ವಿ/ವಿ @ 60 ಡಿಗ್ರಿ F ಇರುವುದಾಗಿ ದೃಡೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯಸಾರ) ಆಗಿರುವುದು ಸಾಭೀತಾಗಿರುವುದು ಒಂದನೇ ಅಂಶಕ್ಕೆ ಗುಣಾತ್ಮಕ ವಾಗಿರುತ್ತದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿರುವ ದಾಖಲಾತಿಗಳು ಹಾಗೂ ತನಿಖಾಧಿಕಾರಿಯವರು ಪುರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ದಿ:30-10-2010 ಜಪ್ತುಪಡಿಸಿಕೊಂಡಿರುವ ಕ್ವಾಲಿಸ್ ಕಾರು ನೊಂದಣಿ ಸಂ: KA-19-P-6837 ರಲ್ಲಿ ಅಕ್ರಮವಾಗಿ 1020.000 ಲೀಟರ್ ಮದ್ಯಸಾರವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೇ ಹೊಂದಿ ಸಾಗಾಣಿಕೆ ಮಾಡಿರುವುದು ಸಾಭೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ನೊಂದಣಿ ಸಂ: KA-19-P-6837 ಎಂಬ ಫಲಕವನ್ನು ಅಳವಡಿಸಲಾದ ಕ್ವಾಲಿಸ್ ಕಾರು ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ನೊಂದಣಿ ಸಂಖ್ಯೆ ಆಧಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ವರದಿಯು ಮಾರುತಿ ಕಂಪೆನಿ ನಿರ್ಮಿತ (ಚಾಸೀಸ್ ಸಂ:MA3EED81 S00394995 ಮತ್ತು ಇಂಜಿನ್ ಸಂ: F10DN 4218699) ವಾಹನದ್ದಾಗಿದ್ದು ಜಪ್ತಾದ ವಾಹನವು ಟೋಯೋಟೋ ಕಂಪೆನಿ ನಿರ್ಮಿತ (ಇಂಜಿನ್ ನಂ:2L9729418 ಮತ್ತು ಚಾಸೀಸ್ ನಂ: LF5010507820102) ಆಗಿದ್ದು ಒಂದಕ್ಕೊಂದು ತಾಳೆ ಕಂಡು ಬಾರದೇ ಇರುವುದರಿಂದ ಅಕ್ರಮ ಸಂದರ್ಭದಲ್ಲಿ ಕ್ವಾಲಿಸ್ ಕಾರಿಗೆ ನಕಲಿ ನಂಬರ್ ಪ್ಲೇಟ್ KA-19-P-6837ನ್ನು ತಿಳುವಳಿಕೆಯಿಂದಲೇ ಅಳವಡಿಸಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ಉದ್ದೇಶ ಪೂರ್ವಕವಾಗಿ ವಾಹನದ ಸುಪರ್ಧಿ ಹೊಂದಿರುವ ವ್ಯಕ್ತಿ ಅಥವಾ ವಾಹನದ ಮಾಲೀಕರು ಪ್ರಯತ್ನಿಸಿರುವುದು ಸಾಭೀತಾಗಿರುತ್ತದೆ. ಅಲ್ಲದೇ ಪ್ರಕರಣ ದಾಖಲಾಗಿ 10 ತಿಂಗಳುಗಳು ಕಳೆದರೂ ತನ್ನ ವಾಹನವನ್ನು ಪತ್ತೆಹಚ್ಚಲು ಅಥವಾ ಪಡೆಯಲು ಪ್ರಯತ್ನಿಸದೇ ಇರುವುದರಿಂದ ವಾಹನದ ಮಾಲೀಕರು ತಮ್ಮ ತಿಳುವಳಿಕೆಯಿಂದಲೇ ಉದ್ದೇಶ ಪೂರ್ವಕವಾಗಿ ಈ ಅಪರಾಧವನ್ನು ಎಸಗಿ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಪ್ರಕರಣವು 'ವಾರೀಸುದಾರರು ಇಲ್ಲದ ಪ್ರಕರಣವೆಂದು' ಸಾಭೀತಾಗಿರುವುದರಿಂದ ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು. ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರ ದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕಾರಣ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು,(ಕಾ&ಸು) ಪುತ್ತೂರು ನಗರ ಪೊಲೀಸ್ ಠಾಣೆ, ಪುತ್ತೂರು ಇವರ ಠಾಣಾ ತಕ್ಷೀರು ಸಂಖ್ಯೆ: 218/2010 ದಿ:-30-10-2010 ರಂದು ದಾಖಲಿಸಿದ ಪ್ರಕರಣದಲ್ಲಿ 1020 ಲೀಟರ್ ಅಕ್ರಮ ಮದ್ಯಸಾರವನ್ನು ಸಾಗಾಣಿಕೆ ಮಾಡುವುದುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯಸಾರವೆಂದು ದೃಡಪಟ್ಟಿದ್ದು, ಸದರಿ ವಾಹವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿರುವುದನ್ನು ಪರಿಗಣಿಸಿ ನಕಲಿ ನಂಬರ್ ಪ್ಲೇಟು ಅಳವಡಿಸಿ ಅಕ್ರಮ ಮದ್ಯಸಾರ ಸಾಗಾಟಕ್ಕೆ ಬಳಸಿದ ವಾಹನ ಕ್ವಾಲಿಸ್ ಕಾರು ಸಂ: KA-19-P-6837 ಮತು ಇತರ ಸೊತ್ತುಗಳಾದ 1020 ಲೀಟರು ಮದ್ಯಸಾರದ ಪೈಕಿ ಸೋರಿಹೋದ ಮದ್ಯಸಾರವನ್ನು ಹೊರತುಪಡಿಸಿ ಉಳಿದ ಮದ್ಯಸಾರವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಸಿ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ಪ್ರಸ್ತುತ ಸರ್ಕಾರದ ನೀತಿಯಂತೆ ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಪ್ಲಾಸ್ಟಿಕ್ ಕ್ಯಾನುಗಳನ್ನು ವಿಲೇವಾರಿ ಮಾಡಬಹುದಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ 43 (ಬಿ) ಅಡಿ ಕಹ ಜರುಗಿಸಿ, ಪೊಲೀಸ್ ಉಪ ನಿರೀಕ್ಷಕರು, (ಕಾ& ಸು), ಪುತ್ತೂರು ನಗರ ಪೊಲೀಸ್ ಠಾಣೆ , ಪುತ್ತೂರು ಇವರ ಕ್ರೈಂ ಸಂ: 218/2010 ದಿನಾಂಕ: 30-10-2010 ರಲ್ಲಿ ಜಪ್ತು ಪಡಿಸಿಕೊಂಡಿರುವ ನಕಲಿ ನಂಬರು ಪ್ಲೇಟ್ ಸಂ: KA-19-P-6837 ಅಳವಡಿಸಲಾದ ಕ್ವಾಲಿಸ್ ಕಾರು (ಇಂಜಿನ್ ನಂ:2L9729418 ಮತ್ತು ಚಾಸೀಸ್ ನಂ:LF501050 7820102)ನ್ನು ಮತ್ತು ಜಪ್ತುಪಡಿಸಿಕೊಂಡ 35 ಲೀಟರು ಸಾಮರ್ಥ್ಯದ 34 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 30 ಲೀಟರಿನಂತೆ ಒಟ್ಟು 1020 ಲೀಟರು ಮದ್ಯಸಾರದ ಪೈಕಿ ಸೋರಿಹೋದ 11 ಕ್ಯಾನುಗಳಲ್ಲಿದ್ದ ಮದ್ಯಸಾರವನ್ನು ಹೊರತುಪಡಿಸಿ ಉಳಿದ 23 ಕ್ಯಾನುಗಳಲ್ಲಿ ತಲಾ 29.250 ಲೀಟರಿನಂತೆ ಒಟ್ಟು 672.750 ಲೀ. ಮದ್ಯಸಾರ (ಮಾದರಿ ಹೊರತುಪಡಿಸಿ)ವನ್ನು ನಿಯಮ 43(ಸಿ)ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007 ದಿ: 13-7-2007 ರಂತೆ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಎ) 3ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗರವರು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಹಾಗೂ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್, ಪುತ್ತೂರು ಡಿಪೋ ಇವರನ್ನು ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಇಸಿಸಿ/73/ಸಿಆರ್‌ಎಂ/2004 ದಿ: 12-9-2005ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಮದ್ಯಸಾರವನ್ನು ನಾಶಪಡಿಸಲು ಹಾಗೂ ವಾಹನ ಮತ್ತು ಖಾಲಿ ಪ್ಲಾಸ್ಟಿಕ್ ಡ್ರಂಗಳನ್ನು ವಿಲೇವಾರಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿ: 15-09-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಗೆ ಬರುವುದು.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1077

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/321/ಡಿಟಿಸಿಆರ್/2008-09 ದಿನಾಂಕ: 20-10-2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು
ಸುಳ್ಯ ಪೊಲೀಸ್ ಠಾಣೆ ಸುಳ್ಯ

ಆರೋಪಿ

1) ಯತೀಶ್, ಬಿನ್:ಕುಂಞಣ್ಣ ಭಂಡಾರಿ , ಮಂಡೆಕೋಲು ಶಾಲೆಯ ಬಳಿ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು.
2) ಕುಂಞಕಣ್ಣನ್, ಬಿನ್:ಕುಂಞರಾಮ, ಮರೆಯೂರು ವಾಸ: ಕಣಿಮಾರಡ್ಕ ಮನೆ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು

ವಾಹನದ ಮಾಲೀಕರು

ಶ್ರೀ.ಎಂ.ಯತೀಶ್ ಬಿನ್:ಕುಂಞಣ್ಣ ಭಂಡಾರಿ, ನಿಯರ್ ಮಂಡೆಕೋಲು ಶಾಲೆ, ಮಂಡೆಕೋಲು ಗಾಮ, ಸುಳ್ಯ ತಾಲೂಕು .

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10-2-2009ರಂದು ಸಂಜೆ 7-00 ಗಂಟೆ ಸಮಯಕ್ಕೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಖಚಿತ ಮಾಹಿತಿಯ ಮೇರೆಗೆ ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಪಂಚಾಯತ್‌ನ ನೀರಿನ ಟ್ಯಾಂಕ್‌ನ ಹತ್ತಿರ ಟಿ.ವಿ.ಎಸ್. ಮೋಟಾರು ಸೈಕಲ್ ಸಂ: KA-21-J-8782 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ 6.480 ಲೀಟರು ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ, ಅರೋಪಿಗಳಾದ ಯತೀಶ್, ಬಿನ್:ಕುಂಞಣ್ಣ ಭಂಡಾರಿ ಮಂಡೆಕೋಲು ಶಾಲೆಯ ಬಳಿ, ಮಂಡೆಕೋಲು ಗ್ರಾಮ,ಸುಳ್ಯ

ತಾಲೂಕು ಮತ್ತು ಕುಂಞ ಕಣ್ಣನ್, ಬಿನ್:ಕುಂಞರಾಮ , ಮರೆಯೂರು ವಾಸ: ಕಣಿಮಾರಡ್ಕ ಮನೆ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು ಇವರುಗಳ ವಿರುದ್ಧ ಸುಳ್ಯ ಪೊಲೀಸ್ ಠಾಣಾ ಕ್ರೈಂ ಸಂ: 37/2009ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿನಾಂಕ:18-4-2009ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಇವರಿಗೆ ದಿ:12-6-2009 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಟಿ.ವಿ.ಎಸ್ ಮೋಟಾರು ಸೈಕಲ್ ನೊಂದಣಿ ಸಂ: KA-21-J-8782

2) ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ 180 ಎಂಎಲ್‌ನ 14 ಬಾಟಲಿಗಳಲ್ಲಿ ಒಟ್ಟು 2-520 ಲೀ ಮದ್ಯ.

3) ಕ್ಲಬ್ ಚಾಯ್ಸ್ ಪೈನ್ಸ್ ವಿಸ್ಕಿ 180 ಎಂಎಲ್‌ನ 22 ಬಾಟಲಿಗಳಲ್ಲಿ ಒಟ್ಟು 3-960 ಲೀ ಮದ್ಯ.

4) ನಗದು ಹಣ ರೂ.566/-

(ಮೇಲಿನ ಬ್ರಾಂಡ್‌ವಾರು ಮದ್ಯದಿಂದ ತಲಾ ಒಂದೊಂದರಂತೆ ಒಟ್ಟು 2 ಬಾಟಲಿ ಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಸುಳ್ಯ ವಲಯ ಇವರ ವರದಿ ಸಂಖ್ಯೆ: ಸುಳ್ಯ ವಲಯ/ಸಿಆರ್‌ಎಂ/ 7/2009-10 ದಿ:3-7-2009ರೊಂದಿಗೆ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಮತ್ತು ಮೌಲ್ಯ ಮಾಪನ ವರದಿ ಹಾಗೂ ದಿ:23-7-2011 ರಂದು ಸಲ್ಲಿಸಿರುವ ವರದಿಯೊಂದಿಗೆ ಮದ್ಯದ ಮಾದರಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ ಬಗ್ಗೆ ವಿಶ್ಲೇಷಣಾ ವರದಿ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ವಶಪಡಿಸಿಕೊಂಡ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿಗೊಳಿಸಲು ಆದೇಶಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ.

ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ 42.25% ವಿ/ವಿ ಇರುವುದಾಗಿ ಹಾಗೂ ಭಾರತೀಯ ಬ್ಯೂರೋದ ಮಾನಕಕ್ಕೆ ಅನುಗುಣವಾಗಿದೆ ಎಂದು ದೃಢೀಕರಿಸಿರುತ್ತಾರೆ. ತನಿಖಾದಿಕಾರಿಗಳ ಶಿಪಾರಸ್ಸು ಮೇರೆಗೆ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ ಜಪ್ತುಪಡಿಸಿಕೊಳ್ಳಲಾದ ಮದ್ಯ ಹಾಗೂ ನಗದು ಮೊತ್ತವನ್ನು ದಿ:31-7-2009ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರ್ಕಾರದ ಪ್ರಚಲಿತ ನೀತಿ ಅನ್ವಯ ಮದ್ಯವನ್ನು ನಾಶಪಡಿಸಲು ಹಾಗೂ ನಗದು ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿರುತ್ತದೆ.

ವಶಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ದ.ಕ ಜಿಲ್ಲೆ ಇವರಿಂದ ಪಡೆಯಲಾಗಿದ್ದು,ಸದ್ರಿ ವರದಿಯಲ್ಲಿ ಶ್ರೀ.ಎಂ.ಯತೀಶ್ ಬಿನ್:ಕುಂಜಣ್ಣ ಭಂಡಾರಿ, ಹೌಸ್ ನಂ:1-300, ಮಂಡೆಕೋಲು ಶಾಲೆಯ ಹತ್ತಿರ, ಮಂಡೆಕೋಲು, ಸುಳ್ಯ ತಾಲೂಕು ಇವರು ದಿನಾಂಕ: 30-6-2007ರಿಂದ ಅನ್ವಯವಾಗುವಂತೆ ವಾಹನದ ಮಾಲೀಕ ರಾಗಿರುವುದಾಗಿ ದೃಢೀಕೃತವಾಗಿರುವ ಮೇರೆಗೆ ಅವರಿಗೆ ಈ ಪ್ರಾಧಿಕಾರದಿಂದ ದಿ:11-6-2009 ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೀಡಲಾದ ಕಾರಣ ಕೇಳಿ ನೋಟಿಸು ನೊಂದಾಯಿತ ಅಂಚೆ ಮೂಲಕ ರವಾನಿಸಿ ಹಾಗೂ ತನಿಖಾಧಿಕಾರಿಗಳ ಮೂಲಕ ಖುದ್ದಾಗಿ ಜ್ಯಾರಿಗೊಳಿಸಲಾಗಿರುತ್ತದೆ. ಆದರೆ ವಾಹನದ ಮಾಲೀಕರು ದಿ:23-3-2009ರಂದು ತಮ್ಮ ವಕೀಲರ ಮೂಲಕ ವಾಹನದ ಮಧ್ಯಂತರ ಬಿಡುಗಡೆಗೆ ಕೋರಿರುವುದನ್ನು ಹೊರತುಪಡಿಸಿ, ಪ್ರಾಧಿಕಾರದಿಂದ ಮೇಲಿನಂತೆ ನೀಡಲಾದ ಕಾರಣ ಕೇಳಿ ನೋಟಿಸಿಗೆ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ . ಪ್ರಕರಣ ದಾಖಲಾಗಿ 2 ವರ್ಷ 8 ತಿಂಗಳು ಕಳೆದಿದ್ದು, ಅಬಕಾರಿ ಕಾಯಿದೆ 43 ಎ ರಡಿ ಜಪ್ತಾದ ವಾಹನ/ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಅಭಿಪ್ರಾಯಕ್ಕೆ ಒಳಪಟ್ಟು ಯಾವುದೇ ವಿಳಂಭವಿಲ್ಲದೇ ವಿಲೇವಾರಿ ಮಾಡಲು ಕಾನೂನಾತ್ಮಕ ಅವಕಾಶ ವಿರುವುದರಿಂದ ಜಪ್ತಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾಧಿಕಾರವು ಮನಗಂಡು ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ನಂತರ ಪ್ರಕರಣದಲ್ಲಿ ವಿಚಾರಣೆಯನ್ನು ಪ್ರಾರಂಬಿಸಿ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಪ್ರಾ.ಸಾ-1 ರಿಂದ 5ರವರನ್ನು ವಿಚಾರಣೆ ನಡೆಸಿ ನಿಶಾನೆ ಪಿ-1 ರಿಂದ 9 ಎ ರವರೆಗೆ ಗುರುತಿಸಿಕೊಳ್ಳಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

ವಿವಾಧಾಂಶಗಳು

1) ದಿನಾಂಕ: 10-02-2009 ರಂದು ವಾಹನ ಸಂ: KA-21-J-8782 ಟಿ.ವಿ.ಎಸ್ ವಿಕ್ಟರ್ ಮೋಟಾರ್ ಸೈಕಲ್ ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ದಿನಾಂಕ:10-02-2009ರಂದು KA-21-J-8782 ಟಿ.ವಿ.ಎಸ್ ವಿಕ್ಟರ್ ಮೋಟಾರ್ ಸೈಕಲ್ ಇದರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

3) ವಶಪಡಿಸಿಕೊಳ್ಳಲಾಗಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಮತ್ತು ವಾಹನ ಅಕ್ರಮದಲ್ಲಿ ಶಾಮೀಲಾಗದಂತೆ ವಾಹನದ ಮಾಲೀಕರು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

<u>ಪ್ರಾ.ಸಾ-1:-</u>

ಪ್ರಕರಣದಲ್ಲಿ ಪಿರ್ಯಾಧುದಾರರೊಂದಿಗೆ ಸಹ ಸಾಕ್ಷಿದಾರರಾದ ಶ್ರೀ.ರಾಧಕೃಷ್ಣ ಹೆಚ್.ಸಿ ನಂ:1391, ಸುಳ್ಯ ಪೊಲೀಸ್ ಠಾಣೆ, ಸುಳ್ಯ ಇವರು ದಿ:21-10-2009ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ಪೊಲೀಸರು ಉಪ ನಿರೀಕ್ಷಕರು ಇವರ ಜೊತೆಯಲ್ಲಿ ಸುಳ್ಯ ಪೊಲೀಸ್ ಠಾಣೆ ಸಿಬ್ಬಂಧಿಗಳು ಹಾಗೂ ಪಂಚರೊಂದಿಗೆ ತಕ್ಷೀರು ಸ್ಥಳಕ್ಕೆ ಧಾವಿಸಿ ಮೋಟಾರು ಸೈಕಲ್ ಸಂ: KA-21-J-8782 ಇದರಲ್ಲಿ ಇಬ್ಬರು ವ್ಯಕ್ತಿಗಳು ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಕಂಡು ಅವರನ್ನು ಸುತ್ತುವರಿದ್ದು ಪಂಚರ ಸಮಕ್ಷಮ ಅವರು ಹೊಂದಿರುವ ಪಾಲಿಥೀನ್ ಚೀಲದ ಕಟ್ಟನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಕಬ್ಸ್ ಚಾಯ್ಸ್ ಫೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಮತ್ತು ಮದ್ಯ ಮಾರಾಟದಿಂದ ಬಂದಂತಹ ರೂ.566/- ನಗದು ಇರುವುದನ್ನು ಪತ್ತೆಹಚ್ಚಿ, ಈ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ಇದು ಒಂದು ಅಕ್ರಮ ಮದ್ಯ ಸಾಗಾಟವೆಂದು ಖಚಿತಪಡಿಸಿಕೊಂಡು ವಾಹನ ಮೋಟಾರು ಸೈಕಲ್ ಸಂ: KA-21-J-8782 ಮತ್ತು ಮದ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪಂಚರ ಸಹಿಮಾಡಿರುವ ಚೀಟಿಗಳನ್ನು ಜಪ್ತುಪಡಿಸಿ ಕೊಂಡಿರುವ ಸೊತ್ತುಗಳಿಗೆ ಅಂಟಿಸಿ ಮದ್ಯದ ಪ್ರತಿ ಬ್ರಾಂಡಿನಿಂದ ತಲಾ ಒಂದೊಂದು ಬಾಟಲಿಗಳಂತೆ ಒಟ್ಟು 2 ಬಾಟಲಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಪ್ರತ್ಯೇಕಿಸಿ ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿ ಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ , ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ. 566/-ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ, ವಾಹನ KA-21-J-8782 ಇದಕ್ಕೆ ಇ ಎಂದು ಗುರುತು ನೀಡಿರುವುದಾಗಿಯೂ, ಈ ಬಗ್ಗೆ ಸ್ಥಳದಲ್ಲಿಯೇ ತಯಾರಿಸಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ-1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ-1 ಎ ಎಂದು ಗುರುತಿಸಿರುತ್ತಾರೆ. ಅನಂತರ ಜಪ್ತುಪಡಿಸಿಕೊಂಡ ಸೊತ್ತುಗಳ ಸಮೇತ ಅರೋಪಿಯಾದ ಯತೀಶ್ ಬಿನ್:ಕುಂಜಣ್ಣ ಭಂಡಾರಿ ಮತ್ತು ಕುಂಞಕಣ್ಣನ್ ಬಿನ್:ಕುಂಞ ರಾಮ ಇವರುಗಳನ್ನು ದಸ್ತಗಿರಿ ಮಾಡಿ ಕೊಂಡು ಠಾಣೆಗೆ ಕರೆದೊಯ್ದು ಮುಂದಿನ ಕ್ರಮವನ್ನು ಪಿ.ಎಸ್.ಐ ರವರು ಠಾಣೆಯಲ್ಲಿ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

<u>ಪ್ರಾ.ಸಾ-2</u>

ಪ್ರಕರಣದ ಇನ್ನೊರ್ವ ಸಹ ಸಾಕ್ಷಿದಾರರಾದ ಶ್ರೀ.ಜಗನ್ನಾಥ.ಪಿ.ಸಿ ನಂ:1741 ,ಸುಳ್ಯ ಪೊಲೀಸ್ ಠಾಣೆ.ಸುಳ್ಯ ಇವರು ದಿ:19-1-2010ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ , ದಿನಾಂಕ:10-2-2009ರಂದು ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಮಂಡೆಕೋಲು ಪಂಚಾಯತ್ ನೀರಿನ ಟ್ಯಾಂಕಿನ ಬಳಿ ಇಬ್ಬರು ವ್ಯಕ್ತಿಗಳು ಮೋಟಾರು ಸೈಕಲ್ ನಲ್ಲಿ ಮದ್ಯದ ಬಾಟಲಿಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಪೊಲೀಸ್ ಉಪ ನಿರೀಕ್ಷಕರಿಗೆ ಬಂದ ಮಾಹಿತಿ ಮೇರೆಗೆ ಆ ದಿನ ಸಂಜೆ 7-00 ಗಂಟೆ ಸಮಯಕ್ಕೆ ಇತರ ಸಿಬ್ಬಂಧಿಗಳೊಂದಿಗೆ ಮಾಹಿತಿ ಸ್ಥಳಕ್ಕೆ ತೆರಳಿದಾಗ ಬೈಕಿನ ಮೇಲೆ ಪಾಲಿಥೀನ್ ಚೀಲ ವೊಂದನ್ನು ಇಟ್ಟುಕೊಂಡು ಇಬ್ಬರು ವ್ಯಕ್ತಿಗಳು ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದನ್ನು ಕಂಡು ಅವರನ್ನು ಪಂಚಸಾಕ್ಷಿದಾರರ ಸಮಕ್ಷಮ ಸುತ್ತುವರಿದ್ದು ಪಾಲಿಥೀನ್ ಚೀಲದ ಕಟ್ಟನ್ನು ಬಿಡಿಸಿ ನೋಡಲಾಗಿ ಅದರಲ್ಲಿ ಕಬ್ಸ್ ಚಾಯ್ಸ್ ಫೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಮತ್ತು ಮದ್ಯ ಮಾರಾಟದಿಂದ ಬಂದಂತಹ ರೂ.566/- ನಗದು ಇರುವುದನ್ನು ಪತ್ತೆಹಚ್ಚಿ, ಈ ಬಗ್ಗೆ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ವಾಹನ ಮೋಟಾರು ಸೈಕಲ್ ಸಂ: KA-21-J-8782 ಮತ್ತು ಮದ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪಂಚರ ಸಹಿ ಮಾಡಿರುವ ಚೀಟಿಗಳನ್ನು ಜಪ್ತುಪಡಿಸಿ ಕೊಂಡಿರುವ ಸೊತ್ತುಗಳಿಗೆ ಅಂಟಿಸಿ ಮದ್ಯದ ಪ್ರತಿ ಬ್ರಾಂಡಿನಿಂದ ತಲಾ ಒಂದೊಂದು ಬಾಟಲಿಗಳಂತೆ ಒಟ್ಟು 2 ಬಾಟಲಿಗಳನ್ನು ರಸಾಯನಿಕ ವಿಶ್ಲೇಷಣೆಗೆ ಪ್ರತ್ಯೇಕಿಸಿ ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ.566/-ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ, ವಾಹನ KA-21-J-8782

ಇದಕ್ಕೆ ಇ ಎಂದು ಗುರುತು ನೀಡಿರುವುದಾಗಿಯೂ, ಈ ಬಗ್ಗೆ ಸ್ಥಳದಲ್ಲಿಯೇ ತಯಾರಿಸಿಲಾದ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ-1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ-1 ಬಿ ಎಂದು ಗುರುತಿಸಿರುತ್ತಾರೆ. ಅನಂತರ ಜಪ್ತು ಪಡಿಸಿಕೊಂಡ ಸೊತ್ತುಗಳ ಸಮೇತ ಆರೋಪಿಯನ್ನು ಠಾಣೆಗೆ ತಂದು ಮುಂದಿನ ಕ್ರಮವನ್ನು ಪಿ.ಎಸ್.ಐ ರವರು ಠಾಣೆಯಲ್ಲಿ ಕೈಗೊಂಡಿರುತ್ತಾರೆ ಎಂದು ಸಾಕ್ಷ್ಯ ನೀಡುತ್ತಾ ಜಪ್ತುಪಡಿಸಿಕೊಂಡ ಮೋಟಾರು ಸೈಕಲ್ ಮತ್ತು ಇತರ ಸೊತ್ತುಗಳನ್ನು ನೋಡಿದರೆ ಗುರುತಿಸಬಲ್ಲೆ ಮತ್ತು ಮದ್ಯ ಮಾರಾಟಕ್ಕೆ ಮೋಟಾರು ಸೈಕಲ್‌ನ್ನು ಉಪಯೋಗಿಸಿದ ಕಾರಣ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಪ್ರಾದಿಕಾರದ ಮುಂದೆ ವಿನಂತಿಸಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಾ.ಸಾ-3

ಪ್ರಕರಣದ ಪಿರ್ಯಾದುದಾರರಾದ ಶ್ರೀ. ಪಿ.ಡಿ ಸವಿತ್ರ ತೇಜ,ಪೊಲಿಸ್ ಉಪ ನಿರೀಕ್ಷಕರು ಇವರು ದಿ:17-2-2011ರಂದು ಪ್ರಾದಿಕಾರದ ಮುಂದೆ ಸಾಕ್ಷಿ ನೀಡುತ್ತಾ , ತಾನು ಸುಳ್ಯ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ದಿ:10-2-2009 ರಂದು ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ನೀರಿನ ಟ್ಯಾಂಕಿನ ಬಳಿ ಇಬ್ಬರು ವ್ಯಕ್ತಿಗಳು ಬೈಕಿನಲ್ಲಿ ಪಾಲಿಥೀನ್ ಚೀಲವೊಂದರಲ್ಲಿ ಮದ್ಯವನ್ನು ಹೊಂದಿ ಮಾರಾಟ ಮಾರುತ್ತಿರುವ ಬಗ್ಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂಧಿ ಮತ್ತು ಪಂಚರೊಂದಿಗೆ ತಕ್ಷೀರು ಸ್ಥಳಕ್ಕೆ ಧಾಪಿಸಿದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಮೋಟಾರು ಸೈಕಲ್ ಸಂ: KA-21-J-8782 ಮೇಲೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದು ಅವರನ್ನು ವಿಚಾರಿಸಲಾಗಿ ಒಬ್ಬ ಯತೀಶ್ ಮತ್ತು ಇನ್ನೊಬ್ಬ ಕುಂಞಕಣ್ಣನ್ ಎಂದು ತಿಳಿದುಬಂದು ಅವರ ವಶದಲ್ಲಿದ್ದ ಪಾಲಿಥೀನ್ ಚೀಲವನ್ನು ಪಂಚರ ಸಮಕ್ಷಮ ಶೋಧಿಸಲಾಗಿ ಚೀಲದಲ್ಲಿ ಕಬ್ಸ್ ಚಾಯ್ಸ್ ಪೈನ್ ವಿಸ್ಕಿ ಎಂಬ 180 ಎಂಎಲ್‌ನ 22 ಬಾಟಲಿಗಳು ಮತ್ತು ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ 14 ಬಾಟಲಿಗಳಲ್ಲಿ ಮದ್ಯ ಇರುವುದು ಪತ್ತೆಯಾಗಿ ಸದ್ರಿ ಮದ್ಯವನ್ನು ಮಾರಾಟ ಮಾಡಲು ಯಾವುದೇ ಪರವಾನಿಗೆ ಪಡೆಯದೇ ಹೆಚ್ಚಿನ ಲಾಭಕ್ಕಾಗಿ ಅವುಗಳನ್ನು ಮಾರಾಟ ಮಾಡಲು ಹೊಂದಿರುವುದಾಗಿ ತಿಳಿಸಿರುವ ಮೇರೆಗೆ ಇದೊಂದು ಅಕ್ರಮ ಮದ್ಯ ಮಾರಾಟ ಎಂದು ಖಚಿತ ಪಡಿಸಿಕೊಂಡು ಜಪ್ತುಪಡಿಸಿಕೊಳ್ಳಲಾದ 2 ಬ್ರಾಂಡ್‌ನ ಮದ್ಯದ ಬಾಟಲಿಗಳಿಂದ ತಲಾ ಒಂದೊಂದರಂತೆ ಒಟ್ಟು 2 ಬಾಟಲಿಗಳನ್ನು ಸ್ಯಾಂಪಲ್ ತೆಗೆದು ಬಿಳಿ ಬಟ್ಟೆ ಸುತ್ತಿ ಅರಗು ಸೀಲು ಹಾಕಿ ಪಂಚರ ಸಹಿ ಇರುವ ಚೀಟಿ ಅಂಟಿಸಿ ಸದ್ರಿ ಮದ್ಯದ ಬಾಟಲಿಗಳಿಗೆ ಎ ಮತ್ತು ಬಿ ಎಂದು ಗುರುತು ನೀಡಿರುವುದಾಗಿ , ಮದ್ಯದ ಬಾಟಲಿ ತುಂಬಿದ ಪಾಲಿಥೀನ್ ಚೀಲಕ್ಕೆ ಸಿ ಎಂಬ ಗುರುತು ನೀಡಿರುವುದಾಗಿಯೂ ,ಮದ್ಯ ಮಾರಾಟ ಮಾಡಿ ಅರೋಪಿಗಳು ಸಂಗ್ರಹಿಸಿದ ಮೊತ್ತ ರೂ 566/-ಕ್ಕೆ ಡಿ ಎಂದು ಗುರುತು ನೀಡಿರುವುದಾಗಿಯೂ , ವಾಹನ KA-21-J-8782 ಇದಕ್ಕೆ ಇ ಎಂದು ಗುರುತು ನೀಡರುವುದಾಗಿಯೂ, ಈ ಬಗ್ಗೆ ತಯಾರಿಸಿದ ಮಹಜರನ್ನು ಪಂಚರ ಸಮಕ್ಷಮ ಸ್ಥಳದಲ್ಲಿಯೇ ಜೀಪಿನ ಬೆಳಕಿನ ಸಹಾಯದಿಂದ ಬರೆಯಲಾಯಿತು ಎಂದು ಸಾಕ್ಷ್ಯ ನೀಡಿ ಮಹಜರನ್ನು ನಿಶಾನೆ ಪಿ-1 ಎಂದು , ಅದರ ಮೇಲಿನ ಸಾಕ್ಷ್ಯ ಸಹಿಯನ್ನು ನಿಶಾನೆ ಪಿ-1 ಸಿ ಎಂದು ಗುರುತಿಸಿರುತ್ತಾರೆ. ಅನಂತರ ಅರೋಪಿಗಳನ್ನು ಸೊತ್ತಿನೊಂದಿಗೆ ಠಾಣೆಗೆ ಕರೆದು ಕೊಂಡು ಠಾಣಾ ಅಕ್ರಮ ಸಂ: 37/2009ರಂತೆ ಕರ್ನಾಟಕ ಅಬಕಾರಿ ಕಾಯಿದೆಯಡಿ ಪ್ರಕರಣ ದಾಖಲಿಸಿ ಪ್ರಥಮ ಮಾಹಿತಿ ವರದಿ ಮತ್ತು ವಶಪಡಿಸಿದ ಸೊತ್ತನ್ನು ಸೊತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿರುವುದಾಗಿಯೂ ,ನಿವೇದನಾ ವರದಿಯನ್ನು ನಿಶಾನೆ ಪಿ-2 ಎಂದು,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-2 ಎ ಎಂದು ,ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-3 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-3 ಎ ಎಂದು , ಮಾಲು ಪಟ್ಟಿಯನ್ನು ನಿಶಾನೆ ಪಿ-4 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-4 ಎ ಎಂದು .ವಶಪಡಿಸಿಕೊಂಡ ಸೊತ್ತುಗಳನ್ನು ಮುಟ್ಟುಗೋಲು ವ್ಯವಹಣೆಗೆ ಅಧಿಕೃತ ಅಧಿಕಾರಿಗಳಿಗೆ ಹಸ್ತಾಂತರಿಸಲು ನ್ಯಾಯಾಲಯದಿಂದ ಅನುಮತಿ ಕೋರಿರುವುದಾಗಿಯೂ, ದಸ್ತಗಿರಿ ಮಾಡಿರುವ ಅರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿಯೂ , ದಿ: 28-3-2009ರಂದು ವಶಪಡಿಸಿ ಕೊಂಡ ಸೊತ್ತುಗಳನ್ನು ಮಾನ್ಯ ಅಧಿಕೃತ ಅಧಿಕಾರಿಗಳಿಗೆ ಹಸ್ತಾಂತರಿಸುವ ಬಗ್ಗೆ ಅದೇಶಕ್ಕಾಗಿ ವರದಿ ಸಲ್ಲಿಸಿರುವುದಾಗಿಯೂ ,ಸಾಕ್ಷಿ ನೀಡಿ ಸದ್ರಿ ವರದಿಯನ್ನು ನಿಶಾನೆ ಪಿ-5 ಎಂದು ,ಅದರ ಮೇಲಿನ ಸಹಿಯನ್ನು ನಿಶಾನೆ ಪಿ-5 ಎ ಎಂದು ಗುರುತಿಸಿರುತ್ತಾರೆ. ಹಾಗೂ ಅನಂತರದಲ್ಲಿ ದಿ:28-4-2009 ರಂದು ಪ್ರಕರಣದ ಮುಂದಿನ ತನಿಖೆಯನ್ನು ಕೈಗೊಂಡ ತನಿಖಾದಿಕಾರಿಗಳು ಸೊತ್ತನ್ನು ಅಬಕಾರಿ ಉಪ ನಿರೀಕ್ಷಕರು, ಸುಳ್ಯ ಇವರಿಗೆ ಹಸ್ತಾಂತರಿಸಿರುವುದಾಗಿಯೂ ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಖಚಿತ ವರ್ತಮಾನ ತನಗೆ ದಿ:10-2-2009ರಂದು ಖುದ್ದಾಗಿ ಬಂದಿದ್ದು,ಸದ್ರಿ ದಿನಾಂಕದಂದು ದಾಳಿಗೆ ಹೋದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಲಾಗಿದ್ದು ಅದನ್ನು ಅಗತ್ಯವಿದ್ದಲ್ಲಿ ಅಧಿಕೃತ ಅದಿಕಾರಿಗಳಿಗೆ ಹಾಜರುಪಡಿಸಬಹುದು, ದಾಳಿಗೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇನೆ, ಜೀಪನ್ನು ಇಲಾಖಾ ಚಾಲಕ ಕಣ್ಣನ್ ಎಂಬವರು ಚಲಾಯಿಸುತ್ತಿದ್ದರು, ಪೊಲೀಸ್ ತಕ್ಷೀರು ಸ್ಥಳ ಸುಮಾರು 15 ಕಿಮೀ ಅಂತರದಲ್ಲಿದೆ, ತಕ್ಷೀರು ಸ್ಥಳದಲ್ಲಿ ಅರೋಪಿಗಳ ಹತ್ತಿರವೇ ಜೀಪನ್ನು ನಿಲ್ಲಿಸಲಾಗಿದೆ , ತಕ್ಷೀರು ಸ್ಥಳದ ಗುರುತು ನೀರಿನ ಟ್ಯಾಂಕ್ ಬಸ್ ಸ್ಟಾಪ್‌ನಿಂದ ಎಷ್ಟು ದೂರ ಇದೆ ಎಂದು ಈಗ ಹೇಳಲು ನೆನಪಿರುವುದಿಲ್ಲ, ಜೀಪನ್ನು ಪಶ್ಚಿಮದ ಕಡೆಗೆ ಅಂವರೆ ಅರೋಪಿಗಳ ಎದುರಿಗೆ ನಿಲ್ಲಿಸಲಾಗಿರುತ್ತದೆ, ಅರೋಪಿಗಳನ್ನು ಸುತ್ತುವರಿದ್ದು ಎಲ್ಲರೂ ನೋಡಿ ವಶಕ್ಕೆ ತೆಗೆದುಕೊಳ್ಳಲಾಗಿದೆ, ಸುತ್ತುವರಿದ ಕಾರಣ ಅವರು ಓಡಲು ಸಾದ್ಯವಾಗಿರಲಿಲ್ಲ, ತಕ್ಷೀರು ಸ್ಥಳದ ಸುತ್ತಮುತ್ತ ಅಂಗಡಿ ಮನೆಗಳು ಇತ್ತೋ ಎಂದು ಹೇಳಲು ಈಗ ನೆನಪಿಗೆ ಬರುವುದಿಲ್ಲ, ತಕ್ಷೀರು ಸಂದರ್ಭ ಒಬ್ಬ ಗಿರಾಕಿಯನ್ನು ನೋಡಿದ ನೆನಪಿದ್ದು ಅತನು ಓಡಿಹೋಗಿರುತ್ತಾನೆ, ತಕ್ಷೀರು ಸ್ಥಳದಲ್ಲಿ ಅರೋಪಿಗಳನ್ನು ವಿಚಾರಿಸುವಾಗ ಜನ ಸೇರಿದ್ದಾರೋ ಇಲ್ಲವೋ ಎಂದು ಈಗ ಹೇಳಲು ನೆನಪು ಬರುವುದಿಲ್ಲ, ಪಂಚರುಗಳನ್ನು ಸ್ಥಳದಲ್ಲಿ ಬರಮಾಡಿಕೊಳ್ಳಲಾಗಿರುತ್ತದೆ, ವಶಪಡಿಸಿಕೊಂಡ

ಪಾಲಿಥೀನ್ ಚೀಲ ಬಿಳಿ ಬಣ್ಣದಾಗಿದ್ದು ಅದಕ್ಕೆ ಕೈಗಳು ಇತ್ತೋ ಇಲ್ಲವೋ ಎಂಬ ಬಗ್ಗೆ ಈಗ ಹೇಳಲು ಸಾಧ್ಯವಿಲ್ಲ, ಅದರೆ ಚೀಲವನ್ನು ನೋಡಿದರೇ ಗುರುತಿಸಬಲ್ಲೇ , ಮೋಟಾರು ಬೈಕನ್ನು ಸೈಡ್ ಸ್ಟಾಂಡ್ ಹಾಕಿ ಅರೋಪಿಗಳು ನಿಲ್ಲಿಸಿದ್ದರು. ತಕ್ಷೀರು ಸ್ಥಳ ತಲುಪುವಾಗ ರಾತ್ರಿಯಾಗಿದ್ದು ಕತ್ತಲು ಇತ್ತು, ಮದ್ಯ ಮಾರಾಟಕ್ಕೆ ಪರವಾನಿಗೆ ಇಲ್ಲದ ಬಗ್ಗೆ ಅರೋಪಿಗಳೇ ಖುದ್ದಾಗಿ ಹೇಳಿರುವುದರಿಂದ ಪರವಾನಿಗೆ ಇರಲಿಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ .ತಕ್ಷೀರು ಸ್ಥಳದ ವಾಟರ್ ಟ್ಯಾಂಕ್‌ನ ಅಕ್ಕಪಕ್ಕ ಒಂದು ಸುಳ್ಯಕ್ಕೆ ಮತ್ತು ಇನ್ನೊಂದು ಕಾಸರಗೋಡಿಗೆ ಹೋಗುವ ರಸ್ತೆಗಳಿರುತ್ತದೆ. ಈ ಪ್ರಕರಣದಲ್ಲಿ ಮುಂದಿನ ತನಿಖೆ ಮಾಡದೇ ಇರುವ ಕಾರಣ ಪಂಚರ ಹೇಳಿಕೆಗಳನ್ನು ಮಾಡಿದೆನೋ ಇಲ್ಲವೋ ಎಂಬ ಬಗ್ಗೆ ಹೇಳಲು ಈಗ ಸಾಧ್ಯವಿಲ್ಲ, ಅರೋಪಿಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಇರುವ ಕಾರಣ ತಕ್ಷೀರು ಸಮಯದಲ್ಲಿ ಮಾನ್ಯ ನ್ಯಾಯಿಕ ದಂಡಾಧಿಕಾರಿಯವರಿಂದ ಸರ್ಚ್ ವಾರೆಂಟ್ ಪಡೆಯಲು ಸಾಧ್ಯವಾಗಿರುವುದಿಲ್ಲ, ಈ ಬಗ್ಗೆ ಕಾರಣಗಳನ್ನು ದಾಖಲಿಸಿ ರೆಕಾರ್ಡ್ ಆಫ್ ರಿಜನ್ಸ್‌ನ್ನು ಸ್ಥಳದಲ್ಲಿ ತಯಾರು ಮಾಡಿಲ್ಲ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ,ಅರೋಪಿಗಳಿಂದಲೇ ಮದ್ಯದ ಬಾಟಲಿಗಳಿರುವ ಪಾಲಿಥೀನ್ ಚೀಲಗಳನ್ನು ಓಪನ್ ಮಾಡಿಸಿರುತ್ತೇನೆ ,ಮದ್ಯದ ಬಾಟಲಿಗಳು ಪ್ಲಾಸ್ಟಿಕ್ ಯಾ ಗಾಜಿನದೋ ಎಂಬ ಬಗ್ಗೆ ಈಗ ಹೇಳಲು ನೆನಪಿರುವುದಿಲ್ಲ, ಬಾಟಲಿಗಳ ಮೇಲಿರುವ ಮುಚ್ಚಳ ಯಾವ ಬಣ್ಣದು ಎಂದು ಈಗ ಹೇಳಲು ಸಾಧ್ಯವಿಲ್ಲ ,ಮಹಜರನ್ನು ತನಿಖಾ ಸಹಾಯಕರು ಬರೆದಿದ್ದು ಅವರ ಹೆಸರು ನೆನಪಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾ ತಕ್ಷಿರು ಸ್ಥಳಕ್ಕೆ ಹೋಗಲೇ ಇಲ್ಲ, ಯಾವುದೇ ಪಂಚ ನಾಮೆ ತಯಾರಿಸಿಲ್ಲ, ಯಾವುದೇ ವಸ್ತು ಗಳನ್ನು ವಶಪಡಿಸಿಲ್ಲ, ಹಾಗೂ ಅರೋಪಿಗಳನ್ನು ದಸ್ತಗಿರಿ ಮಾಡಿಲ್ಲ, ಅರೋಪಿಗಳಿಗೂ ಈ ಮೊಕದ್ದಮೆಗೂ ಯಾವುದೇ ಸಂಬಂಧಪಿಲ್ಲ , ಮೇಲಾಧಿಕಾರಿಗಳ ಒತ್ತಡಕ್ಕೆ ಮಣಿದು ಸುಳ್ಳು ಮೊಕದ್ದಮೆ ಹಾಕಲಾಗಿದೆ , ದಾಳಿಗೆ ಹೋಗುವ ಸಂದರ್ಭ ಕೆಲವೊಮ್ಮೆ ಅನಾಮಧೇಯ ಮದ್ಯ ಸಿಗುತ್ತದೆ ಎಂದು ಸೂಚಿಸುವುದು ಇತ್ಯಾದಿ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಸರಿಯಲ್ಲ ಎಂದು ನಿರಾಕರಣ ಉತ್ತರ ನೀಡಿರುತ್ತಾರೆ.

ಪ್ರಾ.ಸಾ –4

ಪ್ರಕರಣದ ತನಿಖಾದಿಕಾರಿಗಳಾದ ಶ್ರೀ.ಕೃಷ್ಣ ನಾಯ್ಕ್ ನಿವೃತ್ತ ಅಬಕಾರಿ ನಿರೀಕ್ಷಕರು ಇವರು ದಿನಾಂಕ:17–2–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಮೊಕದ್ದಮೆಗೆ ಸಂಬಂಧಪಟ್ಟ ಸೊತ್ತುಗಳಾದ ಮೋಟಾರು ಸೈಕಲ್, ವಿಸ್ಕಿ ಬಾಟಲಿ ಮತ್ತು ನಗದು ರೂ.566/–ನ್ನು ಮುಂದಿನ ವಿಲೇಯ ಬಗ್ಗೆ ಅದಿಕೃತ ಅಧಿಕಾರಿಗಳ ಅದೇಶದಂತೆ ದಿ: 28–4–2009ರಂದು ಸುಳ್ಯ ಪೊಲೀಸ್ ಠಾಣೆಯಿಂದ ಸ್ವೀಕರಿಸಿಕೊಂಡು ಈ ಬಗ್ಗೆ ಮಾನ್ಯ ಅಧಿಕೃತ ಅಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ, ಪುತ್ತೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ವಾಹನದ ಮಾಲೀಕತ್ವದ ಬಗ್ಗೆ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಮತ್ತು ಮೌಲ್ಯ ಮಾಪನ ವರದಿ ಪಡೆದಿದ್ದು ಅದನ್ನು ಅನುಕ್ರಮವಾಗಿ ನಿಶಾನೆ ಪಿ–6 ಮತ್ತು 7 ಎಂದೂ, ಫಿರ್ಯಾದುದಾರರಿಂದ ಪಡೆಯಲಾದ ವಿಶ್ಲೇಷಣಾ ವರದಿಯ ಪ್ರತಿಯನ್ನು ನಿಶಾನೆ ಪಿ – 8 ಎಂದು ಗುರುತಿಸಿ ಸಾಕ್ಷ್ಯ ನೀಡಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೊತ್ತುಗಳನ್ನು ಸ್ವೀಕರಿಸಿಲ್ಲ, ಸುಳ್ಯ ಪೊಲೀಸ್ ಠಾಣೆಯಿಂದ ಮೊಕದ್ದಮೆಯಲ್ಲಿ ಅಮಾನತ್ತು ಸೊತ್ತುಗಳನ್ನು ತೆಗೆದುಕೊಂಡ ಬಗ್ಗೆ ಅದಿಕೃತ ಅದಿಕಾರಿಗಳ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ ಎಂದು ಸೂಚಿಸಿರುವುದು ಸುಳ್ಳು ,ವಾಹನದ ಮಾಲೀಕತ್ವದ ಬಿ ರಜಿಸ್ಟ್ರಾರ್ ವಹಿ, ಮೌಲ್ಯಮಾಪನ ವರದಿ ಬಗ್ಗೆ ಪುತ್ತೂರು ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದಿಲ್ಲ ಹಾಗೂ ಮೊಕದ್ದಮೆಯಲ್ಲಿ ಸರಿಯಾದ ತನಿಖೆ ಮಾಡಿರುವುದಿಲ್ಲ ಎಂಬಿತ್ಯಾಧಿ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಸರಿಯಲ್ಲ ಎಂದು ತಮ್ಮ ನಿರಾಕರಣ ಉತ್ತರ ನೀಡಿರುತ್ತಾರೆ.

ಪ್ರಾ.ಸಾ –5

ಪ್ರಕರಣದ ಮುಂದಿನ ತನಿಖಾದಿಕಾರಿಗಳಾದ ಶ್ರೀ.ಎಸ್.ತಮ್ಮ ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ–1 ಇವರು ದಿನಾಂಕ:21–4–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ, ತಕ್ಷೀರಿಗೆ ಸಂಬಂಧಪಟ್ಟಂತೆ ಜಪ್ತುಪಡಿಸಿಕೊಳ್ಳಲಾದ ಮದ್ಯ,ವಾಹನ ಹಾಗೂ ನಗದು ರೂ.566/–ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಪಾರಸ್ಸು ಮಾಡಿ ಬಗ್ಗೆ ಅದಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ ಜಿಲ್ಲೆ ಮಂಗಳೂರು ಇವರಿಗೆ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಮುಖಾಂತರ ರಸಾಯನಿಕ ವಿಶ್ಲೇಷಣಾ ವರದಿ, ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ,ವಾಹನದ ಮೌಲ್ಯ ಮಾಪನ ಇತ್ಯಾದಿ ದಾಖಲೆ ಪ್ರತಿಗಳೊಂದಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನೀಡುತ್ತಾ ಸದ್ರಿ ವರದಿಯನ್ನು ನಿಶಾನೆ ಪಿ–9ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–9ಎ ಎಂದು ಗುರುತಿಸಿರುತ್ತಾರೆ.

ರಕ್ಷಣಾ ಪರ ವಕೀಲರು ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

ಪ್ರಕರಣದಲ್ಲಿ ಪ್ರಾ.ಸಾ–1 ರಿಂದ 5 ರವರೆಗೆ ಇಲಾಖಾ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ ರಕ್ಷಣಾ ಸಾಕ್ಷಿಗಳನ್ನು ಪ್ರಾಧಿಕಾರದ ಮುಂದೆ ಹಾಜರುಪಡಿಸುವಂತೆ ಹಲವಾರು ಬಾರಿ ಕಾಲಾವಕಾಶ ನೀಡಿ,ತದನಂತರದಲ್ಲಿ ವಾದ ಮಂಡನೆಗೂ ಕಾಲಾವಕಾಶ ನೀಡಲಾಗಿದ್ದರೂ ವಾಹನದ ಮಾಲೀಕರಾಗಲೀ, ರಕ್ಷಣಾ ಪರ ವಕೀಲರಾಗಲೀ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದರಿಂದ ಸಹಾಯಕ ಅಭಿಯೋಗ ನಿರ್ದೇಶಕರ ವಾದವನ್ನು ಆಲಿಸಲಾಯಿತು.

ಪ್ರಕರಣವು ಮುಟ್ಟುಗೋಲು ನಡವಳಿಯಾಗಿದ್ದು ಇದು ಯಾವುದೇ ಕ್ರಿಮಿನಲ್ ನಡವಳಿಯಾಗಿರುವುದಿಲ್ಲ ಹಾಗೂ ಮುಟ್ಟುಗೋಲು ನಡವಳಿಯಲ್ಲಿ ಸ್ವತಂತ್ರ ಸಾಕ್ಷಿಗಳನ್ನು ಒದಗಿಸಲೇ ಬೇಕೆಂಬುದನ್ನು ಕಡ್ಡಾಯಗೊಳಿಸುವುದು ಸಮ್ಮತವಾಗುವುದಿಲ್ಲ. ಏಕೆಂದರೆ ಸ್ವತಂತ್ರ

ಸಾಕ್ಷಿದಾರರುಗಳ ಹೇಳಿಕೆಗಳು ಅಭಿಯೋಗದ ಪರ ಇರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.ಪ್ರಕರಣದ ಸಂದರ್ಭದಲ್ಲಿ ಕಲಂ 54ರಡಿ ಶೋಧನಾ ವಾರೆಂಟನ್ನು ಪಡೆಯದೇ ಇರುವುದು ಅಭಿಯೋಗದ ವಿಫಲತೆ ಎಂಬುದನ್ನು ಕಕ್ಷಿದಾರರು ಎತ್ತಿ ತೋರಿಸುವಂತಿಲ್ಲ ಏಕೆಂದರೆ ಕಲಂ 54ರಡಿ ಶೋಧನಾ ವಾರೆಂಟನ್ನು ಪಡೆಯುವುದು ಅಜ್ಞಾಪಕವಾಗಿರುವುದಿಲ್ಲ ಎಂಬುದನ್ನು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ವ್ಯಾಖ್ಯಾನಿಸಬೇಕಾಗಿರುತ್ತದೆ. ಶೋಧನಾ ವಾರೆಂಟ್‌ಗಳನ್ನು ಪಡೆಯಲು ವಿಫಲರಾದ ಬಗ್ಗೆ ಕಾರಣಗಳನ್ನು ದಾಖಲಿಸದೇ ಇರುವುದು ಕೇವಲ ಕಾನೂನಿನ ಪ್ರಕ್ರಿಯೆಯಲ್ಲಿ ಒಂದು ಅನಿಯಮತೆಯಾಗಿದ್ದು ಕೇವಲ ಅದೇ ಒಂದು ಕಾರಣದಡಿ ಇಡೀ ಶೋಧನೆಯನ್ನು ಅಥವಾ ಮುಟ್ಟುಗೋಲು ವ್ಯವಹಣೆಯನ್ನು ಅಥವಾ ಪ್ರಾಧಿಕಾರವು ಮಾಡಿದ ಅಂತಿಮ ಮುಟ್ಟುಗೋಲು ಅದೇಶವನ್ನು ಕಾನೂನಿನಡಿ ಅಸಿಂಧುವೆಂದು ಘೋಷಿಸಲು ಬರುವುದಿಲ್ಲ. ಶೋಧನೆಯನ್ನು ಮಾಡುವ ಮೊದಲು ವಾರೆಂಟ್ ಪಡೆದುಕೊಳ್ಳದೇ ಇರುವ ಬಗ್ಗೆ ಅಥವಾ ವಾರೆಂಟ್ ಪಡೆಯಲು ವಿಫಲರಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಾರಣಗಳನ್ನು ದಾಖಲಿಸದೇ ಇರುವುದು ಅರೋಪಿಯ ಹಕ್ಕಿಗೆ ಅಥವಾ ಆತನ ಹಿತಾಸಕ್ತಿಗೆ ದಕ್ಕೆಯನ್ನು ಉಂಟುಮಾಡುತ್ತದೆ ಎಂಬುದಾಗಿ ಅರೋಪಿ ತೋರಿಸಿಕೊಡಬೇಕಾಗುತ್ತದೆ. ಶೋಧನಾ ವಾರೆಂಟನ್ನು ಪಡೆಯಲೇ ಬೇಕು ಎಂಬುದು ಖಡ್ಡಾಯವಾಗಿರುವುದಿಲ್ಲ ಅಥವಾ ಅಜ್ಞಾಪಕವಾಗಿರುವುದಿಲ್ಲ. ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ವಿಫಲರಾದ ಬಗ್ಗೆ ಕಾರಣಗಳನ್ನು ನಮೂದಿದುವುದು ಇಡೀ ಶೋಧನೆ ಮತ್ತು ಅದರ ನಂತರದ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಅಂತಿಮ ಮುಟ್ಟುಗೋಲು ಅದೇಶ ಅಸಿಂಧು ಎಂದು ಘೋಷಣೆ ಮಾಡಿದರೇ ಹಾಡುಹಗಲೇ ಅಥವಾ ಕಣ್ಣೆದುರೇ ಅಕ್ರಮ ಮದ್ಯ ಸಮೇತ ಪ್ರಕರಣದ ಅಪರಾಧಿಗಳನ್ನು ಕೈಚೆಲ್ಲಬೇಕಾಗುತ್ತದೆ ಕಾನೂನನ್ನು ಅಪರಾಧಿಗಳಿಗೆ ಸಹಾಯ ವಾಗುವ ರೀತಿಯಲ್ಲಿ ಅರ್ಥಮಾಡಿಕೊಂಡಲ್ಲಿ ಇನ್ನು ಹೆಚ್ಚಿನ ಅಪರಾಧಗಳು ಆಗುವ ಸಂಭಾವ್ಯತೆಗಳು ಜಾಸ್ತಿ. ಆದುದರಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54 ರ ಹಿಂದಿನ ಉದ್ದೇಶವನ್ನು ಅರಿತು ವ್ಯಾಖ್ಯಾನಿಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗೌರವಾನ್ವಿತರಾದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪು ಸಂ: ILR: 2004:KAR:536ರ ಪುಟ ಸಂ:527ರಲ್ಲಿ ವಿವರವಾಗಿ ಪ್ರಸ್ತಾವಿಸಿರುವುದನ್ನು ವಿವರಿಸುತ್ತಾ ಸಹಾಯಕ ಅಭಿಯೋಗ ನಿರ್ದೇಶಕರು ತಮ್ಮ ವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಾ.ಸ-1 ರಿಂದ 5 ರವರ ಸಾಕ್ಷಿ ವಿಚಾರಣೆ ಯನ್ನು ನಡೆಸಲಾಗಿದ್ದು, ರಕ್ಷಣಾ ಪರ ವಕೀಲರಿಗೆ ರಕ್ಷಣಾ ಸಾಕ್ಷಿ ಒದಗಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದ್ದರೂ ರಕ್ಷಣಾ ಪರ ಸಾಕ್ಷಿಗಳನ್ನು ಒದಗಿಸಲು ವಿಫಲರಾಗಿರುವುದು ಮಾತ್ರವಲ್ಲದೇ ವಾದಮಂಡನೆಗೂ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ಸೊತ್ತುಗಳನ್ನು ಜಪ್ತುಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಅಂಶಗಳನ್ನು ಅವಲೋಕಿಸಿ ಮೋಟಾರ್ ಸೈಕಲ್ ನೊಂದಣಿ ಸಂ: KA-21-J-8782ನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ದಿ:15-5-2009ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ 42.25% ಇರುವುದಾಗಿ ಹಾಗೂ Samples are not confirming to the standards ಎಂದು ದೃಡೀಕರಿಸಲ್ಪಟ್ಟಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಆಗಿರುವುದು ಎಂದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಹಾಗೂ ತನ್ನ ವಾಹನವು ಅಕ್ರಮ ಮದ್ಯ ಸಾಗಾಣಿಕೆಯಲ್ಲಿ ಶಾಮೀಲಾಗದೇ ಇರುವ ಬಗ್ಗೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ವಾಹನದ ಮಾಲೀಕರು ತೆಗೆದುಕೊಂಡಿದ್ದಾರೆ ಎಂಬ ಅಂಶವನ್ನು ವಾಹನದ ಮಾಲೀಕರು ಸಾಬೀತುಗೊಳಿಸಬೇಕಾಗುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸನ್ನು ಖುದ್ದಾಗಿ ಜ್ಯಾರಿಗೊಳಿಸಲಾಗಿದ್ದರೂ ವಾಹನದ ಮಾಲೀಕರಿಂದಾಗಲೀ ಅಥವಾ ಅವರ ಪ್ರತಿನಿಧಿಗಳಿಂದಾಗಲೀ ಯಾವುದೇ ಸಮಜಾಯಿಷಿ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಯ ನಂತರದಲ್ಲಿ ರಕ್ಷಣಾ ಸಾಕ್ಷಿ ವಿಚಾರಣೆಗಾಗಿ ಕಾಲಾವಕಾಶ ನೀಡಲಾಗಿದ್ದರೂ ವಾಹನದ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಹಾಗೂ ವಾದ ಮಂಡನೆ ಸಂದರ್ಭದಲ್ಲಿ ಕೂಡ ರಕ್ಷಣಾ ಪರ ವಕೀಲರು ಪ್ರಾಧಿಕಾರದ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದನ್ನು ಅವಲೋಕಿಸಿದಾಗ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಸಾಕ್ಷ್ಯಾಧಾರಗಳೊಂದಿಗೆ ಹಾಜರಾಗಿ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಹಾಗೂ ಸದ್ರಿ ವಾಹನವು ಅಬಕಾರಿ ತಕ್ಷೀರಿನಲ್ಲಿ ಶಾಮೀಲಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ಅಂಶವನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಅಡಿಯಲ್ಲಿ ಹೇಳಿದಂತೆ ರುಜುವಾತು ಪಡಿಸಲು ವಿಫಲರಾಗಿರುವುದರಿಂದ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ವಾಹನದ ಮಾಲೀಕರು ಬಳಸಿರುವುದು ನಿಸ್ಸಂದೇಹ ಎಂದು ಪ್ರಾಧಿಕಾರವು ಮನಗಂಡು ಮೂರನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಹಾಗೂ ವಾಹನದಲ್ಲಿ ಜಪ್ತುಪಡಿಸಿದ ಮದ್ಯದಲ್ಲಿ ಮದ್ಯಸಾರದ ಅಂಶ ಇರುವುದು ವಿಶ್ಲೇಷಣಾ ವರದಿಯಿಂದ ದೃಡಪಟ್ಟಿರುವುದರಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ

ಮೋಟಾರ್ ಸೈಕಲ್ ನೊಂದಣಿ ಸಂ: KA-21-J-8782ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್.ದ.ಕ.ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಸುಳ್ಯ ಪೊಲೀಸ್ ಠಾಣಾ ಕ್ರೈಂ ಸಂ:37/2009, ದಿ:10–2–2009ರಲ್ಲಿ ಜಪ್ತು ಪಡಿಸಿರುವ ಮೋಟಾರ್ ಸೈಕಲ್ ನೊಂದಣಿ ಸಂ: KA–21–J–8782 ನ್ನು (ಚಾಸೀಸ್ ನಂ:MD625DF4471D98597 ಮತ್ತು ಇಂಜಿನ್ ನಂ:–0:F4D71214986) ನ್ನು ನಿಯಮ 43ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ:31–7–2009 ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿನಾಂಕ:20–10–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–1 : ಶ್ರೀ.ರಾಧಕೃಷ್ಣ, ಹೆಚ್.ಸಿ ನಂ: 1391 , ಸುಳ್ಯ ಪೊಲೀಸ್ ಠಾಣೆ

ಪ್ರಾ.ಸಾ–2 : ಶ್ರೀ.ಜಗನ್ನಾಥ ,ಪಿ.ಸಿ. ನಂ: 1741, ಸುಳ್ಯ ಪೊಲೀಸ್ ಠಾಣೆ

ಪ್ರಾ.ಸಾ 3: ಶ್ರೀ. ಪಿ.ಡಿ.ಸವಿತ್ರ ತೇಜ, ಪೊ.ಉ.ನಿ ,ಬೈಂದೂರು ಪೊಲೀಸ್ ಠಾಣೆ

ಪ್ರಾ.ಸಾ–4 : ಶ್ರೀ.ಕೃಷ್ಣ ನಾಯ್ಕ್, ನಿವೃತ್ತ ಅಬಕಾರಿ ನಿರೀಕ್ಷಕರು

ಪ್ರಾ.ಸಾ–5 : ಶ್ರೀ.ಎಸ್.ತಮ್ಮ ,ಅ.ನಿ ,ಮಂಗಳೂರು ಉಪ ವಿಭಾಗ–1

ಅನುಬಂಧ– II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ– 1 : ಮಹಜರು ಪ್ರತಿ ಮತ್ತು ನಿಶಾನೆ ಪಿ–1ಎ ,ಬಿ,ಸಿ : ಸಾಕ್ಷಿ ಗಳ ಸಹಿ

ನಿಶಾನೆ ಪಿ–2 : ಮಾನ್ಯ ಜೆ.ಎಂ.ಎಫ್ ಸಿ ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನಾ ವರದಿ

ನಿಶಾನೆ ಪಿ–2ಎ : ಅದರ ಸಾಕ್ಷಿ ಸಹಿ

ನಿಶಾನೆ ಪಿ–3 : ಪ್ರಥಮ ಮಾಹಿತಿ ವರದಿ ಮತ್ತು ನಿಶಾನೆ ಪಿ–3 ಎ : ಅದರ ಮೇಲಿನ ಸಾಕ್ಷಿ ಸಹಿ

ನಿಶಾನೆ ಪಿ–4 : ಸೊತ್ತು ಪಟ್ಟಿ ಮತ್ತು ನಿಶಾನೆ ಪಿ–4 ಎ : ಸಾಕ್ಷಿ ಸಹಿ

ನಿಶಾನೆ ಪಿ–5 : ಫಿರ್ಯಾದುದಾರರು ಅಧಿಕೃತ ಅಧಿಕಾರಿಗಳಿಗೆ ಪ್ರಕರಣ ಹಸ್ತಾಂತರ ಬಗ್ಗೆ ಕೋರಿದ ಪತ್ರ

ನಿಶಾನೆ ಪಿ–5ಎ : ಅದರ ಮೇಲಿನ ಸಾಕ್ಷಿ ಸಹಿ

ನಿಶಾನೆ ಪಿ–6:– ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ

ನಿಶಾನೆ ಪಿ–7 :– ಮೌಲ್ಯ ಮಾಪನ ವರದಿ

ನಿಶಾನೆ ಪಿ–8 : :ರಸಾಯನಿಕ ವರದಿ

ನಿಶಾನೆ ಪಿ–9 : ತನಿಖಾ ವರದಿ ಮತ್ತು ನಿಶಾನೆ ಪಿ–9 ಎ : ಅದರ ಮೇಲಿನ ಸಾಕ್ಷಿ ಸಹಿ

ಅನುಬಂಧ– III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

–ಯಾವುದು ಇರುವುದಿಲ್ಲ–

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :-

-ಯಾವುದು ಇರುವುದಿಲ್ಲ-

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1200

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/53/ಡಿಟಿಸಿಆರ್/2010-11 ದಿನಾಂಕ: 20-10-2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು

ಆರೋಪಿ

1) ಯೂಸೂಫ್ ಯಾನೆ ಇಸುಬು, ಕೋಡಪದವು, ವಿಟ್ಲ, ಬಂಟ್ವಾಳ ತಾಲೂಕು

ವಾಹನದ ಮಾಲೀಕರು

ಶ್ರೀ.ಡೆಲ್ವಿನ್ ಡಿಸೋಜ, ಬಿನ್:ಫೆಲಿಕ್ಸ್ ಡಿಸೋಜ, ರಾಂಡ್ ಹೌಸ್, ಬಂಗ್ರಕೂಳೂರು, ಮಂಗಳೂರು

ಪ್ರಕರಣದ ಮುಖ್ಯಾಂಶಗಳು:-

ದಿನಾಂಕ:07-10-2010ರಂದು ಸಂಜೆ 3-30 ಗಂಟೆ ಸಮಯಕ್ಕೆ ದೊರೆತ ಖಚಿತ ಮಾಹಿತಿಯ ಮೇರೆಗೆ ಫಿರ್ಯಾದುದಾರರಾದ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ಸಿಬ್ಬಂಧಿ ಮತ್ತು ಪಂಚರೊಂದಿಗೆ ಬಂಟ್ವಾಳ ತಾಲೂಕು ಬಾಳೆಪುಣಿ ಗ್ರಾಮದ ಮುಡಿಪು-ಪಾತೂರು ರಸ್ತೆಯಲ್ಲಿ ಇರಾ ಕಡೆ ಹೋಗುವ ಮಾರ್ಗದಲ್ಲಿ ಟಾಟಾ ಇಂಡಿಕಾ ಕಾರು ನೊಂದಣಿ ಸಂ:KA-19-Z-1636ರಲ್ಲಿ ಅಕ್ರಮವಾಗಿ 286.560 ಲೀ.ಗೋವಾ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32,34ರಂತೆ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಪತ್ತೆಯಾದ ಮದ್ಯದಿಂದ ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ಪಂಚರ ಸಮಕ್ಷಮ ಪ್ರತ್ಯೇಕಿಸಿ ,ಅರೋಪಿಯಾದ ಯೂಸೂಫ್ ಯಾನೆ ಇಸುಬು, ಕೋಡಪದವು, ವಿಟ್ಲ, ಬಂಟ್ವಾಳ ತಾಲೂಕು ಇವರ ಹಾಗೂ ವಾಹನದ ಮಾಲೀಕರ ವಿರುದ್ದ ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ,ಮಂಗಳೂರು ಇವರ ಕ್ರೈಂ ಸಂ: 38/2010, ದಿನಾಂಕ: 07-10-2010 ರಂದಿ ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಸೊತ್ತುಗಳನ್ನು ಅಬಕಾರಿ ಕಾಯಿದೆಯಡಿ ಮುಂದಿನ ವಿಲೇಯ ಬಗ್ಗೆ ಹಸ್ತಾಂತರಕ್ಕಾಗಿ ದಿ:11-10-2010ರಂದು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡು ಈ ಕೆಳಕಂಡ ಸೊತ್ತುಗಳನ್ನು ಕಾರ್ಯ ವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:03-11-2010 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಸಿಲ್ವರ್ ಬಣ್ಣದ ಟಾಟಾ ಇಂಡಿಕಾ ಕಾರು ಸಂ: KA-19-Z-1636 (ಚಾಸೀಸ್ ಸಂ: 600142CVZP279188 ಮತ್ತು ಇಂಜಿನ್ ಸಂ: 279001153804)

2) 27 ಪೆಟ್ಟಿಗೆಗಳಲ್ಲಿ 180 ಎಂಎಲ್‌ನ ತಲಾ 48ರಂತೆ ಸೊಲೋ ಪೈನ್ ಬ್ರಾಂಡಿ ಎಂಬ ಒಟ್ಟು 1,296 ಬಾಟಲಿಗಳಲ್ಲಿ -233.280 ಲೀ . ಗೋವಾ ಮದ್ಯ .

3) 4 ರಟ್ಟಿನ ಪೆಟ್ಟಿಗೆಗಳಲ್ಲಿ 750 ಎಂಎಲ್‌ನ ತಲಾ 12ರಂತೆ ಗ್ರೀನ್ ಲೇಬಲ್ ಗ್ರೇಫ್ ಬ್ರಾಂಡಿ ಎಂಬ ಒಟ್ಟು 48 ಬಾಟಲಿಗಳಲ್ಲಿ -36.000 ಲೀ ಗೋವಾ ಮದ್ಯ .

4) ಒಂದು ಕೈಚೀಲದಲ್ಲಿ 180 ಎಂಎಲ್‌ನ ಸೊಲೋ ಪೈನ್ ಬ್ರಾಂಡಿಯ 96 ಬಾಟಲಿಗಳಲ್ಲಿ -17.280 ಲೀ ಗೋವಾ ಮದ್ಯ

5) KA-19-MK-2277 ಎಂಬ ಸಂಖ್ಯೆ ಇರುವ ನಂಬರ್ ಪ್ಲೇಟು-1

(ಕ್ರ.ಸಂ:2ರಿಂದ 4 ರವರೆಗಿನ ಮದ್ಯದಿಂದ ಪ್ರತಿ ಪೆಟ್ಟಿಗೆ ಮತ್ತು ಕೈಚೀಲದಿಂದ ತಲಾ ಒಂದೊಂದು ಬಾಟಲಿಯಂತೆ ಒಟ್ಟು 32 ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ ಇವರ ಮುಖೇನಾ ಸಲ್ಲಿಸಿರುವ ತನಿಖಾ ವರದಿ ಸಂಖ್ಯೆ : ಅ.ಇ/ಬ.ವ/ ಅರ್‌ಸಿಆರ್.ಸಂ: 17/2010-11 ದಿ:30-11-2010ರ ವರದಿಯೊಂದಿಗೆ ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ವಿಶ್ಲೇಷಕರು,ಅಬಕಾರಿ ಇಲಾಖೆ,ಬೆಂಗಳೂರು ಇವರ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಸಿಸಿಎಲ್-5668/2010 ದಿ:23-10-2010ನ್ನು ಸಲ್ಲಿಸಿ, ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ ಇತರ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಅದೇಶ ಕೋರಿರುತ್ತಾರೆ. ಮಾದರಿಗಳ ರಾಸಾಯನಿಕ ವಿಶ್ಲೇಷಣಾ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರದ ತೀಕ್ಷ್ಣತೆ ಅನುಕ್ರಮವಾಗಿ 25.6 ಡಿಗ್ರಿ ಯು.ಪಿ, 24.9 ಡಿಗ್ರಿ ಯು.ಪಿ ಮತ್ತು 25.2 ಡಿಗ್ರಿ ಯು.ಪಿ ಇರುವುದಾಗಿ ದೃಡೀಕರಿಸಿದ್ದು, ತನಿಖಾಧಿಕಾರಿಗಳ ಶಿಫಾರಸ್ಸಿನಂತೆ ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ವಾಹನದ ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಮದ್ಯ (ಮಾದರಿ ಹೊರತುಪಡಿಸಿ)ವನ್ನು ದಿ:17-2-2011ರ ಅದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶ ಪಡಿಸಲು ಅದೇಶಿಸಲಾಗಿರುತ್ತದೆ. ಸದ್ರಿ ಅದೇಶದ ಅನ್ವಯ ಮದ್ಯವನ್ನು ದಿನಾಂಕ:2-5-2011 ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಪ್ರಕರಣದ ತನಿಖಾದಿಕಾರಿಗಳು ದಿ:1-3-2011ರ ವರದಿ ಸಂ: ಅಇ /ಬ.ವ/ಆರ್.ಸಿಆರ್/ 17/2010-11ರೊಂದಿಗೆ ಪ್ರಕರಣ ಜಪ್ತು ಸಂದರ್ಭದಲ್ಲಿ ವಾಹನಕ್ಕೆ ಅಳವಡಿಸಲಾದ ನೊಂದಣಿ ಫಲಕ ಸಂ: KA-19-Z-1636 ಮತ್ತು ವಾಹನದಲ್ಲಿ ಪತ್ತೆಯಾದ ಇನ್ನೊಂದು ನೊಂದಣಿ ಫಲಕ ಸಂ: KA-19-MK-2277 ಇವುಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆಯಲಾದ ಬಿ ಎಕ್ಸ್ ಟ್ರಾಕ್ಟ್ ವರದಿಗಳನ್ನು ಈ ಪ್ರಾದಿಕಾರಕ್ಕೆ ಸಲ್ಲಿಸಿ ವಾಹನದ ಒಡೆತನ ನಿರೂಪಿಸಿ ಯಾರೊಬ್ಬರೂ ಬಿಡುಗಡೆ ಬಗ್ಗೆ ಮುಂದೆ ಬಾರದೇ ಇರುವುದರಿಂದ ಹಾಗೂ ವಾಹನದ ಸ್ಥಿತಿಗತಿ ತೀರಾ ಕ್ಷೀಣವಾಗಿರುವುದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತಾರೆ. ವಾಹನಕ್ಕೆ ಅಳವಡಿಸಲಾದ ನೊಂದಣಿ ಫಲಕ ಸಂ: KA-19-Z-1636ಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ಸಂಖ್ಯೆಯು ಮಾರುತಿ ಅಲ್ಟೋ ಕಾರಿಗೆ ಸಂಬಂಧಿಸಿದಾಗಿದ್ದು, ವಾಹನದ ಮಾದರಿ, ಚಾಸೀಸ್ ಸಂಖ್ಯೆ ಮತ್ತು ಇಂಜಿನ್ ಸಂಖ್ಯೆ ಜಪ್ತಾದ ವಾಹನಕ್ಕೆ ತಾಳೆಕಂಡುಬಾರದೇ ಇರುತ್ತದೆ. ಆದಾಗ್ಯೂ ಸದ್ರಿ ನೊಂದಣಿ ಫಲಕ ಸಂ: KA-19-Z-1636ಕ್ಕೆ ಸಂಬಂಧಿಸಿದ ಮಾಲೀಕರಾದ ಶ್ರೀ.ಮಂಜುನಾಥ ದೇವದಾಸ್ ನಾಯಕ್, ಬಿನ್:ದೇವದಾಸ್ ನಾಯಕ್, ಡೋರ್ ನಂ:307 3ನೇ ಶ್ರೀ.ಭುವನೇಂದ್ರ ಅಪಾರ್ಟ್‌ಮೆಂಟ್ ,ಸಿ.ವಿ ನಾಯಕ್ ಹಾಲ್ ನ ಹಿಂದುಗಡೆ ,ಕದ್ರಿ, ಮಂಗಳೂರು ಮತ್ತು ಪ್ರಕರಣದ ಮುಖ್ಯ ಅರೋಪಿತನಾದ ಯೂಸೂಫ್ ಯಾನೆ ಇಸುಬು , ಕೋಡಪದವು,ವಿಟ್ಲ ಬಂಟ್ವಾಳ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಪ್ರಕಾರ ದಿ:8-3-2011ರಂದು ನೀಡಲಾದ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿದ್ದು, ಅರೋಪಿತ ವ್ಯಕ್ತಿಗೆ ದಿ:22-3-2011ರಂದು ನೋಟಿಸು ಜ್ಯಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ಸ್ವೀಕೃತವಾಗಿದ್ದು , ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಹಾಗೂ ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಬಿಡಿಯಾಗಿ ಪತ್ತೆಯಾದ ನೊಂದಾಣಿ ಫಲಕ ಸಂ: KA-19-MK-2277ಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿತವಾದ ವಾಹನದ ಮಾದರಿ, ಚಾಸೀಸ್ ಸಂಖ್ಯೆ ಮತ್ತು ಇಂಜಿನ್ ಸಂಖ್ಯೆ ಜಪ್ತಾದ ವಾಹನಕ್ಕೆ ಒಂದಕ್ಕೊಂಡು ತಾಳೆಕಂಡು ಬಂದಿದ್ದು, ಸದ್ರಿ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ಮಾಲೀಕರಾದ ಶ್ರೀ.ಡೆಲ್ವಿನ್ ಡಿಸೋಜ, ಬಿನ್:ಫೆಲಿಕ್ಸ್ ಡಿಸೋಜ, ರಾಂಡ್ ಹೌಸ್ , ಬಂಗ್ರಕೂಳೂರು, ಮಂಗಳೂರು ಇವರಿಗೆ ಮತ್ತು ವಾಹನದ ಹೆಚ್.ಪಿ.ಎ ದಾರರಾದ ಶ್ರೀರಾಮ್ ಟ್ರಾನ್ಸ್ ಪೋರ್ಟ್ಸ್ ಪೈನ್ಯಾನ್ಸ್ ,ಕೆ.ಎಚ್.ರೋಡ್,ಬೆಂಗಳೂರು ಇವರಿಗೆ ದಿ:28-7-2011ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರಡಿಯಲ್ಲಿ ನೊಂದಾವಣೆ ಅಂಚೆ ಮೂಲಕ ನೀಡಲಾದ ಕಾರಣ ಕೇಳಿ ನೋಟಿಸು ದಿನಾಂಕ:1-8-2011ರಂದು ಜ್ಯಾರಿಯಾಗಿದ್ದರೂ ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾದಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ವಾಹನವನ್ನು ದಿನಾಂಕ:07-10-2010ರಂದು ಪ್ರಕರಣ ದಾಖಲಿಸಿ ವಶಪಡಿಸಿಕೊಂಡು ಈಗಾಗಲೇ 1 ವರ್ಷ ಕಳೆದರೂ, ವಾಹನದ ಮಾಲೀಕರು/ಸುಪರ್ಧಿ ಹೊಂದಿರುವವರಾಗಲೀ ಅಥವಾ ಅವರ ಪರ ವಕೀಲರಾಗಲೀ ವಾಹನದ ಮಾಲೀಕತ್ವ ನಿರೂಪಿಸಿ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಜಪ್ತು ಸಂದರ್ಭದಲ್ಲಿ ವಾಹನಕ್ಕೆ ನಕಲಿ ನೊಂದಾಣಿ ಫಲಕವನ್ನು ಅಳವಡಿಸಿರುವುದು ತನಿಖೆಯಿಂದ ತಿಳಿದುಬಂದಿರುವುದರಿಂದ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಭೀತಾಗಿದ್ದು , ಜಪ್ತಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಪ್ರಾದಿಕಾರವು ಮನಗಂಡು ಮುಟ್ಟುಗೋಲು ನಡವಳಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮುಟ್ಟುಗೋಲು ನಡವಳಿ ಪ್ರಯುಕ್ತ ಸಾಕ್ಷಿ ವಿಚಾರಣೆಯನ್ನು ಆರಂಭಿಸಿ, ಪ್ರಕರಣದ ಫಿರ್ಯಾದುದಾರರನ್ನು ಪ್ರಾಸಾ-1 ಮತ್ತು ತನಿಖಾಧಿಕಾರಿಯವರನ್ನು ಪ್ರಾಸಾ-2ರನ್ನಾಗಿ ಸಾಕ್ಷಿ ವಿಚಾರಣೆ ನಡೆಸಿ ಪ್ರಕರಣದ ಮುಖ್ಯ ದಾಖಲಾತಿಗಳನ್ನು ನಿಶಾನೆ ಪಿ-1ರಿಂದ ನಿಶಾನೆ ಪಿ-11ಎ ತನಕ ಸಾಕ್ಷಿದಾರರಿಂದ ಗುರುತಿಸಲಾಗಿರುತ್ತದೆ. ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲಿ, ಅವರ ಪರ ಪ್ರತಿನಿಧಿಗಳಾಗಲೀ ಹಾಜರಿರದ ಕಾರಣ ರಕ್ಷಣಾ ಪರ ಸಾಕ್ಷಿಗಳು ಇಲ್ಲವೆಂದು ಪರಿಗಣಿಸಿ, ಅಭಿಯೋಗದ ಪರ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿ, ಸರ್ಕಾರಿ ಅಭಿಯೋಜಕರ ವಾದ ಮಂಡನೆಯನ್ನು ಆಲಿಸಿ ಆ ಕೆಳಗಿನಂತೆ ವಿವಾದಾಂಶಗಳ ಉತ್ತರ ಪಡೆಯಲಾಗಿರುತ್ತದೆ.

1) ದಿನಾಂಕ:07-10-2010ರಂದು ಟಾಟಾ ಇಂಡಿಕಾ ಡಿಎಲ್ಎಸ್ ಕಾರು ನಕಲಿ ನೊಂದಣಿ ಸಂ: KA-19-Z-1636 ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯ ಎಂಬ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಢೀಕೃತವಾಗಿದೆಯೇ ?

2) ದಿನಾಂಕ:7-10-2010 ರಂದು ಟಾಟಾ ಇಂಡಿಕಾ ಡಿಎಲ್ಎಸ್ ಕಾರು ನಕಲಿ ನೋಂದಣಿ ಸಂ: KA-19-Z-1636 ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ಗಮನಕ್ಕೆ ಬಾರದೇ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕ ವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಜಪ್ತಾದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಮುಖ್ಯ ರಾಸಾಯನಿಕ ತಜ್ಞ ಮತ್ತು ಕರ್ನಾಟಕ ಸರ್ಕಾರದ ಪದನಿಮಿತ್ತ ಸಹಾಯಕ ರಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ವಿಶ್ಲೇಷಕರು,ಅಬಕಾರಿ ಇಲಾಖೆ, ಬೆಂಗಳೂರು ಇವರು ನೀಡಿರುವ ರಾಸಾಯನಿಕ ವಿಶ್ಲೇಷಣಾ ವರದಿ ಸಂಖ್ಯೆ: ಸಿಸಿಎಲ್-5668/2010, ದಿ:23-10-2010ರಲ್ಲಿ ಮದ್ಯಸಾರದ ತೀಕ್ಷ್ಣತೆ ಅನುಕ್ರಮವಾಗಿ 25.6 ಡಿಗ್ರಿ ಯು.ಪಿ, 24.9 ಡಿಗ್ರಿ ಯು.ಪಿ ಮತ್ತು 25.2 ಡಿಗ್ರಿ ಯು.ಪಿ ಇರುವುದಾಗಿ ದೃಢೀಕರಿಸಿರುವುದರಿಂದ ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯ) ಎಂದು ಸಾಭೀತಾಗಿರುವುದು ಒಂದನೇ ಅಂಶಕ್ಕೆ ಗುಣಾತ್ಮಕವಾಗಿರುತ್ತದೆ.

ಪ್ರಕರಣದ ಫಿರ್ಯಾದುದಾರರು ತಯಾರಿಸಿರುವ ದಾಖಲಾತಿಗಳು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ದಿ:7-10-2010 ರಂದು ವಶಪಡಿಸಿಕೊಂಡಿರುವ ಟಾಟಾ ಇಂಡಿಕಾ ಡಿಎಲ್ಎಸ್ ಕಾರಿಗೆ ನಕಲಿ ನೊಂದಣಿ ಫಲಕ ಸಂ: KA-19-Z-1636ನ್ನು ಆಳವಡಿಸಿ ಅಕ್ರಮವಾಗಿ 286.560 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪ್ರತವಿಲ್ಲದೆ, ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಜಪ್ತುಪಡಿಸಿಕೊಂಡ ವಾಹನ ನೊಂದಣಿ ಸಂ: KA-19-Z-1636 ಎಂಬ ಫಲಕವನ್ನು ಆಳವಡಿಸಲಾದ ಟಾಟಾ ಇಂಡಿಕಾ ಡಿಎಲ್ಎಸ್ ಕಾರು ಇದಕ್ಕೆ ಸಂಬಂಧಿಸಿದಂತೆ ತನಿಖಾದಿಕಾರಿಗಳು ನೊಂದಣಿ ಸಂಖ್ಯೆ ಆಧಾರದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ಸಲ್ಲಿಸಿರುವ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪರಿಶೀಲಿಸಲಾಗಿ ಸದ್ರಿ ವಾಹನವು ಮಾರುತಿ ಕಂಪೆನಿ ನಿರ್ಮಿತ (ಚಾಸೀಸ್ ಸಂ: MA3EYD81S00911179 ಮತ್ತು ಇಂಜಿನ್ ಸಂ: F8DN3393925) ವಾಹನದಾಗಿದ್ದು , ಜಪ್ತಾದ ವಾಹನವು ಟಾಟಾ ಇಂಡಿಕಾ ಕಂಪೆನಿ ನಿರ್ಮಿತ (ಚಾಸೀಸ್‌ನಂ: 600142CVZP27918 ಮತ್ತು ಇಂಜಿನ್ ನಂ: 475IDI02CVZP21789) ವಾಹನವಾಗಿರುವುದರಿಂದ ಒಂದಕ್ಕೊಂದು ತಾಳೆ ಕಂಡು ಬಾರದೇ ಇರುವುದು ಹಾಗೂ ಜಪ್ತು ಸಂದರ್ಭದಲ್ಲಿ ವಾಹನದಲ್ಲಿ ಬಿಡಿಯಾಗಿ ಪತ್ತೆಯಾಗಿರುವ ನೊಂದಣಿ ಫಲಕ ಸಂ: KA-19-MK-2277 ಇದಕ್ಕೆ ಸಂಬಂಧಿಸಿದಂತೆ ಪಡೆಯಲಾದ ಬಿ ರಿಜಿಸ್ಟ್ರಾರ್ ವರದಿಗೆ ಅನುಗುಣ ವಾಗಿ ನೊಂದಣಿ ಮಾಲೀಕರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆ ಇಲ್ಲದೇ ಇರುವುದರಿಂದ ಅಕ್ರಮ ಸಂದರ್ಭದಲ್ಲಿ ಟಾಟಾ ಇಂಡಿಕಾ ಡಿಎಲ್ಎಸ್ ಕಾರಿಗೆ ಉದ್ದೇಶಪೂರ್ವಕವಾಗಿ ನಕಲಿ ನಂಬರ್ ಪ್ಲೇಟ್ KA-19-Z-1636ನ್ನು ಆಳವಡಿಸಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ವಾಹನದ ಸುಪರ್ಧಿ ಹೊಂದಿರುವ ವ್ಯಕ್ತಿ ಅಥವಾ ವಾಹನದ ಮಾಲೀಕರು ತಂತ್ರ ಹೂಡಿರುವುದು ಸಾಭೀತಾಗಿರುತ್ತದೆ. ಅಲ್ಲದೇ ಪ್ರಕರಣ ದಾಖಲಾಗಿ 1 ವರ್ಷ ಕಳೆದರೂ ತನ್ನ ವಾಹನವನ್ನು ಪತ್ತೆಹಚ್ಚಲು ಅಥವಾ ಪಡೆಯಲು ಪ್ರಯತ್ನಿಸದೇ ಇರುವುದರಿಂದ ವಾಹನದ ಮಾಲೀಕರು ತಮ್ಮ ತಿಳುವಳಿಕೆಯಿಂದಲೇ ಉದ್ದೇಶ ಪೂರ್ವಕವಾಗಿ ಈ ಅಪರಾಧವನ್ನು ಎಸಗಿ ತದನಂತರದಲ್ಲಿ ಪ್ರಕರಣದಲ್ಲಿ ಆಸಕ್ತಿ ತೋರಿಸದೇ ಇರುವುದರಿಂದ ಇದೊಂದು 'ವಾರೀಸುದಾರರು ಇಲ್ಲದ ಪ್ರಕರಣವೆಂದು' ಸಾಭೀತಾಗಿರುವುದರಿಂದ ಮೂರನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಲಾಗಿದೆ.

ಪೂರಕ ಅಂಶ:-

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಅರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರ ದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕಾರಣ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು , ಮಂಗಳೂರು ಇವರ ಠಾಣಾ ತಕ್ಷೀರು ಸಂಖ್ಯೆ:38/2010 ದಿ:7-10-2010 -ರಂದು ದಾಖಲಿಸಿದ ಪ್ರಕರಣದಲ್ಲಿ ಆರೋಪಿ ಯು 286.560 ಲೀಟರ್ ಅಕ್ರಮ ಮದ್ಯವನ್ನು ಸಾಗಾಣಿಕೆ ಮಾಡುವುದನ್ನು ಪತ್ತೆಹಚ್ಚಿ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿರುವುದನ್ನು ಪರಿಗಣಿಸಿ ಪ್ರಾಧಿಕಾರವು ಈ ಕೆಳಕಂಡಂತೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಆದೇಶ

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕಲಂ ೪೩ (ಬಿ) ಅಡಿ ಕ್ರಮ ಜರುಗಿಸಿ, ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು, ಮಂಗಳೂರು ಇವರ ಕ್ರೈಂ ಸಂ: 38/2010 ದಿನಾಂಕ: 7-10-2010 -ಜಪ್ತುಪಡಿಸಿಕೊಂಡಿರುವ ನಕಲಿ ನಂಬರು ಪ್ಲೇಟ್ ಸಂ: KA-19-Z-1636 ನ್ನು ಆಳವಡಿಸಲಾದ ಟಾಟಾ ಇಂಡಿಕಾ ಡಿಎಲ್ಎಸ್ ಕಾರು (ಇಂಜಿನ್ ನಂ: 6001 42CVZ27918) ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯವನ್ನು ಈ ಪ್ರಾಧಿಕಾರದ ಸಮ ಸಂಖ್ಯೆ ಅದೇಶ ದಿನಾಂಕ: 17-02-2011ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ: 20-10-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 1199

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/220/ಡಿಟಿಸಿಆರ್/2007-08 ದಿನಾಂಕ: 4-8-2011

ಉಪಸ್ಥಿತರು: ಬಿ.ವಿ. ಹೂವಪ್ಪಗೌಡ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು ಬಂಟ್ವಾಳ ವಲಯ, ಬಂಟ್ವಾಳ

ಆರೋಪಿಗಳು:

1) ಅಶ್ವಿನಿ, ಬಿನ್:ಮಾಧವ ,ಕನ್ಯಾನ ಮನೆ, ಕನ್ಯಾನ ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು (ನೌಕರ)
2) ಶ್ರೀ.ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ, ಕನ್ಯಾನ ಅಂಚೆ ಮತ್ತು ಗ್ರಾಮ, (ಸನ್ನದುದಾರರು)

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು ,ಬಂಟ್ವಾಳ ವಲಯ,ಬಂಟ್ವಾಳ ಇವರು ತಮ್ಮ ಸಿಬ್ಬಂಧಿಯವರೊಂದಿಗೆ ದಿನಾಂಕ:12-12-2007ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಬಂಟ್ವಾಳ ತಾಲೂಕು ಉಪ್ಪಳ-ಕನ್ಯಾನ ರಸ್ತೆ ಕನ್ಯಾನ ಎಂಬಲ್ಲಿರುವ ಕ.ಸಂ:2-144(1)ರಲ್ಲಿ ಶ್ರೀ.ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ ,ಕನ್ಯಾನ ಮನೆ, ಕನ್ಯಾನ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ಇವರ ಒಡೆತನಕ್ಕೆ ಸೇರಿದ ಸಿಎಲ್-9 ಸನ್ನದು ಸಂ: ಎಸ್‌ಡಿಕೆ:ಐಎಂಎಲ್ :ಬಿಎನ್‌ಟಿ:12:ಸಿಎಲ್-9:2007-08 ರಲ್ಲಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ವಿವಿಧ ಬ್ರಾಂಡ್‌ನ ಲೇಬಲ್‌ಗಳಿರುವ ಬಾಟಲುಗಳಲ್ಲಿ ಒಟ್ಟು 49.500 ಲೀ ನಕಲಿ ಮದ್ಯವನ್ನು ಅಕ್ರಮವಾಗಿ ಮಾರಾಟದ ಸಲುವಾಗಿ ದಾಸ್ತಾನು ಇಟ್ಟಿರುವುದನ್ನು ಪತ್ತೆಹಚ್ಚಿ,ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,12,13 , 14ರಂತೆ ಅಪರಾಧವಾಗಿದ್ದು, ಕಲಂ 32,34,35,36,43 (ಎ)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ತಯಾರಿಸಿ, ಸನ್ನದು ಅವರಣದಲ್ಲಿ ಪತ್ತೆಯಾದ ನಕಲಿ ಮದ್ಯವನ್ನು ಮತ್ತು ರಹದಾರಿ ಮೂಲಕ ಪಡೆಯಲಾಗಿದ್ದ ಮದ್ಯ ಹಾಗೂ ಬೀರಿನ ದಾಸ್ತಾನು ಪಟ್ಟಿಯನ್ನು ತಯಾರಿಸಿ, ಸದ್ರಿ ಸನ್ನದಿನಲ್ಲಿ ದಾಸ್ತಾನು ಹೊಂದಲಾಗಿದ್ದ ಅಕ್ರಮ 49.500 ಲೀಟರು ನಕಲಿ ಮದ್ಯ ಹಾಗೂ ಸನ್ನದು ಆವರಣದಲ್ಲಿದ್ದ ಸರ್ಕಾರಕ್ಕೆ ಶುಲ್ಕ ಪಾವತಿಸಿದ ಅಸಲಿ ಮದ್ಯ 440.340 ಲೀ ಮತ್ತು 144.890 ಲೀ ಬಿಯರ್ ದಾಸ್ತಾನನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43(ಎ)ರೀತ್ಯಾ ಸನ್ನದುದಾರರ ಅಧಿಕೃತ ನೌಕರರ ಸಮಕ್ಷಮ ಜಪ್ತುಪಡಿಸಿಕೊಂಡು, ನೌಕರನಾದ ಅಶ್ವಿನ್,ಬಿನ್:ಮಾಧವ , ಕನ್ಯಾನ ಮನೆ, ಕನ್ಯಾನ ಅಂಚೆ ಮತ್ತು ಗ್ರಾಮ, ಬಂಟ್ವಾಳ ತಾಲೂಕು ಮತ್ತು ಮಾಧವ ಕೆ, ಬಿನ್:ದಿ:ಅತ್ತಾರ್ ಬೆಳ್ಚಡ, ಕನ್ಯಾನ ಮನೆ, ಕನ್ಯಾನ ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ಇವರುಗಳನ್ನು ದಸ್ತಗಿರಿ ಮಾಡಿ ವಶಕ್ಕೆ ತೆಗೆದುಕೊಂಡು ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ತಕ್ಷೀರು ಸಂ: 2/2007-08 ದಿ:12-12-07ರಂತೆ ಮೊಕದ್ದಮೆಯನ್ನು ದಾಖಲಿಸಲಾಗಿರುತ್ತದೆ.

ವಶಪಡಿಸಿಕೊಂಡ ಸೊತ್ತುಗಳು:-

1) 750 ಎಂ.ಎಲ್.ನ 40 ಸೀಸೆಗಳಲ್ಲಿ ನಾದನ್ ಮಾಲ್ಟ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ

2) 750 ಎಂ.ಎಲ್.ನ 26 ಸೀಸೆಗಳಲ್ಲಿ ಹನೀ ಮಾಸ್ಟರ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ (ಮೇಲಿನ ಎಲ್ಲಾ ಮದ್ಯದ ಬಾಟಲಿಗಳಿಂದ ತಲಾ 180 ಎಂಎಲ್‌ನಂತೆ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

3) ಸರ್ಕಾರಕ್ಕೆ ಶುಲ್ಕ ಪಾವತಿಸಿದ ಅಸಲಿ ಮದ್ಯ 440.340 ಲೀ ಮತ್ತು 144.890 ಲೀ ಬಿಯರ್ (ವಿವರ ಅನುಬಂಧ-1ರಲ್ಲಿ ತೋರಿಸಲಾಗಿದೆ)

ಸನ್ನದುದಾರರು ಸನ್ನದು ಆವರಣದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿ ಗ್ರಾಹಕರಿಗೆ ವಂಚಿಸಿ ಅವರ ಅರೋಗ್ಯ ಹಾಗೂ ಜೀವ ಹಾನಿ ಮಾಡುವಂತಹ ಅಪರಾಧ ಎಸಗಿರುವುದರಿಂದ ಪ್ರಕರಣದ ತನಿಖೆ ಕಾರ್ಯ ಮತ್ತು ಸನ್ನದು ರದ್ದುಪಡಿಸುವ ಕ್ರಮವನ್ನು ಕಾಯ್ದಿರಿಸಿ ಸನ್ನದುದಾರರ ಸಿಎಲ್-9 ಸನ್ನದನ್ನು ಜಿಲ್ಲಾಧಿಕಾರಿಗಳು ಹಾಗೂ ಸನ್ನದು ಮಂಜೂರಾತಿ ಪ್ರಾಧಿಕಾರಿ ,ದ.ಕ ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಸ್‌ಡಿಕೆ:213:ಡಿಟಿಸಿಆರ್: 2007-08 ದಿ:31-12-2007ರ ಆದೇಶದಲ್ಲಿ 15 ದಿನಗಳ ಅವಧಿಗೆ ಅಮಾನತ್ತುಗೊಳಿಸಿ. ನಂತರದಲ್ಲಿ ದಿನಾಂಕ:14-1-2008ರ ಅದೇಶದಲ್ಲಿ ಸನ್ನದ್ದನ್ನು ಸರ್ಕಾರದ ರಾಜಸ್ವದ ಹಿತದೃಷ್ಟಿಯಿಂದ ದಿ:16-1-2008 ರಿಂದ ಅನ್ವಯವಾಗುವಂತೆ ವ್ಯವಹಾರಕ್ಕೆ ತೆರವುಗೊಳಿಸಿ ಅದೇಶಿಸಲಾಗಿರುತ್ತದೆ.

ಸನ್ನದುದಾರರಾದ ಶ್ರೀ.ಮಾಧವ.ಕೆ ಇವರು ದಿ:1-3-2008ರಂದು ಪ್ರಾಧಿಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಿ ಜಪ್ತುಪಡಿಸಿಕೊಳ್ಳಲಾದ ತೆರಿಗೆ ಪಾವತಿಸಿದ ಮದ್ಯ ಮತ್ತು ಬಿಯರನ್ನು ತಮಗೆ ಮದ್ಯಂತರ ಬಿಡುಗಡೆ ಮಾಡಿಕೊಡಬೇಕಾಗಿ ಹಾಗೂ ಈ ಬಗ್ಗೆ ಪ್ರಾಧಿಕಾರದಿಂದ ನಿಗಧಿಪಡಿಸಿದ ಬ್ಯಾಂಕ್ ಗ್ಯಾರಂಟಿಯನ್ನು ನೀಡಲು ತಾನು ಬದ್ದನಾಗಿರುವುದಾಗಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಅದರಂತೆ ಜಪ್ತುಪಡಿಸಿಕೊಳ್ಳಲಾದ ಮದ್ಯ , ಬಿಯರಿನ ಮೌಲ್ಯ ಮಾಪನವನ್ನು ಕೆ.ಎಸ್.ಬಿ.ಸಿ.ಎಲ್ ಪುತ್ತೂರು ಘಟಕದಿಂದ ತನಿಖಾಧಿಕಾರಿಗಳ ಮುಖಾಂತರ ಪಡೆದುಕೊಂಡು ಮೌಲ್ಯ ರೂ.79,550/- ಮೊತ್ತಕ್ಕೆ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಹಾಗೂ ಇತರೆ ಷರತ್ತು ಗಳ ಮೇರಗೆ ಜಪ್ತುಪಡಿಸಿಕೊಳ್ಳಲಾದ 440. 340 ಲೀ ಮದ್ಯ ಹಾಗೂ 144.890 ಬಿಯರ್ ಲೀಟರು ಇವುಗಳನ್ನು ಅಂದಿನ ಅದಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ ಜಿಲ್ಲೆ ಮಂಗಳೂರು ಇವರ ಅದೇಶ ಸಂ: ಎಂಎನ್‌ಜಿ: ಇಐಬಿ: ಡಿಟಿಸಿಆರ್: 220:2007-08, ದಿ:29-3-2008ರಲ್ಲಿ ಮದ್ಯಂತರ ಬಿಡುಗಡೆಗೊಳಿಸಿ ಅದೇಶಿಸಲಾಗಿರುತ್ತದೆ. ಆದರೆ ಸನ್ನದು ದಾರರು ಷರತ್ತಿನಂತೆ ಬ್ಯಾಂಕ್ ಗ್ಯಾರೆಂಟಿಯನ್ನು ನೀಡಿ ಮದ್ಯ ಮತ್ತು ಬಿಯರನ್ನು ಮದ್ಯಂತರ ಸುಪರ್ಧಿಗೆ ಪಡೆದುಕೊಳ್ಳಲು ವಿಫಲರಾಗಿರುತ್ತಾರೆ.

ಪ್ರಕರಣದ ತನಿಖೆ ಮುಂದುವರಿಸಿರುವ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ದಿ: 5-6-2008-ರ ತನಿಖಾ ವರದಿಯೊಂದಿಗೆ ಮೊಕದ್ದಮೆಯಲ್ಲಿ ವಶಪಡಿಸಿ ಕೊಳ್ಳಲಾಗಿದ್ದ 750 ಎಂ.ಎಲ್.ನ 66 ಬಾಟಲ್ ನಕಲಿ ಮದ್ಯಗಳ ಮಾದರಿ ಸೀಸೆಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ದಿನಾಂಕ: 22-12-2007- ರಂದು ಮುಖ್ಯ ರಾಸಾಯನಿಕ ತಜ್ಞರು ಮತ್ತು ಕರ್ನಾಟಕ ಸರಕಾರದ ಪದನಿಮಿತ್ತ ಸಹಾಯಕ ರಾಸಾಯನ ಪರೀಕ್ಷಕರು, ಕೇಂದ್ರ ರಾಸಾಯನಿಕ ಪ್ರಯೋಗಾಲಯ ಅಬಕಾರಿ ಇಲಾಖೆ, ಬೆಂಗಳೂರು ಇವರಿಂದ ಪಡೆಯಲಾದ ವಿಶ್ಲೇಷಣಾ ವರದಿ ಸಂ: ಸಿಸಿಎಲ್-4973/2007ನ್ನು ಪ್ರಾಧಿಕಾರಕ್ಕೆ ಒಪ್ಪಿಸಿರುತ್ತಾರೆ. ಸದರಿ ರಾಸಾಯನಿಕ ವಿಶ್ಲೇಷಣಾ ವರದಿ ಪ್ರಕಾರ ಜಪ್ತು ಮಾಡಲಾಗಿರುವ 750 ಎಂ.ಎಲ್‌ನ 66 ಬಾಟಲಿಗಳ ಪೈಕಿ 40 ನಕಲಿ ನಾದನ್ ಮಾಲ್ಟ್ ವಿಸ್ಕಿಯ ಬಾಟಲಿಗಳಲ್ಲಿ 25.2 ಡಿಗ್ರಿ ಯು.ಪಿ ಇದ್ದು, ಇದು ಮಾನವನ ಸೇವನೆಗೆ ಯೋಗ್ಯವಾಗಿರುವುದಾಗಿ ಹಾಗೂ 26 ಹನೀ ಮಾಸ್ಟರ್ ವಿಸ್ಕಿಯ ಬಾಟಲಿಗಳಲ್ಲಿ 35.6 ಡಿಗ್ರಿ ಯು.ಪಿ ಇದ್ದು .ಬಾರತ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿರುದಿಲ್ಲವಾದ್ದರಿಂದ ಇದು ನಕಲಿ ಮದ್ಯವಾಗಿರುತ್ತದೆ ಎಂದು ದೃಢ ಪತ್ರದೊಂದಿಗೆ ವರದಿ ಒಪ್ಪಿಸಿರುತ್ತಾರೆ. ಆದುದರಿಂದ ಸನ್ನದುದಾರರು ನಕಲಿ ಮದ್ಯವನ್ನು ಸನ್ನದು ಆವರಣದಲ್ಲಿದ್ದ ಅಸಲಿ ಮದ್ಯದೊಂದಿಗೆ ಪಾನೀಕರಿಗೆ ಮಾರಾಟ ಮಾಡಲು ಯತ್ನಿಸಿರುವುದರಿಂದ ಸನ್ನದುದಾರರ ವಿರುದ್ದ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಸನ್ನದುದಾರರು ತನ್ನ ಸನ್ನದಿನ ವ್ಯವಹಾರದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯ ಸಂಗ್ರಹಣೆ ಹಾಗೂ ವಿತರಣೆಗೆ ಅಸ್ಪದ ನೀಡಿರುವುದು ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಬೀತಾಗಿರುವುದರಿಂದ, ಸದರಿ ಪ್ರಕರಣಕ್ಕೆ ಸಂಬಂಧಿಸಿ ಸಾಕ್ಷಿದಾರರನ್ನು ಹಾಗೂ ದಾಖಲೆಗಳನ್ನು ಅವಲಂಬಿಸಿ, ದಿನಾಂಕ: 29-5-2009- ರಂದು ಬಲಿ.ಮಾಧವ ಕೆ, ಸಿಎಲ್-9 ಸನ್ನದುದಾರರು, ಬಿನ್: ದಿ:ಅತ್ತಾರ್ ಬೆಳ್ಚಡ, ಕನ್ಯಾನ ಮನೆ, ಕನ್ಯಾನ ಗ್ರಾಮ, ಬಂಟ್ವಾಳ ತಾಲೂಕು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965 ಕಾಲಂ 43(ಬಿ) ರೀತ್ಯಾ ಕಾರಣ ಕೇಳಿ ನೋಟೀಸ್‌ನ್ನು ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟೀಸಿಗೆ ಸಂಬಂಧಿಸಿದಂತೆ ಶ್ರೀ.ಮಾಧವ ಕೆ ಇವರು ಈ ಕಛೇರಿಗೆ ದಿ: 5-6-2009-ರಂದು ಲಿಖಿತ ಉತ್ತರವನ್ನು ಸಲ್ಲಿಸಿ, ತನ್ನ ವಿರುದ್ದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರು ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಸದ್ರಿ ನಕಲಿಯೆಂದು ಹೇಳಲಾದ ಮದ್ಯಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ. ಮತ್ತು ನಕಲಿ ಮದ್ಯವನ್ನು ನಾನು ಯಾವತ್ತೂ ಸಂಗ್ರಹಿಸಿ ಟ್ಟಿರುವುದಿಲ್ಲ. ನನ್ನ ಪರಿಸರದಲ್ಲಿ ನನ್ನ ಮೇಲೆ ವೈಯಕ್ತಿಕ ದ್ವೇಷದಿಂದ ನಕಲಿ ಮದ್ಯವನ್ನು ನನ್ನ ತಿಳುವಳಿಕೆಗೆ ಬಾರದಂತೆ ನನ್ನ ಅಂಗಡಿಯ ಕಂಪೌಂಡಿನ ಗೇಟಿನ ಹತ್ತಿರ ಇಟ್ಟು, ನನ್ನ ಮೇಲೆ ಸುಳ್ಳು ಕೇಸು ಹಾಕಿರುತ್ತಾರೆ. ಸದ್ರಿ ನಕಲಿ ಎಂದು ಹೇಳಲಾಗಿರುವ ಮದ್ಯಕ್ಕೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲದಿರುವುದರಿಂದ ಅವುಗಳನ್ನು ಮುಟ್ಟುಗೋಲು ಹಾಕುವುದಕ್ಕೂ ನನ್ನದೇನು ಅಕ್ಷೇಪವಿರುವುದಿಲ್ಲ. ಸದ್ರಿ ಸಿಎಲ್-9 ಸನ್ನದಿನ ವಿರುದ್ದ ದಾಖಲಿಸಿದ ಮೊಕದ್ದಮೆಯನ್ನು ಇಲಾಖಾ ಮೂಲಕ ಇತ್ಯರ್ಥಪಡಿಸಬೇಕೆಂದು ಹಾಗೂ ತನ್ನ ವಿರುದ್ದ ಕಾರಣ ಕೇಳಿ ನೋಟಿಸಿನಲ್ಲಿ ಉಲ್ಲೇಖಿಸಿದಂತೆ ಕಾನೂನು ಕ್ರಮವನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಪ್ರಕರಣ ಸಂದರ್ಭದಲ್ಲಿ ಜಪ್ತುಪಡಿಸಿಕೊಳ್ಳಲಾದ ನಕಲಿ ಮದ್ಯದ ಮಾದರಿಗಳು ಅಧಿಕೃತ ಡಿಸ್ಟಿಲರಿಯಲ್ಲಿ ತಯಾರಾದ ವಿವಿಧ ಬ್ರಾಂಡ್‌ಗಳಲ್ಲಿರುವ ಮದ್ಯಸಾರದ ಅಂಶಕ್ಕೆ ಹೋಲಿಕೆಯಾಗುವುದಿಲ್ಲ ಹಾಗೂ ಸನ್ನದುದಾರರು ನಕಲಿ ಮದ್ಯವನ್ನು ಅಸಲಿ ಮದ್ಯ ದೊಂದಿಗೆ ಕಲಬೆರಕೆ ಮಾಡಿ ಗ್ರಾಹಕರ ಅರೋಗ್ಯಕ್ಕೆ ಹಾಗೂ ಜೀವಕ್ಕೆ ಹಾನಿ ಮಾಡುವಂತಹ ಪ್ರಮಾದ ಎಸಗಿರುವುದರಿಂದ ಹಾಗೂ ಸನ್ನದುದಾರರು ಅಸಲಿ ಮದ್ಯ ಹಾಗೂ ಬಿಯರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸುವರೇ ಯಾವುದೇ ಅಭ್ಯಂತರವಿಲ್ಲ ವೆಂದು ಕಾರಣ ಕೇಳಿ ನೋಟಿಸಿಗೆ ಉತ್ತರ ನೀಡಿರುವುದರಿಂದ ಹಾಗೂ ಮದ್ಯ ಮತ್ತು ಬಿಯರನ್ನು ಜಪ್ತುಪಡಿಸಿಕೊಂಡು ಈಗಾಗಲೇ 2ವರ್ಷಗಳು ಕಳೆದಿರುವುದರಿಂದ ಸದ್ರಿ ಮದ್ಯವು ಗುಣಲಕ್ಷಣವನ್ನು ಕಳೆದುಕೊಂಡು ಯಾವುದೇ ಮಾನವ ಸೇವನೆಗೆ ಯೋಗ್ಯವಾಗದೇ ಇರುವುದರಿಂದ ಸನ್ನದು ಆವರಣದಿಂದ ಜಪ್ತುಪಡಿಸಿ ಕೊಳ್ಳಲಾದ ಎಲ್ಲಾ ನಕಲಿ ಹಾಗೂ ಅಸಲಿ ಮದ್ಯ ಮತ್ತು ಬಿಯರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು , ಬಂಟ್ವಾಳ ವಲಯ ರವರು ದಿನಾಂಕ:29-8-2009ರಂದು ಈ ಪ್ರಾಧಿಕಾರಕ್ಕೆ ಒಪ್ಪಿಸಿದ ಎರಡನೇ ತನಿಖಾ ವರದಿ ಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ನಂತರ ಪ್ರಕರಣದ ಮುಟ್ಟುಗೋಲು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆಯನ್ನು ಪ್ರಾಧಿಕಾರದಲ್ಲಿ ಪ್ರಾರಂಭಿಸಿ ಅಭಿಯೋಗದ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಸಿ. ಹೆಚ್. ಸೋಮಶೇಖರ,ಅ.ನಿ. ಹಾಲಿ ಪುತ್ತೂರು ಉಪ ವಿಭಾಗ, ಪುತ್ತೂರು , ತನಿಖಾಧಿಕಾರಿಗಳಾದ ಶ್ರೀ.ಕಮಲಾಕ್ಷ ಬಲ್ಯಾಯ, ಅ.ನಿ. ಬಂಟ್ವಾಳ ವಲಯ ಮತ್ತು ಶ್ರೀ.ಹರೀಶ್ ಎನ್, ಅಬಕಾರಿ ರಕ್ಷಕರು, ಬಂಟ್ವಾಳ ವಲಯ ಹಾಗೂ ರಕ್ಷಣಾ ಪರ ಸಾಕ್ಷಿದಾರರಾದ ಶ್ರೀ.ಮಾಧವ ಕೆ, ಸಿಎಲ್-9 ಸನ್ನದು ದಾರರು, ಶಿವಶಕ್ತಿ ಬಾರ್, ಕನ್ಯಾನ ,ಬಂಟ್ವಾಳ ಇವರುಗಳ ವಿಚಾರಣೆಯನ್ನು ನಡೆಸಲಾಗಿರುತ್ತದೆ.

ಪ್ರಕರಣದ ವಿಚಾರಣೆಯನ್ನು ಆರಂಭಿಸಿ ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ: 12-12-2007-ರಂದು ಶ್ರೀ.ಮಾಧವ .ಕೆ, ಸಿಎಲ್-9 ಸನ್ನದುದಾರರು ಇವರ ಮಾಲೀಕತ್ವದ ಸನ್ನದು ಸಂ:ಎಸ್‌ಡಿಕೆ:ಐಎಂಎಲ್ :12: ಬಿಎನ್‌ಟಿ: ಸಿಎಲ್-9:07-08 ದಿ:30-6-2007ರ ಸನ್ನದು ಆವರಣದಲ್ಲಿ ನಕಲಿ ಮದ್ಯವನ್ನು ದಾಸ್ತಾನು ಇರಿಸಿಕೊಂಡು ಮಾರಾಟ ಮಾಡಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ನಕಲಿ ಮದ್ಯ ಮಾರಾಟವು ಸನ್ನದುದಾರರ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆಯೇ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿ ಮತ್ತು ಸನ್ನದುದಾರರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ 49-.500 ಲೀ ನಕಲಿ ಮದ್ಯ ಮಾನವ ಸೇವನೆಗೆ ಯೋಗ್ಯವಾಗಿಲ್ಲ ಎಂದು ದೃಡೀಕೃತವಾಗಿದೆಯೇ? ಹಾಗೂ ಅಸಲಿ 440-340 ಲೀ. ಮದ್ಯ ಹಾಗೂ 144-890 ಲೀ ಬಿಯರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಸಕರಾತ್ಮಕವಾಗಿ ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:-

ಶ್ರೀ.ಸಿ.ಹೆಚ್.ಸೋಮಶೇಖರ, ಅಂದಿನ ಅಬಕಾರಿ ನಿರೀಕ್ಷಕರು,ಬಂಟ್ವಾಳ ವಲಯ (ಹಾಲಿ ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ,ಪುತ್ತೂರು)ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ದಿ:7-9-2010ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡುತ್ತಾ ಪಂಚರ ಸಮಕ್ಷಮ ಪ್ರಕರಣ ಪತ್ತೆ ಹಚ್ಚಿ ಸನ್ನದು ಆವರಣದಲ್ಲಿ ಅಸಲಿ ಮದ್ಯ ಮತ್ತು ಬಿಯರಿನ ಜೊತೆಯಲ್ಲಿ 750 ಎಂಎಲ್ ಗಾತ್ರದ 66 ಬಾಟಲಿಗಳಲ್ಲಿ ಗೋವಾ ರಾಜ್ಯದಲ್ಲಿ ನಿರ್ಮಿತವಾದ ಮದ್ಯವನ್ನು ಪತ್ತೆಹಚ್ಚಿ ಮಹಜರು ಕ್ರಮ ಜರುಗಿಸಿ ಅಬಕಾರಿ ಕಾಯಿದೆ ಕಲಂ 11,12, 13,14 r/w 32,34,35,36 ಮತ್ತು 43 ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ನಂತರ ತನಿಖೆ ಕೈಗೊಂಡು ರಾಸಾಯನಿಕ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಆರೋಪಿಗಳ ವಿರುದ್ದ ಜೆ.ಎಂ.ಎಫ್ ಸಿ ಬಂಟ್ವಾಳ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುವ ಬಗ್ಗೆ ಸಾಕ್ಷಿ ನೀಡಿ ಪ್ರಮುಖ ದಾಖಲೆಗಳನ್ನು ನಿ.ಪಿ.1ರಿಂದ ನಿ.ಪಿ-5 ವರೆಗೆ ಗುರುತಿಸಿರುತ್ತಾರೆ.

ಪಾಟೀ ಸವಾಲು:- ರಕ್ಷಣಾ ಪರ ವಕೀಲರು ಪ್ರಾ.ಸಾ-1ರವರನ್ನು ದಿ:7-9-2010ರಂದು ಪಾಟೀ ಸವಾಲು ನಡೆಸಿರುತ್ತಾರೆ.

ಪ್ರಾ.ಸ-2:-

ಶ್ರೀ .ಹರೀಶ್ ಎನ್,ಅಬಕಾರಿ ರಕ್ಷಕ, ಬಂಟ್ವಾಳ ವಲಯ ಇವರು ದಿ:28-9-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡುತ್ತಾ, ಪ್ರಾಸಾ -1ರವರ ಜೊತೆ ಶ್ರೀ.ಕೆ. ಮಾಧವ ಇವರು ಹೊಂದಿರುವ ಸನ್ನದು ಆವರಣಕ್ಕೆ ತಪಾಸಣೆಗೆ ಹೋದ ಸಂದರ್ಭದಲ್ಲಿ ಸನ್ನದು ಆವರಣದೊಳಗಡೆ ಅಸಲಿ ಮದ್ಯ ಮತ್ತು ಬಿಯರಿನ ಜೊತೆ ಗೋವಾ ನಿರ್ಮಿತ ನಕಲಿ ಮದ್ಯ ಪತ್ತೆಯಾಗಿರುವ ಬಗ್ಗೆ ಹೇಳಿಕೆಗಳನ್ನು ನೀಡಿ ಪ್ರಾ.ಸಾ-1ರವರಿಂದ ಗುರುತಿಸಲಾದ ಮಹಜರು ಪ್ರತಿಯನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ-1 ಬಿ ಎಂದು ಗುರುತಿಸಿರುತ್ತಾರೆ. ಸಾಕ್ಷಿದಾರರನ್ನು ರಕ್ಷಣಾ ಪರ ವಕೀಲರು ಪಾಟೀ ಸವಾಲು ನಡೆಸಿರುತ್ತಾರೆ.

ಪ್ರಾ.ಸ–3:–

ಶ್ರೀ ಕಮಲಾಕ್ಷ ಬಲ್ಯಾಯ, ಅ.ನಿ ಬಂಟ್ವಾಳ ವಲಯ ಇವರು ಪ್ರಕರಣದ ತನಿಖಾಧಿಕಾರಿಯಾಗಿದ್ದು, ದಿ:19–10–2010ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡುತ್ತಾ, ಮೊಕದ್ದಮೆಗೆ ಸಂಬಂಧಿಸಿದ ದಾಖಲಾತಿ ಸೊತ್ತುಗಳನ್ನು ಪ್ರಾ.ಸಾ–1 ರವರಿಂದ ಪಡೆದುಕೊಂಡ ಬಗ್ಗೆ ಹಾಗೂ ಪ್ರಕರಣದಲ್ಲಿ ವಶಪಡಿಸಿದ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಮಾನ್ಯ ಅಧಿಕೃತ ಅಧಿಕಾರಿಗಳಿಗೆ ದಿ:29–8–2009ರಂದು ವರದಿ ಮಾಡಿರುವ ಬಗ್ಗೆ ಸಾಕ್ಷಿ ನೀಡಿ , ಸದ್ರಿ ವರದಿಯನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ–6 ಎ ಎಂದು ಗುರುತಿಸಿರುತ್ತಾರೆ. ಹಾಗೂ ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಡಿಡಬ್ಲ್ಯೂ–1:–

ಶ್ರೀ.ಮಾಧವ ಕೆ. ಸಿಎಲ್–9 ಸನ್ನದುದಾರರು ಶಿವಶಕ್ತಿ ಬಾರ್ ,ಕನ್ಯಾನ ಇವರು ದಿ:21–4–2011ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನುಡಿಯುತ್ತಾ, ತಾನು ಸಿಎಲ್–9 ಸನ್ನದುದಾರರನಾಗಿ ಕಳೆದ 11 ವರ್ಷಗಳಿಂದ ಶಿವಶಕ್ತಿ ಎಂಬ ಹೆಸರಿನಲ್ಲಿ ಕನ್ಯಾನ ಉಪ್ಪಳ ರಸ್ತೆಯಲ್ಲಿ ಕನ್ಯಾನ ಎಂಬ ಸ್ಥಳದಲ್ಲಿ ಅಂಗಡಿ ನಡೆಸಿಕೊಂಡು ಬರುತ್ತಿದ್ದೇನೆ. ಈ ಪ್ರಕರಣ ಅಲ್ಲದೇ ನನ್ನ ಮೇಲೆ ಹೇಳಿದ ಅಂಗಡಿ ವಿರುದ್ಧ ಅಥವಾ ನನ್ನ ವಿರುದ್ಧ ಬೇರೆ ಯಾವುದೇ ಕ್ರಿಮಿನಲ್ ಪ್ರಕರಣ ಇರುವುದಿಲ್ಲ. ದಿ:12–12–2007ರಂದು ರಾತ್ರಿ 9 ಗಂಟೆಗೆ ಅಬಕಾರಿ ಇಲಾಖೆಯ ಅಧಿಕಾರಿಗಳು ಸನ್ನದು ಅಂಗಡಿಗೆ ತಪಾಸಣೆ ಗೆ ಬಂದಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಅಂಗಡಿಯಲ್ಲಿ ತೆರಿಗೆ ಪಾವತಿಸದ ಮದ್ಯದ ಶೇಖರಣೆ ಇರಲಿಲ್ಲ. ಅದರೆ ಸರ್ಕಾರಕ್ಕೆ ತೆರಿಗೆ ಪಾವತಿಸಿದ ಮದ್ಯದ ಶೇಖರಣೆ ಮಾತ್ರ ಇತ್ತು. ಅಬಕಾರಿ ಇಲಾಖೆಯವರು ನನ್ನ ಮೇಲೆ ಆರೋಪಿಸಿದಂತೆ ಆ ದಿವಸ ನನ್ನ ಅಂಗಡಿಯಿಂದ 69–500 ಲೀ ಅಕ್ರಮ ಮದ್ಯ ಸ್ವಾಧೀನ ಪಡಿಸಿಲ್ಲ. ಅಬಕಾರಿ ಇಲಾಖೆಯವರು ಅರೋಪಿದಂತೆ ತನ್ನ ಅಂಗಡಿಯಲ್ಲಿದ್ದ ಕ್ಯಾಶ್ ಕೌಂಟರಿನ ಕೆಳಗೆ ಅಷ್ಟೊಂದು ಪ್ರಮಾಣದ ಮದ್ಯ ಶೇಖರಣೆ ಮಾಡಲು ಸ್ಥಳಾವಕಾಶ ಇದ್ದಿಲ್ಲ. ನನ್ನ ಮತ್ತು ನನ್ನ ತಮ್ಮಂದಿರ ನಡುವೆ ಜಾಗದ ತಕರಾರು ಇದ್ದು, ಆ ದ್ವೇಷದ ಮೇರೆಗೆ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ನನ್ನ ಸನ್ನದು ಆವರಣದಿಂದ ದಿ:12–12–2007ರಂದು ಅಮಾನತುಪಡಿಸಿದ 440–430 ಲೀ ಮದ್ಯ ಮತ್ತು 144–890 ಲೀ ಬೀರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳದೇ ನನಗೆ ಬಿಡುಗಡೆ ಮಾಡಬೇಕಾಗಿ ಪ್ರಾರ್ಥಿಸುತ್ತಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದು ರಕ್ಷಣಾ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು ಎಡಿಪಿರವರಿಂದ :–

ಸರ್ಕಾರಿ ಅಭಿಯೋಗ ಉಪ ನಿರ್ದೇಶಕರ ಪಾಟೀ ಸವಾಲಿಗೆ ಉತ್ತರಿಸುತ್ತಾ ದಿನಾಂಕ: 12–12–2007ರಂದು ಮೇಲೆ ಹೇಳಿದ ತನ್ನ ಸನ್ನದು ಅಂಗಡಿಗೆ ಅಬಕಾರಿ ಇಲಾಖೆಯವರು ದಾಳಿ ಮಾಡಿದಾಗ ತನ್ನ ಮಗ ಆಶ್ವಿನ್ ಅಂಗಡಿಯಲ್ಲಿ ಹಾಜರಿದ್ದ .ಈ ಪ್ರಕರಣದಲ್ಲಿ ಪ್ರಾಸ.–1 ಮತ್ತು 2ರವರ ಪರಿಚಯ ತನಗೆ ಬಹಳ ವರ್ಷಗಳಿಂದ ಇರುತ್ತದೆ. ಆದರೆ ಅವರಿಗೆ ತನ್ನ ಮೇಲೆ ಯಾವುದೇ ವೈಯಕ್ತಿಕ ದ್ವೇಷ ಇರುವುದಿಲ್ಲ. ತನ್ನ ತಮ್ಮಂದಿರ ಚಿತಾವಣೆ ಮೇರೆಗೆ ಅಬಕಾರಿ ಇಲಾಖೆಯವರು ತನ್ನ ಮೇಲೆ ಸುಳ್ಳು ಕೇಸರು ಹಾಕಿದ್ದರು ಎಂಬ ಮಾಹಿತಿಯನ್ನು ತಾನು ಅಬಕಾರಿ ಇಲಾಖೆ ಮೇಲಾಧಿಕಾರಿಗಳಿಗಾಗಲೀ ಹಾಗೂ ವಕೀಲರಾಗಲೀ ನಾನು ಈವರೆಗೆ ನೀಡಿಲ್ಲ. ತಾನು ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟ ಮಾಡಲು ಯೋಗ್ಯವಾದ ಮದ್ಯದ ಬಾಟಲಿಗಳನ್ನು ಸನ್ನದು ಆವರಣದಲ್ಲಿಟ್ಟು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧ ಮಾಡಿರುತ್ತೇನೆಂದರೆ ಸರಿ ಅಲ್ಲ, ಅಬಕಾರಿ ಇಲಾಖೆಯವರು ತನ್ನ ಸನ್ನದಿನಂಗಡಿಗೆ ದಾಳಿ ಮಾಡಿ ನಿ.ಪಿ–1 ರಂತೆ ಒಂದು ವಿವರವಾದ ಮಹಜರು ಬರೆದು ಮೇಲೆ ಹೇಳಿದ ಅಕ್ರಮ ಮದ್ಯದ ಬಾಟಲಿಗಳನ್ನು ಅಮಾನತು ಪಡಿಸಿದರು ಅಂದರೆ ಸರಿಯಲ್ಲ ,ತಾನು ಈ ಪ್ರಕರಣದಲ್ಲಿ ಮುಖ್ಯ ವಿಚಾರನೆಯಲ್ಲಿ ಯಾವುದೇ ಅಪರಾಧ ಮಾಡಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ– 1 ,2 ಮತ್ತು 3 ಹಾಗೂ ರಕ್ಷಣಾ ಪರ ಸಾಕ್ಷಿದಾರರಾದ ಡಿಡಬ್ಲ್ಯೂ–1ರ ಸಾಕ್ಷಿ ವಿಚಾರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಿ ಅಭಿಯೋಜಕರ ಹಾಗೂ ರಕ್ಷಣಾ ಪರ ವಕೀಲರ ವಾದ ವಿವಾದವನ್ನು ಅಲಿಸಿ ಪ್ರಕರಣವನ್ನು ಅಂತಿಮ ಅದೇಶ ಹೊರಡಿಸುವುದು ಸೂಕ್ತವೆಂದು ಪರಿಗಣಿಸಲಾಯಿತು.

ಆರೋಪಿತರಾದ ಶ್ರೀ.ಕೆ.ಮಾಧವ ಗೌಡ, ಸಿಎಲ್–9 ಸನ್ನದುದಾರರು ಸನ್ನದು ಆವರಣದಲ್ಲಿ ಗ್ರಾಹಕರಿಗೆ ರಹದಾರಿ ಮೂಲಕ ಪಡೆದ ಗುಣಮಟ್ಟದ ಮದ್ಯವನ್ನು ಮಾರಾಟ ಮಾಡುವುದು ಅವರ ಬದ್ಧತೆಯಾಗಿದ್ದು, ಆದರೆ ಅವರಿಗೆ ನೀಡಿದ ಸನ್ನದನ್ನು ದುರ್ಬಳಕೆ ಮಾಡಿಕೊಂಡು ಗ್ರಾಹಕರಿಗೆ ಇಂತಹ ನಕಲಿ ಮದ್ಯವನ್ನು ಸಂಗ್ರಹಿಸಿಕೊಂಡು, ಅಸಲಿ ಮದ್ಯದ ಜೊತೆಗೆ ಮಾರಾಟ ಮಾಡುವ ಉದ್ದೇಶ ಹೊಂದಿದ್ದು ಗ್ರಾಹಕರಿಗೆ ವಂಚಿಸಿ, ಅವರ ಆರೋಗ್ಯಕ್ಕೆ ಹಾಗೂ ಜೀವಕ್ಕೆ ಹಾನಿ ಮಾಡುವಂತಹ ಕೃತ್ಯ ಎಸಗಿರುವುದು ಅಲ್ಲದೇ ಸರ್ಕಾರದ ಅದಾಯಕ್ಕೆ ನಷ್ಟ ಉಂಟುಮಾಡಿರುವುದು ದಾಖಲಿಸಿರುವ ಪ್ರಕರಣದ ದಾಖಲೆಗಳಿಂದ ಸಾಭೀತಾಗಿರುತ್ತದೆ

ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಎ ಅಡಿ ಸನ್ನದುದಾರರು ಅಸಲಿ ಅಧಿಕೃತ ಮದ್ಯದೊಂದಿಗೆ ತೆರಿಗೆ ರಹಿತ ಮದ್ಯ ಹಾಗೂ ನಕಲಿ ಮದ್ಯವನ್ನು ಹೊಂದಿದ್ದ ಸಂದರ್ಭದಲ್ಲಿ ನಕಲಿ ಹಾಗೂ ತೆರಿಗೆ ರಹಿತ ಮದ್ಯದೊಂದಿಗೆ ಅಸಲಿ ಹಾಗೂ ರಹದಾರಿ ಗೊಳ್ಳಪಟ್ಟ ಮದ್ಯವನ್ನು ಸನ್ನದು ಆವರಣದಲ್ಲಿ ಶೇಖರಿಸಿದ್ದು, ಸದ್ರಿ ಎಲ್ಲಾ ಮದ್ಯವನ್ನು ಸರ್ಕಾರಕ್ಕೆ ವಶಪಡಿಸಿಕೊಂಡು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸನ್ನದುದಾರರು ತನ್ನ ಸನ್ನದಿನ ವ್ಯವಹಾರದಲ್ಲಿ ಅಸಲಿ ಮದ್ಯದೊಂದಿಗೆ ನಕಲಿ ಮದ್ಯ ಸಂಗ್ರಹಣೆ ಮಾಡಿ ಹಾಗೂ ಗ್ರಾಹಕರಿಗೆ ವಿತರಣೆಗೆ ಅಸ್ಪದ ನೀಡಿರುವುದು ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಬೀತಾಗಿರುವುದರಿಂದ ಹಾಗೂ ಜಪ್ತುಪಡಿಸಿಕೊಂಡ ಮದ್ಯವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಎ ರೀತ್ಯಾ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದಾಗಿ ಸನ್ನದುದಾರರಾದ ಶ್ರೀ.ಕೆ.ಮಾಧವ ಸಿಎಲ್-9 ಸನ್ನದುದಾರರು, ಶಿವಶಕ್ತಿ ಬಾರ್, ಕನ್ಯಾನ, ಬಂಟ್ವಾಳ ಇವರಿಗೆ ದಿ:29-5-2009ರಂದು ನೀಡಲಾದ ಕಾರಣ ಕೇಳಿ ನೋಟಿಸಿಗೆ ಅವರು ನೀಡಿರುವ ಉತ್ತರ ಸಮಂಜಸವಾಗಿರುವುದಿಲ್ಲ.

ಸನ್ನದು ಆವರಣದಲ್ಲಿ ಅನಧಿಕೃತವಾಗಿ ದಾಸ್ತಾನು ಇದ್ದ ನಕಲಿ ಮದ್ಯವನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ವಿಶ್ಲೇಷಣಾ ವರದಿಯಲ್ಲಿ ಮಾದರಿಗಳ ಪೈಕಿ 40 ಬಾಟಲಿಗಳಲ್ಲಿ ಇದ್ದ ನಾದನ್ ಮಾಲ್ಟ್ ವಿಸ್ಕಿಯಲ್ಲಿ ಮದ್ಯಸಾರದ ಅಂಶ 25.2 ಡಿಗ್ರಿ ಯು.ಪಿ ಇದ್ದು,ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತದೆ ಎಂದು ಹಾಗೂ ಉಳಿದಂತೆ 26 ಬಾಟಲಿಗಳಲ್ಲಿದ್ದ ಹನೀ ಮಾಸ್ಟರ್ ವಿಸ್ಕಿ ಇದರಲ್ಲಿ ಮದ್ಯಸಾರದ ಅಂಶ 35.6 ಡಿಗ್ರಿ ಯು.ಪಿ ಇದ್ದು, ಬಾರತ ಮಾನಕ ಬ್ಯೂರೋದ ಮಾನಕಕ್ಕೆ ಅನುಗುಣವಾಗಿಲ್ಲದೇ ಅವು ನಕಲಿ ಮದ್ಯವಾಗಿರುತ್ತದೆ ಎಂದು ಸ್ಪಷ್ಟ ಅಭಿಪ್ರಾಯ ನೀಡಿರುವುದರಿಂದ ಹಾಗೂ ಸನ್ನದುದಾರರು ಸನ್ನದು ಆವರಣದಲ್ಲಿ ಅಧಿಕೃತ ಗುಣ ಮಟ್ಟದ ರಹದಾರಿ ಮೂಲಕ ಪಡೆದ ಮದ್ಯ ಮಾರಾಟದ ಜೊತೆಗೆ ಅಧಿಕ ಲಾಭವನ್ನು ಪಡೆಯುವ ಉದ್ದೇಶದಿಂದ ಪಾನೀಕರ ಅರೋಗ್ಯಕ್ಕೆ ಮಾರಕವಾಗುವಂತಹ ಹಾಗೂ ಜೀವ ಹಾನಿಗೆ ಎಡೆಮಾಡಿ ಕೊಡುವಂತಹ ನಕಲಿ ಮದ್ಯವನ್ನು ಮಾರಾಟ ಮಾಡಿ ಸನ್ನದುದಾರರು ತನ್ನ ಸನ್ನದು ಸವಲತ್ತನ್ನು ದುರ್ಬಳಕೆ ಮಾಡಲು ಪ್ರಯತ್ನಿಸಿರುವುದು ಸಾಬೀತಾಗಿರುವ ಕಾರಣ ಸನ್ನದು ಆವರಣ ತಪಾಸಣಾ ದಿ:12-12-2007-ಲಂದು ಜಪ್ತು ಪಡಿಸಿದ ಅಧಿಕೃತ 440.340 ಲೀಟರ್ ಮದ್ಯ ಹಾಗೂ 144.890 ಲೀಟರ್ ಬೀರ್ (ಅನುಬಂಧ-1ರಲ್ಲಿ ನಮೂದಿಸಿದಂತೆ) ಹಾಗೂ ಅವರಣದಲ್ಲಿದ್ದ 49.500 ಲೀಟರು ಆಕ್ರಮ ನಕಲಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂ: ಎಫ್ ಡಿ:06:ಪಿಇಎಸ್:07 ದಿ:13-7-2007ರ ಕಲಂ 3ರಲ್ಲಿ Portable Ligour and Rectified Sprit (1) All confiscated Liquor in sealed bottles or in any other receptacles shall be destroyed ಎಂದು ಆದೇಶಿಸಿರುವುದನ್ನು ಪರಿಗಣಿಸಿ ಮೇಲಿನಂತ ಮೊಕದ್ದಮೆಯಲ್ಲಿ ಜಪ್ತು ಪಡಿಸಿಕೊಳ್ಳಲಾದ ಅನಧಿಕೃತ ಮದ್ಯ ಮತ್ತು ಸನ್ನದು ಆವರಣದಲ್ಲಿ ದಾಸ್ತಾನು ಇದ್ದ ಅಧಿಕೃತ ಮದ್ಯ ಹಾಗೂ ಬಿಯರನ್ನು ನಾಶಪಡಿಸಬಹುದಾಗಿದೆ. ಮೇಲಿನ ಎಲ್ಲಾ ಅಂಶಗಳನ್ನು ಅವಲೋಕಿಸಿ ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/ಡಿಟಿಸಿಆರ್/220/2007-08, ದಿನಾಂಕ: 04-08-2011.

ಬಿ.ವಿ.ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಎ) ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ನಿರೀಕ್ಷಕರು,ಬಂಟ್ವಾಳ ವಲಯ ಇವರ ತಕ್ಷೀರು ಸಂಖ್ಯೆ:2/2007-08,ದಿ:12-12-2007ರಂದು ವಶಪಡಿಸಿಕೊಂಡ ಈ ಕೆಳಕಂಡ ಮದ್ಯವನ್ನು (ಮಾದರಿಗಳನ್ನು ಹೊರತುಪಡಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

I – ಅನಧಿಕೃತವಾಗಿ ಶೇಖರಿಸಿ ಇಡಲಾದ ನಕಲಿ ಮದ್ಯ

1) 750 ಎಂ.ಎಲ್.ನ 40 ಸೀಸೆಗಳಲ್ಲಿ ನಾದನ್ ಮಾಲ್ಟ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ

2) 750 ಎಂ.ಎಲ್.ನ 26 ಸೀಸೆಗಳಲ್ಲಿ ಹನೀ ಮಾಸ್ಟರ್ ವಿಸ್ಕಿ ಎಂಬ ಲೇಬಲ್ ಹೊಂದಿದ ಗೋವಾ ರಾಜ್ಯದ ತಯಾರಿಕೆ ಮದ್ಯ .

II. ಸನ್ನದು ಆವರಣದಲ್ಲಿ ಅಧಿಕೃತವಾಗಿ ಸರಬರಾಜು ಆಗಿ ಮಾರಾಟಕ್ಕೆ ಇಡಲಾದ 440.340 ಲೀಟರ್ ಮದ್ಯ ಹಾಗೂ 144.890 ಲೀಟರ್ ಬೀರ್ (ಮದ್ಯ ಮತ್ತು ಬೀಯರಿನ ವಿವರಗಳ ಪಟ್ಟಿ ಅನುಬಂಧ-1ರಲ್ಲಿ ನಮೂದಿಸಿದಂತೆ)

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯ/ಬಿಯರ್‌ನ್ನು ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13-7-2007 ರಂತೆ ಮಾರಾಟ ಮಾಡಲು ನಿಷೇದಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಊ)3 ರ ಅನ್ವಯ ಅಬಕಾರಿ ಉಪ ಅಧೀಕ್ಷಕರು,ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ: 12-9-2005 ರ ಮಾರ್ಗ ಸೂಚಿಗಳನ್ನು ಅನುಸರಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಹಾಗೂ ಕಂದಾಯ ಅಧಿಕಾರಿಗಳು, ವ್ಯವಸ್ಥಾಪಕರು ಕೆ.ಎಸ್.ಬಿ.ಸಿ.ಎಲ್ ಪುತ್ತೂರು ಡಿಪೋ ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅವರ ಸಮಕ್ಷಮ ಮಹಜರು ಜರುಗಿಸಿ ಮದ್ಯ ಹಾಗೂ ಬಿಯರನ್ನು ನಾಶಪಡಿಸಲು ಆದೇಶಿಸಿದೆ. ಹಾಗೂ ಉಳಿದ ಖಾಲಿ ಸೀಸೆಗಳನ್ನು ಪ್ರಚಲಿತ ಹಳೆಯ ಖಾಲಿ ಸೀಸೆಗಳಿಗೆ ಲಭ್ಯವಾಗುವ ಗರಿಷ್ಟ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಿ ಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:04-08-2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ಬಿ.ವಿ. ಹೂವಪ್ಪಗೌಡ

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ -1 : ಶ್ರೀ.ಸಿ.ಹೆಚ್. ಸೋಮಶೇಖರ ,ಅಬಕಾರಿ ನಿರೀಕ್ಷಕರು ಪುತ್ತೂರು ಉಪ ವಿಭಾಗ,ಪುತ್ತೂರು

ಪ್ರಾ.ಸಾ -2 : ಶ್ರೀ.ಹರೀಶ್.ಎನ್ ,ಅ.ರ , ಬಂಟ್ವಾಳ ವಲಯ

ಪ್ರಾ.ಸಾ-3 : ಶ್ರೀ.ಕಮಲಾಕ್ಷ,ಅ.ನಿ.ಬಂಟ್ವಾಳ ವಲಯ

ಅನುಬಂಧ- II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

ನಿಶಾನೆ ಪಿ-1 :- ಮಹಜರು ಪ್ರತಿ

ನಿಶಾನೆ ಪಿ-1ಎ :- ಅದರ ಮೇಲಿನ ಸಹಿ (ಪ್ರಾ.ಸಾ-1)

ನಿಶಾನೆ ಪಿ-1ಬಿ :- ಅದರ ಮೇಲಿನ ಸಹಿ (ಪ್ರಾ.ಸಾ-2)

ನಿಶಾನೆ ಪಿ-2 :- ಅನುಬಂಧ-1

ನಿಶಾನೆ ಪಿ-2ಎ :- ಅದರ ಮೇಲಿನ ಸಹಿ

ನಿಶಾನೆ ಪಿ-3 :- ಅನುಬಂಧ-2

ನಿಶಾನೆ ಪಿ-3ಎ :- ಅದರ ಮೇಲಿನ ಸಹಿ

ನಿಶಾನೆ ಪಿ-4 :- ಪ್ರಥಮ ವರ್ತಮಾನ ವರದಿ

ನಿಶಾನೆ ಪಿ-4ಎ :- ಅದರ ಮೇಲಿನ ಸಹಿ

ನಿಶಾನೆ ಪಿ-5 :- ರಾಸಾಯನಿಕ ವಿಶ್ಲೇಷಕರ ವರದಿ

ನಿಶಾನೆ ಪಿ-6 :- ತನಿಖಾ ವರದಿ ದಿ:29-8-2009

ನಿಶಾನೆ ಪಿ-6 ಎ :- ಅದರ ಮೇಲಿನ ಸಹಿ

ಅನುಬಂಧ- III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :-

ಡಿಡಬ್ಲ್ಯೂ-1 :- ಮಾಧವ ಕೆ, ಸಿಎಲ್-9 ಸನ್ನದುದಾರರು, ಶಿವಶಕ್ತಿ ಬಾರ್, ಕನ್ಯಾನ, ಬಂಟ್ವಾಳ.

ಅನುಬಂಧ- IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :-

-ಯಾವುದು ಇಲ್ಲ-

ಬಿ.ವಿ. ಹೂವಪ್ಪಗೌಡ

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ-1

ಕ್ರ. ಸಂ	ಸನ್ನದು ಆವರದಲ್ಲಿ ದಾಸ್ತಾನು ಇದ್ದ ಮದ್ಯ ದ ಹೆಸರು	ಮದ್ಯದ ಪ್ರಮಾಣ (ಬಾಟಲಿಗಳಲ್ಲಿ)			ಒಟ್ಟು ಲೀಟರು ಗಳಲ್ಲಿ
		750 ML	375 ML	180 ML	
1	ಮ್ಯಾಜಿಕ್ ವಿಸ್ಕಿ	12	-	15	11.700
2	ನಂ.1 ಹೈವೇ ವಿಸ್ಕಿ	-	-	356	64.080
3	ಮೈಸೂರು ಲ್ಯಾನ್ಸರ್ ವಿಸ್ಕಿ	28	8	49	32.820
4	ವಿಂಡ್ಸರ್ ವಿಸ್ಕಿ	-	5	117	22.935
5	ಪ್ರಸ್ಟೇಜ್ ವಿಸ್ಕಿ	-	23	109	28.245

ಕ್ರ. ಸಂ	ಸನ್ನದು ಆವರದಲ್ಲಿ ದಾಸ್ತಾನು ಇದ್ದ ಮದ್ಯ ದ ಹೆಸರು	ಮದ್ಯದ ಪ್ರಮಾಣ (ಬಾಟಲಿಗಳಲ್ಲಿ)			ಒಟ್ಟು ಲೀಟರು ಗಳಲ್ಲಿ
		750 ML	375 ML	180 ML	
6	ಓಲ್ಡ್ ಮಂಕ್ ತ್ರಿಬಲ್ ಎಕ್ಸ್ ರಂ	8	21	58	24.315
7	ಬೋನಿಸ್ ಸ್ಕಾಟ್ ವಿಸ್ಕಿ	18	–	124	35.820
8	ಸೂಪರ್ ಜಾಕ್ ವಿಸ್ಕಿ	–	–	48	8.640
9	ಸೂಪರ್ ಜಾಕ್ XXX ರಂ	–	15	40	12.825
10	ಸೂಪರ್ ಜಾಕ್ ಡ್ರೈ ಜಿನ್	11	–	90	24.450
11	ಗೋಲ್ಡ್ ಕಪ್ ವಿಸ್ಕಿ	10	18	260	61.050
12	ಕ್ಲಬ್ ಚಾಯ್ಸ್ ವಿಸ್ಕಿ	–	9	144	29.295
13	ಡಿ.ಎಸ್.ಪಿ ವಿಸ್ಕಿ	–	23	4	9.345
14	ಬ್ಯಾಗ್ ಪೈಪರ್ ವಿಸ್ಕಿ	–	16	6	7.080
15	ಬ್ಯಾಗ್ ಪೈಪರ್ ಸ್ಯಾಚೇಟ್	–	–	38	6.840
16	ಗ್ರೀನ್ ಲೇಬಲ್ ವಿಸ್ಕಿ	–	–	126	22.680
17	ಎಂ.ಜಿ.ಎಂ ವಡ್ಕ	–	–	9	1.620
18	ಕ್ಲಾಸಿಕ್ ವಿಸ್ಕಿ	–	–	10	1.800
19	ಒರಿಜಿನಲ್ ಚಾಯ್ಸ್ ವಿಸ್ಕಿ	1	–	–	0.750
20	ಗೋಲ್ಕಂಡ ರೂಬಿ ವೈನ್ಸ್	–	–	33	5.940
21	ಮೆಕ್ ಡವೆಲ್ ನಂ.1 ವಿಸ್ಕಿ	6	–	–	4.500
22	ಎಂ.ಜಿ.ಎಂ ಗ್ರಾಗರೀನ್ ವಡ್ಕ	1	–	102	19.110
23	ಜಿ.ಡಿ ವಿಸ್ಕಿ	6	–	–	4.500
24	ಒಟ್ಟು	101	138	1738	440.340

ಬಿಯರ್		650 ML	330 ML
1	ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ್	72	47
2	ಲಂಡನ್ ಸೂಪರ್ ಸ್ಟ್ರಾಂಗ್	–	40
3	ನಾಕ್ ಔಟ್ ಸ್ಟ್ರಾಂಗ್ ಬೀರ್	91	4
4	ಕಿಂಗ್ ಫಿಶರ್ ಪ್ರಿಮಿಯಂ	–	27
		163	118
ಒಟ್ಟು		144.890 ಲೀಟರು	

ಬಿ.ವಿ. ಹೂವಪ್ಪಗೌಡ

ಪಿ.ಆರ್. 918

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಾರ್ಯಾಲಯ.

ಕ್ರಸಂ:ಡಿಆರ್‌ಐ:ಸಿಬ್ಬಂಧಿ:ಮಾ.ಹ.ಕಾ:2011-12 ದಿನಾಂಕ: 03-01-2012

ಅಧಿಸೂಚನೆ

ವಿಷಯ:- ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 4(1) (ಬಿ) ಅನುಸಾರ ಸಹಕಾರ ಸಂಘಗಳ ಉಪನಿಬಂಧಕರು: ಕೊಡಗು ಜಿಲ್ಲೆ ಮಡಿಕೇರಿ ಇವರ ಕಛೇರಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

ಭಾರತ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005ರ (Central Act 22 of 2005) ಕಲಂ 5(1) 5(2) ಮತ್ತು 19(1)ರ ಪ್ರಕಾರ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಸಹಕಾರ ಇಲಾಖೆಗೆ ಸೇರಿದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಡಿಕೇರಿ. ಉಪವಿಭಾಗ, ಮಡಿಕೇರಿ. ಈ ಕಚೇರಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು, ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ **"ಸಾರ್ವಜನಿಕ ಮಾಹಿತಿ ಅಧಿಕಾರಿ"** ಮತ್ತು **"ಸಹಾಯಕ ಮಾಹಿತಿ ಅಧಿಕಾರಿ"** ಹಾಗೂ **"ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ"** ಈ ಕೆಳಕಾಣಿಸಿದ ಅಧಿಕಾರಿಗಳನ್ನು ನೇಮಿಸಲಾಗಿದೆ.

ಕಚೇರಿಯ ಹೆಸರು	ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 19(1)ರಡಿಯಲ್ಲಿ ನೇಮಿಸಲಾದ ಮೇಲ್ಮನವಿ ಪ್ರಾಧಿಕಾರ	ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ಕೊಡಗು ಜಿಲ್ಲೆ, ಮಡಿಕೇರಿ	ಶ್ರೀ ಬಿ.ಎಸ್ ಹರೀಶ್ ಸಹಕಾರ ಸಂಘಗಳ ಜಂಟಿನಿಬಂಧಕರು ಮೈಸೂರು ಪ್ರಾಂತ ಮೈಸೂರು	ಶ್ರೀ ಎಂ. ವೆಂಕಟಸ್ವಾಮಿ, ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ ಮಡಿಕೇರಿ	ಶ್ರೀ ಶ್ರೀಧರ. ಆರ್ ಅಧೀಕ್ಷಕರು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ
	ದೂರವಾಣಿ ನಂ: 0821-2520823	ದೂರವಾಣಿ ನಂ: 08272-228519	ದೂರವಾಣಿ ನಂ: 08272-228519
	email ID: jrcs-mysore-ka@nic.in	email ID: drcs-kodagu-ka@nic.in	email ID: drcs-kodagu-ka@nic.in

ಮಾಹಿತಿ ಹಕ್ಕು ಅಧಿನಿಮಯ 2005 ಸೆಕ್ಷನ್ 4(1) (ಬಿ) ಅನ್ವಯ

ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ, ಮಡಿಕೇರಿ. ಇವರಿಗೆ ಸಂಬಂಧಿಸಿದ ಮಾಹಿತಿ

ಅಧ್ಯಾಯ-1

ಕಲಂ 4(1) (ಬಿ) (1)

1. **ಕಚೇರಿ ವ್ಯವಸ್ಥೆಯ ಬಗ್ಗೆ ವಿವರಗಳು: ಕಾರ್ಯಗಳು ಮತ್ತು ಕರ್ತವ್ಯಗಳು:-.**

ಕೊಡಗು ಜಿಲ್ಲೆಯ ಕಾರ್ಯ ವ್ಯಾಪ್ತಿಯಲ್ಲಿ ಸಹಕಾರ ಚಳುವಳಿಯು ಉತ್ತಮ ರೀತಿಯಲ್ಲಿ ಮುಂದುವರಿಯುತ್ತಿದ್ದು, ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳು ಮಡಿಕೇರಿ ಉಪವಿಭಾಗದ ಕಾರ್ಯವ್ಯಾಪ್ತಿಗೆ ಬರುತ್ತದೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು ಜನ ಸಂಖ್ಯೆ 548561 ಈ ಪೈಕಿ, ಮಡಿಕೇರಿ ತಾಲ್ಲೂಕಿನಲ್ಲಿ 142012, ವೀರಾಜಪೇಟೆ ತಾಲ್ಲೂಕಿನಲ್ಲಿ 200628, ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ 205921 ಜನ ಸಂಖ್ಯೆ ಇರುತ್ತದೆ. ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಸಹಕಾರ ಸಂಸ್ಥೆಗಳು ಆರ್ಥಿಕ ಹಾಗೂ ಸಾರ್ವಜನಿಕ ಸೌಲಭ್ಯಗಳು, ಸ್ಥಳೀಯ ಉದ್ಯೋಗ ಸೃಷ್ಟಿಸಿ ಸ್ಥಳೀಯ ಅಭಿವೃದ್ಧಿಗೆ ಒತ್ತು ನೀಡುತ್ತಿವೆ. ಕೃಷಿ ಪತ್ತಿನ ಸಹಕಾರ ಸಂಘಗಳು, ಮಾರಾಟ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆರ್ಥಿಕವಾಗಿ ಸಬಲವಾಗಿವೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಲ್ಲಿ ಶೇ. 63ಕ್ಕೂ ಹೆಚ್ಚು ಸಹಕಾರ ಸಂಘಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಕೊಡಗು ಜಿಲ್ಲೆ, ಮಡಿಕೇರಿ ಈ ಕಾರ್ಯವ್ಯಾಪ್ತಿಯಲ್ಲಿ ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ತಾಲ್ಲೂಕುಗಳ ವ್ಯಾಪ್ತಿ ಹೊಂದಿದ್ದು, ಸಹಕಾರ ಸಂಘಗಳ /ಸೌಹಾರ್ದ ಸಹಕಾರಿಗಳ, ಹಣಕಾಸು ಸಂಸ್ಥೆಗಳು, ಚೀಟಿನಿಧಿ ಸಂಸ್ಥೆಗಳು, ಕೆಪಿಎಂಆರ್ ಕ್ಯಾಕಾಂಫ್ಯಾಕ್ಟ್ ದಾವಾ ಪ್ರಕರಣಗಳು, ವಿಚಾರಣೆಗಳು ಯಶಸ್ವಿನಿ ಯೋಜನೆ ನಿರ್ವಹಣೆಗೆ ಸಂಬಂಧಿಸಿದ ಆಡಳಿತಾತ್ಮಕ ಕರ್ತವ್ಯವನ್ನು ನಿರ್ವಹಿಸಲಾಗುತ್ತಿದೆ.

ಅ) ಇಲಾಖೆಯ ಹೆಸರು: ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಕೊಡಗು ಜಿಲ್ಲೆ, ಮಡಿಕೇರಿ

ಆ) ರಚನೆ:

ಕ್ರ ಸಂ	ಹುದ್ದೆಯ ವಿವರ	ಮಂಜೂರಾದ ಹುದ್ದೆಗಳು	ಕಾರ್ಯನಿರತ	ಖಾಲಿ ಇರುವ ಹುದ್ದೆಗಳು
1	ಸಹಕಾರ ಸಂಘಗಳ ಉಪನಿಬಂಧಕರು	1	1	–
2	ಸಹಕಾರ ಅಭಿವೃದ್ಧಿ ಅಧಿಕಾರಿ	3	1	2
3	ಅಧೀಕ್ಷಕರು	1	1	–
4	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	3	3	–
5	ಸಹಕಾರ ಸಂಘಗಳ ನಿರೀಕ್ಷಕರು	2	–	2
6	ಪ್ರಥಮ ದರ್ಜೆ ಸಹಾಯಕರು	3	2	1
7	ಶೀಘ್ರ ಲಿಪಿಗಾರರು	1	–	1
8	ಬೆರಳಚ್ಚುಗಾರರು	2	–	2
9	ದ್ವಿತಿಯ ದರ್ಜೆ ಸಹಾಯಕರು	3	1	2
10	ಡಿ ದರ್ಜೆ ನೌಕರರು	2	2	–
	ಒಟ್ಟು	**21**	**11**	**10**

ಅಧ್ಯಾಯ–2

ಕಲಂ 4(1) (ಬಿ) (ii)

ಅಧಿಕಾರಿ/ ಸಿಬ್ಬಂದಿಗಳ ಕರ್ತವ್ಯಗಳು

1. ಸಹಕಾರ ಸಂಘಗಳ ಉಪನಿಬಂಧಕರು:–

1. **ಆಡಳಿತಾತ್ಮಕ ಕರ್ತವ್ಯಗಳು:–** ಇಲಾಖಾ ಮುಖ್ಯಸ್ಥರ ನಿರ್ದೇಶನಗಳನ್ನು ನಿಯಮದ ಚೌಕಟ್ಟಿನಲ್ಲಿ

ಜಾರಿಗೊಳಿಸುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತಾರೆ. ಹಾಗೂ ಕಚೇರಿಯ ಸಿಬ್ಬಂದಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ. ಇಲಾಖಾ ವಿಚಾರಣೆ, ಇಲಾಖಾ ಸಭೆಗಳು, ಸಹಕಾರ ಸಂಘ/ಬ್ಯಾಂಕ್‌ಗಳ ಸಭೆಗಳು, ಸಮನ್ವಯ ಸಮಿತಿ ಸಭೆಗಳಿಗೆ ಹಾಜರಾಗುವುದು. ಸಾರ್ವಜನಿಕ ದೂರು ಅರ್ಜಿ ವಿಚಾರಣೆ ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ಯೋಜನೆಯ ಫಲಾನುಭವಿಯ ನೊಂದಾಣಿಗಾಗಿ ಕ್ರಮವಿಡುವುದು. ಮತ್ತು ಇಲಾಖಾ ಅಧಿಕಾರಿಗಳು ಆಗಿಂದಾಗ್ಗೆ ನೀಡುವ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಪಾಲಿಸುವುದು.

2. **ಕಾರ್ಯನಿರ್ವಾಹಕ ಕರ್ತವ್ಯಗಳು:–**

ಸಹಕಾರ ಸಂಘಗಳ ಮೇಲ್ವಿಚಾರಣೆ ಪರಿವೀಕ್ಷಣೆ ನಡೆಸುವುದು. ಕೇಂದ್ರ, ರಾಜ್ಯ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುವ ಯೋಜನೆಗಳ ಪ್ರಸ್ತಾವನೆಗಳನ್ನು ಸ್ವೀಕರಿಸುವುದು ಮತ್ತು ಅದನ್ನು ಮಂಜೂರಾತಿ ನೀಡುವುದು ಮತ್ತು ಹಣ ಬಿಡುಗಡೆ ಮಾಡುವುದು ಸರ್ಕಾರದ ಸಾಲ ಸರ್ಕಾರಕ್ಕೆ ಪಾವತಿಸಬೇಕಾದ ಪಾಲು ಬಂಡಾವಳ, ಪಾಲು ಮುನಾಫೆಗಳ ವಸೂಲಿಗೆ ಕ್ರಮಪಿಡುವುದು. ಮೇಲಾಧಿಕಾರಿಗಳಿಂದ ಬಂದ ಪತ್ರಗಳಿಗೆ ಉತ್ತರ ಹಾಗೂ ಸಂಬಂಧಿಸಿದಂತೆ ವರದಿ ಕಳುಹಿಸುವುದು.

3. **ಶಾಸನಾತ್ಮಕ ಕರ್ತವ್ಯಗಳು:–**

ಸರ್ಕಾರದ ಅಧಿಸೂಚನೆಯಲ್ಲಿ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಜಾರಿಗೆ ತರುವುದು. ಲೇವಾದೇವಿ ಕಾಯ್ದೆ ಮತ್ತು ನಿಯಮ, ಗಿರವಿದಾರರ ಕಾಯ್ದೆ ಮತ್ತು ನಿಯಮ, ಕೆಪಿಎಂಆರ್, ಕ್ಯಾಕಾಂಫ್ಯಾಕ್ಟ್ ಮತ್ತು ನಿಯಮ,

ಚೀಟಿ ನಿಧಿ ಕಾಯ್ದೆ ಮತ್ತು ನಿಯಮಗಳಲ್ಲಿ ಕರ್ತವ್ಯಗಳನ್ನು ನಿರ್ವಹಿಸುವುದು. ಸಂಘಸಂಸ್ಥೆಗಳ ನೊಂದಣಿ ಕಾಯ್ದೆ 1960 ರನ್ವಯ ನೊಂದಣಿ, ಫೈಲಿಂಗ್, ಬೈಲಾ ತಿದ್ದುಪಡಿ, ಶುಲ್ಕ ವಸೂಲಾತಿ, ದೂರು ಅರ್ಜಿ ವಿಚಾರಣೆ ಇತ್ಯಾದಿ

4. **ನ್ಯಾಯಿಕ ಸ್ವರೂಪದ ಕರ್ತವ್ಯಗಳು:**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ಮತ್ತು 70ರ ಪ್ರಕಾರ ದಾಖಲಾದ ದಾವಾ ಪ್ರಕರಣಗಳ ವಿಚಾರಣೆ-ನಡೆಸುವುದು. ಇಲಾಖಾಧಿಕಾರಿಗಳಿಂದ ಬಂದ ದಾವಾ ಕಡತಗಳನ್ನು ಇತ್ಯರ್ಥಗೊಳಿಸುವುದು. ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ದಾವೆ ದಾಖಲಿಸಲು ಅಧಿಕಾರ ನೀಡುವುದು.

5. **ಅಭಿವೃದ್ಧಿಪರ ಕರ್ತವ್ಯಗಳು:**

ಸಹಕಾರ ಸಂಘಗಳಿಗೆ ಸ್ನೇಹಿತ, ಗುರು, ಮಾರ್ಗದರ್ಶಿಯಾಗಿ ಸಲಹೆ ಸೂಚನೆಗಳನ್ನು ನೀಡುವುದು. ಸಹಕಾರ ಸಂಘಗಳ ಏಳಿಗೆಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಸಹಕಾರ ಸಂಘದ ಉಪನಿಯಮ ತಿದ್ದುಪಡಿಯ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಶಿಫಾರಸ್ ಮಾಡುವುದು. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 58(ಇ) ಪ್ರಕಾರ ಹೆಚ್ಚುವರಿ ನಿಧಿಗಳನ್ನು ಹೂಡಿಕೆ ಮಾಡಲು ಸಲಹೆಗಳನ್ನು ನೀಡುವುದು.

ಕ್ರ.ಸಂ	ಹುದ್ದೆಯ ವಿವರ	ವಿಷಯ ನಿರ್ವಾಹಕರ ಹೆಸರು ಶ್ರೀ/ಶ್ರೀಮತಿ	ವಿಷಯ ನಿರ್ವಹಣೆ
1	ಸಹಕಾರ ಅಭಿವೃದ್ಧಿ ಅಧಿಕಾರಿ, ಮಡಿಕೇರಿ	--	--
2	ಅಧೀಕ್ಷಕರು	ಆರ್. ಶ್ರೀಧರ್	ಆಡಳಿತ ಮತ್ತು ಸಿಬ್ಬಂದಿ ಶಾಖೆ ಲೇವಾದೇವಿ, ಗಿರವಿ, ಹಣಕಾಸು ಸಂಸ್ಥೆಗಳು ಹಾಗೂ ಚಿಟ್ಸ್, ಮಾಹಿತಿ ಹಕ್ಕು ಕಾಯಿದೆ, ವ್ಯಾಜ್ಯ ಶಾಖೆ , ಲೆಕ್ಕ ಶಾಖೆ, ದೂರವಾಣಿ ಮತ್ತು ಫ್ಯಾಕ್ಸ್‌ಯಂತ್ರ ನಿರ್ವಹಣೆ. ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
3	ಬೆರಳಚ್ಚುಗಾರರು	--	--
4	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಎಂ.ಎಸ್.ಮೋಹನ್	ಯೋಜನೆ, ವ್ಯಾಪಾರಾಭಿವೃದ್ಧಿ, ವೈದ್ಯನಾಥನ್ ವರದಿ ಅನುಷ್ಠಾನ, ಯಶಸ್ವಿನಿ ಸಹಕಾರ ಸಂಘಗಳ ಕಟ್ಟಡ ನಿರ್ಮಾಣ ಆಡಳಿತಾತ್ಮಕ ಅನುಮೋದನೆ, ಮಾರಾಟ, ವ್ಯಾಜ್ಯ ಶಾಖೆ ಇತ್ಯಾದಿ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
5		ಎಂ.ಈ.ಮೋಹನ್	ಆರ್.ಎಸ್.ಆರ್ ಶಾಖೆ. ಸಹಕಾರ ಸಂಘಗಳ ನೋಂದಣಿ, ಬೈಲಾ ತಿದ್ದುಪಡಿ, ನಿ.17, ಸಮಾಪನೆ ವಾಹನ ನಿರ್ವಹಣ, ಉಪನಿಬಂಧಕರ ಪ್ರವಾಸ ಮತ್ತು ದಿನಚರಿ ನಿರ್ವಹಣೆ ಪೀಠೋಪಕರಣಗಳು, ವಾರ್ಷಿಕ ಮಹಾ ಸಭೆ, ಮಹೋತ್ಸವ, ಅಧ್ಯಯನ ಪ್ರವಾಸ, ಹಾಗೂ ಚುನಾವಣೆ ಹಾಗೂ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.
6		ಸಿ.ಕೆ ಭವಾನಿ	ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಾರ್ಯನಿರ್ವಹಣೆ
7	ಪ್ರಥಮ ದರ್ಜೆ ಸಹಾಯಕರು	ಪಿ.ಬಿ ಮೋಹನ್ ಕುಮಾರ್	ಸಹಾಯಕ ನಿಬಂಧಕರ ಕಛೇರಿಯಲ್ಲಿ ಕಾರ್ಯನಿರ್ವಹಣೆ
8		ಎಸ್. ನಾಗೇಶ್	
9	ದ್ವಿತೀಯ ದರ್ಜೆ ಸಹಾಯಕರು	ನರಸಿಂಹಮೂರ್ತಿ	ಆಡಿಟ್ , ಎಲ್ಲಾ ವಿಧದ ಸಭೆಗಳು ಹಣದುರುಪಯೋಗ ಮತ್ತು ಸಾರ್ವಜನಿಕ ದೂರು, ಯಿಂದ ಮತ್ತು ಗೆ, ಸ್ಟಾಂಪ್ ನಿರ್ವಹಣೆ, ಲೇಖನ ಸಾಮಗ್ರಿ ನಿರ್ವಹಣೆ ಅಭಿಲೇಖಲಯದ ರಕ್ಷಣೆ ಪತ್ತು ಶಾಖೆ, ಕಲಂ 64,65, ಹಾಗೂ ಉಪನಿಬಂಧಕರು ಸೂಚಿಸುವ ಇನ್ನಿತರೆ ಕೆಲಸಗಳು.

ಕ್ರ.ಸಂ	ಹುದ್ದೆಯ ವಿವರ	ವಿಷಯ ನಿರ್ವಾಹಕರ ಹೆಸರು ಶ್ರೀ/ಶ್ರೀಮತಿ	ವಿಷಯ ನಿರ್ವಹಣೆ
10	ವಾಹನ ಚಾಲಕರು	--	--
11	ಡಿ.ಗ್ರೂಪ್ ನೌಕರರು	ಸೋಮಯ್ಯ	ಕಚೇರಿಯ ಕೊಠಡಿಗಳನ್ನು ಶುಚಿಯಾಗಿಡುವುದು. ಕಡತ, ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ ತಲುಪಿಸುವುದು. ಕಚೇರಿಯ ಮುಖ್ಯಸ್ಥರು ವಹಿಸುವ ಇತರೆ ಕೆಲಸಗಳ ನಿರ್ವಹಣೆ ಮಾಡುವುದು.
12	ಡಿ.ಗ್ರೂಪ್ ನೌಕರರು	ಕೆ.ಎ.ಸಿದ್ದಿಕ್	
13	ಡಿ.ಗ್ರೂಪ್ ನೌಕರರು	ರಾಜಮ್ಮ	

ಅಧ್ಯಾಯ-3

ಕಲಂ 4(1) (ಬಿ) (iii)

ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು

ಸರ್ಕಾರದ ಅಧಿಸೂಚನೆ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು. ಅದರ ಪ್ರಕಾರ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ. ಕಚೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂಧಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರಿ ಉಪ ನಿಬಂಧಕರಾಗಿರುತ್ತಾರೆ.

ಅಧ್ಯಾಯ-4

ಕಲಂ 4(1) (ಬಿ) (iv)

ಕಾರ್ಯನಿರ್ವಹಿಸಲು ಅನುಸರಿಸುವ ಮಾನದಂಡಗಳು

ಕರ್ನಾಟಕ ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ; ಕಾಯಿದೆ ಮತ್ತು ನಿಯಮ, ಲೇವಾದೇವಿ ಮತ್ತು ಕಾಯ್ದೆ ನಿಯಮ, ಗಿರವಿ ಕಾಯ್ದೆ ಮತ್ತು ಚೀಟಿ ನಿಧಿ ಕಾಯ್ದೆ ಮತ್ತು ನಿಯಮ, ಸಂಘಗಳ ನೊಂದಣಿ ಕಾಯ್ದೆ 1960 ರ ನಿಯಮಗಳಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

ಅಧ್ಯಾಯ-5

ಕಲಂ 4(1) (ಬಿ) (v)

1. ಇಲಾಖೆಯು ರಾಜ್ಯದಲ್ಲಿ ಕೆಳಕಂಡ ಶಾಸನಬದ್ಧ ಕಾಯ್ದೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997 ಮತ್ತು ನಿಯಮಗಳು 2004.
3. ಚಿಟ್‌ಫಂಡ್ ಆಕ್ಟ್ 1982 ಮತ್ತು ಚಿಟ್‌ಫಂಡ್ ನಿಯಮಗಳು (ಕರ್ನಾಟಕ) 1983.
4. ಪಾನ್‌ಬ್ರೋಕರ್ಸ್ ಆಕ್ಟ್ 1960 ಮತ್ತು ನಿಯಮಗಳು 1966.
5. ಕರ್ನಾಟಕ ಮನಿಲೆಂಡರ್ಸ್ ಕಾಯ್ದೆ 1961 ಮತ್ತು ನಿಯಮಗಳು 1965.
6. ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆ ಕಾಯ್ದೆ 2004.

2. ಉಪ ನಿಬಂಧಕರ ಕಚೇರಿಯಲ್ಲಿ ನಿರ್ವಹಿಸುತ್ತಿರುವ ಇತರೇ ನಿಯಮಗಳ ವಹಿಗಳು:-

1. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು.
2. ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳು
3. ಕರ್ನಾಟಕ ನಾಗರೀಕ ಸೇವಾ (ವೈದ್ಯಕೀಯ ಹಾಜರಾತಿ) ನಿಯಮಗಳು.
4. ಕರ್ನಾಟಕ ನಾಗರೀಕ ಸೇವೆಗಳು (ಕಾಲಮಿತಿ ಬಡ್ತಿ ನಿಯಮಗಳು).
5. ಕರ್ನಾಟಕ ನಾಗರೀಕ ಸೇವೆಗಳು (ಸ್ವಯಂಚಾಲಿತ ಮುಂಬಡ್ತಿ).
6. ಇಲಾಖೆಯಿಂದ ಹೊರಡಿಸಿರುವ ಮುಖ್ಯ ಆದೇಶಗಳು.

7. ಕರ್ನಾಟಕ ಸಾಮಾನ್ಯ ಭವಿಷ್ಯನಿಧಿ ನಿಯಮಗಳು.

8. ಕರ್ನಾಟಕ ಆರ್ಥಿಕ ಸಂಹಿತೆ.

9. ಕರ್ನಾಟಕ ಸ್ವವಿವರ ಸಾಧಿಲ್ವಾರು ವೆಚ್ಚ ಕೈಪಿಡಿ.

3. ಉಪ ನಿಬಂಧಕರು ಕಚೇರಿಯಲ್ಲಿ ನಿರ್ವಹಿಸುತ್ತಿರುವ ವಹಿಗಳು;-

1. ಯಿಂದಾ ಪುಸ್ತಕ.
2. ರವಾನೆ ಪುಸ್ತಕ.
3. ಸಿಬ್ಬಂದಿ ಸೇವಾ ಪುಸ್ತಕಗಳು
4. ಹಾಜರಾತಿ ಪುಸ್ತಕ.
5. ಸಂಬಳ, ಪ್ರವಾಸಭತ್ಯೆ ಮತ್ತು ಸಾದಿಲ್ವಾರು ಪಾವತಿ ಪುಸ್ತಕ.
6. ನಗದು ಪುಸ್ತಕ.
7. ವಿಷಯ ಪುಸ್ತಕ.
8. ಸಿಬ್ಬಂದಿ ಚಲನವಲನ ಪುಸ್ತಕ.
9. ನಗದೀಕರಣ ಪುಸ್ತಕ.
10. ಚೆಕ್ ಪುಸ್ತಕ.

4. ಇತರೇ ಕಡತಗಳು ಮತ್ತು ದಾಖಲೆಗಳು:-

1. ನೊಂದಣಿ ವಹಿಗಳು
2. ಸಹಕಾರ ಸಂಘಗಳ ನೊಂದಣಿ ಪಟ್ಟಿ.
3. ಬೈಲಾ ತಿದ್ದುಪಡಿ ವಹಿ ಮತ್ತು ಕಡತ.
4. ಹಣ ದುರುಪಯೋಗದ ಕಡತ ಮತ್ತು ತಃಖ್ತೆಗಳು.
5. ಯೋಜನಾ ಶಾಖೆಯ ಅನುಷ್ಠಾನದ ವಹಿ ಮತ್ತು ಕಡತ.
6. ಲೇವಾದೇವಿ ಮತ್ತು ಗಿರವಿ ವಹಿ ಮತ್ತು ಕಡತ.
7. ಸಹಕಾರ ಸಂಘಗಳ ಕಾಯ್ದೆ ಕಲಂ 64,65ರ ವಿಚಾರಣೆ ಪರಿವೀಕ್ಷಣೆ ವಹಿ.
8 ಸಹಕಾರ ಸಂಘಗಳ ಕಾಯ್ದೆ ಕಲಂ 68ರ ಆದೇಶದ ಕಡತ.
9. ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ)ರ ಕಡತ
10. ಸಹಕಾರ ಸಂಘಗಳ ಕಾಯ್ದೆ ಕಲಂ 30(1), 31, 28 (ಎ)ಕ್ಕೆ ಸಂಬಂಧಿಸಿದ ಕಡತಗಳು.
11. ಸಹಕಾರ ಸಂಘಗಳ ಕಾಯ್ದೆ ಕಲಂ 63ರ ಆಡಿಟ್ ವರದಿಯ ವಹಿ.
12. ಸಹಕಾರ ಸಂಘಗಳ ಕಾಯ್ದೆ ಕಲಂ 70ರ ವಹಿ.
13. ಸಹಕಾರ ಸಂಘಗಳ ಕಾಯ್ದೆ ಕಲಂ 69ರ ವಹಿ.
14. ದಾವಾ ಶಾಖೆಯ ನಗದು ಪುಸ್ತಕ.
15. ವಾರ್ಷಿಕ ಅಂಕಿಅಂಶಗಳ ತಃಖ್ತೆ.
16. ಸ್ಟ್ಯಾಂಪ್ ನಿರ್ವಹಣೆಯ ವಹಿ.
17. ದೂರು ಅರ್ಜಿ ವಿಲೇವಾರಿ ವಹಿ, ಕಡತ.
18. ಸಮಾಪನಾ ಸಹಕಾರ ಸಂಘಗಳ ವಹಿ.
19. ಆಡಳಿತ ಮಂಡಳಿ ರಚನೆಯ ವಾಚ್ ರಿಜಿಸ್ಟರ್
20. ಮಹಾಸಭೆಯ ವಹಿ.
21. ಸರ್ಕಾರದಿಂದ ನಾಮನಿರ್ದೇಶನ ಹೊಂದಿರುವ ವಹಿ.
22. ಲೇಖನ ಸಾಮಗ್ರಿ ರಿಜಿಸ್ಟರ್.
23. ವಾರ್ಷಿಕ ಪರಿವೀಕ್ಷಣಾ ಕಡತ.

ಅಧ್ಯಾಯ-6

ಕಲಂ 4(1) (ಬಿ) (vi)

ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ

ಕಚೇರಿಯಲ್ಲಿ ನಿರ್ವಹಿಸಲಾದ ಎಲ್ಲಾ ಅಂತಿಮ ಆದೇಶ ನೀಡಿ, ಮುಕ್ತಾಯಗೊಳಿಸಿದ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನನುಸರಿಸಿ ಪ್ರವರ್ಗ ಎ.ಬಿ.ಸಿ.ಡಿ.ಇ ಮತ್ತು ಎನ್ ಎಂದು ದಿ: 15-12-1982, 17-11-1990ರ ನಿಬಂಧಕರ ಸುತ್ತೋಲೆಯ ಪ್ರಕಾರ ವರ್ಗಿಕರಿಸಿ, ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಗಿಕರಣದ ಅವಧಿ ಈ ಕೆಳಗಿನಂತೆ ಇರುತ್ತದೆ.

1	'ಎ' ಡಿಸ್‌ಪೋಸಲ್	ಶಾಶ್ವತ
2	'ಬಿ' ಡಿಸ್‌ಪೋಸಲ್	30 ವರ್ಷಗಳು
3.	'ಸಿ' ಡಿಸ್‌ಪೋಸಲ್	10 ವರ್ಷಗಳು
4	'ಡಿ' ಡಿಸ್‌ಪೋಸಲ್	5 ವರ್ಷಗಳು
5.	'ಇ' ಡಿಸ್‌ಪೋಸಲ್	1 ವರ್ಷಗಳು
6	'ಎನ್'ಡಿಸ್‌ಪೋಸಲ್	ಪತ್ರ ವ್ಯವಹಾರ ಮಿತಿ

ಇದರಲ್ಲಿ ಬರುವ ಎಲ್ಲಾ ಕಡತಗಳು ಮತ್ತು ಕಚೇರಿ ಕಾರ್ಯಗಳಲ್ಲಿ ಬಳಸುತ್ತಿರುವ ವಿವಿಧ ರೀತಿಯ ವಹಿಗಳು, ತಃಖ್ತೆಗಳು, ಮಾಹಿತಿಗಳು, ನಿಯತಕಾಲಿಕಗಳು, ಸೇವಾ ವಹಿಗಳು, ನಿರ್ವಹಿಸುತ್ತಿರುವ ಕಡತಗಳು, ಅಂಕಿ ಅಂಶ ವಹಿ. ಪೀಠೋಪಕರಣ ವಹಿ, ಗ್ರಂಥಾಲಯ ವಹಿ, ಎಲ್‌ಸಿ/ಎಲ್‌ಎ ಪ್ರಶ್ನೆ ವಹಿ, ಮುಂತಾದುವುಗಳು.

ಅಧ್ಯಾಯ-7

ಕಲಂ 4(1) (ಬಿ) (vii)

ಕಾರ್ಯನೀತಿಯ ರಚನೆ ಮತ್ತು ಅನುಷ್ಟಾನಕ್ಕೆ ಸಂಬಂಧಿಸಿದಂತೆ ಸಹಕಾರಿಗಳೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ವ್ಯವಸ್ಥೆಯ ವಿವರಗಳು.

1. ಯಶಸ್ವಿನಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ
2. ಸಹಕಾರಿ ಸಪ್ತಾಹ ಆಚರಣೆಗೆ ಸಂಬಂಧಿಸಿದಂತೆ ಸಹಕಾರಿಗಳೊಡನೆ ಸಭೆ
3. ಸಮನ್ವಯ ಸಮಿತಿ ಸಭೆ
4. ಪಿಕಾರ್ಡ್ ಬ್ಯಾಂಕುಗಳ ಅಭಿವೃದ್ಧಿ ಕ್ರಿಯಾ ಯೋಜನ ಸಭೆ ನಡೆಸುವುದು.
5. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಡಿಕೇರಿ ಇದರ ಅಭಿವೃದ್ಧಿ ಕ್ರಿಯಾ ಯೋಜನೆಯಲ್ಲಿ ಭಾಗವಹಿಸುವುದು.
6. ಸಹಕಾರ ಲೆಕ್ಕ ಪರಿಶೋಧನಾ ಇಲಾಖೆಯೊಂದಿಗೆ ಜಿಲ್ಲಾ ಸಮನ್ವಯ ಸಮಿತಿ ಸಭೆ ನಡೆಸುವುದು.
7. ವೈದ್ಯನಾಥನ್ ವರದಿ ಅನುಷ್ಠಾನದ ಬಗ್ಗೆ ಜಿಲ್ಲಾ ಉಸ್ತುವಾರಿ ಸಮಿತಿ ಸಭೆ.

ಅಧ್ಯಾಯ-8

ಕಲಂ 4(1) (ಬಿ) (viii)

ಈ ಕಚೇರಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಪರ್ಕಜಾಲ (Directory)

ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ, ಮಡಿಕೇರಿ ಇವರ ಕಚೇರಿಯ ಸಿಬ್ಬಂದಿ ವರ್ಗದವರ ವಿವರ

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು	ಪದನಾಮ	ದೂರವಾಣಿ ಸಂಖ್ಯೆ
1	ಶ್ರೀ ಎಂ. ವೆಂಕಟಸ್ವಾಮಿ	ಸಹಕಾರ ಸಂಘಗಳ ಉಪನಿಬಂಧಕರು	-08272-228519
2	ಶ್ರೀ ಶ್ರೀಧರ ಆರ್	ಅಧೀಕ್ಷಕರು	08272-228519
3	ಶ್ರೀ ಎಂ.ಎಸ್ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	08272-228519
4	ಶ್ರೀ ಎಂ.ಈ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	08272-228519

ಕ್ರ ಸಂ.	ಅಧಿಕಾರಿ/ನೌಕರರ ಹೆಸರು	ಪದನಾಮ	ದೂರವಾಣಿ ಸಂಖ್ಯೆ
5	ಶ್ರೀ ನರಸಿಂಹ ಮೂರ್ತಿ	ದ್ವಿ.ದ.ಸ	08272–228519
6	ಶ್ರೀ ಕೆ.ಎ ಸಿದ್ದಿಕ್	ಗ್ರೂಪ್ 'ಡಿ' ನೌಕರರು	08272–228519
7	ಶ್ರೀ ಸೋಮಯ್ಯ	ಗ್ರೂಪ್ 'ಡಿ' ನೌಕರರು	08272–228519
8	ಶ್ರೀಮತಿ ರಾಜಮ್ಮ	ಗ್ರೂಪ್ 'ಡಿ' ನೌಕರರು	

ಅಧ್ಯಾಯ–9

ಕಲಂ 4(1) (ಬಿ) (ix)

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಚೇರಿಯ ಸಿಬ್ಬಂದಿ ವರ್ಗದವರ ತಿಂಗಳ ವೇತನದ ವಿವರ

ಕ್ರ ಸಂ	ಅಧಿಕಾರಿ/ಸಿಬ್ಬಂದಿ ವಿವರ	ಹುದ್ದೆಯ ವಿವರ	ಗ್ರೇಡ್	ವೇತನ ಶ್ರೇಣಿ	ಮೂಲ ವೇತನ	ಒಟ್ಟು ವೇತನ
1	ಶ್ರೀ ಎಂ. ವೆಂಕಟಸ್ವಾಮಿ	ಸಹಕಾರ ಸಂಘಗಳ ಉಪನಿಬಂಧಕರು	'ಎ'	18150–26925	20550	39354
2	ಶ್ರೀ ಹೆಚ್.ಎನ್ ರಮೇಶ್	ಸಹಕಾರ ಅಭಿವೃದ್ಧಿ ಅಧಿಕಾರಿ	'ಬಿ'	10800–20025	12000	22960
3	ಶ್ರೀ ಶ್ರೀಧರ ಆರ್	ಅಧೀಕ್ಷಕರು	'ಸಿ'	10000–18150	12300	23505
4	ಶ್ರೀ ಎಂ.ಎಸ್ ಮೋಹನ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	'ಸಿ'	8825–16000	10800	20632
5	ಶ್ರೀ ಎಂ.ಈ ಮೋಹನ್		'ಸಿ'	8825–16000	10800	20707
6	ಶ್ರೀಮತಿ ಸಿ.ಕೆ ಭವಾನಿ			8825–16000	10800	21057
7	ಶ್ರೀ ಪಿ.ಬಿ ಮೋಹನ್ ಕುಮಾರ್	ಪ್ರ.ದ.ಸ	'ಸಿ'	7275–13150	8400	16386
8	ಶ್ರೀ ನರಸಿಂಹ ಮೂರ್ತಿ	ದ್ವಿ.ದ.ಸ	'ಸಿ'	5800–10500	7450	14218
9	ಶ್ರೀ ಕೆ.ಎ ಸಿದ್ದಿಕ್	ಗ್ರೂಪ್ 'ಡಿ' ನೌಕರರು	'ಡಿ'	5500–9500	6950	13510
10	ಶ್ರೀ ಸೋಮಯ್ಯ	ಗ್ರೂಪ್ 'ಡಿ' ನೌಕರರು	'ಡಿ'	5500–9500	6650	13385

ಅಧ್ಯಾಯ–10

ಕಲಂ 4(1) (ಬಿ) (x)

ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳ ಅಯವ್ಯಯದ ವಿವರ 2011–12 ನೇ ಸಾಲಿನ ಅಯವ್ಯಯದ ಬಗ್ಗೆ ಟಿಪ್ಪಣಿ

ಕ್ರ ಸಂ	ಲೆಕ್ಕ ಶೀರ್ಷಿಕೆ	ಯೋಜನೆಯ ವಿವರ	ಗುರಿ (ರೂ. ಲಕ್ಷಗಳಲ್ಲಿ)
1	2425–00–101–0–61	ಆಸ್ತಿಗಳ ಸೃಷ್ಠಿಗಾಗಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯಧನ	2.00
2	4425–00–101–0–62	ಮಹಿಳಾ ಸಹಕಾರ ಸಂಘಗಳ ಹೂಡಿಕೆಗಳು	0.75
3	2425–00–101–0–30	ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು	0.25
4	2425–00–101–0–28	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ (ಎನ್.ಸಿ.ಡಿ.ಸಿ ಯೋಜನೆ)	1.50

ಕ್ರ ಸಂ	ಲೆಕ್ಕ ಶೀರ್ಷಿಕೆ	ಯೋಜನೆಯ ವಿವರ	ಗುರಿ (ರೂ. ಲಕ್ಷಗಳಲ್ಲಿ)
6	4425-00-101-0-26	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಸಹಾಯ (ಸಾಮಾನ್ಯ-ನಬಾರ್ಡ್ ಯೋಜನೆ)	1.50
7	4425-00-101-0-29	ಇತರೇ ಸಹಕಾರ ಸಂಘಗಳಿಗೆ ಷೇರು ಬಂಡವಾಳ	3.00
8	6425-00-101-0-27	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಪ್ರೋತ್ಸಾಹ ಮತ್ತು ಅಭಿವೃದ್ಧಿಗಾಗಿ ಆರ್ಥಿಕ ಸಹಾಯ (ಸಾಲ)	3.00
		ಒಟ್ಟು	**12.00**

ಅಧ್ಯಾಯ-11

ಕಲಂ 4(1) (ಬಿ) (xi)

ಹಂಚಿಕೆ ಮಾಡಲಾದ ಮೊಬಲಗುಗಳನ್ನೊಳಗೊಂಡ ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ

ಕ್ರ.ಸಂ	ಯೋಜನೆಯ ವಿವರ	ಸಹಾಯಧನ ಮಂಜೂರಾತಿ ನೀಡಲು ಇರುವ ಅರ್ಹತೆ	ಸಹಾಯಧನ ಮಂಜೂರು ಮಾಡಿದ ಅಧಿಕಾರಿಯ ಹೆಸರು
1	ವಿಶೇಷ ಘಟಕ ಯೋಜನೆ ಶೇ. 60ರ ಸಹಾಯಧನ	ಪಿಕಾರ್ಡ್ ಬ್ಯಾಂಕ್/ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರಾಗಿದ್ದು, ಪರಿಶಿಷ್ಟ ಜಾತಿ ಸದಸ್ಯರು ಪಡೆದ ಸಾಲದ ಮೇಲೆ ಶೇ. 60ರ ಸಹಾಯಧನ 1. ಮಡಿಕೇರಿ ತಾಲ್ಲೂಕು. 2. ಸೋಮವಾರಪೇಟೆ ತಾಲ್ಲೂಕು. 3. ವಿರಾಜಪೇಟೆ ತಾಲ್ಲೂಕು	ಸಹಾಯಕ ನಿಬಂಧಕರು, ಮಡಿಕೇರಿ.

ಅಧ್ಯಾಯ-12

ಕಲಂ 4(1) (ಬಿ) (xii)

ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಕ್ರಮ

ಕ್ರ.ಸಂ	ಯೋಜನೆಯ ವಿವರ	ಅರ್ಜಿಯ ವಿಧಾನಗಳು	ಮಂಜೂರಾತಿಯ ವಿಧಾನ	ವಿತರಿಸುವ ವಿಧಾನ
1	ವಿಶೇಷ ಘಟಕ ಯೋಜನೆ ಶೇ. 60ರ ಸಹಾಯ ಧನ	ಗ್ರಾಮ ಸಭೆಯಲ್ಲಿ ಆಯ್ಕೆಯಾದ ಅರ್ಹತೆಯುಳ್ಳ ಫಲಾನುಭವಿಗಳು	ತಾಲೂಕು ಪಂಚಾಯತ್ ಸಾಮಾಜಿಕ ನ್ಯಾಯ ಸಮಿತಿ ಸಭೆಯಲ್ಲಿ	ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಯವರಿಂದ ಬಿಲ್ಲು ಮೇಲು ರುಜುವಿಗೆ ಕಳುಹಿಸಿ. ಬಳಿಕ ದೃಢೀಕರಣ ಸ್ವೀಕರಿಸಿದ ನಂತರ ವಿಶೇಷ ಠೇವಣಿ ಖಾತೆಯಿಂದ ಬಿಡುಗಡೆಗೊಳಿಸಲಾಗುವುದು.

ಅಧ್ಯಾಯ-13

ಕಲಂ 4(1) (ಬಿ) (xiii)

ಇತರೇ ಮಾಹಿತಿಗಳನ್ನು ಪ್ರತಿ ವರ್ಷ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಕಟಿಸುತ್ತಿರುವ ಬಗ್ಗೆ

1) ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ, ಮಡಿಕೇರಿ ಈ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ವಿವರ:-

ಕ್ರ.ಸಂ	ಸಹಕಾರ ಸಂಘಗಳ ವರ್ಗ	2011-12ಕ್ಕೆ
1	ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್	1
2	ಪ್ರಾ.ಸ.ಕೃ ಅಭಿವೃದ್ಧಿ ಮತ್ತು ಗ್ರಾಮೀಣ ಬ್ಯಾಂಕ್ (ನಿ.,)	3

ಕ್ರ.ಸಂ	ಸಹಕಾರ ಸಂಘಗಳ ವರ್ಗ	2011-12ಕ್ಕೆ
3	ಪ್ರಾ.ಸ.ಕೃ ಅಭಿವೃದ್ಧಿ ಮತ್ತು ಸಹಕಾರ ಬ್ಯಾಂಕ್ (ನಿ.)	68
4	ಲ್ಯಾಂಪ್ಸ್ ಸಹಕಾರ ಸಂಘಗಳು	3
5	ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು	1
6	ಸಹಕಾರಿ ಗ್ರೇನ್ ಬ್ಯಾಂಕ್‌ಗಳು (ದವಸ ಭಂಡಾರ)	102
7	ಪಟ್ಟಣ ಸಹಕಾರ ಬ್ಯಾಂಕ್‌ಗಳು	4
8	ಇತರೆ ಪತ್ತಿನ ಸಹಕಾರ ಸಂಘಗಳು	7
9	ನೌಕರರ ಪತ್ತಿನ ಸಹಕಾರ ಸಂಘಗಳು	11
10	ತಾಲ್ಲೂಕು ಕೃಷಿ ಮತ್ತು ಹುಟ್ಟುವಳಿ ಮಾರಾಟ ಸಂಘಗಳು	12
11	ಇತರೆ ಮಾರಾಟ ಸಹಕಾರ ಸಂಘಗಳು	3
12	ಲೈವ್‌ಸ್ಟಾಕ್ ಸಹಕಾರ ಸಂಘಗಳು	4
13	ಹಾಲು ಉತ್ಪಾದಕರ ಸಹಕಾರ ಸಂಘಗಳು	31
14	ಸಂಯುಕ್ತ ಬೇಸಾಯ ಸಹಕಾರ ಸಂಘಗಳು	3
15	ಏತ ನೀರಾವರಿ ಸಹಕಾರ ಸಂಘಗಳು	2
16	ನೀರು ಬಳಕೆದಾರರ ಸಹಕಾರ ಸಂಘಗಳು	6
17	ಮೀನುಗಾರಿಕಾ ಸಹಕಾರ ಸಂಘಗಳು	1
18	ಕೈಗಾರಿಕಾ ಸಹಕಾರ ಸಂಘಗಳು	9
19	ಗ್ರಾಹಕರ ಸಹಕಾರ ಸಂಘಗಳು	10
20	ಕೇಂದ್ರ ಸಗಟು ಮಾರಾಟ ಮಳಿಗೆ	1
21	ಗೃಹ ನಿರ್ಮಾಣ ಸಹಕಾರ ಸಂಘಗಳು	1
22	ಜಿಲ್ಲಾ ಸಹಕಾರ ಒಕ್ಕೂಟ	1
23	ಜಿಲ್ಲಾ ಸಹಕಾರ ಮಹಾಮಂಡಳಿ	1
24	ವಿವಿದೋದ್ದೇಶ ಸಹಕಾರ ಸಂಘಗಳು	6
25	ವಿದ್ಯಾರ್ಥಿ ಗ್ರಾಹಕ ಸಹಕಾರ ಸಂಘಗಳು	12
26	ಮಹಿಳಾ ಸಹಕಾರ ಸಂಘಗಳು	12
27	ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು	9
28	ಸಾರಿಗೆ ಸಹಕಾರ ಸಂಘಗಳು	1
29	ಇತರೆ ಸಹಕಾರಿ ಸಂಘಗಳು	7
	ಒಟ್ಟು	**332**

ಅಧ್ಯಾಯ-14

ಕಲಂ 4(1) (ಬಿ) (xiv)

ಕಚೇರಿಯ ಹೆಸರು	ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 19(1)ರಡಿಯಲ್ಲಿ ನೇಮಿಸಲಾದ ಮೇಲ್ಮನವಿ ಪ್ರಾಧಿಕಾರ	ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ಕೊಡಗು ಜಿಲ್ಲೆ, ಮಡಿಕೇರಿ	ಶ್ರೀ ಬಿ.ಎಸ್ ಹರೀಶ್ ಸಹಕಾರ ಸಂಘಗಳ ಜಂಟಿನಿಬಂಧಕರು ಮೈಸೂರು ಪ್ರಾಂತ ಮೈಸೂರು	ಶ್ರೀ ಎಂ. ವೆಂಕಟಸ್ವಾಮಿ, ಸಹಕಾರ ಸಂಘಗಳ ಉಪನಿಬಂಧಕರು ಕೊಡಗು ಜಿಲ್ಲೆ ಮಡಿಕೇರಿ	ಶ್ರೀ ಶ್ರೀಧರ. ಆರ್ ಅಧೀಕ್ಷಕರು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಕೊಡಗು ಜಿಲ್ಲೆ, ಮಡಿಕೇರಿ
	ದೂರವಾಣಿ ನಂ: 0821-2520823	ದೂರವಾಣಿ ನಂ: 08272-228519	ದೂರವಾಣಿ ನಂ: 08272-228519
	email ID: jrcs-mysore-ka@nic.in	email ID: drcs-kodagu-ka@nic.in	email ID: drcs-kodagu-ka@nic.in

ಅಧ್ಯಾಯ-15

ಕಲಂ 4(1) (ಬಿ) (xv)

ನಿರ್ಧಿಷ್ಟ ಪಡಿಸಬಹುದಾದಂಥ ಇತರೆ ಮಾಹಿತಿಗಳು

ನಾಗರೀಕರಿಗೆ ಉಪಯೋಗವಾಗುವ ಪ್ರಕಟಿಸಲಾದ ಇತರೆ ಮಾಹಿತಿ ಅಥವಾ ಪ್ರಕಟಣೆಗಳು

1. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಬಗ್ಗೆ ವಿವರಗಳು.
2. ಸಂಘಗಳ ನೊಂದಣಿ ಕಾಯ್ದೆ 1960 ಇದರಲ್ಲಿ ದಾಖಲೆಗಳನ್ನು ಫೈಲಿಂಗ್ ಮಾಡಲು ತಿಳುವಳಿಕೆ.

ಎಂ. ವೆಂಕಟಸ್ವಾಮಿ,
ಸಹಕಾರ ಸಂಘಗಳ ಉಪನಿಬಂಧಕರು
ಕೊಡಗು ಜಿಲ್ಲೆ, ಮಡಿಕೇರಿ

ಪಿ.ಆರ್. 03

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಶಿರಸಿ ವಿಭಾಗ, ಶಿರಸಿ ಇವರ ನಡಾವಳಿಗಳು

ವಲಯ ಅರಣ್ಯಾಧಿಕಾರಿ, ಹುಲೇಕಲ್‌ರವರ ಅರಣ್ಯ ಮೊಕದ್ದಮೆ ಸಂಖ್ಯೆ.5/04-05/ದಿ:31-01-2005.

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಯಿಂದ (ಜಿ) ವರೆಗೆ

ಉಪಸ್ಥಿತಿ:-

ಶ್ರೀ ಡಿ.ಯತೀಶಕುಮಾರ, ಕ.ಅ.ಸೇ ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ

ವಲಯ ಅರಣ್ಯಾಧಿಕಾರಿ, **ಫಿರ್ಯಾದಿದಾರರು.........**

ಹುಲೇಕಲ್ ವಲಯ, ಹುಲೇಕಲ್. (ಪ್ರತಿನಿಧಿಸಿದವರು : ಸಹಾಯಕ ಸರಕಾರಿ ಅಭಿಯೋಜಕರು, ಜೆ.ಎಂ.ಎಫ್.ಸಿ ನ್ಯಾಯಾಲಯ,ಶಿರಸಿ)

ಶ್ರೀ ಶ್ರೀಪಾದ ಗಣಪತಿ ಹೆಗಡೆ, ಸಾ:ಯಡಳ್ಳಿ, ವಾನಳ್ಳಿ **ಅರ್ಜಿದಾರರು..........**

ಪ್ರಕರಣದ ಹಿನ್ನೆಲೆ/ಪ್ರಸ್ತಾವನೆ:

ದಿನಾಂಕ:31-01-2005 ನೇ ತಾರೀಖಿನಂದು ಮೆಣಸಿ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಗಣಪತಿ ಹೆಗಡೆ ಸಾ: ಹೆಗ್ಗುಂಬ್ಳಿ ಇವರು ರಾತ್ರಿ ಸುಮಾರು 10.45ರ ಸಮಯಕ್ಕೆ ಸ್ವರ್ಣಗದ್ದೆಯಿಂದ ಶಿರಸಿ ಕಡೆಗೆ ಬರುತ್ತಿರುವ ಜೀಪನ್ನು ತಡೆದು ನಿಲ್ಲಿಸಿ, ಪರಿಶೀಲಿಸಿದಾಗ ಅದರಲ್ಲಿ ಸಾಗವಾನಿ ಕಟ್ಟಿಗೆಯ ಕೊರೆದ ನಡೆಗಳು ಇರುವದನ್ನು ಕಂಡು ಕೂಡಲೇ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಜಾನ್ಸನ್

ಉಪ ವಿಭಾಗ ಇವರಿಗೆ ಹಾಗೂ ವಲಯ ಅರಣ್ಯಾಧಿಕಾರಿ, ಹುಲೇಕಲ್‌ರವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಂದೇಶ ತಿಳಿಸಿದರು. ಅದರಂತೆ, ಘಟನಾ ಸ್ಥಳಕ್ಕೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಬಂದು ಜೀಪನ್ನು ಪರಿಶೀಲಿಸಲಾಗಿ, ಅದರಲ್ಲಿ ಸಾಗವಾನಿ ನಡೆಗಳು ಇರುವುದನ್ನು ಖಚಿತ ಪಡಿಸಿಕೊಳ್ಳಲಾಯಿತು. ಸದರಿ ನಡೆಗಳನ್ನು ಬ್ಯಾಟರಿ ಬೆಳಕಿನಲ್ಲಿ ಪರಿಶೀಲಿಸಿದ್ದು ಯಾವುದೇ ಇಲಾಖಾ ಛಪ್ಪಾ ವಗ್ಯರೆ ಇರಲಿಲ್ಲ. ಆದ್ದರಿಂದ ಇದು ಅಕ್ರಮ ಕಳ್ಳ ಸಾಗಾಣಿಕೆಯಿಂದ ತಂದಿದ್ದಾಗಿ ಖಚಿತ ಪಟ್ಟಿತು. ಸದರಿ ಜೀಪನ್ನು ಚಲಾಯಿಸುತ್ತಿದ್ದ ವ್ಯಕ್ತಿ ಶ್ರೀ ಶ್ರೀಪಾದ ಗಣಪತಿ ಹೆಗಡೆ ಸಾ:ಯಡಳ್ಳಿ ಮತ್ತು ಜೀಪಿನ ಹಿಂಭಾಗದಲ್ಲಿ ಕುಳಿತ ವ್ಯಕ್ತಿ ಶ್ರೀ ಮಂಜುನಾಥ ಗಣಪತಿ ಶೆಟ್ಟಿ ಸಾ:ಹಲಸಿನಕೊಪ್ಪ, ಮೆಣಸಿ ಅಂತಾ ತಿಳಿಯಿತು. ಸದರ ವಾಹನದ ನೊಂದಣಿ ಸಂಖ್ಯೆ ಜೀಪು ಸಂ.ಕೆ-31 ಎಂ.1249 ಆಗಿದ್ದು ಬಿಳಿ ಬಣ್ಣದ್ದಾಗಿರುತ್ತದೆ. ಸದರ ಜೀಪನ್ನು ವಲಯ ಅರಣ್ಯಾಧಿಕಾರಿ ಹುಲೇಕಲ್ ಕಛೇರಿಗೆ ತಂದು ಕಟ್ಟಿಗೆಗಳನ್ನು ಅಳತೆ ಮಾಡಲಾಗಿ ಅವು 18 = 0.692 ಘ.ಮೀ ಇದ್ದವು. ಸದರ ವಾಹನ ಮಹೀಂದ್ರಾ ಆರಮೋಡಾ ಹಾಗೂ ಮಾಲನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಗಿದ್ದು ಪ್ರಥಮ ವರ್ತಮಾನ ವರದಿ ತಯಾರಿಸಿ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಹಾಜರ ಪಡಿಸಲಾಯಿತು.

ತದನಂತರ ದಿ:1-2-2005 ರಂದು ಮುಂದಿನ ಆದೇಶದ ವರೆಗೆ ವಲಯ ಅರಣ್ಯಾಧಿಕಾರಿ, ಹುಲೇಕಲರವರ ಸುರಕ್ಷಿತ ವಶಕ್ಕೆ ಇಲಾಖಾ ಭದ್ರತೆಯಲ್ಲಿಡುವಂತೆ ಆದೇಶಿಸಲಾಗಿತ್ತು.

ವಾಹನ ಮಾಲಿಕರಾದ ಶ್ರೀ ಶ್ರೀಪಾದ ಗಣಪತಿ ಹೆಗಡೆ, ಸಾ:ಮೆಣಸಿ ಇವರು ತಮ್ಮ ವಕೀಲರ ಮೂಲಕ ದಿನಾಂಕ:2-2-2005 ರಂದು ಅರ್ಜಿ ಸಲ್ಲಿಸಿ ವಾಹನವನ್ನು ಮಧ್ಯಂತರ ವಶಕ್ಕೆ ಬಿಟ್ಟುಕೊಡಬೇಕಾಗಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿ ವಾಹನವನ್ನು ಮಾಲಿಕರಿಗೆ ಬಿಟ್ಟುಕೊಟ್ಟಲ್ಲಿ ವಾಹನವನ್ನು ಮಾರಾಟಮಾಡಿ, ಕೇಸಿಗೆ ಸಂಬಂಧಿಸಿದ ದಾಖಲೆಗಳನ್ನು ನಾಶಪಡಿಸಬಹುದಾಗಿದ್ದರಿಂದ ವಾಹನವನನ್ನು ಬಿಟ್ಟುಕೊಡಬಾರದಾಗಿ ಸರಕಾರಿ ಅಭಿಯೋಜಕರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ದಿ:15-4-2005 ರಂದು ತಿರಸ್ಕರಿಸಿ ಆದೇಶಿಸಲಾಗಿತ್ತು.

ತದನಂತರ ಅರ್ಜಿದಾರರು ಸೆಶನ್ ನ್ಯಾಯಾಲಯ ಉತ್ತರ ಕನ್ನಡ ಕಾರವಾರ ಇವರಲ್ಲಿ ಅಪೀಲು ಸಲ್ಲಿಸಿದ್ದು, ಜಿಲ್ಲಾ ಸೆಶನ್ ನ್ಯಾಯಾಲಯವು ದಿ:7-7-2005 ರಂದು ಈ ಕೆಳಕಂಡ ಶರತ್ತಿಗೊಳಪಟ್ಟು ವಾಹನ ಮಹೀಂದ್ರ ಜೀಪು ನಂ.ಕೆಎ-31 ಎಂ.1249 ನ್ನು ಅರ್ಜಿದಾರರಿಗೆ ಮಧ್ಯಂತರ ವಶಕ್ಕೆ ಬಿಟ್ಟುಕೊಡಬೇಕಾಗಿ ಆದೇಶ ನೀಡಿತ್ತು

ಶರತ್ತುಗಳು

1. ರೂ.1,00,000-00 ದ ಬ್ಯಾಂಕ್ ಗ್ಯಾರಂಟಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಸಲ್ಲಿಸುವುದು.
2. ಸದರ ಪ್ರಕರಣ ಇತ್ಯರ್ಥವಾಗುವವರೆಗೂ ಪರಭಾರ ಮಾಡುವುದಾಗಲೀ ಮಾರಾಟ ಮಾಡುವುದಾಗಲೀ ಮಾಡಬಾರದು.
3. ಯಾವುದೇ ಬದಲಾವಣೆ, ಬಣ್ಣ, ವಿನ್ಯಾಸ ಬದಲಾಯಿಸಬಾರದು.
4. ಯಾವಾಗ ಪ್ರಾಧಿಕಾರವು ವಾಹನವನ್ನು ಹಾಜರು ಪಡಿಸಲು ತಿಳಿಸಿದರೂ, ಸುಸ್ಥಿತಿಯಲ್ಲಿಟ್ಟು ಹಾಜರ ಪಡಿಸುವುದು.
5. ಈ ನ್ಯಾಯಾಲಯ ವಿಧಿಸುವ ಯಾವತ್ತು ಶರತ್ತಿಗೆ ಬದ್ದವಾಗಿರುವುದು ಎಂಬಿತ್ಯಾದಿ ಶರತ್ತಿನೊಂದಿಗೆ ವಾಹನದ ಮಧ್ಯಂತರ ಬಿಡುಗಡೆಗೆ ಆದೇಶಿಸಲಾಗಿತ್ತು.

ವಾಹನ ಮಾಲಿಕರು ಮೇಲ್ಕಂಡ ಯಾವತ್ತು ಶರತ್ತುಗಳನ್ನು ಪೂರೈಸಿ ವಾಹವನ್ನು ತಮ್ಮ ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತಾರೆ.

ತದನಂತರ ವಿಚಾರಣೆಯನ್ನು ಮುಂದುವರೆಸಿ, ವನಪಾಲಕ ಶ್ರೀ ಶೇಖರ ಬಂಗಾರಿ ನೆತ್ರೇಕರ್ ಇವರನ್ನು ವಿಚಾರಣೆಗೆ ಒಳಪಡಿಸಲಾಗಿ ಅವರ ಸಾಕ್ಷಿಯನ್ನು PW-1 ಅಂತ ಗುರುತಿಸಿ ಕೊಂಡಿದ್ದು ಅವರ ಸಾಕ್ಷಿಯ ಸಾರಾಂಶ ಈ ರೀತಿ ಇದೆ.

" ದಿ:31-01-2005 ರಂದು ಬಾತ್ಮಿ ಬಂದ ಮೇರೆಗೆ ನಾನು ಮತ್ತು ಒಬ್ಬ ವಾಚಮನ್ ಸೇರಿ ರಾತ್ರಿ 11-00 ಗಂಟೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು ಕಳಿಸಿದ ಜೀಪಿನಲ್ಲಿ ಚಪ್ಪರ ಕಟ್ಟೆಗೆ ಬಂದಾಗ ಅಲ್ಲಿ ಜೀಪು ನಿಂತಿತ್ತು. ಜೀಪಿನಲ್ಲಿ ಕಳ್ಳ ಮಾಲು ಇದೆ ಅಂತ ಸತೀಶ ಹೆಗಡೆ ಹೆಗ್ಗುಂಬೆ ಇವರು ಒಂದು ಜೀಪನ್ನು ತಡೆದು ನಿಲ್ಲಿಸಿದ್ದರು. ಶ್ರೀ ಸತೀಶ ಹೆಗಡೆಯವರು ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಾಗಿದ್ದರು. ನಿಲ್ಲಿಸಿದ್ದ ಜೀಪಿನ ಬಾಗಿಲು ತೆಗೆದು ನೋಡಿದಾಗ ಅದರಲ್ಲಿ ಸಾಗವಾನಿ ತುಂಡುಗಳು ಇದ್ದವು, ಬ್ಯಾಟರಿ ಬೆಳಕಿನಲ್ಲಿ ತುಂಡುಗಳನ್ನು ಪರಿಸೀಲಿಸಿದಾಗ ಯಾವುದೇ ಛಪ್ಪಾ ಇರುವುದು ಕಂಡುಬರಲಿಲ್ಲ. ಜೀಪಿನಲ್ಲಿ ಶ್ರೀಪಾದ ಗಣಪತಿ ಹೆಗಡೆ ಇವರನ್ನು ಕೇಳಲಾಗಿ ಯಾವುದೇ ಪಾಸ ಯಾ ಪರ್ಮಿಟ್ ಇಲ್ಲವೆಂದು ಹೇಳಿದರು. ನ್ಯಾಯಾಲಯದಲ್ಲಿ ತನ್ನ ಮುಂದೆ ಇರುವ ವ್ಯಕ್ತಿಯೇ ಶ್ರೀ ಶ್ರೀಪಾದ ಗಣಪತಿ ಹೆಗಡೆಯವರಾಗಿರುತ್ತಾರೆ. ಆ ದಿನ ನಾವು ನೋಡಿದ ಪರಿಶೀಲಿಸಿದ ಜೀಪು ಬಿಳಿ ಬಣ್ಣದ ಆರ್ಮೋಡಾ ಜೀಪು ಇದ್ದು ಅದರ ಸಂಖ್ಯೆ ಕೆಎ-31 ಎಂ-1249 ಆಗಿರುತ್ತದೆ. ಅ ಮಾಲು ಮತ್ತು ಜೀಪನ್ನು ಗುರುತಿಸುತ್ತೇನೆ. ಆ ದಿನ ಮಾಲು ಹಾಗೂ ಜೀಪನ್ನು ಪಂಚನಾಮೆ ಮುಖಾಂತರ ಜಪ್ತ ಪಡಿಸಿಕೊಂಡೆವು. ಜೀಪಿನಲ್ಲಿ 18 ಸಾಗವಾನಿ ತುಂಡುಗಳಿದ್ದು ರೇಂಜ್ ಆಫಿಸಿಗೆ ತಂದು ಜೀಪಿನಲ್ಲಿದ್ದ ಸಾಗವಾನಿ ತುಂಡುಗಳನ್ನು ಇಳಿಸಿ ಅದಕ್ಕೆ KNFDF-8 LL ಅಂತ ಗುರುತು ಮಾಡಿದೆವು. ತುಂಡುಗಳಿಗೆ ಹಳದಿ ಬಣ್ಣದ ಚಾಕ್‌ನಿಂದ ನಂಬರ್ ಹಾಕಿದ್ದೇನೆ" ಮರದಿನ ಬೆಳಿಗ್ಗೆ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದೆವು. ಗುನ್ನೆ ಹಿಡಿದ ದಿನವೇ

ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡೆವು. ಈ ಸಾಕ್ಷಿ ವಿಚಾರಣೆಯಲ್ಲಿ ಪಂಚನಾಮೆಯನ್ನು ಪ್ರಥಮ ವರ್ತಮಾನ ವರದಿಯನ್ನು ಗುರುತಿಸಿದ್ದು. ಅದನ್ನು ಕ್ರಮವಾಗಿ ನಿಶಾನೆ ಪಿ1,ಪಿ2 ಎಂತ ಗುರುತಿಸಲಾಯಿತು.

ಮರ್ರು ವಿಚಾರಣೆ ಇಲ್ಲಾ.

ಅಭಿಯೋಜಕರ ಪರ ಎರಡನೇ ಸಾಕ್ಷಿಯಾಗಿ (PW2)ಶ್ರೀ ಸತ್ಯನಾರಾಯಣ ಗಣಪತಿ ಹೆಗಡೆ, ಸಾ:ಹೆಗ್ಗುಂಬೆ ಇವರನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿದಾಗ ಅವರು " ನಾನು ಮೆಣಸಿ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷನಾಗಿರುತ್ತೇನೆ. ದಿ:31-01-2005 ರಂದು ತನಗೆ ಅರಣ್ಯ ಮೂಲ ಕಳ್ಳತನ ಆಗುತ್ತಿರುವ ಬಗ್ಗೆ ಸುದ್ದಿ ಬಂತು ಆದ್ದರಿಂದ ಸೋಣಗಿನ ಮನೆ ಕಡೆ, ಸ್ವರ್ಣಗದ್ದೆ ಕಡೆಯಿಂದ ಶಿರಸಿ ಮಾರ್ಗವಾಗಿ ಒಂದು ಜೀಪು ಬಂತು ಅದನ್ನು ತಡೆದು ನಿಲ್ಲಿಸಿ, ಮನೆಗೆ ಬಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ದೂರವಾಣಿ ಮುಖಾಂತರ ನಡೆದ ಘಟನೆ ಬಗ್ಗೆ ವಿವರಿಸಿದಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಕೆಲವು ಸಿಬ್ಬಂದಿಗಳು ಸೇರಿ ಘಟನೆ ನಡೆದ ಸ್ಥಳಕ್ಕೆ ಬಂದರು. ಸ್ಥಳದಲ್ಲಿ ಬ್ಯಾಟರಿ ಬೆಳಕಿನಲ್ಲಿ ಪಂಚನಾಮೆ ಮಾಡಿ ಜೀಪು ಮತ್ತು ಮಾಲನ್ನು ಜಪ್ತ ಮಾಡಿಕೊಂಡರು. ಹುಲೇಕಲ್ ವಲಯ ಕಛೇರಿಗೆ ತಂದು ಉದ್ದ ಅಗಲ ಅಳತೆ ಮಾಡಿದರು" ಎಂದು ಸಾಕ್ಷಿ ನುಡಿದಿರುತ್ತಾರೆ. ಅವರ ಸಾಕ್ಷಿಯಲ್ಲಿ ಮೂಡಿಬಂದ ಅಂಶಗಳು PW-1 ಸಾಕ್ಷಿಯ ಹೇಳಿಕೆಯನ್ನು ದೃಢಪಡಿಸುತ್ತದೆ. ಈ ಸಾಕ್ಷಿಯು ಜೀಪು ನಂ.ಕೆಎ-31 ಎಂ.1249 ನೇದನ್ನು ಹಾಗೂ ಸಾಗವಾನಿ ಸೈಜುಗಳನ್ನು, ತನ್ನನು ಪಂಚನನ್ನಾಗಿ ಮಾಡಿಕೊಂಡು ತನ್ನ ಸಮಕ್ಷಮ ಜಪ್ತ ಪಡಿಸಿಕೊಂಡ ಬಗ್ಗೆ ವಿಚಾರಣೆಯಲ್ಲಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ1ಬಿ ಎಂದು ಗುರುತಿಸಿಕೊಳ್ಳಲಾಯಿತು, ಮರು ವಿಚಾರಣೆ ಇಲ್ಲಾ.

ತದನಂತರ, ಅಭಿಯೋಜಕರ ಪರ 3ನೇ (PW-3) ಸಾಕ್ಷಿಯಾಗಿ ಶ್ರೀ ಸೀತಾರಾಮ ಗಣಪತಿ ಭಟ್ಟ ಸಾ: ಮೆಣಸಿ, ಕುಂಬಾಳಗದ್ದೆ ಇವರನ್ನು ವಿಚಾರಣೆಗೆ ಒಳಪಡಿಸಿದಾಗ, ಅವರು, ಪಂಚನಾಯೆಯನ್ನು ಚಪ್ಪರಗಟ್ಟೆಯಲ್ಲಿ ಮಾಡಿದರು. ಪಂಚನಾಮೆಗೆ ಬೆಳಿಗ್ಗೆ ಸುಮಾರು 10- 10.30 ಘಂಟೆ ಹೊತ್ತಿಗೆ ಮನೆಯಲ್ಲೆ ಸಹಿ ಮಾಡಿರುತ್ತೇನೆ. ನಾನು ಯಾವುದೇ ಕಟ್ಟಿಗೆ ವಶಪಡಿಸುವ ಕಾಲಕ್ಕಾಗಲಿ, ವಾಹನ ವಶಪಡಿಸುವ ಕಾಲಕ್ಕಾಗಲೀ ಹೋಗಿಲ್ಲ. ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಮೆಯನ್ನು ಗುರುತಿಸಿದ್ದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಶಾನೆ ಪಿ1(ಸಿ) ಎಂದು ಗುರುತಿಸಲಾಗಿರುತ್ತದೆ. ಮರುವಿಚಾರಣೆ ಇಲ್ಲಾ.

ಅಭಿಯೋಜಕರ ಪರ 4ನೇ ಸಾಕ್ಷಿಯಾಗಿ (ಪಿಡಬ್ಲ್ಯು-4) ಶ್ರೀ ರವೀಂದ್ರ ನಾಯರ್, ಆಗಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರನ್ನು ವಿಚಾರಣೆಗೆ ಒಳಪಡಿಸಿದಾಗ, " ದಿ:31-01-2005 ರಂದು ರಾತ್ರಿ 10.45ಘಂಟೆಗೆ ದೂರವಾಣಿ ಸಂದೇಶ ಬಂದ ಮೇರೆಗೆ ಚಪ್ಪರಗಟ್ಟೆ ಬಸ್ ನಿಲ್ದಾಣದ ಬಳೀ ವಾಹನವನ್ನು ಕಟ್ಟಿಗೆ ಸಮೇತ ಹಿಡಿದು ನಿಲ್ಲಿಸಿದ ಸ್ಥಳಕ್ಕೆ ಹೋದಾಗ ವಾಹನದಲ್ಲಿ ಸಾಗವಾನಿ ಕಟ್ ಸೈಜುಗಳೂ ಇರುವುದು ಕಂಡು ಬಂತು. ಬ್ಯಾಟರಿ ಬೆಳಕಿನಲ್ಲಿ ವಾಹನವನ್ನು ಪರಿಶೀಲಿಸಿ ನಂತರ ವಾಹನದಲ್ಲಿದ್ದ ಕಟ್ಟಿಗೆ ತುಂಡುಗಳನ್ನು ಹೊರತೆಗೆದು ಅದಕ್ಕೆ ನಂಬರ್ ಹಾಕಿ ಛಪ್ಪಾ ಹೊಡೆದು ಕೆಂಪು ಬಣ್ಣದಿಂದ ನಿಶಾನೆ ಮಾಡಲಾಯಿತು. ಪಂಚನಾಮೆಯನ್ನು ತಯಾರಿಸಲಾಯಿತು" ಎಂದು ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಶಾನೆ ಪಿ1(ಡಿ) ಎಂದು ಗುರುತಿಸಲಾಯಿತು.

ಅಭಿಯೋಜಕರ ಪರ 5ನೇ ಸಾಕ್ಷಿಯಾಗಿ (ಪಿಡಬ್ಲ್ಯು-5) ಶ್ರೀ ಚಂದ್ರಶೇಖರ ನಾರಾಯಣ ನಾಯ್ಕ ಆಗಿನ ವಲಯ ಅರಣ್ಯಾಧಿಕಾರಿ ಇವರನ್ನು ವಿಚಾರಣೆಗೆ ಒಳಪಡಿಸಿದಾಗ ಅವರ ಸಾಕ್ಷಿಯಲ್ಲಿ ನುಡಿದ ಅಂಶಗಳು ಪಿಡಬ್ಲ್ಯು-1 ಸಾಕ್ಷಿಯ ಹೇಳಿಕೆಯನ್ನು ದೃಡಪಡಿಸುತ್ತವೆ. ಪಂಚನಾಮೆಯಲ್ಲಿಯ ಈ ಸಾಕ್ಷಿಯ ಸಹಿಯನ್ನು ನಿಶಾನೆ ಪಿ1(ಇ) ಎಂದು ಗುರುತಿಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಅಭಿಯೋಜಕರ ಪರ ಸಾಕ್ಷಿಯ ಹೇಳಿಕೆ ಪಡೆದಿದ್ದರಿಂದ ಹಾಗೂ ಅರ್ಜಿದಾರರ ಪರ ವಕೀಲರ ಪಾಟಿ ಸವಾಲುಗಳನ್ನು ಪರಿಗಣಿಸಿದ ನಂತರ ಈ ಪ್ರಕರಣದ ವಿಚಾರಣೆಯಲ್ಲಿ ಸಾಕ್ಷಿಗಳ ಹೇಳಿಕೆ ಮತ್ತು ಪಂಚನಾಮೆಯಲ್ಲಿರುವ ವಿಷಯಗಳನ್ನು ಪರಿಶೀಲಿಸಿದಾಗ ಪಿಡಬ್ಲ್ಯು-1 ಸ್ಥಳದಲ್ಲಿ ಪಂಚನಾಮೆ ಬರೆದಿದ್ದಾಗಿ ಹೇಳಿದ್ದಾರೆ. ಆದರೆ, ಸ್ಥಳದಲ್ಲಿ ಪಂಚನಾಮೆ ಬರೆದು ಪಂಚರ ಸಹಿ ಪಡೆದಿರುವುದಿಲ್ಲ ಎಂದು ಪಿಡಬ್ಲ್ಯು-3 ರವರ ಹೇಳಿಕೆಯಿಂದ ತಿಳಿದು ಬರುತ್ತದೆ. ಮತ್ತು ಪಿಡಬ್ಲ್ಯು -1 ರವರು ಹಳದಿ ಬಣ್ಣದ ಚಾಕ್ ತುಂಡಿನಿಂದ ಜಪ್ತ ಮಾಲಿಗೆ ನಿಶಾನೆ ಮಾಡಿದ್ದಾಗಿ ಹೇಳಿದರೆ, ಪಿಡಬ್ಲ್ಯು-4 ಕೆಂಪುಬಣ್ಣದಿಂದ ನಿಶಾನೆ ಮಾಡಲಾಯಿತೆಂದು ಸಾಕ್ಷಿ ನುಡಿದಿರುತ್ತಾರೆ.

ಈ ಪತ್ರದಲ್ಲಿ ನಿರೂಪಿಸಲಾದ ಸಾಕ್ಷಿಗಳ ಹೇಳಿಕೆ ಮತ್ತು ಪಾಟೀ ಸವಾಲುಗಳನ್ನು ಹಾಗೂ ಗುರುತಿಸಲಾದ ದಾಖಲೆಗಳನ್ನು ಪರಿಶೀಲಿಸಿದಾಗ ಉದ್ಭವವಾಗುವ ಪ್ರಶ್ನೆಗಳು ಈ ಕೆಳ ಕಂಡಂತಿರುತ್ತದೆ.

1. ಈ ಪ್ರಕರಣದಲ್ಲಿ ಅರಣ್ಯ ಅಪರಾಧವನ್ನು ಸಾಬೀತು ಪಡಿಸಲಾಗಿದೆಯೇ?
2. ಈ ಪ್ರಕರಣದಲ್ಲಿ ವಾಹವನ್ನು ಬಿಡುಗಡೆ ಮಾಡಬಹುದೇ?

ಮೊದಲನೇ ಪ್ರಶ್ನೆಗೆ ನಕರಾತ್ಮಕವಾಗಿ ಹಾಗೂ ಎರಡನೇ ಪ್ರಶ್ನೆಗೆ ಹೌದು ಎಂದು ಉತ್ತರಿಸುತ್ತೇನೆ.

ಮೊದಲನೇ ಪ್ರಶ್ನೆಗೆ ಪಿವರಣೆ ಏನೆಂದರೆ, ಯಾವುದೇ ಅಪರಾಧ ಪ್ರರಕಣದಲ್ಲಿ, ಅಪರಾಧವು ನಿಸ್ಸಂಶಯವಾಗಿ ನಡೆದಿದೆ ಎನ್ನುವುದನ್ನು ಸಾಬೀತು ಪಡಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜಕರು ನಿರೂಪಿಸಿದ ಸಾಕ್ಷಿಗಳಲ್ಲಿ ಪಿಡಬ್ಲ್ಯು-3 ಇವರು ಪಂಚರಾಗಿ ಪ್ರತಿಕೂಲ ಹೇಳಿಕೆ ನೀಡಿರುತ್ತಾರೆ ಹಾಗೂ ಪಿಡಬ್ಲ್ಯು2 ಮತ್ತು ಪಿಡಬ್ಲ್ಯು-1 & ಪಿಡಬ್ಲ್ಯು-4ರವರ ಹೇಳಿಕೆಗಳಲ್ಲಿ ಹೊಂದಾಣಿಕೆ ಇರುವುದಿಲ್ಲ. ಪಿಡಬ್ಲ್ಯು-1 ರವರು ಹಳದಿ

ಬಣ್ಣದಲ್ಲಿ ಚಾಕನಿಂದ ಬರೆದಿರುವುದಾಗಿ ಹೇಳಿದ್ದಾರೆ. ಪಿಡಬ್ಲ್ಯು-1ರವರು ಪಂಚನಾಮೆಯನ್ನು ಹುಲೇಕಲ್ ವಲಯದಲ್ಲಿ ಬರೆದಿರುವುದಾಗಿ ಹೇಳಿದರೆ ಪಿಡಬ್ಲ್ಯು-2 ರವರು ಸ್ಥಳದಲ್ಲಿಯೇ ಬರೆದಿರುವುದಾಗಿ ಹೇಳಿದರೆ, ಪಿಡಬ್ಲ್ಯು-3 ರವರು ಸ್ಥಳದಲ್ಲಿ ಮಹಜರ್ ಮಾಡಲೇ ಇಲ್ಲವೆಂದು ತಿಳಿಸಿರುತ್ತಾರೆ. ಯಾವುದೇ ಅಪರಾಧವನ್ನು ಪತ್ತೆ ಮಾಡಿದಾಗ, ಸ್ಥಳದಲ್ಲಿಯೇ ಮಹಜರ ಮಾಡುವುದು ಅತೀ ಅವಶ್ಯ, ಈ ಪ್ರಕರಣದಲ್ಲಿ ಜೀಪಿನ ಬೆಳಕಿದ್ದರೂ ಮಹಜರನ್ನು ಸ್ಥಳದಲ್ಲೆ ಮಾಡದಿರುವುದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಹಾಗೂ ಯಾವುದೇ ಬಾತ್ಮಿ ಬಂದರು ಸಾರ್ವಜನಿಕರು ಮೊದಲು ಅರಣ್ಯ ಅಧಿಕಾರಿಗಳಿಗೆ ತಿಳಿಸಿ, ನಂತರ ಅಪಾರಾದಿಗಳನ್ನು ಬಂಧಿಸಲು ಕ್ರಮ ಕೈಗೊಳ್ಳಬಹುದು, ಆದರೆ ಈ ಪ್ರಕರಣದಲ್ಲಿ ಅರಣ್ಯ ಅಧಿಕಾರಿಗಳಿಗೆ ತಿಳಿಸದೇ, ಅವರೇ ಆರೋಪಿಗಳನ್ನು ಹಿಡಿದು ನಂತರ ಅರಣ್ಯ ಅಧಿಕಾರಿಗಳಿಗೆ ತಿಳಿಸಿರುತ್ತಾರೆ. ಹೀಗೆ ಪ್ರತಿಯೊಂದು ಅಂಶಗಳನ್ನು ಗಮನಿಸಿದಾಗ ಅಭಿಯೋಜಕರು ಇದರಲ್ಲಿ ಆರೋಪವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸಲು ವಿಫಲರಾಗಿರುತ್ತಾರೆ. ಸ್ವಲ್ಪವಾದರೂ ಸಂಶಯ ಬಂದರೆ ಆ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಬೇಕಾಗಿರುತ್ತದೆ. ಹಾಗಾಗಿ ಈ ಪ್ರಕರಣದಲ್ಲಿ ಅಭಿಯೋಜಕರು ನಿಸ್ಸಂಶಯವಾಗಿ ಆರೋಪವನ್ನು ಸಾಬೀತು ಪಡಿಸಿಲ್ಲವೆಂದು ತೀರ್ಮಾನಿಸುತ್ತೇನೆ.

ಆರೋಪವನ್ನು ನಿಸ್ಸಂಶಯವಾಗಿ ಸಾಬೀತು ಪಡಿಸಿಲ್ಲವಾದ್ದರಿಂದ ವಾಹವನ್ನು ಮಾಲೀಕರ ಸುಪರ್ದಿಗೆ ನೀಡಬೇಕಾಗಿ ತೀರ್ಮಾನಿಸುತ್ತೇನೆ. ಮೇಲೆ ವಿವರಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಆದೇಶ

ಆದೇಶ

ಈ ಮೇಲಿನ ಪ್ರಸ್ತಾವನೆಯಲ್ಲಿನ ಅಂಶಗಳ ಹಾಗೂ ವಿವರಣೆಗಳ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿ, ಹುಲೇಕಲ್ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.5/2004-05/ ದಿ:31-05-2005ಕ್ಕೆ ಸಂಬಂಧಿಸಿದಂತೆ ಈ ಪ್ರಕರಣದಲ್ಲಿ ಆರೋಪವನ್ನು ಸಾಬೀತು ಪಡಿಸಿಲ್ಲವಾದ ಕಾರಣದಿಂದ ಸರಕಾರದ ಪರ ಅಮಾನತ್ತು ಪಡಿಸಲಾಗಿದ್ದ ವಾಹನ ಆರ್ಮೋಡಾ ಜೀಪು ಸಂ.ಕೆ-31 ಎಂ.1249 ನ್ನು ಮಾಲೀಕರ ಸುಪರ್ದಿಗೆ ಬಿಟ್ಟು ಕೊಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:24-12-2011 ರಂದು ಈ ಪ್ರಾಧಿಕಾರದ ಮೊಹರು ಹಾಕಿ ಹೊರಡಿಸಲಾಗಿದೆ.

ಡಿ.ಯತೀಶ್‌ಕುಮಾರ್.,ಕ.ಅ.ಸೇ.,
ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ

ಪಿ.ಆರ್. 1410

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಶಿರಸಿ ವಿಭಾಗ, ಶಿರಸಿ ಇವರ ನಡಾವಳಿಗಳು

ವಲಯ ಅರಣ್ಯಾಧಿಕಾರಿ, ಸಿದ್ದಾಪುರ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.3/95-96/ ದಿ:13-07-1995

ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಯಿಂದ (ಜಿ) ವರೆಗೆ

ಉಪಸ್ಥಿತಿ

ಶ್ರೀ ಡಿ.ಯತೀಶಕುಮಾರ, ಕ.ಅ.ಸೇಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಣ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ.

ವಲಯ ಅರಣ್ಯಾಧಿಕಾರಿ, ಸಿದ್ದಾಪುರ ವಲಯ, ಸಿದ್ದಾಪುರ. **ಫಿರ್ಯಾದಿದಾರರು.........**

(ಪ್ರತಿನಿಧಿಸಿದವರು : ಸಹಾಯಕ ಸರಕಾರಿ ಅಭಿಯೋಜಕರು, ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿರಸಿ)

ಶ್ರೀ ಡಿ.ಶಿವರಾಮ, **ಅರ್ಜಿದಾರರು...........**

ಬಿನ್.ಎಂ.ದಿವಾಕರ ಶಾಸ್ತ್ರಿ ಪ್ಯಾಲೇಸ್ ರೋಡ್ ಪ್ರಭುವೈನ್, ಸಾ:ವಿಟ್ಲ, ತಾ:ಬಂಟವಾಳ (ದ.ಕ)

ಪ್ರಕರಣದ ಹಿನ್ನೆಲೆ/ಪ್ರಸ್ತಾವನೆ:

ದಿನಾಂಕ:13-7-1995ರ ಬೆಳಿಗ್ಗೆ 10.20ಗಂಟೆ ಸಮಯದಲ್ಲಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಿದ್ದಾಪುರ ಮತ್ತವರ ಸಿಬ್ಬಂದಿಗಳು ಸಿದ್ದಾಪುರ-ಶಿರಸಿ ಮಾರ್ಗವಾಗಿ ಬರುತ್ತಿರುವಾಗ, ಒಂದು ಬಿಳಿಬಣ್ಣದ ಅಂಬಾಸಿಡರ್ ಕಾರು ಡಿಕ್ಕಿಯಲ್ಲಿ ಭಾರವಾದ ವಸ್ತುಗಳನ್ನು ತುಂಬಿಕೊಂಡಿರುವಂತೆ ಬಾಸವಾಗುತ್ತಿತ್ತು ಮತ್ತು ವೇಗವಾಗಿ ಚಲಿಸಿತು. ಅದನ್ನು ಕಂಡು ಅನುಮಾನದಿಂದ ಸರಕಾರಿ ವಾಹನ ಕೆಎ-31 ಜಿ-32 ನೇದರಲ್ಲಿ ಸದರ ಕಾರನ್ನು ಅಟ್ಟಿಸಿಕೊಂಡು ಸಾಗುತ್ತಿದ್ದಂತೆ, ಕೋಲಸಿರ್ಸಿ ಕ್ರಾಸಿನ ಹತ್ತಿರ ಕಾರನ್ನು ನಿಲ್ಲಿಸಿ, ಕಾರಿನಲ್ಲಿದ್ದವರು ಓಡಿಹೋಗಿದ್ದರು. ಸದರ ಸ್ಥಳದ ಆಸುಪಾಸು ಶೋಧನೆ ನಡೆಸಿದಾಗ, ಹಲಗಡಿಕೊಪ್ಪ 1991ನೇ ಸಾಲಿನ ನೆಡುತೋಪಿನಲ್ಲಿ ಅಡಗಿ ಕುಳಿತ ಒಬ್ಬ ವ್ಯಕ್ತಿಯನ್ನು ಹಿಡಿಯಲಾಯಿತು. ಅವನನ್ನು ವಿಚಾರಿಸಲಾಗಿ, ತಾನು ಅದೇ ಕಾರಿನಲ್ಲಿ ಇದ್ದವನಾಗಿದ್ದು, ರಮೇಶ ಶ್ರೀನಿವಾಸ ನಾಯ್ಕ, ಸಾ: ವಿಟ್ಲ, ಬಂಟವಾಳ ಎಂಬುದಾಗಿ ತಿಳಿಸಿದನು. ಸದರಿ ವ್ಯಕ್ತಿಯನ್ನು ಹಿಡಿದು ನಿಲ್ಲಿಸಿಕೊಂಡು, ಕಾರನ್ನು ಪರಿಶೀಲಿಸಲಾಗಿ, ಸದರ ಕಾರಿನ ನಂಬರ್ MYH-6786 ಎಂದು ಬರೆದಿತ್ತು ಮತ್ತು ಕಾರಿನ ಮುಂದಿನ ಮತ್ತು ಹಿಂದಿನ ಸೀಟಿನಲ್ಲಿ ಹಾಗೂ ಡಿಕ್ಕಿಯಲ್ಲಿ ಒರಟು ಕೆತ್ತನೆಯಿಂದ ಕೂಡಿದ ಕೆಸರು ಲೇಪಿತ ಕಟ್ಟಿಗೆ ತುಂಡುಗಳೂ ಇದ್ದವು. ಸದರ ತುಂಡುಗಳನ್ನು

ಸ್ವಚ್ಛಗೊಳಿಸಿ, ಮೂಸಿ ನೋಡಲಾಗಿ, ಶ್ರೀಗಂಧದ ತುಂಡುಗಳೆಂದು ಖಚಿತವಾಯಿತು ಮತ್ತು ಈ ಬಗ್ಗೆ ಯಾವುದೇ ಪಾಸ ವ ಪರ್ಮಿಟ್ ಇಲ್ಲದಿರುವುದು ಕಂಡುಬಂತು. ಇದರಿಂದ ಇದು ಕಳ್ಳಸಾಗಾಣಿಕೆಯಿಂದ ಸಾಗಿಸುತ್ತಿದ್ದೆಂದು ಖಚಿತವಾಯಿತು. ಕಾರಿನ ವಿವಿಧ ಭಾಗಗಳಾದ ಇಂಜಿನ್, ಚಾಸಿಸ್ ಮತ್ತು ಟೈಪ್ ಪರಿಶೀಲಿಸಲಾಗಿ ಇಂಜಿನ ನಂ.6ED004313, ಚಾಸಿಸ್ ನಂ.111-485216 ಟೈಪ್-AMBOHY ಎಂದು ಬರೆದಿತ್ತು. ಅಷ್ಟರಲ್ಲಿ ಸಿದ್ದಾಪುರದಿಂದ ತೂಕದ, ಸಾಧನ, ಬಣ್ಣ, ಇತ್ಯಾದಿಗಳನ್ನು ಸಿಬ್ಬಂದಿಯವರು ತಂದಿದ್ದು, ಸ್ಥಳದಲ್ಲೇ ಶ್ರೀಗಂಧದ ತುಂಡುಗಳಿಗೆ FOC 19/95-96 ಹಾಗೂ 'C' ಎಂದು ಕೆಂಪು ಬಣ್ಣದಿಂದ ಗುರುತು ಹಾಕಿ ಇಲಾಖಾ ಛಪ್ಪಾ ಹೊಡೆದು ತೂಕ ಮಾಡಲಾಗಿ, 46 ಅಳತೆಗೆ ಬಾರದ ಚೂರುಗಳು ಸೇರಿ 187kg. ಶ್ರೀಗಂಧದ ತುಂಡುಗಳು ಇದ್ದವು. ಅವುಗಳ ಅಂದಾಜ ಮೌಲ್ಯ '₹25000-00ಹಾಗೂ ಕಾರಿನ ಅಂದಾಜು ಮೌಲ್ಯ '₹75000-00 ಎಂದು ಅಂದಾಜಿಸಲಾಯಿತು. ಮತ್ತು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಾಯ್ದೆ 80,81, 84,85, 86, 71(a) to 71(g), ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ರಂತೆ ಅರಣ್ಯ ಮೊಕದ್ದಮೆ ಸಂಖ್ಯೆ.3/95-96/ದಿ:13-07-1995 ರಂತೆ ಗುನ್ನೆ ದಾಖಲಿಸಿ ವಾಹನವನ್ನು ತುಂಡುಗಳ ಸಮೇತ ಮುಂದಿನ ಕ್ರಮಕೈಗೊಳ್ಳಲು ಈ ಪ್ರಾಧಿಕಾರದ ಸಮಕ್ಷಮ ಹಾಜರಪಡಿಸಲಾಯಿತು.

ಈ ಪ್ರಾಧಿಕಾರವು ಸದರ ವಾಹನ MYH-6786 ಹಾಗೂ ಶ್ರೀಗಂಧದ ತುಂಡು 187kg. ಗಳನ್ನು ಇಲಾಖಾ ಭದ್ರತೆಯಲ್ಲಿ ಸಿದ್ದಾಪುರ ವಲಯ ಕಛೇರಿಯಲ್ಲಿ ಇಡುವಂತೆ ಆದೇಶಿಸಿತು.

ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ವಾಹನದ ಮಾಲಿಕತ್ವದ ಬಗ್ಗೆ ಮಾಹಿತಿ ಕೋರಲಾಗಿ, ಸದರ MYH-6786 ವಾಹನವು ಶ್ರೀ ಡಿ.ಶೀವರಾಂ, ಪ್ಯಾಲೇಸ್ ರೋಡ್, ಪ್ರಭುವೈನ್ಸ, ವಿಟ್ಲ, ಬಂಟವಾಳ ತಾಲೂಕು ಇವರದ್ದೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ತಿಳಿದು ಬಂತು. ದಿನಾಂಕ:26-08-1995 ರಂದು ವಾಹನ ಮಾಲೀಕರು ವಾಹನದ ಬಿಡುಗಡೆ ಕೋರಿ ತಮ್ಮ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ, ಸಂಬಂಧಿಸಿದವರಿಗೆ ನೋಟೀಸ್ ಜ್ಯಾರಿ ಮಾಡಲಾಯಿತು. ವಾಹನ ಮಾಲೀಕರು, ತಾನು ಮುಗ್ಧನಾಗಿದ್ದು, ಸದರ ವಾಹನವು ಟೂರಿಸ್ಟ್ ವಾಹನವಾಗಿದ್ದು, ಪ್ರಕರಣದ ಅರಿವು ಇರುವುದಿಲ್ಲ. ಮತ್ತು ಸದರ ವಾಹನದಿಂದಲೇ ಜೀವನ ನಡೆಯಬೇಕೆಂದು, ಸದರ ವಾಹನವನ್ನು ಬಿಟ್ಟುಕೊಡಬೇಕಾಗಿ ತಮ್ಮ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ, ಸಹಾಯಕ ಸರಕಾರಿ ಅಭಿಯೋಜಕರು, ಸದರ ವಾಹನವನ್ನು ಬಿಟ್ಟುಕೊಟ್ಟಲ್ಲಿ ವಾಹನ ಮಾಲಿಕನು ವಾಹನವನ್ನು ಮಾರಬಹುದಾಗಿದ್ದು ಸದರ ವಾಹನವು ಮುಂದಿನ ವಿಚಾರಣೆಗೆ ಮುಖ್ಯ ಸಾಕ್ಷಿಯಾಗಿದ್ದು, ಅದನ್ನು ಬಿಟ್ಟುಕೊಡಬಾರದಾಗಿ ವಿನಂತಿಸಿಕೊಂಡಿರುತ್ತಾರೆ.

ದಿ:8-12-1995 ರಂದು ಈ ಕಛೇರಿ ನ್ಯಾಯಲಯದಲ್ಲಿ ಪ್ರಕರಣದ ವಿಚಾರಣೆ ನಡೆಸಿ ವಾಹನವನ್ನು ಮಧ್ಯಂತರ ವಶಕ್ಕೆ ಬಿಡಲು ಕೋರಿದ ಅರ್ಜಿಯನ್ನು ತಿರಸ್ಕರಿಸಲಾಯಿತು.

ನಂತರ, ಅರ್ಜಿದಾರರು, ಮಾನ್ಯ ಸೆಶನ್ ಕೋರ್ಟ, ಕಾರವಾರದಲ್ಲಿ ಅಪೀಲ ಸಲ್ಲಿಸಿದ್ದು, ಮಾನ್ಯ ಕೋರ್ಟ ಆದಷ್ಟು ಬೇಗನೇ ವಾಹನವನ್ನು ಮದ್ಯಂತರ ವಶಕ್ಕೆ ಬಿಟ್ಟುಕೊಡುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ನಿರ್ದೇಶಿಸಿ ಆದೇಶಿಸಿತು. ಅದರಂತೆ, ಬಿ7/ಎಫ್.ಓ.ಸಿ/ಸಿಆರ್-3/95-96/ದಿ:30-6-1997 ರಂತೆ ರೂ.1,00,000-00 ಬ್ಯಾಂಕ್ ಗ್ಯಾರಂಟಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ನೀಡುವುದು, ವಾಹನದ ಆಕಾರ, ಬಣ್ಣ , ವಿನ್ಯಾಸ ಬದಲಾಯಿಸದೇ ಇರುವುದು. ವಾಹನವನ್ನು ಯಾವಾಗ ಈ ನ್ಯಾಯಾಲಯವು ಕೇಳಿದರೂ ಹಾಜರು ಪಡಿಸುವುದು ಮುಂತಾದ ಶರತ್ತುಗಳನ್ನು ವಿಧಿಸಿ ಮದ್ಯಂತರ ವಶಕ್ಕೆ ಬಿಡಲು ಆದೇಶ ನೀಡಲಾಯಿತು.

ಆದಾಗ್ಯೂ ವಾಹನ ಮಾಲೀಕರು ಇದರ ಬಗ್ಗೆ ಯಾವುದೇ ಆಸಕ್ತಿ ತೋರಿಸದೇ ವಾಹವನ್ನು ಬಿಡಿಸಿಕೊಂಡು ಹೋಗಿರುವುದಿಲ್ಲ ಮತ್ತು ದಿ:25-11-2006 ರಂದು ವಿಚಾರಣೆ ಕರೆದರೂ ಹಾಜರಾಗಿದ್ದು ಇರುವುದಿಲ್ಲ. ಕಾರಣ 17-7-2009 ರಂದು ಇನ್ನೊಮ್ಮೆ ಸದರ ವಾಹನವು ಬೇಕಾದಲ್ಲಿ ಈ ನ್ಯಾಯಾಲಯ ವಿಧಿಸಿದ ಶರತ್ತುಗಳಿಗೊಳಪಟ್ಟು 30 ದಿನಗಳ ಒಳಗಾಗಿ ವಾಹನವನ್ನು ಬಿಡಿಸಿಕೊಂಡು ಹೋಗಲು ಅವಕಾಶ ನೀಡಿ ಅರ್ಜಿದಾರರಿಗೆ ಪತ್ರಿಸಲಾಗಿತ್ತು. ಆದರೆ ಈ ವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲ. ಹಾಗೂ ನ್ಯಾಯಾಲಯಕ್ಕೆ ಯಾರು ಹಾಜರಾಗಿರುವುದಲ್ಲ. ಈ ಕುರಿತು ದಿ:29-06-2011 ರಂದು ಕೊನೆಯದಾಗಿ ವಿಚಾರಣೆಗೆ ಕರೆದಿದ್ದು, ವಾಹನ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಯಾರೂ ಹಾಜರಾಗಿದ್ದು ಇರುವುದಿಲ್ಲ. ಇದರಿಂದ ಸದರ ವಾಹನ ಮಾಲೀಕರಿಗೆ ವಾಹನದ ಬಗ್ಗೆ ಯಾವುದೆ ಆಸಕ್ತಿ ಇಲ್ಲದಿರುವುದು ಸ್ಪಷ್ಟವಾಗುತ್ತದೆ. ಕಾರಣ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ

ಪ್ರಕರಣದ ಹಿನ್ನೆಲೆಯಲ್ಲಿ ವಿವರಿಸಿದಂತೆ ವಲಯ ಅರಣ್ಯಾಧಿಕಾರಿ, ಸಿದ್ದಾಪುರ ಇವರ ಅರಣ್ಯ ಮೊಕದ್ದಮೆ ಸಂಖ್ಯೆ.3/95-96ಕ್ಕೆ ಸಂಬಂಧಿಸಿದಂತೆ, ಜಪ್ತ ಪಡಿಸಲಾಗಿದ್ದ ಅಂಬಾಸಿಡರ್ ಕಾರು ನಂ.MYH-6786 ಹಾಗೂ 187ಕೆ.ಜಿ ಶ್ರೀಗಂಧದ ತುಂಡುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ ಆದೇಶ ತಲುಪಿದ ದಿನಾಂಕದಿಂದ 30 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸದೇ ಇದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತವಾಗುತ್ತದೆ. ತದನಂತರ ವಾಹನ ಹಾಗೂ ಶ್ರೀಗಂಧದ ತುಂಡುಗಳನ್ನು ಕಾನೂನು ರೀತ್ಯಾ ವಿಲೆಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಈ ಪ್ರಾಧಿಕಾರದ ಮೊಹರು ಹಾಕಿ ದಿ:. 2-8-11ರಂದು ಹೊರಡಿಸಲಾಗಿದೆ.

ಡಿ.ಯತೀಶ್‌ಕುಮಾರ್.,ಕ.ಅ.ಸೇ.,

ಅಧಿಕಾರಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,

ಶಿರಸಿ ವಿಭಾಗ, ಶಿರಸಿ

ಪಿ.ಆರ್. 821

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 05 (ಪೋಲೀಸ್)/2011-12, ದಿನಾಂಕ : 20-10-2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು **ವಿರುದ್ಧ** **ಆರೋಪಿ**

ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ. ಪರಾರಿ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 05-07-2011 ರಂದು ಬೆಳಿಗ್ಗೆ 10-45 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್‌ನಲ್ಲಿ ಗಸ್ತಿನಲ್ಲಿರುವಾಗ್ಗೆ ಭಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ, ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್, ಮುಸ್ಲಿಂ ಸ್ಮಶಾನದ ಹತ್ತಿರ, ಟಿ.ನರಸೀಪುರ ರಸ್ತೆಯಲ್ಲಿ **ಕೆಎ-09/ಯು-4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 10 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿ ಪರಾರಿಯಾಗಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 42/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 07-07-2011ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 13-07-2011 ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿ: 05-07-11ರಂದು ಹೆಚ್.ಡಿ.ಕೋಟೆ ತಾ॥, ಸರಗೂರು ಟೌನ್, ಮುಸ್ಲಿಂ ಸ್ಮಶಾನದ ಹತ್ತಿರ, ಟಿ.ನರಸೀಪುರ ರಸ್ತೆಯಲ್ಲಿ **ಕೆಎ-09/ಯು-4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 10 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ)ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (3) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ : ಡಿಟಿಸಿಆರ್/05 (ಪೋಲೀಸ್)/2011-12, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 42/2011, ದಿನಾಂಕ: 05-07-2011ರಂದು ವಶಪಡಿಸಿಕೊಂಡ **ಕೆಎ-09/ಯು-4439 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1253

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಸಿಆರ್ : 276 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ		ನಂದೀಶ್ ಬಿನ್ ಬಸವರಾಜು

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 02-06-2011ರಂದು ರಾತ್ರಿ 9-30 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರಿಗೆ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಮಗ್ಗೆ ಗ್ರಾಮದ ಬಸ್ ನಿಲ್ದಾಣದ ಬಳಿ ಕೆಎ-21/ಎಂ-1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನದಲ್ಲಿ ಅಕ್ರಮವಾಗಿ 25.380 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ನಂದೀಶ್ ಬಿನ್ ಬಸವರಾಜು ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 33/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 04-06-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 07-06-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 02-06-2011 ರಂದು ಹೆಚ್.ಡಿ.ಕೋಟೆ ತಾಲ್ಲೂಕು, ಮಗ್ಗೆ ಗ್ರಾಮದ ಬಸ್ ನಿಲ್ದಾಣದ ಬಳಿ ಕೆಎ-21/ಎಂ-1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನದಲ್ಲಿ ಅಕ್ರಮವಾಗಿ 25.380 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ನಂದೀಶ್ ಬಿನ್ ಬಸವರಾಜು ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಸಿಆರ್/276 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 33/2011, ದಿ: 02-06-11 ರಂದು ವಶಪಡಿಸಿಕೊಂಡ ಕೆಎ-21/ಎಂ-1666 ನೋಂದಣಿ ಸಂಖ್ಯೆಯ ಕಮಾಂಡರ್ ಜೀಪ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1254

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 267 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: **ಡಾ॥ ವೈ.ಮಂಜುನಾಥ್**, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ, ಹೆಚ್.ಡಿ.ಕೋಟೆ.		ಕೃಷ್ಣ ಬಿನ್ ಚಂದ್ರಹಾಸ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 06-02-2011 ರಂದು ಮಧ್ಯಾಹ್ನ 12-30 ಗಂಟೆ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಠಾಣಾ ಉಸ್ತುವಾರಿಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ಟೌನ್, ಹುಣಸೂರು ರಸ್ತೆಯಲ್ಲಿ **ಕೆಎ-11/ಕೆ-8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್ ವಾಹನದಲ್ಲಿ** ಅಕ್ರಮವಾಗಿ 21.780 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಕೃಷ್ಣ ಬಿನ್ ಚಂದ್ರಹಾಸ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 37/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 17-05-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 18-05-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 06-02-2011 ಹೆಚ್.ಡಿ.ಕೋಟೆ ಟೌನ್, ಹುಣಸೂರು ರಸ್ತೆಯಲ್ಲಿ **ಕೆಎ-11/ಕೆ-8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್ ವಾಹನದಲ್ಲಿ** ಅಕ್ರಮವಾಗಿ 21.780 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಆ ಸಂದರ್ಭದಲ್ಲಿ ಆರೋಪಿಯಾದ ಕೃಷ್ಣ ಬಿನ್ ಚಂದ್ರಹಾಸ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/267 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 37/2011, ದಿ: 06-02-11 ರಂದು ವಶಪಡಿಸಿಕೊಂಡ **ಕೆಎ-11/ಕೆ-8704 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಮೋಟಾರ್ ಸೈಕಲ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1255

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 241 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: **ಡಾ॥ ವೈ.ಮಂಜುನಾಥ್,** ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ನಿರೀಕ್ಷಕರು, ನಿಷೇಧ ವಿಭಾಗ, ಮೈಸೂರು ಜಿಲ್ಲೆ		ಶ್ರೀನಿವಾಸಗೌಡ @ ಸೀನ ಬಿನ್ ಲೇಟ್ ಓಬಳೇಗೌಡ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 14-04-2011 ರಂದು ಸಂಜೆ 5-15 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಕಟ್ಟೆಹುಣಸೂರು ಗ್ರಾಮದ ಬಸ್ ನಿಲ್ದಾಣದ ಬಳಿ **ಹೀರೋ ಜೆಟ್ ಸೈಕಲ್‌ನಲ್ಲಿ** ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಶ್ರೀನಿವಾಸಗೌಡ @ ಸೀನ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 23/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 18-04-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ :27-04-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 14-04-2011 ರಂದು ಹೆಚ್.ಡಿ.ಕೋಟೆ ತಾಲ್ಲೂಕು, ಕಟ್ಟೆಹುಣಸೂರು ಗ್ರಾಮದ ಬಸ್ ನಿಲ್ದಾಣದ ಬಳಿ **ಹೀರೋ ಜೆಟ್ ಸೈಕಲ್‌ನಲ್ಲಿ** ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯಾದ ಶ್ರೀನಿವಾಸಗೌಡ @ ಸೀನ ಬಿನ್ ಲೇಟ್ ಓಬಳೇಗೌಡ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (6) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/241 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 23/2011, ದಿ: 14-04-11 ರಂದು ವಶಪಡಿಸಿಕೊಂಡ **ಹೀರೋ ಜೆಟ್ ಸೈಕಲ್‌ನ್ನು** ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿಆರ್-1262

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 199 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: ಡಾ|| ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ		ಕಿರಣ್‌ಕುಮಾರ್ ಬಿನ್ ಲೇಟ್ ನಂಜುಂಡಸ್ವಾಮಿ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 02-02-2011 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರಿಗೆ ಬಾತ್ಮಿದಾರರಿಂದ ಬಂದ ಖಚಿತ ವರ್ತಮಾನದ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ-ಹುಣಸೇಕುಪ್ಪ ರಸ್ತೆಯಲ್ಲಿರುವ ತಾರಕ ನಾಲಾ ಸೇತುವೆ ಮೇಲೆ **ಕೆಎ-45/ಕೆ-3045 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್ ವಾಹನದಲ್ಲಿ** ಅಕ್ರಮವಾಗಿ 34.560 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಕಿರಣ್‌ಕುಮಾರ್ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 10/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 05-02-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 17-02-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 02-02-2011 ರಂದು ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ-ಹುಣಸೇಕುಪ್ಪ ರಸ್ತೆಯಲ್ಲಿರುವ ತಾರಕ ನಾಲಾ ಸೇತುವೆ ಮೇಲೆ **ಕೆಎ-45/ಕೆ-3045 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್ ವಾಹನದಲ್ಲಿ** ಅಕ್ರಮವಾಗಿ 34.560 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ಕಿರಣ್‌ಕುಮಾರ್ ಬಿನ್ ಲೇಟ್ ನಂಜುಂಡಸ್ವಾಮಿ ಎಂಬುವವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/199 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: **10/2011, ದಿ: 02-02-11** ರಂದು ವಶಪಡಿಸಿಕೊಂಡ **ಕೆಎ-45/ಕೆ-3045 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಸೂಪರ್ ಮೊಪೆಡ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1263

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 200 (ಪೋಲೀಸ್)/2010–11, ದಿನಾಂಕ : 20–10–2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ		ಸುರೇಶ ಬಿನ್ ಗೋವಿಂದರಾಜು

ಪ್ರಕರಣದ ಮುಖ್ಯಾಂಶಗಳು :–

ದಿನಾಂಕ : 02–02–2011 ರಂದು ಮಧ್ಯಾಹ್ನ 1–15 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಅಂತರಸಂತೆ ಗ್ರಾಮದಲ್ಲಿ ಗಸ್ತು ನಿರತ ಸಮಯದಲ್ಲಿ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಗ್ರಾಮದಲ್ಲಿ ಆನಂದ ಎಂಬುವವರ ವಾಸವ ಮನೆಯ ಮುಂಭಾಗ **ಕೆಎ–45/ಹೆಚ್–5981 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸ್ಲೆಂಡರ್ ವಾಹನದಲ್ಲಿ** ಅಕ್ರಮವಾಗಿ 25.920 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಸುರೇಶ ಬಿನ್ ಗೋವಿಂದರಾಜು ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 11/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 05–02–11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 17–02–11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 02–02–2011 ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಗ್ರಾಮದಲ್ಲಿ ಆನಂದ ಎಂಬುವವರ ವಾಸವ ಮನೆಯ ಮುಂಭಾಗ **ಕೆಎ–45/ಹೆಚ್–5981 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸ್ಲೆಂಡರ್ ವಾಹನದಲ್ಲಿ** ಅಕ್ರಮವಾಗಿ 25.920 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ಸುರೇಶ ಬಿನ್ ಗೋವಿಂದರಾಜು ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (8) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/200 (ಪೋಲೀಸ್)/2010–11, ದಿನಾಂಕ : 20–10–2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 11/2011, ದಿ: 02–02–11 ರಂದು ವಶಪಡಿಸಿಕೊಂಡ **ಕೆಎ–45/ಹೆಚ್–5981 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸ್ಲೆಂಡರ್** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1264

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 219 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ನಿರೀಕ್ಷಕರು ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ.		ಪರಾರಿ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 09-03-2011 ರಂದು ಸಂಜೆ 7-00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಠಾಣೆಯಲ್ಲಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ, ಹೆಚ್.ಡಿ.ಕೋಟೆ ತಾ॥, ಹ್ಯಾಂಡ್‌ಪೋಸ್ಟ್ ಸರ್ಕಲ್, ಮೈಸೂರು-ಮಾನಂದವಾಡಿ ರಸ್ತೆ, ಅಶೋಕ ಸರ್ವೀಸ್ ಸ್ಟೇಷನ್ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಕೆಎ-45/ಇ-610 **ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ಹೆವಿ ಡ್ಯೂಟಿ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 70 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ವಾಹನ ಮತ್ತು ಸೇಂದಿಯನ್ನು ಸ್ಥಳದಲ್ಲಿಯೇ ಬಿಟ್ಟು ಆರೋಪಿಗಳು ಪರಾರಿಯಾಗಿರುತ್ತಾರೆಂದು ಠಾಣಾ ಮೊಕದ್ದಮೆ ಸಂಖ್ಯೆ : 16/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 15-03-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 18-03-2011 ರಂದು ಹೆಚ್.ಡಿ.ಕೋಟೆ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿ: 09-03-11ರಂದು ಹೆಚ್.ಡಿ.ಕೋಟೆ ತಾ॥, ಹ್ಯಾಂಡ್‌ಪೋಸ್ಟ್ ಸರ್ಕಲ್, ಮೈಸೂರು-ಮಾನಂದವಾಡಿ ರಸ್ತೆ, ಅಶೋಕ ಸರ್ವೀಸ್ ಸ್ಟೇಷನ್ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಕೆಎ-45/ ಇ-610 **ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ಹೆವಿ ಡ್ಯೂಟಿ ಮೊಪೆಡ್** ವಾಹನದಲ್ಲಿ ಅಕ್ರಮವಾಗಿ 70 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ)ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (7) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ : ಡಿಟಿಸಿಆರ್/219 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 (ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ: 16/2011, ದಿನಾಂಕ : 09-03-2011 ರಂದು ವಶಪಡಿಸಿಕೊಂಡ **ಕೆಎ-45/ಇ-610 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್** ಹೆವಿ ಡ್ಯೂಟಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಏಪ್ರಿಲ್ ತಿಂಗಳ 28ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತಾ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1282

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 274 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: **ಡಾ॥ ವೈ.ಮಂಜುನಾಥ್,** ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ವಿಭಾಗ, ಮೈಸೂರು ಜಿಲ್ಲೆ		ಸಂಜೀವನಾಯಕ ಬಿನ್ ಹೆಜ್ಜೂರುನಾಯಕ ನಿಷೇಧ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 22-05-2011 ರಂದು ಬೆಳಿಗ್ಗೆ 6-45 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರಿಗೆ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ, ಪುರದ ಕಟ್ಟೆ-ಹೂವಿನ ಕೊಳ ರಸ್ತೆಯ ನಾಗರಾಜು ಎಂಬುವವರ ಜಮೀನಿನ ಹತ್ತಿರ **ಕೆಎ-02/ಇಎಲ್-3250 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಹೆವಿ ಡ್ಯೂಟಿ ವಾಹನದಲ್ಲಿ** ಅಕ್ರಮವಾಗಿ 20 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಸಂಜೀವನಾಯಕ ಬಿನ್ ಹೆಜ್ಜೂರುನಾಯಕ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 29/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 27-05-11 ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ: 07-06-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:22-05-2011 ರಂದು ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ, ಪುರದ ಕಟ್ಟೆ-ಹೂವಿನ ಕೊಳ ರಸ್ತೆಯ ನಾಗರಾಜು ಎಂಬುವವರ ಜಮೀನಿನ ಹತ್ತಿರ **ಕೆಎ-02/ಇಎಲ್-3250 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಹೆವಿ ಡ್ಯೂಟಿ ವಾಹನದಲ್ಲಿ** ಅಕ್ರಮವಾಗಿ 20 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯಾದ ಸಂಜೀವನಾಯಕ ಬಿನ್ ಹೆಜ್ಜೂರುನಾಯಕ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/274 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 29/2011, ದಿ: 22-05-11 ರಂದು ವಶಪಡಿಸಿಕೊಂಡ **ಕೆಎ-02/ಇಎಲ್-3250 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ಹೆವಿ ಡ್ಯೂಟಿ** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1283

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 266 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: ಡಾ॥ ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಕಾನೂನು ಮತ್ತು ಸುವ್ಯವಸ್ಥೆ, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ, ಹೆಚ್.ಡಿ.ಕೋಟೆ.		ತಿಮ್ಮರಾಜು ಬಿನ್ ವೆಂಕಟೇಶನಾಯ್ಕ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 05-05-2010 ರಂದು ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಸಿಬ್ಬಂದಿಯೊಂದಿಗೆ ಗ್ರಾಮ ಪಂಚಾಯ್ತಿಯ ಚುನಾವಣೆ ನಿಮಿತ್ತ ಹೆಚ್.ಡಿ.ಕೋಟೆ ತಾ॥, ಆಲನಹಳ್ಳಿ ಗ್ರಾಮದಲ್ಲಿ ಗಸ್ತು ನಿರತ ಸಮಯದಲ್ಲಿ ಹೆಚ್.ಡಿ.ಕೋಟೆ **ಟೌನ್**, ಹ್ಯಾಂಡ್‌ಪೋಸ್ಟ್, ಮೈಸೂರು-ಮಾನಂದವಾಡಿ ರಸ್ತೆಯಲ್ಲಿ **ಕೆಎ-38/ಇ-4693 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸಿಡಿ-100 ವಾಹನದಲ್ಲಿ** ಅಕ್ರಮವಾಗಿ 14.040 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ತಿಮ್ಮರಾಜು ಬಿನ್ ವೆಂಕಟೇಶನಾಯ್ಕ ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂಖ್ಯೆ : 223/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 17-05-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 18-05-11ರಂದು ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 05-05-2011 ರಂದು ಹೆಚ್.ಡಿ.ಕೋಟೆ ಟೌನ್, ಹ್ಯಾಂಡ್‌ಪೋಸ್ಟ್, ಮೈಸೂರು-ಮಾನಂದವಾಡಿ ರಸ್ತೆಯಲ್ಲಿ **ಕೆಎ-38/ಇ-4693 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸಿಡಿ-100** ವಾಹನದಲ್ಲಿ ಅಕ್ರಮವಾಗಿ 14.040 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಆ ಸಂದರ್ಭದಲ್ಲಿ ಆರೋಪಿಯಾದ ತಿಮ್ಮರಾಜು ಬಿನ್ ವೆಂಕಟೇಶನಾಯ್ಕ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನುಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/266 (ಪೋಲೀಸ್)/2010-11, ದಿನಾಂಕ : 20-10-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೋಲೀಸ್ ಠಾಣೆ ಇವರು ಹೂಡಲಾದ ಪ್ರ.ಮಾ.ವರದಿ ಸಂ: 223/2011, ದಿ: 05-05-10 ರಂದು ವಶಪಡಿಸಿಕೊಂಡ **ಕೆಎ-38/ಇ-4693 ನೋಂದಣಿ ಸಂಖ್ಯೆಯ ಹೀರೋ ಹೋಂಡಾ ಸಿಡಿ-100** ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಅಕ್ಟೋಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.1284

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್ : 252 (ಪೋಲೀಸ್)/2010-11, ದಿನಾಂಕ : 20-10-2011.

ಉಪಸ್ಥಿತರು: ಡಾ|| ವೈ.ಮಂಜುನಾಥ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ನಿರೀಕ್ಷಕರು, ಅಬಕಾರಿ, ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ		ನಿಂಗರಾಜು ಬಿನ್ ಮರಂಗಯ್ಯ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 07-05-2011 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ಜಿಲ್ಲೆ ಇವರು ಠಾಣೆಯ ಉಸ್ತುವಾರಿಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ನಂಜನಗೂಡು ತಾಲ್ಲೂಕು, ನಂಜನಗೂಡು-ಟಿ.ನರಸೀಪುರ ರಸ್ತೆಯಲ್ಲಿರುವ ಕಾಕಳ್ಳಿ ಗ್ರಾಮದ ಕಬಿನಿ ಸೇತುವೆ ಮೇಲೆ **ಕೆಎ-05/ಇಕೆ-67 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ವಾಹನದಲ್ಲಿ** ಅಕ್ರಮವಾಗಿ 70 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ನಿಂಗರಾಜು ಎಂಬುವವರನ್ನು ದಸ್ತಗಿರಿ ಮಾಡಿರುವುದಾಗಿ ಠಾಣಾ ಮೊಕದ್ದಮೆ ಸಂ: 27/2011 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಸೇಂದಿಯನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 10-05-11ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 18-05-11ರಂದು ನಂಜನಗೂಡು ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 07-05-2011ರಂದು ನಂಜನಗೂಡು ತಾಲ್ಲೂಕು, ನಂಜನಗೂಡು-ಟಿ.ನರಸೀಪುರ ರಸ್ತೆಯಲ್ಲಿರುವ ಕಾಕಳ್ಳಿ ಗ್ರಾಮದ ಕಬಿನಿ ಸೇತುವೆ ಮೇಲೆ **ಕೆಎ-05/ಇಕೆ-67 ನೋಂದಣಿ ಸಂಖ್ಯೆಯ ಟಿ.ವಿ.ಎಸ್ ಎಕ್ಸೆಲ್ ವಾಹನದಲ್ಲಿ** ಅಕ್ರಮವಾಗಿ 70 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಆ ಸಂದರ್ಭದಲ್ಲಿ ಆರೋಪಿಯಾದ ನಿಂಗರಾಜು ಬಿನ್ ಮರಂಗಯ್ಯ ಎಂಬುವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಅರ್ಜಿದಾರರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

